ನನಗೆ ಸಾಹಿತಿಗಳ ಸವಿನೆನಪುಗಳು ನಿಮಗೆ ರಸಪ್ರಸಂಗಗಳು

(ಆತ್ಮಕಥೆಯ ತುಣುಕುಗಳು)

48



ಪ್ರೊ.ಜಿ. ಅಶ್ವತ್ಥನಾರಾಯಣ

(ನಿವೃತ್ತ ಕನ್ನಡ ಪ್ರಾಧ್ಯಾಪಕ)

ನನಗೆ ಸಾಹಿತಿಗಳ ಸವಿನೆನಪುಗಳು
ನಿಮಗೆ ರಸಪ್ರಸಂಗಗಳು

(ಆತ್ಮಕಥೆಯ ತುಣುಕುಗಳು)

ಪ್ರೊ. ಜಿ. ಅಶ್ವತ್ಥನಾರಾಯಣ

(ನಿವೃತ್ತ ಕನ್ನಡ ಪ್ರಾಧ್ಯಾಪಕ)

ತೇಜು ಪಬ್ಲಿಕೇಷನ್ಸ್

ನಂ. 1014, 24ನೇ ಮುಖ್ಯರಸ್ತೆ, 16ನೇ ಕ್ರಾಸ್,
ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು – 560 070.

ನನಗೆ ಸಾಹಿತಿಗಳ ಸವಿನೆನಪುಗಳು – ನಿಮಗೆ ರಸಪ್ರಸಂಗಗಳು

NANAGE SAHITIGALA SAVINENAPUGALU
-NIMAGE RASAPRASANGAGALU
(Memories of Autobiography)

by

Prof. G. Aswathanarayana
(Retired Kannada Professor)
95, 34th 'B' Cross, 16th Main, 4th 'T' Block, Jayanagar,
Bengaluru-560 041. Phone : 080-26637783, Mobile : 9481800023

ಪ್ರೊ. ಜಿ.ಅಶ್ವತ್ಥನಾರಾಯಣ
(ನಿವೃತ್ತ ಕನ್ನಡ ಪ್ರಾಧ್ಯಾಪಕ)
ನಂ.95, 34ನೇ 'ಬಿ' ಕ್ರಾಸ್, 16ನೇ ಮುಖ್ಯರಸ್ತೆ, 4ನೇ 'ಟಿ' ಬ್ಲಾಕ್, ಜಯನಗರ,
ಬೆಂಗಳೂರು – 560 041. ದೂರವಾಣಿ: 080–26637783, ಮೊಬೈಲ್: 9481800023

Published by
V. Padmavathi, on behalf of **Teju Publications**
1014, 24th Main, 16th Cross, BSK 2nd Stage
Bangalore - 560 070. Mob : 9900195626

First Edition : 2025 ಮೊದಲ ಮುದ್ರಣ : ೨೦೨೫

Pages : 232 + iv ಪುಟಗಳು : ೨೩೨ + iv

Price : ₹ 260 ಬೆಲೆ : ರೂ. ೨೬೦

ISBN : 978-81-984054-2-5

No. of Copies : 1000 ಪ್ರತಿಗಳ ಸಂಖ್ಯೆ : ೧೦೦೦

70 GSM N.S. Maplitho – 1/8 Demy
ಕಾಗದ: 70 ಜಿಎಸ್‌ಎಂ ಎನ್‌ಎಸ್ ಮ್ಯಾಪ್‌ಲಿಥೊ 1/8 ಡೆಮಿ

Cover Design : **Chandrashekar**
ಮುಖಪುಟ ವಿನ್ಯಾಸ : **ಚಂದ್ರಶೇಖರ್**

Typeset at : **Page Designers,** Bangalore. E-mail : bsmadhu75@gmail.com
ಪುಟ ವಿನ್ಯಾಸ : **ಪೇಜ್ ಡಿಸೈನರ್ಸ್, ಬೆಂಗಳೂರು**

Printed at : **Sathyananda Printers**
Pipeline Parallel Road, Cholura Palya, Bangalore - 560 023.
ಮುದ್ರಕರು : **ಸತ್ಯಾನಂದ ಪ್ರಿಂಟರ್ಸ್, ಬೆಂಗಳೂರು**

ಆಪ್ತವಾಗುವ ರಸ ಪ್ರಸಂಗಗಳು

ಬದುಕೆಂಬುದು ರೈಲು ಪ್ರಯಾಣ ಇದ್ದಂತೆ. ನಿಲ್ದಾಣಗಳಲ್ಲಿ ಹತ್ತಿ ಬಂದು ಕೆಲ ಕಾಲ ನಮ್ಮ ಜೊತೆ ಇದ್ದು ಮರೆಯಾಗುವ ಮಂದಿಗೆ ಲೆಕ್ಕವಿಲ್ಲ. ಆದರೆ ಕೆಲವು ಪಾತ್ರಗಳು ಮಾತ್ರ ಮನದಲ್ಲಿ ಅಚ್ಚಳಿಯದೆ ಉಳಿದು ಬಿಡುತ್ತವೆ. ನಾವು ಅವರ ಪ್ರಭಾವಕ್ಕೆ ಒಳಗಾಗುತ್ತೇವೆ. ಅವರಿಂದ ಬದಲಾಗುತ್ತೇವೆ. ನಮ್ಮಲ್ಲಿ ಶಿಸ್ತು, ಸಂಯಮ, ಉದಾರತೆ ಮೊದಲಾದ ಗುಣಗಳ ಆವಾಹನೆ ಆಗುತ್ತದೆ. ಗಣ್ಯ ಸಾಹಿತಿಗಳ ಜೊತೆ ಸಂಪರ್ಕಕ್ಕೆ ಬಂದ ಖ್ಯಾತ ಲೇಖಕ ಅನಾಜಿಯವರಿಗೆ ಆದ ಅನುಭವಗಳನ್ನು ರಸವತ್ತಾಗಿ ಇಲ್ಲಿ ವರ್ಣಿಸಿದ್ದಾರೆ. ಪ್ರೊ. ಅನಾಜಿಯವರು ಇಷ್ಟು ಎತ್ತರಕ್ಕೆ ಏರಲು ಸಾಹಿತ್ಯ ದಿಗ್ಗಜರಾದ ಅನೇಕರು ಗಾಢ ಪ್ರಭಾವ ಬೀರಿದ್ದಾರೆ. ಘಟನೆಗಳನ್ನು ತಿಳಿಸುವಾಗ ಸಂಬಂಧಿಸಿದ ಸಾಹಿತಿಗಳ ವ್ಯಕ್ತಿತ್ವವನ್ನೂ ಸಹ ಲೇಖಕರು ಚಿತ್ರಿಸುತ್ತಾರೆ.

ಅ.ನ.ಕೃ., ಬೀಚಿ, ನಾಡಿಗೇರ್, ತ.ರಾ.ಸು., ದೇವುಡು, ವಿ.ಸೀ, ಹಾ.ಮಾ.ನಾಯಕ್, ಮಾಸ್ತಿ ಮೊದಲಾದವರ ಜೊತೆ ಅನಾಜಿ ಅವರಿಗಿದ್ದ ಒಡನಾಟ ಆಶ್ಚರ್ಯದಾಯಕ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಾಲಯದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಪ್ರೊ. ಅನಾಜಿಯವರು ತಮ್ಮ ಬದುಕಲ್ಲಿ ಸರಳತೆಯನ್ನು, ಶಿಸ್ತನ್ನು ಮೂಡಿಸಿಕೊಳ್ಳಲು ಯಾರೆಲ್ಲ ಕಾರಣರಾದರು ಎಂಬುದನ್ನು ಇಲ್ಲಿರುವ ಪ್ರಸಂಗಗಳು ತಿಳಿಸುತ್ತವೆ.

ಸಿದ್ಧವನಹಳ್ಳಿ ಕೃಷ್ಣಶರ್ಮರ 'ಕುಲದೀಪಕರು', ವಿ.ಸೀ. ಅವರ 'ಮಹನೀಯರು', ರಾವ್‌ಬಹದ್ದೂರ್ ಅವರ 'ಮರೆಯದ ನೆನಹುಗಳು', ಗೊರೂರರ 'ನಮ್ಮ ಊರಿನ ರಸಿಕರು', ಟಿ.ವಿ.ಯವರ 'ಉದಾರಚರಿತರು, ಉದಾತ್ತ ಪ್ರಸಂಗಗಳು' ಮೊದಲಾದ ಕೃತಿಗಳನ್ನು ಓದಿ ಮೆಚ್ಚಿ ಖುಷಿ ಪಟ್ಟಿದ್ದ ನನಗೆ ಅನಾಜಿ ಅವರ ಈ ಕೃತಿ ಅತ್ಯಂತ ಭಿನ್ನವಾಗಿ ತೋರಿತು. ಇದಕ್ಕೆ ಕಾರಣ ಇದು ಅವರ ಆತ್ಮ ಕಥನದ ಒಂದು ಭಾಗ. ನಿರೂಪಣೆಯಂತೂ ಮನವನ್ನು ತಟ್ಟುತ್ತದೆ. ಓದುತ್ತಾ ಹೋದಂತೆ ನಮಗೆ ಗೊತ್ತಿಲ್ಲದಂತೆಯೇ ನಾವು ಬದಲಾವಣೆ ಆಗುವ ಅಪಾಯವಿದೆ.

ವಿದ್ಯಾರ್ಥಿಯಾಗಿದ್ದಾಗ ಒಂದು ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿದ ಇವರಿಗೆ ಗೀತಾ ಪ್ರವಚನ ಪುಸ್ತಕಗಳು ಬಹುಮಾನವಾಗಿ ಸಿಕ್ಕವು. ಇವುಗಳನ್ನು ಓದಿದ ಅನಾಜಿ ಎಷ್ಟು ಬದಲಾದರೆಂದರೆ ಕ್ರಿಕೆಟ್ಟೂ ಬೇಡ, ಫುಟ್‌ಬಾಲೂ ಬೇಡ ಎಂದು ಹೇಳಿ ಕನ್ನಡದ ಶ್ರೇಷ್ಠ ಪುಸ್ತಕಗಳನ್ನು ಅಭ್ಯಾಸ ಮಾಡಲು ಪರಿಷತ್ತಿನ ಗ್ರಂಥ ಲೈಬ್ರರಿಯಲ್ಲಿ ಝೂಂಡಾ ಊರಿದರು. ಶಾಲೆ ಬಿಟ್ಟರೆ ಪರಿಷತ್ತು, ರಾತ್ರಿ ತಡವಾಗಿ ಮನೆ. ಹೀಗಾಗಿ ಫೋರ್ಟ್ ಹೈಸ್ಕೂಲ್ ವಿದ್ಯಾರ್ಥಿ ಆಗಿದ್ದಾಗ ಅನಾಜಿ ಬುಕ್‌ವರ್ಮ್ ಆಗುತ್ತಾರೆ. ಕನಸು ಮನಸುಗಳಲ್ಲಿ ಕನ್ನಡ ಕಾವ್ಯಗಳ ಕುಣಿತ! ಗೀತಾ ಪ್ರವಚನ ಪುಸ್ತಕ ಅವರಿಗೆ ಬಹುಮಾನವಾಗಿ ಬಂದಿದ್ದು ಇದಕ್ಕೆಲ್ಲ ಕಾರಣ.

ಸದರಿ ಪುಸ್ತಕವನ್ನು ತಮ್ಮ ೮೮ನೇ ವಯಸ್ಸಿನಲ್ಲಿ ಬರೆದಿದ್ದಾರೆ ಎಂದರೆ ಅವರ ನೆನಪಿನ ಶಕ್ತಿಗೆ ತಲೆ ಬಾಗಲೇಬೇಕು. ೭೦ ವರ್ಷ ದಾಟಿದ ಬಹುಮಂದಿ ಸ್ವಂತ ಹೆಂಡತಿಯ ಹೆಸರನ್ನೇ ಮರೆಯುತ್ತಾರೆ. ಆದರೆ ಪ್ರೊ. ಅನಾಜಿಯವರಿಗೆ ಹಳೆಯ ನೆನಪುಗಳು ಇಂದು ತಾಜಾ ಘಟನೆಗಳಾಗಿ ಎಡತಾಕುತ್ತಿರುವ ಕಾರಣ 'ರಸಪ್ರಸಂಗಗಳು' ಅರಳಿದೆ. ಈ ಶತಮಾನದ ಎಲ್ಲ ಪ್ರಮುಖ ಲೇಖಕರ ಜೊತೆಗೆ ಅವರ ಸ್ನೇಹ, ಸಂಬಂಧಗಳಿತ್ತು ಎಂಬುದು ಈ ಕೃತಿ ಓದಿದಾಗ ಮನದಟ್ಟಾಗುತ್ತದೆ. ಇಲ್ಲಿನ ಪ್ರಸಂಗಗಳ ಪ್ರಸ್ತುತಿಯಲ್ಲಿ ತಿಳಿಹಾಸ್ಯ ಮಿಂಚಿ ಮನ ತಣಿಸುತ್ತದೆ. ಶೈಲಿ ಆಪ್ತವಾಗಿದೆ. ಘಟನೆಗಳು ತಲೆಯೊಳಗೆ ಇಳಿದು ಮನಕ್ಕೆ ಕಚಗುಳಿ ಕೊಟ್ಟು ಮುಖವನ್ನು ಅರಳಿಸುತ್ತದೆ. ಓದುಗನ ಬದುಕನ್ನು ಹಸುನುಗೊಳಿಸುತ್ತದೆ.

ಅನಾಜಿಯವರು ಉಪನ್ಯಾಸಕರಾಗಿ, ಪ್ರವಚನಕಾರರಾಗಿ ಹೆಸರು ಮಾಡಿದವರು. ಮೈಕ್ ಸಿಕ್ಕರೆ ಓತಪ್ರೋತವಾಗಿ ಕನ್ನಡ ಸಾಹಿತ್ಯದ ಬಗ್ಗೆ ಗಂಟೆಗಟ್ಟಲೆ ಅಧಿಕೃತವಾಗಿ ಮಾತಾಡುವ ಶಕ್ತಿ ಅವರಲ್ಲಿದೆ. ಡಿಗ್ರಿ ಪಠ್ಯಪುಸ್ತಕಗಳ ಪರಿಷ್ಕಾರದಲ್ಲಿ ಭಾಷಾತಜ್ಞರಾಗಿ ಅವರು ದುಡಿದಿದ್ದಾರೆ. ಕಾಲೇಜಿನ ಒಳಗೆ, ಹೊರಗೆ ಪಾಠ ಮಾಡಿ 'ಒಳ್ಳೆಯ ಮೇಷ್ಟ್ರು' ಎಂಬ ಬಿರುದು ಸಂಪಾದಿಸಿದ್ದಾರೆ.

ಕನ್ನಡ ಸಂಸ್ಕೃತಿ ಇಲಾಖೆಯು ಒಂದು ವಾರದ ಅವಧಿಯ ಆಡಳಿತ ಕನ್ನಡ ಶಿಬಿರಗಳನ್ನು ಬಹು ಹಿಂದೆ ಏರ್ಪಡಿಸಿತ್ತು. ಇದು ಸುಮಾರು ೧೦ ವರ್ಷ ಕಾಲ ನಡೆಯಿತು. ಶಿಬಿರದ ನಿರ್ದೇಶಕರಾಗಿ ಅನಾಜಿಯವರು ಮಾರ್ಗದರ್ಶನ ಮಾಡುತ್ತಿದ್ದರು. ನನ್ನಂತಹ ಹಲವಾರು ಉಪನ್ಯಾಸಕಾರರಿಗೆ ಇಲ್ಲಿ ಅವಕಾಶ ಮಾಡಿಕೊಟ್ಟವರು ಅನಾಜಿ. ಆಡಳಿತ ಕನ್ನಡ ಶಿಬಿರ ನಡೆಸುವುದು ಹೇಗೆ, ಪಾಠ ಮಾಡುವುದು ಹೇಗೆ ಎಂಬುದನ್ನು ಸವಿವರವಾಗಿ ತಿಳಿಸಿ ಕನ್ನಡ ಭಾಷೆಯಲ್ಲಿರುವ ಒಪ್ಪುತಪ್ಪುಗಳನ್ನು ತಿದ್ದುವ ಸುಲಭ ತಂತ್ರಗಳನ್ನು ತಲೆಗೆ ತುಂಬಿದರು.

ಅನಾಜಿಯವರ ಸಹಜ ಮಾತುಗಳಲ್ಲಿ ಸಹ ತಿಳಿಹಾಸ್ಯದ ಕಂಪು ಇರುತ್ತದೆ. ಅವರದು ಎಂಥ ಸೆಟ್ಲ್ಡ್ ಜೋಕ್ಸ್ ಎಂದರೆ ತಕ್ಷಣಕ್ಕೆ ಅರ್ಥವಾಗುವುದು ಕಷ್ಟ. ಸ್ವಲ್ಪ ಹೊತ್ತಾದ ಮೇಲೆ ನಮಗೆ ನಾವೇ ನಗುತ್ತೇವೆ. ಸುತ್ತಲೂ ಇರುವವರು ನಮ್ಮನ್ನು ಕನಿಕರದಿಂದ ನೋಡಲೂಬಹುದು. ಈ ಕೃತಿಯಲ್ಲಿ ತಮ್ಮ ಬದುಕಿನ ರಸಪ್ರಸಂಗಗಳ ವರ್ಣನೆ ಇದೆ. ನಗೆ ಚಿಮ್ಮಿಸುವ ಪುಟ್ಟ ಪುಟ್ಟ ಅನುಭವ ಕಥಾನಕಗಳಿವೆ. ಒಂದೆರಡು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು.

ಬಿಡಿ ಮುತ್ತು ಕೊಡುವೆ

ತೀ.ನಂ.ಶ್ರೀ ಯವರ ಕಾವ್ಯಮೀಮಾಂಸೆ ಪಾಠ ಮಾಡಿದ ಇವರು ಸಂಸ್ಕೃತ ಶೃಂಗಾರ ಕಾವ್ಯಗಳ ಅನುವಾದದ ಬಗ್ಗೆ ಹೇಳಿದ್ದರು. ಈ ಬಗ್ಗೆ ಪುಸ್ತಕ ಇದೆಯಾ ಎಂದಾಗ, ಹೌದು ಎಂದು ತೀ.ನಂ.ಶ್ರೀ ಯವರ 'ಬಿಡಿ ಮುತ್ತು' ಪುಸ್ತಕವನ್ನು ವಿದ್ಯಾರ್ಥಿನಿಗೆ ಕೊಟ್ಟರು. ಓದಿ ಖುಷಿಯಾದ ಆಕೆ ಮರುದಿನ ಕಾಲೇಜಿಗೆ ಬಂದು 'ನೀವು ಕೊಟ್ಟ

ಬಿಡಿಮುತ್ತು ತುಂಬಾ ಚೆನ್ನಾಗಿತ್ತು. ನಮ್ಮ ಅಕ್ಕಾನೂ ಇಷ್ಟ ಪಟ್ಟಳು. ನಮ್ಮಕ್ಕ ಬಿಡಿ ಮುತ್ತನ್ನು ನಿಮಗೆ ನೇರವಾಗಿ ಕೊಡ್ತಾಳಂತೆ' ಎಂದಾಗ ಇವರ ಸ್ಥಿತಿ ಹೇಗೆ ಆಗಿರಬೇಡ!

ರಸ್ತೆ ದಾಟಲು ದೋಣಿ

ಬೀಚಿ, ನಾಡಿಗೇರ್ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮ ಮುಗಿಸಿ ಹೊರಗೆ ಬಂದಾಗ ವಿಪರೀತ ಮಳೆ ಸುರಿದಿತ್ತು. ಆಗಿನ್ನೂ ಮಣ್ಣಿನ ರಸ್ತೆ ಇತ್ತು. ಕಾರಿಡಾರ್ ಆಗಿರಲಿಲ್ಲ. ವಿಪರೀತ ನೀರು ಪರಿಷತ್ತಿನ ಬಾಗಿಲೆಡೆಗೆ ನುಗ್ಗಿ ಬಂದಿತ್ತು. ಅನಾಜಿಯವರು,

'ಸರ್, ನಿಮಗೆ ಆಟೋ ತರಿಸಲಾ, ಟ್ಯಾಕ್ಸಿ ತರಿಸಲಾ' ಎಂದರು. ಹೊಂಡದಲ್ಲಿ ತುಂಬಿದ್ದ ನೀರನ್ನು ನೋಡುತ್ತಿದ್ದ ಬೀಚಿ ಹೇಳಿದ್ದೇನು ಗೊತ್ತಾ?

'ಮೊದಲು ಒಂದು ನಾಡದೋಣಿ ತರಿಸು, ಈ ಹೊಂಡ ದಾಟೋಣ, ಆಮೇಲೆ ಆಟೋ!' ಮಳೆಯ ತೊಂದರೆ ಮರೆಸುವಂತಹ ನಗೆ ಎಲ್ಲೆಡೆ ಚಿಮ್ಮಿತು.

ಧರ್ಮಸ್ಥಳ ಕಾರ್ಯಕ್ರಮದ ಗೋಷ್ಠಿಯೊಂದಕ್ಕೆ ಬಂದಿದ್ದ ಹಾ.ಮಾ.ನಾ. ನೇತ್ರಾವತಿ ದಡದಲ್ಲಿ ಚಪ್ಪಲಿಯನ್ನು ಕಳೆದುಕೊಂಡರು. ಅವರ ಆತಿಥ್ಯದ ಜವಾಬ್ದಾರಿ ಹೊತ್ತಿದ್ದ ಅನಾಜಿ ಹೊಸ ಚಪ್ಪಲಿಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕೊಡಿಸಿದ್ದರು.

'ಯಾಕೆ ಹೀಗೆ ಮಾಡುತ್ತಿದ್ದೀಯ?' ಎಂದು ಹಾ.ಮಾ.ನಾ. ಬೇಸರಿಸಿದಾಗ,

'ಸಾರ್, ತಪ್ಪು ನನ್ನದೇ. ನಿಮ್ಮನ್ನು ಕರೆಸಿದ್ದು ನಾನು. ನೀವು ನದಿಗೆ ಇಳಿದಾಗ ನಿಮ್ಮ ವಸ್ತುಗಳನ್ನು ನಾನು ಜೋಪಾನ ಮಾಡಬೇಕಿತ್ತು' ಎಂದು ನಮ್ರತೆಯಿಂದ ಕೈ ಮುಗಿದು ಹೊಸ ಚಪ್ಪಲಿಗಳನ್ನು ಒಪ್ಪಿಸಿದರಂತೆ.

ಅ.ನ.ಕೃ., ಮಾಸ್ತಿ, ಕಾರಂತ, ಗೋಕಾಕ, ಪು.ತಿ.ನ., ದೇವುಡು ಮೊದಲಾದ ಶ್ರೇಷ್ಠ ಸಾಹಿತ್ಯ ದಿಗ್ಗಜರುಗಳ ಸಂಪರ್ಕ ಇವರಿಗೆ ನಿರಂತರವಾಗಿ ಇತ್ತು. ಅವರಿಂದ ತಮ್ಮ ಬದುಕಿನಲ್ಲಿ ಯಾವ ರೀತಿಯ ಪ್ರಭಾವ ಆಯಿತು, ಶಿಸ್ತನ್ನು ಹೇಗೆ ಮೂಡಿಸಿತು ಎಂಬುದನ್ನು ಪ್ರಸಂಗಗಳ ಮುಖಾಂತರ ವರ್ಣಿಸಿದ್ದಾರೆ. ಇದು ನೀತಿ ಕತೆಗಳಂತೆ ನಮ್ಮ ಮೇಲೂ ಗಾಢವಾದ ಪ್ರಭಾವವನ್ನು ಬೀರುತ್ತದೆ. ಅನುಭವ ಕಥನ ಹೇಗೆ ಇರಬೇಕು ಎಂಬುದಕ್ಕೆ ಈ ಕೃತಿ ಒಂದು ಉದಾಹರಣೆ ಎಂಬುದರಲ್ಲಿ ಸಂಶಯವಿಲ್ಲ.

ಎಂ.ಎಸ್. ನರಸಿಂಹಮೂರ್ತಿ

ನಗೆ ಬರಹಗಾರರು

ನನ್ನ ಬಿನ್ನಹ

ನಾನು ಶಾಲಾ ಕಾಲೇಜುಗಳಲ್ಲಿ ಓದುವ ಕಾಲದಲ್ಲಿ ಕನ್ನಡ ಮೀಡಿಯಂ ವಿದ್ಯಾರ್ಥಿ ಆಗಿದ್ದರೂ ಐಚ್ಛಿಕ ಕನ್ನಡ ವಿಷಯವನ್ನು ತೆಗೆದುಕೊಂಡ ವಿದ್ಯಾರ್ಥಿ ಆಗಿರಲಿಲ್ಲ. ಮಿಡ್ಲ್‌ಸ್ಕೂಲ್, ಹೈಸ್ಕೂಲ್‌ಗಳಲ್ಲಿ ಸಂಸ್ಕೃತದ ವಿದ್ಯಾರ್ಥಿ ಆಗಿದ್ದೆ. ಕಾಲೇಜಿನಲ್ಲಿ ಹೆಚ್.ಇ.ಪಿ. (ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ) ಐಚ್ಛಿಕ ವಿಷಯಗಳ ವಿದ್ಯಾರ್ಥಿಯಾಗಿದ್ದೆ. ಕನ್ನಡವನ್ನು ಐಚ್ಛಿಕ ಭಾಷೆಯನ್ನಾಗಿ ಪಿಯುಸಿ, ಡಿಗ್ರಿ ತರಗತಿಗಳಲ್ಲಿ ಓದಿದ ವಿದ್ಯಾರ್ಥಿ ಆಗಿರಲಿಲ್ಲ. ಹಾಗಾಗಿ ಕನ್ನಡ ಎಂ.ಎ. ಮಾಡಬೇಕೆಂದು ನಿರ್ಧರಿಸಿದಾಗ, ಎಲ್ಲ ಕಡೆ ಕಾಲೇಜುಗಳಲ್ಲಿ ನೀನು ಐಚ್ಛಿಕ ಕನ್ನಡ ವಿದ್ಯಾರ್ಥಿ ಅಲ್ಲ. ಎಂ.ಎ. ಕನ್ನಡ ಓದಲು ಸಾಧ್ಯವಿಲ್ಲ ಎಂದು ಖಂಡತುಂಡವಾಗಿ ಹೇಳಿಬಿಟ್ಟರು.

ಮೈಸೂರು ವಿಶ್ವವಿದ್ಯಾಲಯವು ಕನ್ನಡಿಗರಿಗಾಗಿ ಕರ್ನಾಟಕದಲ್ಲಿ ಕನ್ನಡಿಗರಿಂದ ಸ್ಥಾಪಿತವಾದುದ್ದು. ಇಂಥ ವಿಶ್ವವಿದ್ಯಾಲಯದಲ್ಲಿ ಕನ್ನಡ ಓದಬೇಕಾದರೆ ನಿಯಮದ ಸಂಕೋಲೆ ತೊಡಿಸುವುದು ಅನ್ಯಾಯ ಎಂದು ವಾದಿಸಿದೆ. ಬೇಕಿದ್ದರೆ ಐಚ್ಛಿಕ ಕನ್ನಡ ಓದಿದವರಿಗಿರುವ ಅರ್ಹತೆ ಕನ್ನಡ ಓದಬೇಕು ಎನ್ನುವ ಐಚ್ಛಿಕ ಕನ್ನಡೇತರ ಕಲಾ, ವಿಜ್ಞಾನ, ವಾಣಿಜ್ಯ ವಿದ್ಯಾರ್ಥಿಗಳಿಗೆ ಒಂದು ಪ್ರವೇಶ ಪರೀಕ್ಷೆ ಏರ್ಪಡಿಸಿ. ಅದರಲ್ಲಿ ಉತ್ತೀರ್ಣನಾದರೆ ಅವನಿಗೂ ಕನ್ನಡ ಎಂ.ಎ.ಗೆ ಪ್ರವೇಶ ಕೊಡಿ. ನನಗೆ ಪ್ರವೇಶ ಪರೀಕ್ಷೆಯನ್ನು ಕನ್ನಡದ ಅರ್ಹತೆಯ ಬಗ್ಗೆ ಏರ್ಪಡಿಸಿ ಎಂದು ಕನ್ನಡ ವಿದ್ವಾಂಸರಿಗೆಲ್ಲ ಸವಾಲು ಹಾಕಿ ವಾದ ಮಾಡಿದೆ. ಇದಕ್ಕಾಗಿ ಎ.ಆರ್.ಕೃ., ತೀ.ನಂ.ಶ್ರೀ., ಡಿ.ಎಲ್.ಎನ್., ಕುವೆಂಪು, ದೇಜಗೌ ಮುಂತಾದ ಪ್ರಸಿದ್ಧ ಸಾಹಿತಿ ವಿದ್ವಾಂಸರೊಂದಿಗೆ ವಾದ ಮಾಡಿದೆ. ಎಲ್ಲರೂ "ನಿಯಮ ಹಾಗಿದೆ. ಐಚ್ಛಿಕ ಕನ್ನಡ ಡಿಗ್ರಿಯಲ್ಲಿ ಓದಿದವರಿಗೆ ಮಾತ್ರ ಕನ್ನಡ ಎಂ.ಎ. ಪ್ರವೇಶ ಎಂಬುದಾಗಿ; ನಾವೇನೂ ಮಾಡಲಾರೆವು" ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು.

ಅನಂತರ ಬಹುಕಾಲದ ಮೇಲೆ ಈ ಪ್ರಸಂಗ ನೆನಪಿದ್ದ ಕನ್ನಡದ ಕಟ್ಟಾಳು ದೇಜಗೌ ಅವರು ಕುಲಪತಿಗಳಾದಾಗ ಐಚ್ಛಿಕ ಕನ್ನಡ ಓದದೆ ಇದ್ದವರೂ ಕನ್ನಡ ಪ್ರವೇಶ ಪರೀಕ್ಷೆಯನ್ನು ಪಾಸು ಮಾಡಿ ಕನ್ನಡ ಎಂ.ಎ. ಓದಲು ಅವಕಾಶ ಮಾಡಿಕೊಟ್ಟರು. ಆಗ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಯಾವುದಾದರೂ ಸ್ನಾತಕೋತ್ತರ ಡಿಗ್ರಿ (ಎಂ.ಎ., ಎಂ.ಎಸ್ಸಿ., ಎಂ.ಕಾಂ. ಇತ್ಯಾದಿ) ಪಾಸು ಮಾಡಿದ್ದರೆ ಕನ್ನಡ ಎಂ.ಎ.ಗೆ ಸೇರಲು ಅವಕಾಶವಿತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಭಂಡಾರದಲ್ಲಿ ಕಾಲ ಕಳೆಯುತಿದ್ದ ನಾನು ಕನ್ನಡ ಸಾಹಿತಿಗಳ ಭೇಟಿ ಮಾಡಿ, ಭಾಷಣಗಳನ್ನು ಕೇಳಿ, ಕನ್ನಡ ವಿದ್ವಾಂಸರ ಪುಸ್ತಕಗಳನ್ನು ಓದಿದ ಸ್ಫೂರ್ತಿಯಿಂದ ಕನ್ನಡ ಎಂ.ಎ. ಮಾಡಿ ಕನ್ನಡ ಅಧ್ಯಾಪಕನೇ ಆಗಬೇಕು. ತೀ.ನಂ.ಶ್ರೀ., ಎ.ಆರ್.ಕೃ., ಡಿ.ಎಲ್.ಎನ್., ವಿ.ಸೀ., ರಾಜರತ್ನಂ,

ವೆಂಕಟರಾಮಪ್ಪ ಅವರ ಹಾಗೆ ನಾನೂ ಕನ್ನಡ ಅಧ್ಯಾಪಕನಾಗಬೇಕೆಂದು ಮೊದಲಿನಿಂದಲೂ ನಿರ್ಧರಿಸಿದ್ದೆ. ಅದಕ್ಕಾಗಿ ಡಿಪ್ಲೊಮಾ ಮೆಕಾನಿಕಲ್ ಇಂಜಿನಿಯರಿಂಗ್ ಪಾಸು ಮಾಡಿದ್ದರೂ, ಆಗ ತಾನೆ ಪ್ರಾರಂಭವಾಗಿದ್ದ ಎಚ್.ಎಂ.ಟಿ. ಕಾರ್ಖಾನೆಯಲ್ಲಿ ಕೆಲಸಕ್ಕೆ ಆಹ್ವಾನ ಬಂದಿದ್ದರೂ, ಮನೆಯಲ್ಲಿ ಬಡತನ ತಾಂಡವವಾಡುತ್ತಿದ್ದರೂ ಕೆಲಸಕ್ಕೆ ಹೋಗದೆ, ಕನ್ನಡ ಎಂ.ಎ. ಮಾಡುವುದಕ್ಕಾಗಿ ಡಿಗ್ರಿ ಪರೀಕ್ಷೆ ಮಾಡಿದ ಮೇಲೆ ಸೆಂಟ್ರಲ್ ಕಾಲೇಜಿನಲ್ಲಿ ಸಮಾಜಶಾಸ್ತ್ರ ಎಂ.ಎ. ಮಾಡಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ.ಗೆ ಸೇರಿ ಪಾಸಾಗಿ, ಕನ್ನಡ ಅಧ್ಯಾಪಕನಾದೆ.

ಕನ್ನಡ ವಿದ್ಯಾರ್ಥಿ ಅಲ್ಲದಿದ್ದರೂ ಶಬ್ದಮಣಿದರ್ಪಣ, ಕನ್ನಡ ಚಂಪೂ ಕಾವ್ಯಗಳನ್ನು ಐಚ್ಛಿಕ ಕನ್ನಡ ವಿದ್ಯಾರ್ಥಿ ಆಗಿ ಓದದೆ ಇದ್ದರೂ, ಮಿಡ್ಲ್‌ಸ್ಕೂಲ್ ವಿದ್ಯಾರ್ಥಿ ಆದಾಗಿನಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸರಸ್ವತಿ ಭಂಡಾರದಲ್ಲಿ ಅವೆಲ್ಲವನ್ನು ನಾನೇ ಓದಿಕೊಂಡಿದ್ದ ಕನ್ನಡದ ಏಕಲವ್ಯ ವಿದ್ಯಾರ್ಥಿಯಾಗಿದ್ದೆ.

ಕನ್ನಡ ಎಂ.ಎ. ಶಿಕ್ಷಣ ಕಾಲದಲ್ಲಿ ನನ್ನ ಗುರುಗಳಾಗಿದ್ದ ಆರ್.ಸಿ. ಹಿರೇಮಠ, ವೃಷಭೇಂದ್ರಸ್ವಾಮಿ, ಸಂ.ಶಿ. ಭೂಸನೂರಮಠ, ಎಂ.ಎಸ್. ಸುಂಕಾಪುರ, ಬಿ.ಎಸ್. ಕುಲಕರ್ಣಿ, ಎಂ.ವಿ. ಕಲ್ಬುರ್ಗಿ ಮೊದಲಾದವರಿಗೆ ನನ್ನ ಕನ್ನಡ ಓದಿನ ಬಗೆ ಅಚ್ಚರಿ ಉಂಟುಮಾಡಿತ್ತು. ಏಕೆಂದರೆ ತರಗತಿಯ ಪಾಠಪ್ರವಚನಗಳಲ್ಲಿ, ಚರ್ಚಾಗೋಷ್ಠಿಯಲ್ಲಿ, ಪ್ರಬಂಧ ರಚನೆಯಲ್ಲಿ ಎಲ್ಲರಿಗಿಂತ ಮುಂದಿದ್ದೆ.

ನನ್ನ ವಿದ್ಯಾಭ್ಯಾಸ ಕಾಲದಲ್ಲಿ ಬೇಂದ್ರೆ, ಕುವೆಂಪು, ಶಂಬಾ ಜೋಶಿ ಅವರಿಂದ ಮೊದಲ್ಗೊಂಡು ಕನ್ನಡದ ಎಲ್ಲ ಸಾಹಿತಿಗಳನ್ನು, ವಿದ್ವನ್ಮಣಿಗಳನ್ನು ನೋಡುವ, ಅವರ ಭಾಷಣ ಕೇಳುವ, ಅವರು ಬರೆದ ಗ್ರಂಥಗಳನ್ನು ಓದುವ, ಅವರೊಡನೆ ಚರ್ಚೆ ಮಾಡುವ ಭಾಗ್ಯ, ಅವಕಾಶ ನನಗೆ ಸಿಕ್ಕಿತು. ಇದಕ್ಕೆ ಮುಖ್ಯ ಕಾರಣ ಕನ್ನಡ ಸಾಹಿತ್ಯ ಪರಿಷತ್ತಿನಲ್ಲೇ ಹತ್ತಾರು ವರ್ಷ ವಿದ್ಯಾರ್ಥಿಯಾಗಿ, ಅಧ್ಯಾಪಕನಾಗಿ, ಕೊನೆಗೆ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದುದು.

ಅನಕೃ ರಾಮಮೂರ್ತಿ ಅಂಥವರ ಜೊತೆ ಕನ್ನಡ ಚಳವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ನಾನು ಒಬ್ಬನಾದೆ. ಎಸ್.ಜೆ.ಎ. ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೊಮಾ ಮಾಡುವ ಕಾಲದಲ್ಲಿ ಸರ್ ಎಂ.ವಿಶ್ವೇಶ್ವರಯ್ಯನವರನ್ನು ಹಲವಾರು ಬಾರಿ ಸಂದರ್ಶಿಸಿದೆ. ಅವರಿಂದ ಸಮಯಪಾಲನೆ ಕಲಿತೆ. ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಅಂತರಕಾಲೇಜು ಚರ್ಚಾ ಸ್ಪರ್ಧೆಗಳಲ್ಲಿ ಸತತವಾಗಿ ಹಾಜರಾಗಿ ನಾಡಿನ ಎಲ್ಲ ಪ್ರಮುಖ ಸಾಹಿತಿಗಳನ್ನು, ವಿದ್ವಾಂಸರನ್ನು ನೋಡುವ, ಅವರೊಡನೆ ಮಾತಾಡುವ, ಅವರ ಕೃತಿಗಳನ್ನು ಕುರಿತು ಓದಿ ಚರ್ಚಿಸುವ ಸೌಭಾಗ್ಯ ನನಗೆ ಸಿಕ್ಕಿತು. ಕನ್ನಡ ನವೋದಯ ಕಾಲದ ಸ್ವಾತಂತ್ರ್ಯ ಕಾಲಕ್ಕೆ ಮುಂಚೆ ಇದ್ದ ಗಣ್ಯ ಸಾಹಿತಿ ವಿದ್ವಾಂಸರನ್ನೆಲ್ಲ ಭೇಟಿ ಮಾಡಿದ ಭಾಗ್ಯ ನನ್ನದು.

ಇದರ ಪರಿಣಾಮವಾಗಿ ನಾನು ನನ್ನ ಮಿತ್ರರೊಡನೆ ಮಾತನಾಡುವಾಗ ಸಾಹಿತಿ–ವಿದ್ವಾಂಸರೊಡನೆ ನಾನು ಮಾತಾಡಿದ ಪ್ರಸಂಗಗಳನ್ನು ಅವರು ಹೇಳಿದ ಸಂಗತಿಗಳನ್ನು

ಹೇಳುತ್ತಿದ್ದೆ. ಇದನ್ನು ಕೇಳುತ್ತಿದ್ದ ನನ್ನ ಮಿತ್ರರು "ನಿಮ್ಮ ಅನುಭವ ವಿಶೇಷವಾದುದು, ಇವುಗಳನ್ನೆಲ್ಲಾ ಬರೆದಿಡಿ" ಎಂದು ಹೇಳುತ್ತಿದ್ದರು.

ಪರಿಷತ್ತಿನ ೧೦೦ ವರ್ಷಗಳ ಇತಿಹಾಸ ಗ್ರಂಥವನ್ನು ಬರೆದಮೇಲೆ ಹತ್ತಾರು ಮಂದಿ ನನ್ನ ಮಿತ್ರರು ನಿಮ್ಮ ಆತ್ಮಕಥೆ ಬರೆಯಿರಿ ಎಂದು ಒತ್ತಾಯಿಸಿದರು. ನನ್ನ ಮಗಳನ್ನು ಭೇಟಿ ಮಾಡಲು ಹಲವು ಬಾರಿ ಅಮೆರಿಕಾ ಪ್ರವಾಸ ಮಾಡಿದಾಗ ಆ ಬಗ್ಗೆ ಗ್ರಂಥ ಬರೆಯಿರಿ ಎಂದು ಒತ್ತಾಯಿಸಿದವರೂ ಇದ್ದಾರೆ. ಆದರೆ ನನಗೆ ನಾನೊಬ್ಬ ಕನ್ನಡ ಓದುಗ, ಸಂಘಸಂಸ್ಥೆಗಳಲ್ಲಿ ಕೈಲಾದಷ್ಟು ಸೇವೆ ಮಾಡುತ್ತಿರುವ ಸಾಹಿತ್ಯ ಪರಿಚಾರಕ, ಸಾಮಾನ್ಯ ಕನ್ನಡಿಗ; ನನ್ನ ಆತ್ಮಕಥೆ ಸಾಮಾನ್ಯವಾದುದು. ಮಧ್ಯಮವರ್ಗದ ಅನೇಕ ಜನರ ಹಾಗೆ ನನ್ನದೂ ಬಾಳಿನ ಕಥೆ; ಬಡತನ, ಕಷ್ಟದಲ್ಲಿ ವಿದ್ಯಾರ್ಜನೆ, ರೋಗರುಜೀನ, ಸಾಲಸೋಲ, ಅಲೆದಾಟ, ಉದ್ಯೋಗಕ್ಕೆ ಒದ್ದಾಟ ಇತ್ಯಾದಿ. ಕುಟುಂಬದ ತಾಪತ್ರಯ ಎಲ್ಲರ ಜೀವನದಲ್ಲಿ ಇದ್ದಂತೆ ನನ್ನ ಜೀವನದಲ್ಲಿಯೂ ಇದೆ ಅಷ್ಟೇ. ಇದನ್ನೇನು ಬರೆಯುವುದು ಎಂಬುದು ನನ್ನ ನಿರ್ಧಾರವಾಗಿತ್ತು.

ಆದರೆ ಇತ್ತೀಚಿನ ತಲೆಮಾರಿನ ಅಧ್ಯಾಪಕರನ್ನು, ವಿದ್ಯಾರ್ಥಿಗಳನ್ನು ಕಂಡಾಗ ನಮ್ಮ ಹಿಂದಿನ ಕನ್ನಡ ಸಾಹಿತ್ಯದ ಅಧ್ಯಯನದ ಆಸಕ್ತಿಯಾಗಲಿ, ಹಿರಿಯ ವಿದ್ವಾಂಸರ, ಸಾಹಿತಿಗಳ, ಕಲಾವಿದರ ಬಗ್ಗೆ, ಅವರ ವ್ಯಕ್ತಿತ್ವ ಸಾಧನೆ ಪ್ರತಿಭೆಗಳ ಬಗ್ಗೆ ಆಸಕ್ತಿ ಅಧ್ಯಯನಗಳಾಗಲಿ ಇಲ್ಲದಿರುವುದು ಕಂಡುಬಂದಿತು.

ಇಂಥವರಿಗೆ ನನ್ನ ಕಾಲದ ಸಾಹಿತಿಗಳು, ವಿದ್ವಾಂಸರು, ಕಲಾವಿದರು, ಸಾರ್ವಜನಿಕ ಗಣ್ಯರು, ಪ್ರಸಿದ್ಧರು ಹೇಗಿದ್ದರು, ಹೇಗೆ ಜೀವನದ ಆದರ್ಶ ಮೌಲ್ಯಗಳನ್ನು ಎಷ್ಟರ ಮಟ್ಟಿಗೆ ಪ್ರತಿಪಾದಿಸಿದ ವ್ಯಕ್ತಿಗಳಾಗಿದ್ದರು; ಬಡತನ, ನಿರಾಸೆ, ರೋಗರುಜಿನಗಳಿದ್ದರೂ ಯುವಜನರಿಗೆ, ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ತಮ್ಮ ಬೋಧನೆ, ಪ್ರಮುಖ ಸಾಹಿತ್ಯ ಕೃತಿಗಳ ರಚನೆಗಳ ಮೂಲಕ ಹೇಗೆ ಸ್ಪಂದಿಸಿದರು, ಅವರ ಬಾಳಿನಲ್ಲಿ ನಡೆದುಕೊಳ್ಳುವ ಸಂಸ್ಕೃತಿಯ ಸಜ್ಜನಿಕೆಯ ವ್ಯಕ್ತಿತ್ವ, ಅತಿಥಿ ಸತ್ಕಾರ, ಹೃದಯಶ್ರೀಮಂತಿಕೆ ಹೇಗೆ ಆದರ್ಶಪ್ರಾಯವಾಗಿತ್ತು, ಸ್ಫೂರ್ತಿಯುತವಾಗಿತ್ತು ಎಂಬುದನ್ನು ಕಂಡ ನಾನು ಅವುಗಳನ್ನು ಯುವಜನಕ್ಕೆ ತಿಳಿಸಬೇಕು, ಆದರ್ಶಪ್ರಾಯವಾದ ಸಂಗತಿಗಳನ್ನಷ್ಟೇ ಮುಂದಿಡಬೇಕು ಎಂದು ನಿರ್ಧರಿಸಿದ್ದರಿಂದ 'ನನಗೆ ಸವಿನೆನಪುಗಳು – ನಿಮಗೆ ರಸಪ್ರಸಂಗಗಳು' ಪುಸ್ತಕ ರಚಿಸಿದ್ದೇನೆ. ಈ ಮೂಲಕ ಆತ್ಮಕಥೆಯ ತುಣುಕುಗಳನ್ನು ಮುಂದಿಟ್ಟಿದ್ದೇನೆ. ಇಲ್ಲಿನ ಪ್ರಸಂಗಗಳನ್ನು ಓದಿದವರು ಇದನ್ನು ನಮ್ಮ ನಾಡಿನ ಸಾಧಕರ, ಸಾಹಿತಿಗಳ, ವಿದ್ವಾಂಸರ, ಸಜ್ಜನರ ಜ್ಞಾಪಕ ಚಿತ್ರಶಾಲೆ ಎಂದು ತಿಳಿದು ಸಂತೋಷಪಟ್ಟರೆ ನಾನು ಧನ್ಯ. ಕೆಲವರಿಗಾದರೂ ಕೆಲವು ಪ್ರಸಂಗಗಳಾದರೂ ಜೀವನದಲ್ಲಿ ಸ್ಫೂರ್ತಿ, ಸತ್ಪ್ರೇರಣೆಗಳನ್ನು ಈ ಗ್ರಂಥ ನೀಡುತ್ತದೆ ಎಂದು ಭಾವಿಸಿದ್ದೇನೆ.

ಈ ಗ್ರಂಥ ರಚನೆಗೆ ಹಲವಾರು ವಿಧಗಳಲ್ಲಿ ನನ್ನ ಬಾಳಸಂಗಾತಿ ಎಂ.ಆರ್. ಲಕ್ಷ್ಮೀದೇವಿ, ಮಗಳು ವಿಜ್ಞಾನಿ ಕ್ಷಮಾ ಅಶ್ವತ್ಥ ನೆರವಾಗಿದ್ದಾರೆ. ಮೊಮ್ಮಕ್ಕಳು ಆದಿತ್ಯ,

ಅಮೋಘ, ಅಳಿಯ ಜಯರಾಂ ಹೆಮ್ಮೆ ಪಟ್ಟಿದ್ದಾರೆ. ಆಪ್ತಮಿತ್ರರಿಗಂತೂ ಬಹಳ ಸಂತೋಷವಾಗಿದೆ. ಇಂಥದೊಂದು ಗ್ರಂಥ ಬರೆಯಲೇಬೇಕೆಂದು ಪದೇಪದೇ ಒತ್ತಾಯ ಮಾಡುತ್ತಿದ್ದರು. ಅವರಿಗೆ ನಾನು ಚಿರಋಣಿ ಆಗಿದ್ದೇನೆ. ಅವರ ಒತ್ತಾಸೆ ಇಲ್ಲದಿದ್ದಲ್ಲಿ ಈ ಗ್ರಂಥ ರಚನೆ ಆಗುತ್ತಿರಲಿಲ್ಲ.

ಈ ಗ್ರಂಥವನ್ನು ಆತ್ಮೀಯ ಮಿತ್ರರೂ, ಹಾಸ್ಯ ಸಾಹಿತಿಗಳು, ಸಾಹಿತ್ಯ ಚಟುವಟಿಕೆಗಳ ಸಂಘಟಕರೂ, ಸಹೃದಯರೂ ಆಗಿರುವ ಅಣಕು ರಾಮನಾಥ್‌ರವರು ತೇಜು ಪಬ್ಲಿಕೇಷನ್ಸ್ ಮೂಲಕ ಪ್ರಕಟಿಸುತ್ತಿರುವುದು ಸಂತೋಷವುಂಟುಮಾಡಿದೆ. ಪುಟ ವಿನ್ಯಾಸ ಮಾಡಿದ ಮಧು, ಮುಖಪುಟ ರಚಿಸಿದ ಚಂದ್ರಶೇಖರ್ ಹಾಗೂ ಮುದ್ರಕರಾದ ಸೋಮಶೇಖರ್‌ರವರಿಗೆ ವಂದನೆಗಳು.

ನನ್ನ ೮೮ನೇ ವಯಸ್ಸಿನಲ್ಲಿ ಈ ಗ್ರಂಥ ರಚಿಸುತ್ತಿದ್ದೇನೆ. ಕೇವಲ ನೆನಪಿನ ಬಲದಿಂದ ಬರೆದಿರುವೆ. ಕೆಲವು ವಿವರಗಳಲ್ಲಿ ತಪ್ಪಿದ್ದರೆ ಕ್ಷಮಿಸಬೇಕು. ಆದರೆ ಸಂಗತಿಗಳೆಲ್ಲಾ ಸತ್ಯವಾದವು, ನನ್ನ ಸ್ವಾನುಭವ ಎಂಬುದನ್ನು ತಿಳಿಸುತ್ತಿರುವೆ.

ಈ ವಿಶಿಷ್ಟ ಗ್ರಂಥವನ್ನು ಕನ್ನಡಾಭಿಮಾನಿಗಳು ಕೊಂಡು ಓದಿ ಪ್ರತಿಕ್ರಿಯೆ ವ್ಯಕ್ತಪಡಿಸಿದರೆ ನಾನೂ ಧನ್ಯ, ಪ್ರಕಾಶಕರೂ ಧನ್ಯರು.

ಜಿ. ಅಶ್ವತ್ಥನಾರಾಯಣ
(ನಿವೃತ್ತ ಕನ್ನಡ ಪ್ರಾಧ್ಯಾಪಕ)
ಮೊ: 9481800023
ಫೋನ್: 080-26637783

ಮರುಮೆಲುಕುಗಳಿಗೆ ಗ್ರಾಸ ಒದಗಿಸುವ ಶೇವಧಿ

ಇಟಲಿಯ ಫ್ಲಾರೆನ್ಸ್ ನಗರ. ಹದಿನಾಲ್ಕನೆಯ ಶತಮಾನದ ಪೂರ್ವಾರ್ಧ. ಜನಪ್ರಿಯ ಕವಿ, ಆಧ್ಯಾತ್ಮವಾದಿ ಡಾಂಟೆ ಎಂದಿನಂತೆ ತಮ್ಮ ದಂಡಿನೊಡನೆ ವಾಕಿಂಗ್ ಹೊರಟರು. ಸ್ವಲ್ಪ ದೂರ ಸಾಗುತ್ತಿದ್ದಂತೆ ಆವರೆಗೆ ಡಾಂಟೆ ಕಂಡಿರದಿದ್ದ ವ್ಯಕ್ತಿಯೊಬ್ಬನು ಎದುರು ದಿಕ್ಕಿನಿಂದ ಬರುತ್ತಾ, "ವಿಚ್ ಈಸ್ ದ ಬೆಸ್ಟ್ ಫುಡ್ ಇನ್ ದ ವರ್ಲ್ಡ್?" ಎಂದು ಕೇಳಿದ. "ಎಗ್" ಎಂದರು ಡಾಂಟೆ. ನಂತರ ಸುಮಾರು ಒಂದು ವರ್ಷದ ಬಳಿಕ ಇತ್ತಣಿಂದ ಇವರ ದಂಡು, ಅತ್ತಣಿಂದ ಆ ವ್ಯಕ್ತಿಯ ಮುಖಾಮುಖಿ. "ವಿತ್ ವಾಟ್?" ಎಂದ ವ್ಯಕ್ತಿ. "ವಿತ್ ಸಾಲ್ಟ್" ಎಂದರು ಡಾಂಟೆ. ವರ್ಷದ ಹಿಂದೆ ಕಂಡಿದ್ದ ವ್ಯಕ್ತಿ, ವಿಷಯ ಎರಡನ್ನೂ ಅವರು ಮರೆತಿರಲಿಲ್ಲ. ಇಂತಹ ಅಮೋಘ ಜ್ಞಾಪಕಶಕ್ತಿ ಇರುವ ವ್ಯಕ್ತಿಗಳು ಇಂದಿಗೂ ನಮ್ಮೊಡನಿದ್ದಾರೆಯೇ ಎಂದು ಯಾರಾದರೂ ಪ್ರಶ್ನಿಸಿದರೆ, ಅದಕ್ಕೆ 'ಪ್ರೊಫೆಸರ್ ಅಶ್ವತ್ಥನಾರಾಯಣ' ಎಂಬುದೇ ಉತ್ತರ. ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರ ನಂತರ ನನ್ನ ಜೀವನದಲ್ಲಿ ದೊರೆತ ಅತ್ಯುತ್ತಮ 'ಮೆಮೊರಿ ಬ್ಯಾಂಕ್' ಇವರು.

ಡಾಂಟೆಗೆ ಆಗ ಹೆಚ್ಚೆಂದರೆ ಐವತ್ತರ ಹರಯ. ಅಶ್ವತ್ಥನಾರಾಯಣರು ತಮ್ಮ ಜೀವನದ ಒಂಬತ್ತನೆಯ ದಶಕದಲ್ಲಿದ್ದಾರೆ. ಈಗಲೂ ಅವರು ಎಂದೋ ನಡೆದ ವಿಷಯಗಳನ್ನು ಕಣ್ಣಿಗೆ ಕಟ್ಟಿದಂತೆ ಬಣ್ಣಿಸಬಲ್ಲರು. 'ವಯಸ್ಸಾಗುತ್ತಾ ಎಂದಿನದೋ ನೆನಪಿರುತ್ತದೆ. ನೆನ್ನೆ ಮೊನ್ನೆಯದು ಇರುವುದಿಲ್ಲ' ಎಂದಿರೆ? ಅದಕ್ಕೂ ಇವರು ಅಪವಾದ. ಒಂದು ವಾರದ ಹಿಂದೆ ಹೋದ ಹೊಟೇಲಿನಲ್ಲಿ ಯಾವ ತಿಂಡಿ ಚೆನ್ನಾಗಿತ್ತು, ಏನು ಕೆಟ್ಟಿತ್ತು ಎಂದು ಕೂಡಲೆ ಹೇಳಬಲ್ಲರು. ಇವರ ಶಾರ್ಟ್ ಟರ್ಮ್ ಮೆಮೊರಿ ಮತ್ತು ಲಾಂಗ್ ಟರ್ಮ್ ಮೆಮೊರಿ ಎರಡೂ ಸುಸ್ಥಿತಿಯಲ್ಲಿದ್ದು, ಎರಡೂ ನನಗೆ ಅಮೋಘ ಎನಿಸುತ್ತವೆ.

ಪ್ರಸ್ತುತ ಕೃತಿಯು 'ನನಗೆ ಸಾಹಿತಿಗಳ ಸವಿ ನೆನಪುಗಳು' ಎಂದಿದ್ದರೂ ಇದರಲ್ಲಿರುವವರು ಸಾಹಿತಿಗಳಷ್ಟೇ ಅಲ್ಲ. "ನಂಗೊತ್ತಿಲ್ಲವೇ ಅನಕೃ ಅವರ ಮನೆ" ಎಂದ ಆಟೋ ಡ್ರೈವರ್, ಹುರಿಗಾಳು ಪ್ರವೀಣೆ ವಾಸಂತಿ ಮೇಡಂ ಮೊದಲಾದ 'ಸಾಮಾನ್ಯರಲ್ಲಿ ಅಸಾಮಾನ್ಯರು' ಸಹ ಸೇರಿದ್ದಾರೆ. ಪ್ರೊಫೆಸರ್ ಅಶ್ವತ್ಥನಾರಾಯಣರು (ಇನ್ನುಮುಂದೆ ಅನಾಜಿ ಎಂದೇ ಉಲ್ಲೇಖಿತ) ಗತಕಾಲದಲ್ಲಿ ಸಾಹಿತ್ಯವು ಸಮಾಜವೆಂಬ ಏಣಿಯ ಕೆಳಪಡಿಯಿಂದ ಮೇಲ್ಪಡಿಯವರೆಗೂ ಪಸರಿಸಿದ್ದುದನ್ನು ಇಲ್ಲಿನ ಅನೇಕ ಸಂಗತಿಗಳ ಮೂಲಕ ನಮಗೆ ತಿಳಿಸಿಕೊಟ್ಟಿದ್ದಾರೆ. ಹೀಗಾಗಿ ಇದು ಸರಿಸುಮಾರು ಕಳೆದ ಶತಮಾನದ ಚಿತ್ರಣವನ್ನು ಕಟ್ಟಿಕೊಡಲು ಕೈಗೊಂಡಿರುವ ಸಾರ್ಥಕ ಪ್ರಯತ್ನವೆನ್ನಬಹುದು.

ವಿದ್ಯಾರ್ಥಿದೆಸೆಯಿಂದಲೇ ಅನಾಜಿಗೆ ಎರಡು ಆಸಕ್ತಿಗಳಿದ್ದವು – ಒಳ್ಳೆಯ ತಿನಿಸುಗಳು ಮತ್ತು ಸಾಹಿತ್ಯ. ಅವರು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳ ದತ್ತಿನಿಧಿಯಲ್ಲಿ ದೇವರನಾಮಗಳ ಸ್ಪರ್ಧೆಯೊಂದು ನಡೆಯುತ್ತಿತ್ತು ಮತ್ತು ಆ ಸಮಯದಲ್ಲಿ ಬಂದವರಿಗೆ ಚರ್ಪು ನೀಡುತ್ತಿದ್ದರು. ಕೆಲವು ದಿನಗಳ ನಂತರ ಚರ್ಪು ಕೊಡುವುದು ನಿಂತುಹೋಯಿತು. ಅನಾಜೀ ಸುಮ್ಮನಿರುವರಲ್ಲವಲ್ಲ! ಶಾಸ್ತ್ರಿಗಳ ಮನೆಗೆ ಹೋಗಿ 'ದತ್ತಿ ಹಣ ಹೆಚ್ಚಿಸಿ' ಎಂದಿದ್ದರು. ಹುಡುಗನಾಗಿದ್ದಾಗ ಆದ ಶಾಸ್ತ್ರಿಗಳ ಪರಿಚಯ ಮುಂದೆ ಅನೇಕ ವರ್ಷಗಳ ಕಾಲ ಮುಂದುವರಿಯಿತು. ಇವರು ಮೆಜಾರಿಟಿ ತಲುಪುವುದಕ್ಕೆ ಮುಂಚೆಯೇ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಮೇಜರ್ ಬೆಳವಣಿಗೆಗೆ ಕಾರಣರಾದರು. 'ನನಗೂ ಸದಸ್ಯತ್ವ ಕೊಡಿ' ಎಂದಾಗ ಪರಿಷತ್ತಿನವರು ನಿರಾಕರಿಸಿದರೆ, ಸದಸ್ಯತ್ವಕ್ಕೆ ಬೇಕಾದ್ದು ಭಾಷೆಯ ಬಗ್ಗೆ ಇರುವ ಆಸಕ್ತಿ, ವಯಸ್ಸಿನ ಲೆಕ್ಕವಲ್ಲವೆಂದು ವಾದ ಮಾಡಿ ಸದಸ್ಯರಾದವರು ಅನಾಜಿ.

ತಿನಿಸುಗಳು, ಊಟಕ್ಕೆ ಸಂಬಂಧಿತವಾಗಿ ಇಲ್ಲಿ ಉಲ್ಲೇಖವಾದ ಬರಹವಲ್ಲದೆ 'ತಿಂಡಿಯ ಪ್ರಮಾಣ ಊಟದಷ್ಟಿರಲಿ', 'ಉಪ್ಪಿನಕಾಯಿ ಮತ್ತು ಮಹಾವೀರ ಜಯಂತಿ', ಮೊದಲಾದ 'ರಸಪ್ರಸಂಗ'ಗಳನ್ನು ರುಚಿಕಟ್ಟಾಗಿ ಮಂಡಿಸಿದ್ದಾರೆ. ಸಾಹಿತ್ಯರಸವಂತೂ ಈ ಸಂಕಲನದ ಪುಟಪುಟದಲ್ಲಿಯೂ ಹರಿಯುತ್ತಿದೆ. "ಪುಸ್ತಕಕ್ಕೆ ಮಹತ್ವವಿಲ್ಲದ ಮನೆಗೆ ನಾನು ಕಾಲಿಡಲಾರೆ" ಎಂದು ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ನುಡಿದಾಗ ಮನೆಯ ಮಾಲಿಕರು ಪ್ರತ್ಯೇಕ ಗ್ರಂಥಕೊಠಡಿಯನ್ನು ನಿರ್ಮಾಣ ಮಾಡುತ್ತೇನೆಂದು ವಾಗ್ದಾನ ಕೊಟ್ಟಮೇಲೆಯೇ ಗೃಹಪೂಜೆಗೆ ಆಗಮಿಸಿದ ಸಂಗತಿಯಿಂದ ಆರಂಭವಾಗಿ ಅನಾಜಿ ಗೀತಾಭ್ಯಾಸಿ ಆದ ಸನ್ನಿವೇಶ, ದೇವುಡು ಅವರು ನಡೆಸಿಕೊಟ್ಟ 'ಏಕಶ್ಲೋಕ ವ್ಯಾಖ್ಯಾನ' ಕಾರ್ಯಕ್ರಮ; 'ಪಠ್ಯ ಪುಸ್ತಕಕ್ಕೆ ತಿದ್ದೋಲೆ ಕಳುಹಿಸಿದ ಕವಿ' ಮೊದಲಾದವು' ಸಾಹಿತಿಗಳು, ಸಾಹಿತ್ಯದ ವಿಶಿಷ್ಟತೆಗಳನ್ನು ಚೆನ್ನಾಗಿ ಕಟ್ಟಿಕೊಟ್ಟಿವೆ.

ಇತ್ತೀಚಿನ ದಿನಗಳಲ್ಲಿ ಸಾಹಿತ್ಯ ಪರಿಷತ್ತಿನ ಹುದ್ದೆಗಳನ್ನು ಸ್ವಂತ ಲಾಭಕ್ಕಾಗಿ ಬಳಸಿಕೊಳ್ಳುವುದು ಕಂಡುಬರುತ್ತಿದೆ. ಆದರೆ ಅನಾಜಿ ಕಂಡ ಕಾಲದ ಗತ್ತೇ ಬೇರೆ. ಪರಿಷತ್ತಿಗಾಗಿ ಸಾಕಷ್ಟು ತ್ಯಾಗಗಳನ್ನು ಮಾಡಿದ ಮಹಾನುಭಾವರ ಪರಂಪರೆಯನ್ನು ನೆನೆಯುತ್ತಾ, "ಪರಿಷತ್ತಿನ ನಿಯಮಗಳ ಪ್ರಕಾರ ಮಾಸ್ತಿಯವರಿಗೆ ಅಂದಿನ ಮೀಟಿಂಗಿಗೆ ಬಂದುದಕ್ಕೆ ಆಟೋ ಚಾರ್ಜ್ ಕೊಡಲು ಹೋದೆ. 'ನಾವು ಪರಿಷತ್ತಿಗೆ ಕೊಡಬೇಕು. ಪರಿಷತ್ತಿನಿಂದ ಪಡೆಯುವುದಲ್ಲ' ಎಂದರು ಮಾಸ್ತಿ" ಎಂದು ಅನಾಜಿ ನೆನೆದಿದ್ದಾರೆ. ಪ್ರೊಫೆಸರ್ ಜಿ.ವಿ. ಒಂದೆಡೆ ಬರೆಯುತ್ತಾ, 'ಡಿಎಲ್‌ಎನ್ ನಿಘಂಟಿನ ಕೆಲಸವನ್ನು ಬೇಗ ಮುಗಿಸಬೇಕು ಎನ್ನುತ್ತಿದ್ದರು. ಆದರೆ ನಿಘಂಟೇ ಅವರನ್ನು ಬೇಗ ಮುಗಿಸಿಬಿಟ್ಟಿತು' ಎಂದು ಬರೆದಿದ್ದಾರೆ. ತೀವ್ರ ಅನಾರೋಗ್ಯದಲ್ಲಿಯೂ ಡಿಎಲ್‌ಎನ್ ಪರಿಷತ್ತಿನ ಎರಡು ಮಹಡಿಗಳನ್ನೇರಿ ಕ್ಲುಪ್ತ ಸಮಯಕ್ಕೆ ಹಾಜರಾಗುತ್ತಿದ್ದುದನ್ನು ಅವರ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಅಂತೆಯೇ ಕರ್ಪೂರ ಶ್ರೀನಿವಾಸರಾವ್ ಅಸ್ವಸ್ಥರಾಗಿದ್ದಾಗ ಅವರನ್ನು

ಕಾರಿನಲ್ಲಿಯೇ ಕುಳ್ಳಿರಿಸಿ, ಕೈಗೆ ದಾರವನ್ನು ಕೊಟ್ಟು, ಆ ದಾರದ ಮತ್ತೊಂದು ತುದಿಯನ್ನು ಪರಿಷತ್ತಿನ ಬಾಗಿಲಿಗೆ ಕಟ್ಟಿದ್ದು, ಇವರು ದಾರ ಎಳೆಯುವುದರ ಮೂಲಕ ಕನ್ನಡ ಸಾಹಿತ್ಯ ಪರಿಷತ್ತಿನ ಉದ್ಘಾಟನೆಯಾದುದನ್ನು ಅನಾಜಿ ಇಲ್ಲಿ ಸ್ಮರಿಸಿದ್ದಾರೆ.

ಪರಿಷತ್ತಿನ ವಿಷಯ ಉಲ್ಲೇಖಿಸಿರುವಾಗಲೇ ಎಂ.ಆರ್.ಶ್ರೀ ಮತ್ತು ಕರಿಯಣ್ಣರ ಉಲ್ಲೇಖವಾಗಬೇಕಾದ್ದು ಸಮಂಜಸ. ಎಂ.ಆರ್.ಶ್ರೀ ಅಂದು ಕೊಂಚ ಮುಂಚೆ ಬಂದಿದ್ದರು. ಪರಿಷತ್ತಿನ ಕಸ ಗುಡಿಸಲು ನೇಮಿತರಾದವರು ಬರುವಷ್ಟರಲ್ಲಿ, ಕೆಲವು ಸಾಹಿತಿಗಳು ಆಗಮಿಸುವುದಕ್ಕೆ ಮುಂಚೆಯೇ ಕಸ ಬಳಿಯಲೆಂದು, ಎಂ.ಆರ್.ಶ್ರೀಗಳೇ ಪೊರಕೆ ಹಿಡಿದರು. ಅಷ್ಟರಲ್ಲಿ ನೇಮಿತ ವ್ಯಕ್ತಿ ಬಂದು, 'ಜವಾನನಾದ ನಾನು ಮಾಡಬೇಕಾದ್ದನ್ನು...' ಎಂದಾಗ 'ಪರಿಷತ್ತಿಗೆ ನೀನು ಸಣ್ಣ ಜವಾನ, ನಾನು ದೊಡ್ಡ ಜವಾನ' ಎಂದು ನುಡಿದುದು ಅವರ ಸಂಸ್ಥಾಬದ್ಧತೆಯನ್ನು ಎತ್ತಿತೋರುತ್ತದೆ. ಕರಿಯಣ್ಣ ಪರಿಷತ್ತಿನ ಅಟೆಂಡರ್. "ಸಾರ್, ನಿಮ್ಮ ಸ್ನೇಹಿತರು ಬಂದಾಗ ಕಾಫಿ ತರಿಸುತ್ತೀರಿ. ನಮ್ಮ ಸ್ನೇಹಿತರು ಬಂದಾಗಲೂ ತರಿಸಬಹುದೆ?" ಎಂದು ಅನಾಜಿಯವರನ್ನು ಕರಿಯಣ್ಣ ಪ್ರಶ್ನಿಸಿದಾಗ ಮುಂದೇನಾಯಿತು? ಸಂಕಲದನಲ್ಲಿರುವ ಮೂವತ್ತೇಳನೆಯ ಪ್ರಸಂಗವನ್ನು ಓದಿ ತಿಳಿಯಿರಿ.

ಅನಾಜಿ ವಿನೋದಪ್ರಿಯರು ಎನ್ನುವುದಕ್ಕೆ ಈ ಸಂಕಲದಲ್ಲಿರುವ 'ಕ್ರಾಪ್ ಇನ್ಶೂರೆನ್ಸ್' (ಬೆಳೆ, ಕೇಶಗಳೆಂಬ ಅರ್ಥದಲ್ಲಿ), 'ದಶಾಕ್ಷ ಎಂದರೆ...', 'ನೀವು ಕೊಟ್ಟ ಬಿಡಿ ಮುತ್ತು...' ಮೊದಲಾದವು ಸಾಕ್ಷಿಯಾಗಿವೆ. ಸಾಹಿತಿಗಳ ಹೃದಯಸಂಪನ್ನತೆಯನ್ನು ಎತ್ತಿ ತೋರುವ ಅನೇಕ ದೃಷ್ಟಾಂಗಳು ಇಲ್ಲಿವೆ. 'ಮರ ಕಡಿಯೋದನ್ನ ನೋಡಕ್ಕಾಗಲ್ಲ; ಆ ಸಮಯದಲ್ಲಿ ಮನೆಯಲ್ಲಿ ಇರಲ್ಲ' ಎಂದ ವಿ.ಸೀ., 'ಬಳಸಿದ್ದು ಚಿಕ್ಕ ಬೆಲ್ಲದಚ್ಚು, ಕೊಟ್ಟಿದ್ದು ದೊಡ್ಡ ಬೆಲ್ಲದಚ್ಚು' ಎಂಬ ಶೀರ್ಷಿಕೆಯ ಜಿ. ರಾಮಯ್ಯನವರನ್ನು ಕುರಿತಾದ ಲೇಖನಗಳು ಅಂತಹ ಲೇಖನಗಳ ಪೈಕಿ ಎರಡಷ್ಟೆ.

ಅನಾಜಿ ಸಾಹಿತ್ಯದ ಅಧ್ಯಯನ, ಸಾಹಿತಿಗಳೊಡನೆ ಒಡನಾಟದಿಂದ ಅಪಾರ ಅನುಭವಸಿರಿಯನ್ನು ಪಡೆದಿದ್ದಾರೆ. ಅವರ ಜೈನಧರ್ಮದ ಅಧ್ಯಯನ ಮತ್ತು ಅದನ್ನು ಕುರಿತಾದ ಭಾಷಣಗಳು, ರಚಿಸಿದ ಕೃತಿಗಳು ಆ ನಿಟ್ಟಿನಲ್ಲಿ ಅವರನ್ನು ಅನನ್ಯವಾಗಿಸಿವೆ ಎಂದು ಈ ಸಂಕಲನದಲ್ಲಿನ ಕೆಲವು ಪ್ರಸಂಗಗಳು ತೋರ್ಪಡಿಸುತ್ತವೆ. ರಸ, ವಿರಸ, ಸರಸ, ಪರಿಸ್ಥಿತಿಗಳ ನಿಭಾವಣೆಯ ಪರಿ, ಭಾಷಾ ಕೌಶಲ, ಸಭಾಮರ್ಯಾದೆ, ವಿನೀತತೆ, ಅಪೂರ್ವ ಸಾಧನೆ, ಮುಂತಾದ ಅನೇಕ ಮೆಲುಕು, ಮರುಮೆಲುಕುಗಳಿಗೆ ಗ್ರಾಸ ಒದಗಿಸುವ ಶೇವಧಿ ಈ ಕೃತಿ. ತಮ್ಮ ಎಂಬತ್ತೆಂಟರ ವಯಸ್ಸಿನಲ್ಲಿಯೂ ಲವಲವಿಕೆಯಿಂದ ಈ ಸಂಗತಿಗಳನ್ನು ಕಲೆಹಾಕಿ, ಕನ್ನಡ ಸಾಹಿತ್ಯಕ್ಕೆ ಉತ್ತಮವಾದ ಕೊಡುಗೆಯೊಂದನ್ನು ಕೊಡುಗೆ ನೀಡಿದ ಅನಾಜಿ ಸ್ತುತ್ಯರ್ಹರು.

ಎನ್. ರಾಮನಾಥ್

ಅನುಕ್ರಮಣಿಕೆ

೧. ಕಾರಂತರೇ, ನಿಮ್ಮ ನಟಸಾರ್ವಭೌಮ ಕಾದಂಬರಿ ಓದಿದ್ದೇನೆ

ಸೆಂಟ್ರಲ್ ಕಾಲೇಜಿನಲ್ಲಿ ಜಿ.ಪಿ.ರಾಜರತ್ನಂ ಅವರು ವಿದ್ಯಾರ್ಥಿಗಳಿಗೆ ಪಠ್ಯವಾಗಿದ್ದ ಶಿವರಾಮ ಕಾರಂತರ 'ಕುಡಿಯರ ಕೂಸು' ಕಾದಂಬರಿಯ ಬಗ್ಗೆ ಕಾರಂತರಿಂದ ವಿಶೇಷ ಉಪನ್ಯಾಸವನ್ನು ಏರ್ಪಡಿಸಿದ್ದರು. ಗಣಿತ ಭವನದಲ್ಲಿ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅನಂತರ ಕಾರಂತರು ರಾಜರತ್ನಂ ಅವರೊಡನೆ ಅವರ ಕೋಣೆಯ ಕಡೆಗೆ ಹೋಗುತ್ತಿದ್ದರು. ಜತೆಯಲ್ಲಿ ಅಕ್ಕಪಕ್ಕ ವಿದ್ಯಾರ್ಥಿಗಳಿದ್ದರು. ಭೌತಶಾಸ್ತ್ರದ ಕಟ್ಟಡದ ಬಳಿಗೆ ಬರುತ್ತಿದ್ದಾಗ ಒಬ್ಬ ವಿದ್ಯಾರ್ಥಿ 'ಕಾರಂತರೇ, ನೀವು ಬರೆದ 'ನಟಸಾರ್ವಭೌಮ' ಕಾದಂಬರಿ ಓದಿದ್ದೇನೆ. ತುಂಬಾ ಚೆನ್ನಾಗಿದೆ' ಎಂದನು. ಆಗ ಕಾರಂತರು 'ತುಂಬ ಸಂತೋಷ. ಅದನ್ನು ಪೂರ್ತಿ ಓದಿದ್ದೀರಾ ತಾನೇ? ತುಂಬಾ ದೊಡ್ಡ ಪುಸ್ತಕ ಅಲ್ಲವೇ?' ಅಂದಾಗ 'ಹೌದು ಸಾರ್' ಎಂದ. ಸುತ್ತಲೂ ಇದ್ದವರಲ್ಲಿ ಕೆಲವರು ಮುಖ ಮುಖ ನೋಡಿಕೊಂಡರು. ಅನಂತರ ಯಾರೋ ಒಬ್ಬರು ಕಾರಂತರನ್ನು ಕೇಳಿದರು. 'ಕಾರಂತರೇ, ಅ.ನ.ಕೃ. ಅವರು ಬರೆದ 'ನಟಸಾರ್ವಭೌಮ' ಕಾದಂಬರಿಯನ್ನು ನೀವು ಬರೆದದ್ದು ಎಂದನಲ್ಲ ಆ ವಿದ್ಯಾರ್ಥಿ, ಸರಿಯೇ? ನೀವು ಹೇಳಬೇಕಾಗಿತ್ತು, ಅದನ್ನು ನಾನು ಬರೆದಿಲ್ಲ ಎಂಬುದಾಗಿ' ಎಂದು. ಆಗ ಕಾರಂತರು ನಗುತ್ತಾ ಹೇಳಿದರು, 'ಆ ವಿದ್ಯಾರ್ಥಿ ಕನ್ನಡದ ಶ್ರೇಷ್ಠ ಬೃಹತ್ ಕಾದಂಬರಿ ಓದಿದ್ದೇನೆ ಎಂದನಲ್ಲಾ, ಅದೇ ಸಂತೋಷದ ವಿಷಯ ಅಲ್ಲವೇ? ಬರೆದವರು ಯಾರು ಎಂಬುದನ್ನು ರಕ್ಷಾ ಪುಟವನ್ನು ಅವನು ನೋಡಿಲ್ಲ ಅಂತ ಕಾಣುತ್ತೆ' ಎಂದರು. ಎಲ್ಲರಿಗೂ ನಗೆ ಬಂತು.

❑

೨. ತುರ್ತು ಪರಿಸ್ಥಿತಿಯಲ್ಲಿ ಕೊನೇ ಪ್ರವಚನ

ಪ್ರತಿ ವರ್ಷ ಶಂಕರಜಯಂತಿ ಸಂದರ್ಭದಲ್ಲಿ ಶಂಕರರ ಸ್ತೋತ್ರಗಳ ಬಗ್ಗೆ, ವಿಶೇಷವಾಗಿ ಭಜಗೋವಿಂದಂ ಸ್ತೋತ್ರದ ಬಗ್ಗೆ, ಉಪನ್ಯಾಸ ಕೊಡುತ್ತಿದ್ದೆ. ಶಂಕರರ ಭಾಷ್ಯ, ವೇದಾಂತಗಳ ಗ್ರಂಥಗಳ ಬಗ್ಗೆ ನೇರವಾಗಿ ಮಾತನಾಡುತ್ತಿರಲಿಲ್ಲ. ನನ್ನದು ಪಾಮರನ ಭಾಷಣ, ಪಂಡಿತನ ಪ್ರವಚನವಾಗಿರಲಿಲ್ಲ. ಅಭಿಮಾನಿಗಳು ಉಪನ್ಯಾಸಕ್ಕೆ ಕರೆಯುತ್ತಿದ್ದರು. ಆಗ ದೇಶದಲ್ಲೆಲ್ಲಾ ತುರ್ತು ಪರಿಸ್ಥಿತಿ. ಬಿಗಿ ವಾತಾವರಣ. ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದ ಕಾಲ. ನಾನಾಗ ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿದ್ದೆ. ವಿದ್ಯಾರ್ಥಿಯೊಬ್ಬ 'ನಾನು ಮನಸ್ಸು ಮಾಡಿದರೆ ನಿಮ್ಮನ್ನು ಜೈಲಿಗೆ ಹಾಕಿಸಬಲ್ಲೆ' ಎಂದ ವಿನೋದವಾಗಿ. 'ಹೌದೇನಪ್ಪ? ಅಂತಹ ಸಾಮರ್ಥ್ಯ ನಿನಗಿರುವುದು ಹೆಮ್ಮೆಯ ಸಂಗತಿ. ನನ್ನ ಶಿಷ್ಯ ಇಷ್ಟು ಪವರ್‌ಫುಲ್ ಎಂಬುದು ಸಂತೋಷದ ಸಂಗತಿ ಅಲ್ಲವೇ' ಎಂದೆ.

ಆಮೇಲೆ ನನ್ನ ಸಹ ಅಧ್ಯಾಪಕರಲ್ಲಿ ವಿದ್ಯಾರ್ಥಿ ಹೀಗೆ ಹೇಳಿದ ಎಂದು ಹೇಳಿದಾಗ, ಆ ಅಧ್ಯಾಪಕರು 'ಹೌದು, ಸರ್ಕಾರದ ವಿರುದ್ಧ ಯಾರಾದರೂ ಪಾಠ ಪ್ರವಚನದ ನಡುವೆ ಮಾತಾಡಿದರೆ ವರದಿ ಮಾಡಲು ಕಚೇರಿಗಳಲ್ಲಿ ಸಿಬ್ಬಂದಿಯವರನ್ನು, ಶಿಕ್ಷಣಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ಗೊತ್ತು ಮಾಡಿದೆ. ಇದು ರಹಸ್ಯದ ಸಂಗತಿ' ಎಂದರು. ಈ ಪ್ರಸಂಗದ ನಂತರ ತುಮಕೂರಿಗೆ ಶಂಕರಜಯಂತಿ ಭಾಷಣಕ್ಕೆ ಹೋದೆ. ಅಲ್ಲಿಯ ಶಂಕರಮಠದ ಕಾರ್ಯಕ್ರಮ ವ್ಯವಸ್ಥಾಪಕರು ಗುಂಡೂರಾಯರು ವಿಜಯವಾಣಿ ಪತ್ರಿಕಾ ಸಂಪಾದಕರು. ಸ್ವಾಗತಿಸಿದರು. ಕಾರ್ಯಕ್ರಮ ಪ್ರಾರಂಭಕ್ಕೆ ಸ್ವಲ್ಪ ಹೊತ್ತಿತ್ತು. ಆಗ ಒಬ್ಬ ಯುವಕ ಮಡಿ ಪಂಚೆ ಉಟ್ಟು ಶಲ್ಯ ಹೊದ್ದು ವಿಭೂತಿ ಪಟ್ಟೆ ಎಳೆದುಕೊಂಡು ಪುರೋಹಿತರ ವೇಷದಲ್ಲಿ ಬಂದಿದ್ದವನು ನನ್ನನ್ನು 'ಬರ್ತೀರಾ ಸ್ವಲ್ಪ ಈ ಕಡೆ' ಎಂದು ಸ್ವಲ್ಪ ದೂರ ಮರದ ಬುಡವೊಂದರ ಬಳಿ ಕರೆದುಕೊಂಡು ಹೋದ. ಅಲ್ಲಿ ಹೇಳಿದ, 'ಸರ್, ನಾನು ನಿಮ್ಮ ವಿದ್ಯಾರ್ಥಿ ಬಹಳ ಹಿಂದೆ. ಈಗ ಪೋಲೀಸ್ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ್ದೇನೆ. ಈವತ್ತಿನ ಕಾರ್ಯಕ್ರಮದಲ್ಲಿ ದೇಶದ ರಾಜಕೀಯ ವಿದ್ಯಮಾನಗಳ ಬಗ್ಗೆ ಯಾರು ಏನು ಹೇಳುತ್ತಾರೋ ಅದನ್ನು ವರದಿ ಮಾಡಲು ಮಫ್ತಿಯಲ್ಲಿ ಕಳಿಸಿದ್ದಾರೆ. ನೀವು ನಮಗೆ ಕ್ಲಾಸಿನಲ್ಲಿ ಸಾಹಿತ್ಯ ಸಂಸ್ಕೃತಿಗಳ ಜತೆಗೆ ವರ್ತಮಾನ ಸಂಗತಿಗಳ ಬಗ್ಗೆ ಸೊಗಸಾಗಿ ತಿಳಿಯಪಡಿಸುತ್ತಿದ್ದಿರಿ. ಈಗಿನ ಪರಿಸ್ಥಿತಿ ನಿಮಗೆ ತಿಳಿದೇ ಇದೆ. ಶಂಕರರ ವಿಷಯ ಬಿಟ್ಟು ಬೇರೇನೂ ಮಾತಾಡಬೇಡಿ' ಎಂದನು. 'ಬಹಳ ಸಂತೋಷವಪ್ಪಾ. ನೀನು ತಿಳಿಸಿದ್ದು ಒಳ್ಳೆಯದಾಯಿತು' ಎಂದು ಹೇಳಿ, ಅಂದು ಶಂಕರರ ಕೃತಿಗಳನ್ನಷ್ಟೇ ಕುರಿತು ಮಾತಾಡಿದೆ. ಆ ವಿದ್ಯಾರ್ಥಿ ನಾನು ಸಂಜೆ ಖಾಸಗಿ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ವಿದ್ಯಾರ್ಥಿ ಆಗಿದ್ದನು.

ಅಲ್ಲಿಂದಾಚೆಗೆ ತುರ್ತುಪರಿಸ್ಥಿತಿ ಮುಗಿಯುವವರೆಗೆ ಯಾವ ಸಮಾರಂಭಕ್ಕೂ ಭಾಗವಹಿಸಲು ಒಪ್ಪಿಕೊಳ್ಳಲಿಲ್ಲ.

೩. ಹುಬ್ಬಳ್ಳಿ ಮಹಾವೀರ ಜಯಂತಿ

ಹಲವಾರು ವರ್ಷ ಹುಬ್ಬಳ್ಳಿಯ ಜೈನಮಂದಿರದವರು ಮಹಾವೀರ ಜಯಂತಿಗೆ ನನ್ನನ್ನು ಉಪನ್ಯಾಸಕ್ಕೆ ಕರೆಯುತ್ತಿದ್ದರು. ಒಮ್ಮೆ ಉಪನ್ಯಾಸಕ್ಕೆ ಹೋದಾಗ ಪ್ರತಿವರ್ಷದಂತೆ ತೀರ್ಥಂಕರನ ರಥ ಪ್ರದಕ್ಷಿಣೆ ನಡೆಯುತ್ತಿತ್ತು. ಬಸದಿಯ ಸುತ್ತಲೂ ರಸ್ತೆಯಲ್ಲಿ ಬರುತ್ತಿತ್ತು. ಬಸದಿಯ ನಾಲ್ಕೂ ಕಡೆ ಕಿರಿದಾದ ರಸ್ತೆಗಳು. ಒಮ್ಮೆ ರಥಯಾತ್ರೆ ಬರುತ್ತಿದ್ದಾಗ ಎದುರಿಗೊಂದು ಮೆರವಣಿಗೆ, ಧಾರ್ಮಿಕ ಸಮಾರಂಭದ ಕಾರ್ಯಕ್ರಮದ್ದು, ಬಂದಿತು. ರಸ್ತೆ ಕಿರಿದಾದುದರಿಂದ ತಿರುವಿನಲ್ಲಿ ಒಬ್ಬರ ಪಕ್ಕ ಒಬ್ಬರು ಹಾದುಹೋಗಲು ಸಾಧ್ಯವಿರಲಿಲ್ಲ. ಯಾರಾದರೂ ಒಬ್ಬರು ಹಿಂದಕ್ಕೆ ಸಾಕಷ್ಟು ದೂರ ಸರಿದು ಮೆರವಣಿಗೆಗೆ ದಾರಿ ಬಿಡಬೇಕಾಗಿತ್ತು. ನೀವೇ ಹಿಂದಕ್ಕೆ ಸರಿಯಿರಿ, ನೀವೇ ಹಿಂದಕ್ಕೆ ಸರಿಯಿರಿ ಎಂದು ವಾಗ್ವಾದ ಪ್ರಾರಂಭವಾಯಿತು. ಆಗ ಮೆರವಣಿಗೆಯಲ್ಲಿದ್ದ ನಾನು ನಮ್ಮ ವ್ಯವಸ್ಥಾಪಕರಿಗೆ 'ನಾವೇ ಹಿಂದೆ ಸರಿಯೋಣ ಅವರಿಗೆ ದಾರಿ ಬಿಡೋಣ' ಎಂದೆ. 'ನೀವು ಅತಿಥಿಗಳು, ನಿಮ್ಮ ಮಾತಿಗಾಗಿ ಹಿಂದೆ ಸರಿಯುತ್ತೇವೆ' ಎಂದು ಹಿಂದೆ ಸರಿದರು. ಆ ಮೆರವಣಿಗೆ ಮುಂದೆ ಸಾಗಿತು.

ಅನಂತರ ಸಭೆ ಪ್ರಾರಂಭವಾದಾಗ ಉಪನ್ಯಾಸದಲ್ಲಿ ನಾನು ಹೇಳಿದೆ; 'ಇಂದು ಮಹಾವೀರ ಜಯಂತಿಯನ್ನು ಸಾರ್ಥಕ ರೀತಿಯಲ್ಲಿ ನಡೆಸುತ್ತಿದ್ದೀರಿ. ನನಗೆ ಬಹಳ ಸಂತೋಷವಾಗುತ್ತಿದೆ. ಏಕೆಂದರೆ ನೀವೆಲ್ಲರೂ ಮಹಾವೀರರ ಅಹಿಂಸಾ ತತ್ವವನ್ನು ಬದುಕು-ಬದುಕಗೊಡು ತತ್ವವನ್ನು ಆಚರಿಸಿ ಆದರ್ಶ ಜೈನರಾಗಿದ್ದೀರಿ. ಪ್ರತಿಷ್ಠೆಯ ಕಾರಣದಿಂದ ವಾಗ್ವಾದ ಮುಂದುವರೆದು ಘರ್ಷಣೆಯಾಗಿ ಹಿಂಸೆಗೆ ಎಡೆಯಾಗಿ ಮಹಾವೀರ ಜಯಂತಿ ಅರ್ಥಹೀನವಾಗುತ್ತಿತ್ತು. ಕ್ಷಮಾಗುಣ, ಸಹನಾಶಕ್ತಿಯನ್ನು ಪ್ರದರ್ಶಿಸಿದ್ದೀರಿ. ಆಚರಣೆಯಲ್ಲಿ ಜಿನತತ್ವ ತೋರಿದ್ದೀರಿ. ನಿಮಗೆ ಗೊತ್ತು ಹಿಂದಿನ ತಲೆಮಾರಿನ ಶಾಲಾಪಠ್ಯದ ಕಥೆ. ಟಗರುಗಳೆರಡು ನದಿಯ ಮೇಲಿನ ಕಿರುಸೇತುವೆಯ ಮೇಲೆ ಎದುರುಬದಿರು ಬಂದವು. ಹಿಂದಕ್ಕೆ ಸರಿಯದೆ ಎರಡೂ ಗುಮ್ಮಿ ಗುದ್ದಾಡಿ ನೀರಿಗೆ ಬಿದ್ದು ಪ್ರಾಣ ಬಿಟ್ಟವು. ಸ್ವಲ್ಪ ಹೊತ್ತಿಗೆ ಎರಡು ಮೇಕೆಗಳು ಆ ಕಿರುಸೇತುವೆಯ ಮೇಲೆ ಎದುರು ಬದುರು ಬಂದವು. ದಾಟುವುದು ಹೇಗೆ ಚಿಂತಿಸಿದವು. ಆಗ ಒಂದು ಉಪಾಯ ಮಾಡಿದವು. ಒಂದು ಮೇಕೆ ಕುಳಿತುಕೊಂಡು, ಇನ್ನೊಂದು ಮೇಕೆ ಅದರ ಮೇಲೆ ಹತ್ತಿಕೊಂಡು ಸೇತುವೆ ದಾಟಿತು. ಹಲವು ರೀತಿ ಯೋಚಿಸಿದಾಗ ಅನೇಕಾಂತ ದೃಷ್ಟಿಯಲ್ಲಿ ಪರಿಹಾರ ಇರುತ್ತದೆ. ಜೈನಧರ್ಮ ಇದನ್ನು ಹೇಳುತ್ತದೆ' ಎಂದೆ. ಜನರು ಚಪ್ಪಾಳೆ ತಟ್ಟಿದರು.

❑

೪. ಶ್ರವಣಬೆಳಗೊಳದಲ್ಲಿ ಮಹಾವೀರ ಜಯಂತಿ

ಶ್ರವಣಬೆಳಗೊಳದ ಮಹಾವೀರ ಜಯಂತಿ ಕಾರ್ಯಕ್ರಮಕ್ಕೆ ಉಪನ್ಯಾಸಕ್ಕೆ ಹಲವಾರು ಬಾರಿ ಹೋಗಿದ್ದೇನೆ. ಚಾರುಕೀರ್ತಿ ಮಹಾಸ್ವಾಮಿಗಳು ಜಿ.ಪಿ.ರಾಜರತ್ನಂ ನಂತರ ನನ್ನನ್ನೇ ಉಪನ್ಯಾಸಕ್ಕೆ ಕರೆಸುತ್ತಿದ್ದರು. ನಾನು ಧರ್ಮಚಕ್ರವಿಹಾರದ ಸಭೆಗಳಲ್ಲಿ ಮಾಡಿದ ಉಪನ್ಯಾಸಗಳು ಅವರಿಗೆ ಮೆಚ್ಚುಗೆ ಆಗಿದ್ದವು. ರಾಜರತ್ನಂ ನಂತರ ನೀವೇ ನಮಗೆ ಮಹಾವೀರ ಜಯಂತಿಗೆ ರಾಜರತ್ನಂ ಎನ್ನುತ್ತಿದ್ದರು. ಅವರ ಸಹೃದಯತೆ ಅಂಥದ್ದು.

ಒಮ್ಮೆ ಮಹಾವೀರ ಜಯಂತಿಗೆ ಅವರ ಆಹ್ವಾನದ ಮೇರೆಗೆ ಶ್ರವಣಬೆಳಗೊಳಕ್ಕೆ ಹೊರಟಿದ್ದೆ. ದಾರಿಯಲ್ಲಿ ಹಿರೇಸಾವೆಯ ಬಳಿ ಬಸ್ ಕೆಟ್ಟಿತು. ಪ್ರಯಾಣಿಕರನ್ನು ಕಂಡಕ್ಟರ್ ಇಳಿಸಿ, ಇನ್ನೊಂದು ಬಸ್ ಬಂದಾಗ ಎಲ್ಲರನ್ನೂ ಹತ್ತಿ ಕಳಿಸುತ್ತೇನೆ ಎಂದ. ಆಗ ಸಂಜೆ ಆಗಿತ್ತು. ೬ಕ್ಕೆ ಭಾಷಣ ಶ್ರವಣಬೆಳಗೊಳದಲ್ಲಿ. ಆಗ ಐದುಮುಕ್ಕಾಲು ಗಂಟೆ ಆಗಿತ್ತು. ಇನ್ನು ಒಂದೆರಡು ಗಂಟೆ ಆಗುತ್ತದೆ ಇನ್ನೊಂದು ಬಸ್ ಬರಲು ಎಂದು ಯಾರೋ ಹೇಳಿದರು. ಅವರು ಶ್ರವಣಬೆಳಗೊಳಕ್ಕೆ ಹೊರಟಿದ್ದರು. ನಾನು ಚಿಂತಾಕ್ರಾಂತನಾದೆ. ಕಾರ್ಯಕ್ರಮಕ್ಕೆ ಹೇಗೆ ಹೋಗುವುದು? ಟ್ಯಾಕ್ಸಿ, ರಿಕ್ಷಾ ಸಿಗುವಂತಿರಲಿಲ್ಲ. ಆ ವೇಳೆಯಲ್ಲಿ ಒಂದು ಖಾಲಿ ಮಣ್ಣಿನ ಲಾರಿ ಬಂತು. ಅದು ಶ್ರವಣಬೆಳಗೊಳಕ್ಕೆ ಹೋಗುತ್ತಿತ್ತು. ಆ ಲಾರಿಯವನು ಜನ ಗುಂಪಾಗಿ ಏಕೆ ನಿಂತಿದ್ದಾರೆ ಎಂಬುದನ್ನು ಕೇಳಲು ಲಾರಿಯನ್ನು ನಿಲ್ಲಿಸಿದನು. ನಾನು ಕೂಡಲೆ, ಲಾರಿ ಡ್ರೈವರ್‌ನನ್ನು 'ಸ್ವಾಮಿಗಳ ಕಾರ್ಯಕ್ರಮವಿದೆ, ಹೋಗಬೇಕಾಗಿದೆ. ಬರಲೇ?' ಎಂದೆ. ಅದಕ್ಕವನು 'ಜಾಗ ಇಲ್ಲವಲ್ಲಾ ಸ್ವಾಮಿ' ಎಂದ. ಲಾರಿಯ ಕ್ಯಾಬಿನ್‌ನಲ್ಲಿ ೩ ಜನ ಕುಳಿತಿದ್ದರು. ನಾನು 'ಹಿಂದುಗಡೆ ಮಣ್ಣನ್ನು ತುಂಬುವ ಜಾಗದಲ್ಲಿ ನಿಂತು ಬರ್ತೇನೆ' ಎಂದೆ. 'ಸರಿ ನಿಮ್ಮಿಷ್ಟ, ಬನ್ನಿ' ಎಂದ. ಲಾರಿಯಲ್ಲಿ ಮಣ್ಣಿನ ಧೂಳು ತುಂಬಿತ್ತು. ಅದರಲ್ಲೇ ನಿಂತು ಶ್ರವಣಬೆಳಗೊಳ ಸೇರಿದೆ.

ದಾರಿಯುದ್ದಕ್ಕೂ ಲಾರಿಯಲ್ಲಿ ಉದುರಿದ್ದ ಮಣ್ಣು-ಗಾಳಿಗೆ ನನ್ನ ಬಟ್ಟೆ, ತಲೆ, ಮುಖ ಎಲ್ಲವನ್ನೂ ಆವರಿಸಿ ನಾನು ಕೆಂಪಣ್ಣನಾಗಿದ್ದೆ. ಅಂತೂ ಕಾರ್ಯಕ್ರಮದ ವೇಳೆಗೆ ಸರಿಯಾಗಿ ತಲುಪಿದೆ. ಸ್ವಾಮಿಗಳನ್ನು ಭೇಟಿಯಾದೆ. 'ಇದೇನು ವೇಷ!' ಎಂದರು. ವಿಷಯ ತಿಳಿಸಿದೆ. ಕೂಡಲೇ ಭಕ್ತರೊಬ್ಬರನ್ನು ಕರೆದು ನನ್ನನ್ನು ಮನೆಗೆ ಕರೆದುಕೊಂಡು ಬಟ್ಟೆ ಬದಲಿಸಲು, ಬೇರೆಯವರ ಷರಟು ಪ್ಯಾಂಟನ್ನು ಒದಗಿಸಲು ಹಾಗೂ ಸ್ನಾನಕ್ಕೆ ಏರ್ಪಾಟು ಮಾಡಿ ಕರೆತರಲು ಹೇಳಿದರು. ಸ್ವಲ್ಪ ಹೊತ್ತಿನ ವೇಳೆಗೆ ಭಕ್ತರೊಬ್ಬರ ಮನೆಯಲ್ಲಿ ಸ್ನಾನ ಮಾಡಿ, ನನ್ನ ಬಟ್ಟೆ ತೆಗೆದಿಟ್ಟು ಅವರ ಮನೆಯಲ್ಲಿದ್ದವರೊಬ್ಬರ ಷರಟು ಪ್ಯಾಂಟು (ದೊಗಲೆ ಸೈಜು) ಧರಿಸಿ ಕಾರ್ಯಕ್ರಮಕ್ಕೆ ಬಂದು ಭಾಷಣ ಮಾಡಿದೆ. 'ಮಡಿ ಮಡಿಯಾಗಿ ಬಂದಿರಿ ಕಾರ್ಯಕ್ರಮಕ್ಕೆ' ಎಂದು ಸ್ವಾಮಿಗಳು ನಕ್ಕರು. ನಾನೂ ನಕ್ಕೆ. 'ಈಗ ನಾನು ಪ್ರವಚನಕ್ಕೆ ಶುಚಿರ್ಭೂತ' ಎಂದೆ. 'ಮುಂಚೆ ನೀವು ಅವಧೂತರಾಗಿದ್ದಿರಿ' ಎಂದರು!

ಕಾರ್ಯಕ್ರಮ ಮುಗಿದ ಮೇಲೆ ಮಾರನೇ ದಿನ ಬೆಳಿಗ್ಗೆ ಬೆಂಗಳೂರಿಗೆ ಹೊರಟೆ. ಆ ವೇಳೆಗೆ ನನ್ನ ಷರಟು ಪ್ಯಾಂಟುಗಳನ್ನು ಒಗೆದು ಇಸ್ತ್ರಿ ಮಾಡಿ ಕಳಿಸಿಕೊಟ್ಟಿದ್ದರು ಆ ಭಕ್ತರ ಮನೆಯವರು. 'ಭಗವಂತನ ಪ್ರವಚನದಿಂದ ಪರಿಶುದ್ಧನಾಗಿದ್ದೇನೆ ಈಗ' ಎಂದೆ. 'ಸಂತೋಷ' ಎಂದು ಬೀಳ್ಕೊಟ್ಟರು. ಪುಣ್ಯಕ್ಷೇತ್ರಗಳಿಗೆ ಹೋದಾಗಲೆಲ್ಲ ಚಾರುಕೀರ್ತಿಸ್ವಾಮಿಗಳ ಅತಿಥಿ ಸತ್ಕಾರದ ವೈಖರಿ ನೆನಪಾಗುತ್ತದೆ.

❑

೫. ಚಾರುಕೀರ್ತಿ ಭಟ್ಟಾರಕರ ಸರಸ್ವತಿ ನಿಲಯ ಸ್ಥಾಪನೆ

ಬೊಂಬಾಯಿಯಲ್ಲಿ ಭಾರಿ ಜೈನ ಶ್ರೀಮಂತರೊಬ್ಬರು ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳನ್ನು ಪೂಜಾ ಸಮಾರಂಭವೊಂದಕ್ಕೆ ಆಹ್ವಾನಿಸಿದ್ದರು. ಅವರಿಗೆ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದು, ಹೊಸದಾಗಿ ನಿರ್ಮಿಸಿದ ಮನೆಯಲ್ಲಿ ಪೂಜಾ ಕಾರ್ಯಕ್ರಮ ಏರ್ಪಾಟಾಗಿತ್ತು. ಸ್ವಾಮಿಗಳು ಬಂದೊಡನೆ ಆ ಶ್ರೀಮಂತರು ಸ್ವಾಗತಿಸಿ ಪೂಜಾ ಸಮಾರಂಭಕ್ಕೆ ಮುಂಚೆ ತಾವು ನಿರ್ಮಿಸಿದ ಭವ್ಯಸೌಧವನ್ನು ತೋರಿಸಲಾರಂಭಿಸಿದರು. 'ತಮ್ಮ ಪಾದಧೂಳಿಯಿಂದ ನಮ್ಮ ಮನೆ ಪವಿತ್ರವಾಗುತ್ತಿದೆ' ಎಂದು ತಿಳಿಸಿದರು. ಸ್ವಾಮಿಗಳಿಗೆ ಮನೆಯನ್ನು ತೋರಿಸಿದ ಮೇಲೆ, ಪೂಜಾ ಸಮಾರಂಭವನ್ನು ಪ್ರಾರಂಭಿಸಲು ತಾವು ಬರುವುದಿಲ್ಲ ಎಂದುಬಿಟ್ಟರು ಸ್ವಾಮಿಗಳು. ಆ ಶ್ರೀಮಂತರು ಗಾಬರಿಗೊಂಡು ಏನಾಯಿತು ಅಪಚಾರ ಎಂದು ಕೇಳಿದರು. 'ಇಷ್ಟು ಭವ್ಯ ಸದನದಲ್ಲಿ ಸಾಹಿತ್ಯ ಸರಸ್ವತಿಗೆ ಜಾಗವಿಲ್ಲ. ಗ್ರಂಥಗಳಿಗೆ ಸ್ಥಳವೇ ಇಲ್ಲ' ಎಂದರು. 'ಇದು ಸರಸ್ವತಿಯಿಲ್ಲದ ಲಕ್ಷ್ಮೀ ನಿವಾಸ' ಎಂದರು. ಸಮಾರಂಭಕ್ಕೆ ಸಾಕಷ್ಟು ವೇಳೆ ಇತ್ತು. ತಕ್ಷಣ, ಪುಸ್ತಕ ಮಾರಾಟಕೇಂದ್ರಕ್ಕೆ ಹೋಗಿ ಜೈನ ಧರ್ಮ ಸಾಹಿತ್ಯದ ಗ್ರಂಥಗಳನ್ನು ಕೊಂಡು ಮನೆಯ ಕಪಾಟೊಂದರಲ್ಲಿ ಜೋಡಿಸಿ,'ಪ್ರತ್ಯೇಕ ಗ್ರಂಥ ಕೊಠಡಿಯನ್ನು ಪೂಜಾಮಂದಿರದ ಪಕ್ಕ ನಿರ್ಮಾಣ ಮಾಡುತ್ತೇನೆ ಕ್ಷಮಿಸಬೇಕು' ಎಂದು ಬಿನ್ನವಿಸಿಕೊಂಡರು. 'ಈಗ ಭವನ ಶ್ರಾವಕರ ಭವನ' ಎಂದು ಹೇಳಿ ಸ್ವಾಮಿಗಳು ಪೂಜಾ ಸಮಾರಂಭದಲ್ಲಿ ಭಾಗವಹಿಸಿದರು. ಆ ಶ್ರೀಮಂತರ ಪೂಜಾ ಸಮಾರಂಭಕ್ಕೆ ಸ್ವಾಮಿಗಳ ಜತೆ ಹೋದ ಒಬ್ಬ ಭಕ್ತರು ಹೇಳಿದ ಸಂಗತಿಯಿದು.

❑

೬. ಉಪ್ಪಿನಕಾಯಿ ಮತ್ತು ಮಹಾವೀರ ಜಯಂತಿ

ಜೈನಮತೀಯರಲ್ಲಿ ಬ್ರಹ್ಮಪ್ಪ ಎಂಬ ಹೆಸರು ಸಾಮಾನ್ಯ. ನನಗೆ ಹಲವಾರು ಬ್ರಹ್ಮಪ್ಪರು ಪರಿಚಯವಿದ್ದರು. ಅವರನ್ನು ನೆನೆದಾಗಲೆಲ್ಲ ಅವರ ಸ್ನೇಹಪರತೆ, ಔದಾರ್ಯ, ಸದ್ಗುಣಗಳು ನೆನಪಾಗುತ್ತವೆ. ಆ ಪೈಕಿ ಒಂದೆರಡು ಪ್ರಸಂಗಗಳು ನೆನಪಿಗೆ ಬರುತ್ತಿವೆ.

ತುಮಕೂರಿನಲ್ಲಿ ಮಹಾವೀರ ಜಯಂತಿ, ದಶಲಕ್ಷಣಧರ್ಮ, ಶಂಕರಜಯಂತಿ ಮೊದಲಾದ ಕಾರ್ಯಕ್ರಮಗಳಿಗೆ ಹತ್ತಾರು ಬಾರಿ ಹೋಗಿದ್ದೇನೆ. ಒಮ್ಮೆ ಮಹಾವೀರ ಜಯಂತಿಗೆ ಭಾಷಣಕ್ಕೆ ಹೋಗಿದ್ದೆ. ಬೆಳಿಗ್ಗೆ ಬೆಂಗಳೂರಿನಿಂದ ಹೊರಟು ಮಧ್ಯಾಹ್ನದ ವೇಳೆಗೆ ತುಮಕೂರಿಗೆ ಹೋಗಿದ್ದೆ. ಕಾರ್ಯಕ್ರಮ ಸಂಜೆ ಇದ್ದರೂ ಮೊದಲೇ ಹೋಗುತ್ತಿದ್ದೆ. ಏಕೆಂದರೆ ಅಲ್ಲಿ ಹಲವಾರು ಜೈನ ಆತ್ಮೀಯರು, ರಾಮಚಂದ್ರ ಸ್ಯಾದ್ವಾದಿ ಮುಂತಾದವರು ಇದ್ದರು. ಅವರೊಡನೆ ಕಾಲ ಕಳೆದು ಸತ್ಸಂಗ ನಡೆಸುವುದಕ್ಕಾಗಿ ಬೆಳಿಗ್ಗೆಯೇ ತುಮಕೂರಿಗೆ ಹೋಗುತ್ತಿದ್ದೆ ಬಸ್ಸಿನಲ್ಲಿ. ರೈಲು ನನಗೆ ಅಭ್ಯಾಸವಿಲ್ಲ. ೩೦ ವರುಷಗಳ ಕಾಲೇಜು ಅಧ್ಯಾಪಕನಾಗಿದ್ದಾಗ ನೂರಕ್ಕೆ ತೊಂಬತ್ತರಷ್ಟು ಪ್ರವಾಸ ನನ್ನದು ಬಸ್ಸಿನಲ್ಲಿ.

ಆ ವರ್ಷ ತುಮಕೂರಿನ ಕಾರ್ಯಕ್ರಮಕ್ಕೆ ಹೊರಟಾಗ ಸುಮಾರು ಮಧ್ಯಾಹ್ನ ೧೨ ಗಂಟೆ. ಬಸ್ ಸ್ಟ್ಯಾಂಡಿನಲ್ಲಿ ಇಳಿದರೆ ಊರೆಲ್ಲೆಡೆ ಸ್ಮಶಾನಮೌನ. ಜನಸಂಚಾರವಿಲ್ಲ. ಕರ್ಫ್ಯೂ ಏಕೆ ಎಂದು ತಿಳಿಯಲಿಲ್ಲ. ಏನಾದರೂ ಆಗಲಿ ಎಂದು ಜೈನ ಬಸ್ತಿಯ ಬಳಿಗೆ ಹೋದೆ. ಬಸ್ತಿಯ ಬಳಿ ಇದ್ದ ಬ್ರಹ್ಮಪ್ಪನವರು ನನ್ನನ್ನು ಕಂಡು 'ಮೊದಲು ಒಳಗೆ ಬನ್ನಿ' ಎಂದರು. ಹೋದೆ. 'ಊರಲ್ಲಿ ಮತೀಯ ಗಲಭೆ ಉಂಟಾಗಿದೆ. ಕರ್ಫ್ಯೂ ವಿಧಿಸಿದ್ದಾರೆ. ಸಂಜೆ ಕಾರ್ಯಕ್ರಮ ನಡೆಯುವ ಹಾಗೆ ಕಾಣುತ್ತಿಲ್ಲ' ಎಂದರು. 'ಸರಿ, ವಾಪಾಸ್ ಹೋಗುತ್ತೇನೆ' ಎಂದೆ. 'ಬೇಡಿ, ಸಂಜೆಯ ಹೊತ್ತಿಗೆ ವಾತಾವರಣ ತಿಳಿಯಾಗಿ ಕರ್ಫ್ಯೂ ತೆಗೆಯಬಹುದು. ಕಾರ್ಯಕ್ರಮ ನಡೆಯಬಹುದು. ಮಹಾವೀರ ಜಯಂತಿ ಅಹಿಂಸಾ ಧರ್ಮದ ಸಭೆ ಅಲ್ಲವೇ? ಕಾದು ನೋಡೋಣ, ಇರಿ' ಎಂದರು. ಸರಿ ಎಂದೆ. ಅವರ ಮನೆ ಉಪ್ಪಿನಕಾಯಿ ಕಾರ್ಖಾನೆ ಆಗಿತ್ತು. ಮನೆಯ ಹಜಾರದ ತುಂಬ ಉಪ್ಪಿನಕಾಯಿ ಪೀಪಾಯಿಗಳು, ಡಬ್ಬಗಳು, ಗಾಜಿನ ಬಾಟಲುಗಳಿದ್ದವು. ಹತ್ತಾರು ಜನ ಉಪ್ಪಿನಕಾಯಿಯನ್ನು ಅವುಗಳಿಗೆ ತುಂಬಿ ಪ್ಯಾಕ್ ಮಾಡುತ್ತಿದ್ದರು. ಅಲ್ಲೇ ಇದ್ದ ಕೋಣೆಯಲ್ಲಿ ನನ್ನನ್ನು ಇರಿಸಿದರು. ಊಟ ತಿಂಡಿಗಳಿಗೆ ಏರ್ಪಾಟು ಮಾಡಿ ನನ್ನೊಡನೆ ಸಂಭಾಷಿಸುತ್ತಾ ನಡುನಡುವೆ ಉಪ್ಪಿನಕಾಯಿ ಪ್ಯಾಕಿಂಗ್ ವ್ಯವಸ್ಥೆ ನೋಡುತ್ತಾ ಇದ್ದರು. ಸಾಕಷ್ಟು ಜೈನಧರ್ಮ ತಿಳಿದ ಶ್ರಾವಕರು ಅವರು. ಹತ್ತಾರು ಜೈನಧರ್ಮದ ವಿಚಾರಗಳನ್ನು ನನ್ನೊಡನೆ ಚರ್ಚಿಸಿದರು. ಸಂಜೆ ಆಯಿತು. ಕರ್ಫ್ಯೂ ತೆಗೆದಿದ್ದರು. ಎಲ್ಲೆಡೆ ಶಾಂತಿ ನೆಲೆಸಿತ್ತು. ಅಂಗಡಿ ಮುಂಗಟ್ಟು ತೆರೆದಿದ್ದವು. ಜನಸಂಚಾರ ಪ್ರಾರಂಭವಾಗಿತ್ತು. ಒಬ್ಬೊಬ್ಬರೇ ಬರತೊಡಗಿ ಸ್ವಲ್ಪ ತಡವಾಗಿ ಸಭೆ ಪ್ರಾರಂಭವಾಗಿ ಅಚ್ಚುಕಟ್ಟಾಗಿ ನಡೆಯಿತು. ನಾನು ರಾತ್ರಿಯೇ ಬೆಂಗಳೂರಿಗೆ ಹಿಂತಿರುಗುವವನಿದ್ದೆ. ಮರುದಿನ ಬೆಳಿಗ್ಗೆ ಕಾರ್ಯಕ್ರಮ ಒಂದಿತ್ತು. ಬಸ್ಸಿಗೆ ಹೊರಟಾಗ ಉಪ್ಪಿನಕಾಯಿ ಬ್ರಹ್ಮಪ್ಪನವರಿಗೆ ದಿನವೆಲ್ಲಾ ಉಪಚರಿಸಿ ಊಟೋಪಚಾರ ನಡೆಸಿದ್ದಕ್ಕೆ

ವಂದನೆ ಹೇಳಿದಾಗ ಅವರು, 'ಅತಿಥಿ ಸತ್ಕಾರ ಜೈನಧರ್ಮದ ಮುಖ್ಯಾಂಗಗಳಲ್ಲಿ ಒಂದು ಪುಣ್ಯದ ಕಾರ್ಯ. ಅದಕ್ಕೆ ಅವಕಾಶ ಮಾಡಿಕೊಟ್ಟಿರಿ, ನಿಮಗೆ ನಾನು ಕೃತಜ್ಞ' ಎಂದರು. 'ನಿಮ್ಮಂಥ ಗೃಹಸ್ಥರು ಸಿಕ್ಕರೆ ಜೈನಧರ್ಮದ ವಿಚಾರ ವಿನಿಮಯ ಸಭೆ ಇದ್ದಂತೆ' ಎಂದೆ. 'ನಿಮ್ಮ ಮಾತುಗಳನ್ನು ಕೇಳಿ ಹಾಲಿನಲ್ಲಿದ್ದ ಉಪ್ಪಿನಕಾಯಿ ಪ್ಯಾಕಿಂಗ್ ಮಾಡುತ್ತಿದ್ದವರೆಲ್ಲ ಕೇಳಿ ಸಂತೋಷಪಟ್ಟರು' ಎಂದು ಒಂದು ಚೀಲವನ್ನು ಕೈಗಿತ್ತರು. 'ಬೇಡಿ ಎನಬೇಡಿ, ತೆಗೆದುಕೊಳ್ಳಿ' ಎಂದರು. ಆ ಚೀಲದ ತುಂಬಾ ನಾನಾ ಬಗೆಯ ಉಪ್ಪಿನಕಾಯಿಗಳ ಬಾಟಲುಗಳಿದ್ದವು.

'ಮುಂದಿನ ವರ್ಷ ಮಹಾವೀರ ಜಯಂತಿ ಆಗುವವರೆಗೆ ಉಪ್ಪಿನಕಾಯಿ ಕೊಟ್ಟಿದ್ದೀರಿ' ಎಂದಾಗ, 'ಇದು ಅಲ್ಪಕಾಣಿಕೆ ಅಷ್ಟೇ' ಎಂದರು. ಇಂಥ ಅತಿಥಿ ಸತ್ಕಾರಿ ಉಪ್ಪಿನಕಾಯಿ ಬ್ರಹ್ಮಪ್ಪ ಸದಾ ನೆನಪಿನಲ್ಲಿ ಉಳಿದಿದ್ದಾರೆ.

❑

೭. ರಾಯಚೂರಿನಲ್ಲಿ ದೀಪಾವಳಿ ಹಬ್ಬ

ಧರ್ಮಚಕ್ರವಿಹಾರ ಮಹಾವೀರನ ೨೫೦೦ ವರ್ಷದ ಆಚರಣೆಯ ಪ್ರಯುಕ್ತ ಭಾರತಾದ್ಯಂತ, ಕರ್ನಾಟಕದಲ್ಲಿ ಎಲ್ಲೆಡೆ, ಅದ್ದೂರಿಯಾಗಿ ನಡೆಯಿತು. ಆ ಸಂದರ್ಭದಲ್ಲಿ ನಾನು ನೂರಾರು ಭಾಷಣ ಮಾಡಿದೆ. ಜೈನಧರ್ಮ ಸಾಹಿತ್ಯದ ಬಗ್ಗೆ ಜೈನ ವಿದ್ವಾಂಸರು, ಜೈನ ಸಾಹಿತಿಗಳು, ಜೈನ ಗುರುಗಳು, ಸಾಧುಸಂತರು ಮಾತನಾಡುವ ಜತೆಗೆ ಜೈನೇತರ ವಿದ್ವಾಂಸರೊಬ್ಬರನ್ನು ಜೈನಸಭೆಗಳಿಗೆ ಆಹ್ವಾನಿಸಬೇಕು, ಅನೇಕಾಂತವಾದ ಲಕ್ಷಣ ಅದು. ಅನ್ಯಮತೀಯರ ದೃಷ್ಟಿಯಲ್ಲಿ ಜೈನಧರ್ಮ ಪರಿಚಯ ನಮಗಾಗುತ್ತದೆ ಮತ್ತು ಜೈನಧರ್ಮ ವಿಶ್ವದಧರ್ಮಗಳಲ್ಲಿ ಒಂದು. ಅದು ಕೇವಲ ಜೈನಮತೀಯರಿಗಷ್ಟೇ ಅಲ್ಲ, ಸಕಲ ಮಾನವರ ಕಲ್ಯಾಣಕ್ಕೆ ಮೀಸಲಾದ ಧರ್ಮ ಎಂದು ತಿಳಿದು ಜೈನೇತರರೊಬ್ಬರನ್ನು ಎಲ್ಲಾ ಧರ್ಮಚಕ್ರ ವಿಹಾರದ ಸಭೆಗಳಿಗೆ ಕರೆಯುತ್ತಿದ್ದರು. ಹಾಗಾಗಿ ನನಗೆ ನೂರಾರು ಅವಕಾಶಗಳು ದೊರೆತವು. ಕೋಟೆ ಹೈಸ್ಕೂಲಿನಲ್ಲಿ ೧೯೫೨–೫೫ರಲ್ಲಿ ನಾನು ವಿದ್ಯಾರ್ಥಿ ಆಗಿದ್ದಾಗ, ಕನ್ನಡ ಅಧ್ಯಾಪಕರಾಗಿದ್ದ ಪದ್ಮನಾಭ ಶರ್ಮರಂಥ ಜೈನವಿದ್ವಾಂಸರಿಂದ ಜೈನಧರ್ಮದ ಪಾಠಗಳನ್ನು ಹೇಳಿಸಿಕೊಂಡಿದ್ದೆ. ಕನ್ನಡ ಅಧ್ಯಾಪಕನಾಗಿ ಜೈನಸಾಹಿತ್ಯ ಓದಿಕೊಂಡಿದ್ದೆ. ಹಾಗಾಗಿ ಸಭೆಗಳಲ್ಲಿ ನನ್ನ ಉಪನ್ಯಾಸಗಳನ್ನು ಜೈನರು ಮೆಚ್ಚಿದರು.

ಬಳ್ಳಾರಿ ರಾಯಚೂರುಗಳಲ್ಲಿ ಸಾರಿಗೆ ಇಲಾಖೆಯಲ್ಲಿ ಆರ್.ಟಿ.ಓ. ಅಧಿಕಾರಿಗಳಾದ, ಸಾತ್ತ್ವಿಕ ಸಜ್ಜನರೂ ಆದ ಬ್ರಹ್ಮಪ್ಪ ಎಂಬುವರು ಹಾಸನದಲ್ಲಿದ್ದರು. ನಾನು ಹಾಸನದ ಸರ್ಕಾರಿ ಡಿಗ್ರಿ ಕಾಲೇಜಿನಲ್ಲಿ ಹಲವು ವರ್ಷ ಕನ್ನಡ ಅಧ್ಯಾಪಕನಾಗಿದ್ದಾಗ ಅಲ್ಲಿಯ ಜೈನ ಬಸ್ತಿಯಲ್ಲಿ ಉಪನ್ಯಾಸಗಳನ್ನು ನೀಡಿದ್ದೆ. ಶ್ರವಣಬೆಳಗೊಳದಿಂದ ಬಂದಿದ್ದ ಜೈನವಟುಗಳಿಗೆ ಕನ್ನಡ ಸಾಹಿತ್ಯ ಚರಿತ್ರೆಯ ಪಾಠ ಹೇಳಿದ್ದೆ. ಹೆಚ್.ಬಿ.ಜ್ವಾಲನಯ್ಯ, ಪಂಡಿತ ನಾಗರಾಜಯ್ಯ, ಬ್ರಹ್ಮಪ್ಪ ಮುಂತಾದ ಜೈನಶ್ರಾವಕರು ಚೆನ್ನಾಗಿ ಪರಿಚಿತರಾಗಿದ್ದರು.

ಬಳ್ಳಾರಿ, ಹೊಸಪೇಟೆಗಳಲ್ಲಿ ಧರ್ಮಚಕ್ರವಿಹಾರದ ಸಭೆಗಳ ವ್ಯವಸ್ಥಾಪನಾ ಕಾರ್ಯವನ್ನು ಜೈನಧರ್ಮ ಸಭೆಯವರು ಆರ್.ಟಿ.ಓ. ಬ್ರಹ್ಮಪ್ಪನವರಿಗೆ ವಹಿಸಿದ್ದರು. ಸಾರಿಗೆ ಇಲಾಖೆಯಲ್ಲಿ ಉನ್ನತಾಧಿಕಾರದಲ್ಲಿದ್ದ ಶುದ್ಧಹಸ್ತದ ದಕ್ಷ ಅಧಿಕಾರಿ ಅವರಾಗಿದ್ದರು. ಸಾತ್ತ್ವಿಕ ಜೈನಗೃಹಸ್ಥರು ಅವರಾಗಿದ್ದರು. ಹಾಸನದಲ್ಲಿ ಪರಿಚಿತರಾಗಿದ್ದ ಅವರು ಬೆಂಗಳೂರಿಗೆ ವರ್ಗವಾಗಿ ಸರ್ಕಾರಿ ಕಾಲೇಜಿನಲ್ಲಿದ್ದ ನನ್ನನ್ನು ಇಡೀ ಬಳ್ಳಾರಿ, ರಾಯಚೂರು ಧರ್ಮಚಕ್ರದ ವಿಹಾರದ ಎಲ್ಲ ಸಭೆಗಳಿಗೂ, ಉಪನ್ಯಾಸಕ್ಕೆ ಕರೆದೊಯ್ದರು. ಅವರ ಸಂಘಟನಾ ಶಕ್ತಿ, ಜೈನಧರ್ಮಾಸಕ್ತಿ, ಆತ್ಮೀಯತೆ ನನಗೆ ಪರಿಚಯವಾಯಿತು. ಒಮ್ಮೆ ರಾಯಚೂರು ಸಭೆಗೆ ಕಾರಿನಲ್ಲಿ ಸೇತುವೆಯೊಂದರ ಮೇಲೆ ಸಂಚರಿಸುತ್ತಿದ್ದೆವು. ಸೇತುವೆಯ ಮೇಲೆ ಕಾರು ಕೆಟ್ಟು ನಿಂತಿತು. ಕಾರನ್ನು ಪಕ್ಕಕ್ಕೆ ನಿಲ್ಲಿಸಿ ಹೋಗಿ ಬರುತ್ತಿದ್ದ ಲಾರಿಗಳಿಗೆ ಕೈ ಬೀಸಿದರೂ ಯಾರೂ ನಿಲ್ಲಿಸುತ್ತಿರಲಿಲ್ಲ. ಅವರ ಕಾರಿನ ಸಣ್ಣ ರಿಪೇರಿಗೆ ಸ್ಪ್ಯಾನರ್‌ಗಳಿದ್ದ ಟೂಲ್ ಕಿಟ್ ಬೇಕಾಗಿತ್ತು. ಅವರು ತಂದಿರಲಿಲ್ಲ. ಮರೆತಿದ್ದರು. ಹಾಗಾಗಿ ಇತರ ವಾಹನದವರನ್ನು

ನಿಲ್ಲಿಸಲು ಕೈಬೀಸುತ್ತಿದ್ದರು. ನನ್ನಲ್ಲಿದ್ದ ಕೆಂಪು ಕರ್ಚೀಫ್‌ನ್ನು ಪೆನ್ನಿಗೆ ಸಿಕ್ಕಿಸಿ ಎತ್ತಿ ಹಿಡಿದಿದ್ದೆ. ದಾರಿಯಲ್ಲಿ ಹೋಗುತ್ತಿದ್ದ ಲಾರಿ ಚಾಲಕರಿಗೆಲ್ಲಾ ಆರ್.ಟಿ.ಒ.(ಸಾರಿಗೆ ತನಿಖಾಧಿಕಾರಿ) ಬ್ರಹ್ಮಪ್ಪನವರ ಪರಿಚಯವಿದ್ದುದರಿಂದ ಗಾಡಿ ನಿಧಾನ ಮಾಡಿ, ಅವರನ್ನು ಕಂಡೊಡನೆ ವೇಗವಾಗಿ ಚಲಿಸಿಬಿಡುತ್ತಿದ್ದರು. ಕೊನೆಗೊಬ್ಬ ಲಾರಿ ಚಾಲಕ ಲಾರಿ ನಿಲ್ಲಿಸಿ ಅವರಿಗೆ ಟೂಲ್ ಕಿಟ್ ಕೊಟ್ಟು ಲಾರಿಯನ್ನು ನಡೆಸಿಕೊಂಡು ಹೊರಟು ಹೋದ. ಇವರು ಕಾರು ರಿಪೇರಿ ಆದ ಮೇಲೆ, 'ಅಯ್ಯೋ! ಎಂಥಾ ಕೆಲಸ ಆಯಿತು. ಟೂಲ್ ಕಿಟ್ ಹಿಂದಿರುಗಿಸಲು ಇರಯ್ಯ ಒಂದು ನಿಮಿಷ ಎಂದರೂ ಇರದೆ ಹೋದನಲ್ಲಾ' ಎಂದು ಪೇಚಾಡಿದರು. ಆಗ ನಾನು 'ಆ ಲಾರಿ ನಂಬರು ಗುರುತು ಹಾಕಿಕೊಂಡಿದ್ದೇನೆ' ಎಂದೆ. ಅವರಿಗೆ ಪರಮ ಸಂತೋಷವಾಯಿತು. ಅಂದು ದೀಪಾವಳಿಯನ್ನು ಅವರ ಬಂಧುಗಳ ಮನೆಯಲ್ಲೇ ಆಚರಿಸಿದೆವು. ಬೆಳಿಗ್ಗೆ ಮೊದಲು ಆ ಲಾರಿ ಚಾಲಕನ್ನು ಪತ್ತೆ ಮಾಡಿ ಟೂಲ್ ಕಿಟ್ ಹಿಂತಿರುಗಿಸಿ ಅವನಿಗೆ ಮೆಚ್ಚುಗೆ ಸೂಚಿಸಿ ಅನಂತರ ದೀಪಾವಳಿ ಹಬ್ಬ ಆಚರಿಸಿದರು.

❑

೮. ಮಹಾವೀರ ಜಯಂತಿಯ ವೈಶಿಷ್ಟ್ಯ

ಮಹಾವೀರ ಜಯಂತಿ ನಾಡಿನಲ್ಲೆಲ್ಲ ಜರುಗುವುದು ಎಲ್ಲರಿಗೂ ತಿಳಿದ ವಿಷಯ. ಆಗ ಮಹಾವೀರನ ಜೀವನ ಸಾಧನೆ, ಜೈನಧರ್ಮದ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸುವುದು ಸಾಮಾನ್ಯ ಸಂಗತಿ. ದಾನಧರ್ಮಗಳಂತೂ ಇದ್ದೇ ಇರುತ್ತವೆ. ಶಾಸ್ತ್ರ ದಾನವಾಗಿ ಗ್ರಂಥಗಳು ಪ್ರಕಟವಾಗುವುದುಂಟು. ಕನ್ನಡ ಅಧ್ಯಾಪಕರನ್ನು ಸಾಮಾನ್ಯವಾಗಿ ಉಪನ್ಯಾಸಕ್ಕೆ ಕರೆಸುತ್ತಿದ್ದರು. ಅವರು ಪಂಪ, ರನ್ನ, ಜನ್ನ ಮೊದಲಾದವರ ಬಗ್ಗೆ ಜೈನ ಮಹಾಕಾವ್ಯಗಳನ್ನು ಓದಿಕೊಂಡಿರುತ್ತಾರೆ, ಜೈನಧರ್ಮದ ಬಗ್ಗೆ ತಿಳಿದಿರುತ್ತಾರೆ ಎಂದು ಆಗಿನ ಸಂಘ, ಸಂಸ್ಥೆಗಳ ವ್ಯವಸ್ಥಾಪಕರು ತಿಳಿದಿದ್ದರು. ಜತೆಗೆ ಅಧ್ಯಕ್ಷತೆಗೆ ಜೈನಸಾಹಿತಿಗಳು. ಜೈನವಿದ್ವಾಂಸರು ಅಥವಾ ಊರಿನ ಗಣ್ಯರು ಸಭೆಗೆ ಆಹ್ವಾನಿತರಾಗಿರುತ್ತಿದ್ದರು. ಇನ್ನೊಂದು ಸಂಗತಿ ಎಂದರೆ ೨೫೦೦ನೇ ವರ್ಷದ ಮಹಾವೀರ ಜಯಂತಿಯ ಸಂದರ್ಭದಲ್ಲಿ ಜೈನಸಂಸ್ಥೆಗಳಲ್ಲಿ ಒಂದು ನಿರ್ಧಾರ ಮಾಡಿದ್ದರು. ಅದೇನೆಂದರೆ ನಮ್ಮ ಜೈನಧರ್ಮ-ಸಾಹಿತ್ಯ-ಸಂಸ್ಕೃತಿಯ ಬಗ್ಗೆ ಜೈನವಿದ್ವಾಂಸರು, ಜೈನಮತೀಯ ಸಾಹಿತಿಗಳು ಮಾತಾಡುವುದು ವಿಶೇಷವೇನಲ್ಲ. ಸಹಜವಾಗಿ ಜೈನ ವಿದ್ವಾಂಸರು, ಜೈನಸಾಹಿತಿಗಳು ಜೈನಧರ್ಮವನ್ನು ಸಾಕಷ್ಟು ಚೆನ್ನಾಗಿ ತಿಳಿದಿರುತ್ತಾರೆ. ತಕ್ಕಮಟ್ಟಿಗೆ ಎಷ್ಟೋ ಜನ ಜೈನಗೃಹಸ್ಥರು ಆಚರಣೆಯಲ್ಲಿ ಜೈನಧರ್ಮಾಚರಣೆಯ ಗೃಹಸ್ಥರಾಗಿರುತ್ತಾರೆ. ಅದೇನು ವಿಶೇಷ ಸಂಗತಿಯಲ್ಲ. ಮಹಾವೀರ ಜಯಂತಿ ದಶಲಕ್ಷಣಧರ್ಮ ಅನಂತನೋಪಿ ಇತ್ಯಾದಿ ಜೈನಧರ್ಮ ಹಬ್ಬಗಳ ಸಂದರ್ಭಗಳಲ್ಲಿ ಜೈನೇತರ ವಿದ್ವಾಂಸರನ್ನು, ಶಿಕ್ಷಕರನ್ನು ಕರೆದು ಅವರಿಂದಲೂ ಉಪನ್ಯಾಸಗಳನ್ನು ಏರ್ಪಡಿಸಬೇಕೆಂದು ಮಹಾವೀರ ಮಿಷನ್, ಜೈನಮಿಲನ್, ಬಸ್ತಿ ಕಾರ್ಯಕ್ರಮಗಳ ವ್ಯವಸ್ಥಾಪಕರು ನಿರ್ಧರಿಸಿದರು. ಹೀಗಾಗಿ ಕನ್ನಡ ಶಿಕ್ಷಕನಾಗಿ ಡಿ.ಪದ್ಮನಾಭ ಶರ್ಮರಂಥ ಜೈನವಿದ್ವಾಂಸರಿಂದ ಜೈನಧರ್ಮದ ಪರಿಚಯ ಹೊಂದಿದ ನನ್ನನ್ನು ಜೈನಸಾಹಿತ್ಯ ಧರ್ಮದ ಕಾರ್ಯಕ್ರಮಗಳಲ್ಲಿ ಉಪನ್ಯಾಸಕ್ಕೆ ಕರೆದೊಯ್ಯುತ್ತಿದ್ದರು. ಒಂದು ಕಾಲದಲ್ಲಿ ದಶಲಕ್ಷಣ ಧರ್ಮದ ದಿನಾಚರಣೆಯನ್ನು ೧೦ ದಿನಗಳೂ ನಾಡಿನಲ್ಲಿ ಎಲ್ಲೆಂದರಲ್ಲಿ ಮನೆಗಳಲ್ಲೂ ಆಚರಿಸಿ ಸಾರ್ವಜನಿಕವಾಗಿ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ನಾನು ನಾಡಿನಾದ್ಯಂತ ಮಹಾವೀರ ಜೈನಕಾವ್ಯ ದಶಲಕ್ಷಣಧರ್ಮ ಮೊದಲಾದ ಸಂದರ್ಭಗಳಲ್ಲಿ ಉಪನ್ಯಾಸಗಳಿಗೆ ಆಹ್ವಾನಿತನಾಗಿ ನೂರಾರು ಉಪನ್ಯಾಸ ನೀಡಿದ್ದೇನೆ. ಇದಕ್ಕೆ ಮುಖ್ಯ ಕಾರಣ ನೇಮಿನಾಥಯ್ಯ, ವಸಂತರಾಜಯ್ಯ, ಆ.ನಾ.ಚಂದ್ರಕೀರ್ತಿ, ಜ್ವಾಲನಯ್ಯ, ಆರ್.ಟಿ.ಓ. ಬ್ರಹ್ಮಪ್ಪ, ಜಯಚಂದ್ರ, ಶ್ರವಣಬೆಳಗೊಳದ ಸ್ವಾಮಿಗಳು ಮುಂತಾದ ಜೈನಧರ್ಮದ ಕಾರ್ಯಕ್ರಮಗಳ ವ್ಯವಸ್ಥಾಪಕರಿಗೆ ನಾನು ಪರಿಚಿತನಾಗಿದ್ದರಿಂದ ಜೈನಕಾರ್ಯಕ್ರಮಗಳಿಗೆ ಉಪನ್ಯಾಸಕ್ಕೆ ಆಹ್ವಾನಿಸುತ್ತಿದ್ದರು. ಹಾಗಾಗಿ ಜೈನಧರ್ಮ ಸಾಹಿತ್ಯದ ಬಗ್ಗೆ ನಾಡಿನಲ್ಲಿ ಅತಿ ಹೆಚ್ಚಿನ ಉಪನ್ಯಾಸಗಳನ್ನು ನೀಡಿದ ಕನ್ನಡ ಶಿಕ್ಷಕರಲ್ಲಿ ನಾನೊಬ್ಬ ಆಗಿದ್ದೆ. ಜೈನಧಾರ್ಮಿಕ ಕಾರ್ಯಕ್ರಮಗಳಲ್ಲಿ ಜೈನೇತರ ವಿದ್ವಾಂಸರನ್ನು ಕರೆದು ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದ ಜೈನಧರ್ಮೀಯರು ಪರಧರ್ಮದ ವಿದ್ವಾಂಸರಿಗೆ ನೀಡುತ್ತಿದ್ದ ಪ್ರೋತ್ಸಾಹ ಚಿರಸ್ಮರಣೀಯವಾಗಿದೆ.

೯. ಗುರು–ಜಗದ್ಗುರು

ನೂರಾರು ಜೈನಧರ್ಮದ ಉಪನ್ಯಾಸಗಳನ್ನು ನೀಡಿದ್ದೇನೆ. ಕೆಲವು ಕಾರ್ಯಕ್ರಮಗಳ ನೆನಪುಗಳನ್ನು ಇಲ್ಲಿ ದಾಖಲಿಸಿದ್ದೇನೆ.

ಒಮ್ಮೆ ಹಾಸನದ ಬೆಳ್ಳೂರಿನಲ್ಲಿ ಜೈನಗೃಹಸ್ಥರೂ, ಸಮಾಜ ಸೇವಾಕರ್ತರೂ ಆಗಿದ್ದ ವರ್ಧಮಾನಯ್ಯನವರು ಮಹಾವೀರ ಜಯಂತಿಗೆ ಉಪನ್ಯಾಸಕ್ಕೆ ಆಹ್ವಾನಿಸಿದ್ದರು. ಬೆಳ್ಳೂರಿನ ಹಳೆಯ ಬಸ್‌ಸ್ಟ್ಯಾಂಡ್ ಬಳಿ ಹಮ್ಮಿಕೊಂಡ ಆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆದಿಚುಂಚನಗಿರಿಯ ಬಾಲಗಂಗಾಧರ ಮಹಾಸ್ವಾಮಿಗಳು ವಹಿಸಿದ್ದರು. ಅವರು ಪಟ್ಟಕ್ಕೆ ಬಂದು ಒಂದೆರಡು ವಾರಗಳಾಗಿದ್ದವಷ್ಟೆ. ನಾನು ಉಪನ್ಯಾಸಕನಾಗಿ ಮಹಾವೀರನ ಬಗ್ಗೆ ಮಾತನಾಡಿದ ಮೇಲೆ ಇನ್ನೂ ಕೆಲವರು ಮಾತಾಡಿದರು. ಆಗ ಬಾಲಗಂಗಾಧರ ಸ್ವಾಮಿಗಳು ಅವರ ಬಳಿ ವೇದಿಕೆಯಲ್ಲಿ ಕುಳಿತಿದ್ದ ನನಗೆ ಕಿವಿಯಲ್ಲಿ 'ನನಗೆ ಜೈನಧರ್ಮ ಅಷ್ಟಾಗಿ ಪರಿಚಯವಿಲ್ಲ. ನೀವೆಲ್ಲಾ ವಿದ್ವಾಂಸರು. ಅದ್ಭುತವಾಗಿ ಮಾತಾನಾಡಿದ್ದೀರಿ' ಎಂದರು. ಆಗ ನಾನು 'ಚಿಂತಿಸಬೇಡಿ. ನಾನು ಕೆಲವು ಮಾತುಗಳನ್ನು ಗುರುತು ಹಾಕಿಕೊಡುತ್ತೇನೆ. ಅದನ್ನು ಅಧ್ಯಕ್ಷ ಭಾಷಣದಲ್ಲಿ ಆಶೀರ್ವಚನವಾಗಿ ಹೇಳಿದರೆ ಸಾಕು' ಎಂದು ಒಂದು ಚೀಟಿಯಲ್ಲಿ ಕೆಲವು ವಿಚಾರಗಳನ್ನು ಗುರುತು ಹಾಕಿಕೊಟ್ಟೆ. ಉಳಿದವರ ಉಪನ್ಯಾಸಗಳೆಲ್ಲ ಮುಗಿದ ಮೇಲೆ ಬಾಲಗಂಗಾಧರ ಸ್ವಾಮಿಗಳು ಗುರುತಿನ ಚೀಟಿಯಲ್ಲಿದ್ದ ವಿಷಯಗಳನ್ನು ಗಮನಿಸಿಕೊಂಡು ಅಚ್ಚುಕಟ್ಟಾಗಿ ಚಿಕ್ಕದಾಗಿ ಮಾತನಾಡಿದರು. ಎಲ್ಲರಿಗೂ ಸಂತೋಷವಾಯಿತು. 'ಸ್ವಾಮಿಗಳು ಪಟ್ಟಕ್ಕೆ ಈಗಷ್ಟೇ ಬಂದಿದ್ದರೂ ಚೆನ್ನಾಗಿ ಜೈನಧರ್ಮವನ್ನು ಕುರಿತು ಮಾತಾಡಿದ್ದಾರೆ' ಎಂದುಕೊಂಡರು. ಸ್ವಾಮಿಗಳು ನನ್ನ ಕಡೆ ನೋಡಿ ನಕ್ಕರು.

ಕೆಲವು ತಿಂಗಳ ನಂತರ ಬೆಳ್ಳೂರಿನ ಒಂದೆಡೆ ದೇವುಡು ನರಸಿಂಹಶಾಸ್ತ್ರಿಗಳ ಶತಮಾನೋತ್ಸವದ ಅಂಗವಾಗಿ ಉಪನ್ಯಾಸಕ್ಕೆ ನಾನು, ಪ್ರಸಿದ್ಧ ಕವಿ ಎಂ.ಎನ್.ವ್ಯಾಸರಾವ್ ಆಹ್ವಾನಿತರಾಗಿದ್ದೆವು. ಕಾರ್ಯಕ್ರಮವನ್ನು ಮುಗಿಸಿ ಹಿಂತಿರುಗುವಾಗ ಆದಿಚುಂಚನಗಿರಿಗೆ ಬಂದು ಸ್ವಾಮಿಗಳನ್ನು ನೋಡದಿದ್ದರೆ ದೇವಸ್ಥಾನಕ್ಕೆ ಹೋಗಿ ಗರ್ಭಗುಡಿಯಲ್ಲಿ ದೇವರನ್ನು ನೋಡದೆ ಇದ್ದ ಹಾಗೆ ಆಗುತ್ತದೆ ಎಂದು ನಾವು ಮೂವರು, ದೇವುಡು ಪುತ್ರರಾದ ಗಂಗಾಧರ ದೇವುಡು, ನಾವಿಬ್ಬರೂ ಬಾಲಗಂಗಾಧರ ಸ್ವಾಮಿಗಳನ್ನು ಭೇಟಿಯಾದೆವು. ಅವರು ನನ್ನನ್ನು ಕಂಡಾಗ, 'ಗುರುಗಳೇ, ದೇವುಡು ಬಗ್ಗೆ ಕಾರ್ಯಕ್ರಮ ಚೆನ್ನಾಗಿತ್ತಾ... ದೇವುಡು ಮಹಾವಿದ್ವಾಂಸರು. ಅವರ ಕೃತಿಗಳನ್ನು ಕನ್ನಡಿಗರೆಲ್ಲಾ ಓದಲೇಬೇಕಾದವು' ಎಂದರು. ಅವರು ನನ್ನನ್ನು 'ಗುರುಗಳೇ' ಅಂದ ಮಾತಿನ ಅರ್ಥ ಬೆಳ್ಳೂರಿನ ಭಾಷಣವನ್ನು ನೆನಪು ಮಾಡಿದ್ದಾರೆ ಎಂದು ಅರ್ಥವಾಯಿತು. ನಾನು ನಕ್ಕು 'ನೀವು ಜಗದ್ಗುರುಗಳು. ನಾನು ಶಿಕ್ಷಕ, ವಿದ್ಯಾರ್ಥಿಗಳಿಗೆ ಗುರುವಾದರೂ, ನಿಮಗೆ ಶಿಷ್ಯ ನಾನು' ಎಂದೆ. ಅವರು ಮತ್ತೊಮ್ಮೆ ನಕ್ಕರು. ನಮ್ಮೆಲ್ಲರಿಗೂ ಆಶೀರ್ವಾದ ಮಾಡಿ ಫಲಾನುಗ್ರಹ ಮಾಡಿದರು. ಒಬ್ಬ ಭಕ್ತನನ್ನು, ಶಿಕ್ಷಕನನ್ನು, ಗುರುಗಳೇ ಎಂದ ಮಾತಿನ ಹಿಂದೆ ಅವರಿಗಿದ್ದ ವಿದ್ಯಾ ವಿನಯ ಸಂಪನ್ನತೆಯನ್ನು ನಾನು ಮರೆತಿಲ್ಲ.

೧೦. ಚರಪು ಕೊಡುತ್ತಿಲ್ಲ – ದತ್ತಿಹಣ ಹೆಚ್ಚಿಸಿ

ನಾನು ಪ್ರೌಢ ಶಾಲಾ ವಿದ್ಯಾರ್ಥಿ ಆಗಿದ್ದಾಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎ.ಆರ್.ಕೃ. ಅವರನ್ನು ಹಲವಾರು ಬಾರಿ ದೂರದಿಂದ ನೋಡುತ್ತಿದ್ದೆ. ಸಾಹಿತ್ಯ ಪರಿಷತ್ತಿನಲ್ಲಿ ಅವರದೊಂದು ದತ್ತಿನಿಧಿ ಇದೆ. ಆದು ಮಹಿಳಾ ಕಾರ್ಯಕ್ರಮಕ್ಕೆ ಮೀಸಲು. ಕನ್ನಡ ದೇವರನಾಮ ಸ್ಪರ್ಧೆಯು ಅವರ ದತ್ತಿನಿಧಿಯಿಂದ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಕೊಡುತ್ತಿದ್ದರು. ಕೋಸಂಬರಿ, ಕಡಲೆಹಿಟ್ಟು, ಗುಗ್ಗರಿ, ಹೀಗೆ ಏನಾದರೊಂದು ಚರಪು ನೀಡುತ್ತಿದ್ದರು. ಅದನ್ನು ಆಮೇಲೆ ನಿಲ್ಲಿಸಿಬಿಟ್ಟರು. ವ್ಯವಸ್ಥಾಪಕರನ್ನು ಚರಪು ನೀಡುವುದನ್ನು ಏಕೆ ನಿಲ್ಲಿಸಿದಿರಿ ಎಂದಾಗ, ಅದನ್ನು ಕೊಡಲು ದತ್ತಿನಿಧಿಯಿಂದ ಬರುವ ಹಣ ಸಾಲದು ಎಂದರು. 'ಇದು ಅನ್ಯಾಯ, ನೀವು ಚರಪು ನಿಲ್ಲಿಸಬಾರದು' ಎಂದು ನಾನು, ನನ್ನ ಮಿತ್ರ ವಾದಿಸಿದೆವು. ನಾವು ವಿದ್ಯಾರ್ಥಿಗಳಾದ್ದರಿಂದ ರುಚಿಕರವಾದ ಚರಪಿನ ಸವಿ ಅನುಭವಿಸಿದ್ದೆವು. ಜತೆಗೆ ಸಹಜವಾಗಿ ತಿಂಡಿ ಆಸೆಯ ವಯಸ್ಸು ನಮ್ಮದು. ನಾವು ವಾದ ಮಾಡಿದಾಗ 'ನೀವು ದತ್ತಿ ಇಟ್ಟವರನ್ನು ದತ್ತಿ ಹಣ ಹೆಚ್ಚಿಸಲು ಹೇಳಿ, ಆಗ ಚರಪು ಕೊಡುತ್ತೇವೆ' ಎಂದರು. ನಮಗೆ ಕೃಷ್ಣಶಾಸ್ತ್ರಿಗಳ ಮನೆ ಗೊತ್ತಿತ್ತು, ಮನೆಗೆ ಹೋದೆವು. ಶಾಸ್ತ್ರಿಗಳು 'ಏನು ಬಂದಿರಿ?' ಅಂದರು. ವಿಷಯ ಹೇಳಿದೆವು. 'ದತ್ತಿನಿಧಿಯ ವಿಷಯ ನಿಮಗೆ ಬೇಡ. ನೀವು ಹುಡುಗರು ಈ ವಿಷಯಗಳಿಗೆಲ್ಲ ಬರಬಾರದು, ಹೋಗಿ' ಎಂದು ಗದರಿಸಿದ ದನಿಯಲ್ಲಿ ಹೇಳಿದರು. ನಾವು ಪೆಚ್ಚಾಗಿ ಹಿಂದಿರುಗಲು ಸಿದ್ಧರಾದೆವು. 'ನಿಲ್ಲಿ' ಎಂದು ಡ್ರಾಯರಿಂದ ಪೆಪ್ಪರ್‌ಮೆಂಟುಗಳನ್ನು ಕೈತುಂಬ ತೆಗೆದುಕೊಟ್ಟರು. 'ಬೈದರೂ ಎಷ್ಟು ಒಳ್ಳೆಯವರು, ಕೈತುಂಬ ಪೆಪ್ಪರ್‌ಮೆಂಟ್ ಕೊಟ್ಟಿದ್ದಾರೆ' ಎಂದು ನಾನು, ನನ್ನ ಮಿತ್ರ ಮಾತಾಡಿಕೊಂಡು ಖುಷಿಪಟ್ಟೆವು. ನನಗೆ ಎ.ಆರ್. ಕೃಷ್ಣಶಾಸ್ತ್ರಿಗಳ ಪರಿಚಯವಾದದ್ದು ಈ ರೀತಿ. ಆಮೇಲೆ ಹತ್ತಾರು ಬಾರಿ ಅವರನ್ನು ಭೇಟಿ ಆಗಿದ್ದೇನೆ. ಅವರ ಬಗ್ಗೆ ಲೇಖನ ಬರೆದಿದ್ದೇನೆ.

❑

೧೧. ನಿಯಮಪಾಲನೆ – ದೊಡ್ಡವರ ರೀತಿ

ಬಸವನಗುಡಿ ಸೊಸೈಟಿಯಲ್ಲಿ ರೇಷನ್ ಕಾರ್ಡ್‌ದಾರರಿಗೆ ರೇಷನ್ ಕೊಡುತ್ತಿದ್ದರು. ನಾನು ಕ್ಯೂನಲ್ಲಿ ನಿಂತು ರೇಷನ್ ತರುತ್ತಿದ್ದೆ. ಶಾಸ್ತ್ರಿಗಳೂ ಕ್ಯೂನಲ್ಲಿ ನಿಂತು ತರುತ್ತಿದ್ದರು. ನಾನು ಕ್ಯೂನಲ್ಲಿ ಮುಂದೆ ಇದ್ದೆ. ಶಾಸ್ತ್ರಿಗಳು ಸಾಕಷ್ಟು ಹಿಂದೆ ನಿಂತಿದ್ದರು. ಚರಪಿನ ಪ್ರಸಂಗದಿಂದ ಶಾಸ್ತ್ರಿಗಳ ಪರಿಚಯ ಆಗಿತ್ತಲ್ಲ, ಆ ವೇಳೆಗೆ ಅವರ ವಚನ ಭಾರತ, ಬಂಕಿಮಚಂದ್ರ, ಕಥಾಮೃತ ಓದಿದ್ದೆ. ಅವರ ಬಳಿ ಬಂದು 'ಶಾಸ್ತ್ರಿಗಳೇ, ನೀವು ಮುಂದೆ ನಿಲ್ಲಿ. ನಾನು ನಿಮ್ಮ ಜಾಗದಲ್ಲಿ ನಿಲ್ಲುತ್ತೇನೆ' ಎಂದೆ. ಮಧ್ಯಾಹ್ನವಾಗಿತ್ತು, ತುಂಬ ಬಿಸಿಲಿತ್ತು.

ಆಗ ಶಾಸ್ತ್ರಿಗಳು ಹೇಳಿದ ಮಾತು ಈಗಲೂ ನೆನಪಿದೆ, 'ಮಗೂ, ಹಾಗೆಲ್ಲ ಕ್ಯೂ ತಪ್ಪಿಸಬಾರದು. ನಿಯಮ ಪಾಲಿಸಿದರೆ ಚಿಕ್ಕವರೂ ದೊಡ್ಡವರಾಗುತ್ತಾರೆ. ನಿಯಮಭಂಗ ಮಾಡಿದರೆ ದೊಡ್ಡವರೂ ಚಿಕ್ಕವರಾಗುತ್ತಾರೆ. ಹೋಗಿ ನೀನಿರುವ ಕಡೆ ನಿಂತುಕೋ' ಎಂದರು. ಮಾತಾಡದೇ ನಾನಿದ್ದ ಜಾಗಕ್ಕೆ ಬಂದೆ. ಹೀಗೆ ನನ್ನ ಬದುಕಿಗೆ ನೀತಿಪಾಠ ಹೇಳಿದವರು ಎ.ಆರ್.ಕೃ. ಅವರು.

❑

೧೨. ನಿಮ್ಮ ಮಗಳು ಕಲಿತರೆ ಅದೇ ನನ್ನ ಫೀಸು

ಮತ್ತೊಮ್ಮೆ ಸೊಸೈಟಿಯ ಬಳಿ ಅವರನ್ನು ಭೇಟಿ ಮಾಡಿದವರೊಬ್ಬರು 'ಶಾಸ್ತ್ರಿಗಳೇ, ನಿಮಗೆ ಕನ್ನಡ ಚೆನ್ನಾಗಿ ಬರುತ್ತೆ ಅಂತ ನನ್ನ ಸ್ನೇಹಿತರು ಹೇಳಿದರು. ನೀವು ನಮ್ಮ ಮಗಳಿಗೆ ಕನ್ನಡ ಪಾಠ ಹೇಳಬೇಕು. ಅವಳು ಒಂದನೇ ಕ್ಲಾಸಿನಲ್ಲಿ ಓದುತ್ತಿದ್ದಾಳೆ. ಸರಿಯಾಗಿ ಕನ್ನಡ ಕಲೀತಿಲ್ಲ. ನಾನು ೩ ರೂ. ತಿಂಗಳಿಗೆ ಫೀಸು ಕೊಡ್ತಿದ್ದೆ. ನೀವು ದೊಡ್ಡ ಮೇಷ್ಟ್ರು, ತುಂಬಾ ಚೆನ್ನಾಗಿ ಪಾಠ ಹೇಳ್ತೀರಿ ಅಂತ ನನ್ನ ಸ್ನೇಹಿತರು ಹೇಳಿದರು. ನಿಮಗೆ ೫ ರೂ. ಕೊಡ್ತೇನಿ ತಿಂಗಳಿಗೆ' ಎಂದರು. ಶಾಸ್ತ್ರಿಗಳು ನಕ್ಕು 'ಬಹಳ ಸಂತೋಷ, ನಿಮ್ಮ ಮಗು ಕನ್ನಡ ಚೆನ್ನಾಗಿ ಕಲೀಬೇಕು, ಅದಕ್ಕೆ ಕನ್ನಡ ಪಾಠ ಹೇಳಿಸಬೇಕು ಎಂಬುದನ್ನು ಮೆಚ್ಚಿದೆ. ಫೀಸೇನೂ ಬೇಡ, ನಿಮ್ಮ ಮಗು ಕನ್ನಡ ಕಲಿತರೆ ಅದೇ ನನ್ನ ಫೀಸು' ಎಂದರು. ಅವರು ಬೆರಗಾದರು.

❑

೧೩. ಪುಟ್ಟಪ್ಪ, ನಿನ್ನ ಪ್ರತಿಭೆ ಪಾಂಡಿತ್ಯಕ್ಕೆ ಪ್ರತಿಫಲ ಇದು

ಮತ್ತೊಂದು ಅವಿಸ್ಮರಣೀಯ ಸಂಗತಿ ಎಂದರೆ, ಕುವೆಂಪು ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಬೆಂಗಳೂರಿನಲ್ಲಿ ಟೌನ್‌ಹಾಲಿನಲ್ಲಿ ಸನ್ಮಾನ ಸಮಾರಂಭ ಏರ್ಪಟ್ಟಿತ್ತು. ಸಮಾರಂಭದಲ್ಲಿ ಸಭಿಕರ ನಡುವೆ ಕುಳಿತಿದ್ದ ತಮ್ಮ ಗುರುಗಳಾದ ಎ.ಆರ್.ಕೃ. ಅವರನ್ನು ಕುವೆಂಪು ಕಂಡು ಅವರ ಬಳಿ ಬಂದು, 'ಗುರುಗಳೇ, ಇದೆಲ್ಲಾ ನಿಮ್ಮ ಅನುಗ್ರಹ' ಎಂದರು. ಆಗ ಕೃಷ್ಣಶಾಸ್ತ್ರಿಗಳು, 'ನನ್ನ ಅನುಗ್ರಹ ಅಲ್ಲವಯ್ಯಾ, ನಿನ್ನ ಪ್ರತಿಭೆ, ಪಾಂಡಿತ್ಯಕ್ಕೆ ದೊರೆತ ಪ್ರತಿಫಲ. ನನಗೆ ತುಂಬಾ ಸಂತೋಷವಾಗಿದೆ ನಿನಗೆ ಪ್ರಶಸ್ತಿ ದೊರಕಿದ್ದು' ಎಂದರು. ಆಗ ಇನ್ನೊಂದು ಸಂಗತಿ ನನಗೆ ನೆನಪಾಯಿತು.

'ನಿಮಗೆ ಗಂಡು ಮಕ್ಕಳು ಇಲ್ಲವಲ್ಲಾ ಶಾಸ್ತ್ರಿಗಳೇ' ಅಂತ ಒಮ್ಮೆ ಯಾರೋ ಒಬ್ಬರು ಅಂದರಂತೆ ಅದಕ್ಕೆ ಶಾಸ್ತ್ರಿಗಳು 'ನನ್ನ ವಚನಭಾರತ, ನನ್ನ ಶಿಷ್ಯ ಪುಟ್ಟಪ್ಪ ನನ್ನ ಗಂಡುಮಕ್ಕಳು ಕಣಯ್ಯಾ' ಅಂದರಂತೆ ವಿನೋದವಾಗಿ. ಅಂಥ ಶಿಷ್ಯಪ್ರೇಮ ಶಾಸ್ತ್ರಿಗಳದು. ಇಂಥ ಹತ್ತಾರು ಪ್ರಸಂಗಗಳು ತಿಳಿದಮೇಲೆ ಗುರುಗಳು ಅಂದ್ರೆ ಹೀಗಿರಬೇಕು. ಇವರೇ ನಿಜವಾದ ಕನ್ನಡದ ಆಚಾರ್ಯ ದ್ರೋಣರು ಅಂತ ನನಗನ್ನಿಸಿದೆ.

❑

೧೪. ನಮ್ಮ ಮನೆಗೆ ಪೋಸ್ಟ್‌ಮ್ಯಾನ್ ಎ.ಆರ್.ಕೃ.

ಒಮ್ಮೆ ನನ್ನ ಬಾಲ್ಯದ ಶಾಲಾ ಗೆಳೆಯ, 'ನನ್ನ ತಂದೆ ಎ.ಆರ್.ಕೃ. ಅವರ ಶಿಷ್ಯರು. ಪ್ರಬುದ್ಧ ಕರ್ನಾಟಕಕ್ಕೆ ಚಂದಾದಾರರಾಗಿದ್ದರು. ಎ.ಆರ್.ಕೃ. ಅವರೇ ನಮ್ಮ ಮನೆಗೆ ಬಂದು ಪತ್ರಿಕೆಯನ್ನು ತಂದು ಕೊಡುತ್ತಾರೆ ಎಂದ. ನಮ್ಮ ತಂದೆಯವರು 'ನಾನೇ ಬಂದು ಸೆಂಟ್ರಲ್ ಕಾಲೇಜಿನಲ್ಲಿ ತೆಗೆದುಕೊಳ್ಳುತ್ತೇನೆ. ಪತ್ರಿಕೆ ಪ್ರಕಟವಾದದ್ದು ತಿಳಿದರೆ ಸಾಕು' ಎನ್ನುತ್ತಿದ್ದರು. ಆದರೆ ಎ.ಆರ್.ಕೃ. ನಮ್ಮ ತಂದೆಗೆ ಹೇಳಿದ ಮಾತು: ಚಂದಾದಾರರಿಗೆ ಮನೆ ಬಾಗಿಲಿಗೆ ಪತ್ರಿಕೆಯನ್ನು ತಲುಪಿಸುವುದು ಪ್ರಕಾಶಕರ ಕರ್ತವ್ಯ ಎಂದು. ಮನೆಗೆ ಪತ್ರಿಕೆಯನ್ನು ಕೊಡಲು ಬಂದಾಗ 'ಒಳಗೆ ಬನ್ನಿ, ಕೂಡಿ, ಕಾಫಿ ತೆಗೆದುಕೊಂಡು ಹೋಗಿ' ಎಂದರೆ, 'ನಾನೀಗ ಕರ್ತವ್ಯದ ಮೇಲೆ ಇದ್ದೇನೆ, ಚಂದಾದಾರರಿಗೆ ಶೀಘ್ರವಾಗಿ ಪತ್ರಿಕೆ ತಲುಪಬೇಕು. ಈಗ ಬರುವುದಿಲ್ಲ ಇನ್ನೊಮ್ಮೆ ನೋಡೋಣ' ಎಂದು ಹೊರಟು ಬಿಡುತ್ತಿದ್ದರು. ಪತ್ರಿಕೆಯನ್ನು ಮಿತವ್ಯಯದಲ್ಲಿ ನಡೆಸಲು ಹಲವಾರು ಕ್ರಮಗಳನ್ನು ಕೈಗೊಂಡಿದ್ದರು. ಸೆಂಟ್ರಲ್ ಕಾಲೇಜಿನಿಂದ ಬಸವನಗುಡಿಯಲ್ಲಿದ್ದ ತಮ್ಮ ಮನೆಗೆ ಹೋಗುವ ದಾರಿಯಲ್ಲಿ ಚಂದಾದಾರರ ಮನೆಗೆ ತಾವೇ ಸಂಚಿಕೆಯನ್ನು ತಲುಪಿಸುತ್ತಿದ್ದರು. ತಮ್ಮ ವಿದ್ಯಾರ್ಥಿಗಳ ಕೈಲಿ ಅವರ ಮನೆಯ ಬಳಿ ಇದ್ದ ಚಂದಾದಾರರಿಗೆ ಪತ್ರಿಕೆ ತಲುಪಿಸಲು ಹೇಳುತ್ತಿದ್ದರು. ಕಾಲೇಜ್ ಆದ ಮೇಲೆ ಕರ್ನಾಟಕ ಸಂಘದ ಸದಸ್ಯರಾಗಿದ್ದ ವಿದ್ಯಾರ್ಥಿಗಳನ್ನು ಕೂಡಿಸಿಕೊಂಡು ತಮ್ಮ ಖರ್ಚಿನಲ್ಲೇ ಅವರಿಗೆ ಕಾಫಿ ತಿಂಡಿ ಕೊಡಿಸಿ ಪ್ರಬುದ್ಧ ಕರ್ಣಾಟಕದ ಸಂಚಿಕೆಗಳ ಮೇಲೆ ಚಂದಾದಾರರ ವಿಳಾಸ ಬರೆಸುವುದು, ಪ್ಯಾಕ್ ಮಾಡುವುದು, ವಿಂಗಡಿಸುವುದು, ಇತ್ಯಾದಿ ಕೆಲಸ ಮಾಡಿಸುತ್ತಿದ್ದರು. ಕಾಸಿಗೆ ಬೆಲೆಯಿದ್ದ ಕಾಲ, ಕಾಸು ಚಾಲ್ತಿಯಲ್ಲಿದ್ದ ಕಾಲ. ಪತ್ರಿಕೆಯ ವಿಷಯದಲ್ಲಿ ಒಂದು ಕಾಸೂ ವ್ಯರ್ಥವಾಗಬಾರದೆಂದು ನಿರ್ಧರಿಸಿದ್ದರು. ಪ್ರಬುದ್ಧ ಕರ್ಣಾಟಕವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಟ್ಟಾಗ ಅವರು ನೀಡಿದ ವರದಿಯಲ್ಲಿ ಅಂಕಿಅಂಶಗಳು ಹಣದ ಆಯ ವ್ಯಯ ವೆಚ್ಚ ವಿವರಗಳನ್ನು ಕಂಡಾಗ ಅವರ ಲೆಕ್ಕಾಚಾರ ಪರಿಣತಿಯನ್ನು ಕಂಡು ಲೆಕ್ಕ ಪರಿಶೋಧಕರೇ ಬೆರಗಾಗುವ ಹಾಗಿತ್ತು. ಈವತ್ತು ಸಾರ್ವಜನಿಕ ಸೇವೆಯಲ್ಲಿ ತೊಡಗಿರುವವರು ಹಣದ ವಿಚಾರದಲ್ಲಿ ಮಿತವ್ಯಯ–ಸಾರ್ಥಕ ಬಳಕೆ ಹೇಗೆ ಮಾಡಬೇಕು ಎಂಬುದಕ್ಕೆ ಎ.ಆರ್.ಕೃ. ಅವರು ಮಾದರಿ ಆಗಿದ್ದಾರೆ.

❑

೧೫. ಚಿಗುರುವ ಗಿಡಗಳನ್ನು ಬೆಳೆಸಬೇಕು

೧೯೫೦-೫೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು ಎಂ.ಆರ್.ಶ್ರೀನಿವಾಸಮೂರ್ತಿ ಅವರು. ಆಗ ನಾನು ಹೈಸ್ಕೂಲ್ ವಿದ್ಯಾರ್ಥಿ. ನನಗೆ ಬಂದ ೫ ರೂ. ಸ್ಕಾಲರ್‌ಷಿಪ್ ಹಣವನ್ನು ಕಟ್ಟಿ ಪರಿಷತ್ತಿನ ಸದಸ್ಯನಾಗಬೇಕೆಂದು ಹೋದಾಗ ಅಲ್ಲಿಯ ಕಾರ್ಯದರ್ಶಿಗಳು 'ಪರಿಷತ್ತು ಹುಡುಗರಿಗಲ್ಲ. ನೀವು ಸದಸ್ಯರಾಗಲು ಸಾಧ್ಯವಿಲ್ಲ' ಎಂದರು. ಆಗ ಅಲ್ಲೇ ಇದ್ದ ಮಾಸ್ತಿಯವರು 'ಯಾಕೆ ಹಾಗೆ ಹೇಳ್ತೀರಿ? ಹುಡುಗ ಆಸೆಯಿಂದ ಬಂದಿದ್ದಾನೆ. ಯಾರದೇ ಸಾಹಿತ್ಯಾಸಕ್ತಿಯನ್ನು ಪರಿಷತ್ತು ಪ್ರೋತ್ಸಾಹಿಸಬೇಡವೇ? ಅವನನ್ನು ಸದಸ್ಯನನ್ನಾಗಿ ಮಾಡಿಕೊಳ್ಳಿ, ಚಿಗುರುವ ಗಿಡಗಳನ್ನು ಬೆಳೆಸಬೇಕು: ಮುದಿಮರಗಳು ನಾವು ಬಹು ಕಾಲ ಇರುವುದಿಲ್ಲ' ಎಂದರು. ಅವರ ಮಾತಿನಿಂದ ನಾನು ಪರಿಷತ್ತಿನ ಸದಸ್ಯನಾದೆ.

❑

೧೬. ದೇಹ ಹೇಳಿದಂತೆ ಕೇಳಬೇಕು ನಾನು

ಬೆಂಗಳೂರು ಮಹಾರಾಣಿ ಕಲಾ ಕಾಲೇಜಿನಲ್ಲಿ ನಾನು ಕನ್ನಡ ಅಧ್ಯಾಪಕನಾಗಿದ್ದೆ. ಆಗ ಕರ್ಣಾಟಕ ಸಂಘದ ಉದ್ಘಾಟನೆಗೆ ಮಾಸ್ತಿ ಅವರನ್ನು ಕರೆಯಲು ಸಂಘದ ವಿದ್ಯಾರ್ಥಿನಿಯರನ್ನು ಕಳಿಸಿದ್ದೆ. ಮಾಸ್ತಿಯವರು ಮಧ್ಯಾಹ್ನ ವಿಶ್ರಾಂತಿಯಲ್ಲಿದ್ದರು. ವಿದ್ಯಾರ್ಥಿನಿಯರು ಬಂದ ಕೂಡಲೆ ಪ್ರೀತಿಯಿಂದ ಮಾತಾಡಿದರು. 'ನೀನು ಯಾರ ಮಗಳು? ನಿನ್ನ ತಂದೆ ಏನು ಮಾಡುತ್ತಿದ್ದಾರೆ? ನಿಮ್ಮೂರು ಯಾವುದು? ಯಾವ ಕ್ಲಾಸಿನಲ್ಲಿ ಓದುತ್ತಿದ್ದೀಯ?' ಇವೇ ಮೊದಲಾಗಿ ಪ್ರತಿಯೊಬ್ಬರನ್ನೂ ವಿಚಾರಿಸುತ್ತಾ 'ಹೋ ಹೋ! ನಿಮ್ಮ ತಂದೆಯವರ ದೊಡ್ಡಪ್ಪ ನನ್ನ ಸ್ನೇಹಿತರು. ನಿಮ್ಮೂರಿಗೆ ಬಂದಿದ್ದೆ. ನಿಮ್ಮ ತಾತನ ಮನೆಯಲ್ಲಿ ಇಳಿದುಕೊಂಡಿದ್ದೆ. ಅವರು ದೊಡ್ಡ ವಿದ್ವಾಂಸರು, ಅಯ್ಯೋ ಪಾಪ! ನಿಮ್ಮ ತಾಯಿ ತೀರಿಕೊಂಡರೇ? ಅವರ ಅಣ್ಣನನ್ನು ನಾನು ಮೈಸೂರಲ್ಲಿದ್ದಾಗ ಭೇಟಿಯಾಗಿದ್ದೆ. ಒಳ್ಳೇ ಹುಡುಗ.' ಹೀಗೆ ಒಬ್ಬೊಬ್ಬರ ಬಗ್ಗೆ ಆತ್ಮೀಯವಾಗಿ ಮಾತಾಡುತ್ತಾ ಸುಮಾರು ೧/೨ ಗಂಟೆ ಆದ ಮೇಲೆ 'ಕ್ಷಮಿಸಿ. ಈಗ ನಾನು ಕಾರ್ಯಕ್ರಮಕ್ಕೆ ಬರಲಾಗುವುದಿಲ್ಲ' ಎಂದರು. 'ಸಾರ್. ಒಂದೈದು ನಿಮಿಷ ಕಾರಲ್ಲಿ ಬಂದು ಹೋಗಿ; ದೀಪ ಹಚ್ಚಿ ಉದ್ಘಾಟನೆ ಮಾಡಿ ಹೋಗಿ ಸಾರ್' ಎಂದು ವಿದ್ಯಾರ್ಥಿನಿಯರು ಗೋಗರೆದರು. ಆಗ ಮಾಸ್ತಿ ಹೇಳಿದರು. 'ಅಮ್ಮಾ, ನೀವು ಹೇಳುತ್ತಿರುವುದು ಸರಿ. ಆದರೆ ನನಗೆ ಈ ಸಮಯ ನನ್ನ ವಿಶ್ರಾಂತಿ ಕಾಲ, ಬರಲು ಆಗುವುದಿಲ್ಲ. ನಿಮಗೆ ಈಗ ತಿಳಿಯೋಲ್ಲ, ನೀವೆಲ್ಲಾ ಯುವತಿಯರು. ಕಲ್ಲನ್ನು ತಿಂದು ಜೀರ್ಣಿಸಿಕೊಳ್ಳುವ ಕಾಲ. ನಮ್ಮಂಥ ವಯಸ್ಸಾದವರಿಗೆ ಅನ್ನ ತಿಂದರೇನೇ ಜೀರ್ಣವಾಗುವುದು ಕಷ್ಟ. ಅದಕ್ಕಿಂತ ಹೆಚ್ಚಾಗಿ, ನೋಡಿ, ೫೦ ವರ್ಷ ಆದ ಮೇಲೆ ದೇಹ ಹೇಳಿದ ಹಾಗೆ ಕೇಳಬೇಕು ಅದಕ್ಕೆ ಮುಂಚೆ ನಾವು ಹೇಳಿದ ಹಾಗೆ ದೇಹ ಕೇಳುತ್ತೆ. ಈ ಮಾತು ನಿಮಗೆ ಈಗ ಅರ್ಥವಾಗುವುದಿಲ್ಲ. ನಿಮ್ಮ ತಾಯಿ, ತಂದೆಯರಿಗೆ, ಅಜ್ಜ, ಅಜ್ಜಿಯರಿಗೆ ತಿಳಿಯುತ್ತೆ' ಎಂದರು. ಹುಡುಗಿಯರಲ್ಲಿ ಒಬ್ಬಳು ಸಪ್ಪೆಮುಖ ಮಾಡಿಕೊಂಡಾಗ ಮಾಸ್ತಿ 'ಈ ವಯಸ್ಸು ಅರಳಿದ ಹೂವಿನ ಕಾಲ. ಹೂ ಅರಳುವ ಕಾಲದಲ್ಲಿ ಬಾಡಬಾರದು ಮಗೂ' ಎಂದು ಮಗಳನ್ನು ಮಾತಾಡಿಸುವಂತೆ ನಗುತ್ತಾ ಮಾತಾಡಿದರು. ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹುಡುಗಿಯರು ಹಿಂತಿರುಗಿದರು. ಹಿಂತಿರುಗಿ ಬಂದ ವಿದ್ಯಾರ್ಥಿಗಳ ಪೈಕಿ ವಿದ್ಯಾರ್ಥಿನಿಯರ ಕಾರ್ಯದರ್ಶಿನಿಯು ನನ್ನ ಬಳಿ ಬಂದು 'ಸಾರ್, ಕರೆದೆವು. ಏನು ಹೇಳಿದರೂ ಬರಲಿಲ್ಲ' ಎಂದು ಹೇಳಿದಳು. ಆಗ ನಾನು 'ಅವರು ಬರುವುದಿಲ್ಲ. ಮಧ್ಯಾಹ್ನ ಅವರ ವಿಶ್ರಾಂತಿ ಕಾಲ; ಆದರೂ ನಿಮ್ಮನ್ನು ಕರೆಯಲು ಬೇಕಂತಲೇ ಕಳಿಸಿದೆ' ಅಂದೆ. 'ಏನ್ಸಾರ್ ತಿಳಿದೂ ತಿಳಿದೂ ಅವರು ಬರುವುದಿಲ್ಲ ಅಂತ ಗೊತ್ತಿದ್ದು ಏಕೆ ಕರೆಯಲು ಕಳಿಸಿದಿರಿ?' ಅಂದಳು.

ಅದಕ್ಕೆ ನಾನು 'ಮಾಸ್ತಿ ಅಂಥವರನ್ನು ನೋಡುವುದು ಮಾತಾಡುವುದು ಯುವಕ-ಯುವತಿಯರಿಗೆ ಜೀವನದಲ್ಲೇ ಅಮೃತ ಕ್ಷಣಗಳ ಅನುಭವವಾಗುತ್ತದೆ ಅದಕ್ಕಾಗಿ

ಕಳಿಸಿದೆ' ಎಂದೆ. ಆಗ ಒಬ್ಬ ಹುಡುಗಿ 'ಹೌದು ಸಾರ್, ಅವರು ನನ್ನ ಜತೆ ಮಾತಾಡಿದಾಗ ಕೆಲವು ವರ್ಷಗಳ ಹಿಂದೆ ತೀರಿಕೊಂಡ ನನ್ನ ತಾತ ನೆನಪಾದರು' ಎಂದಳು. ಇನ್ನೊಬ್ಬ ವಿದ್ಯಾರ್ಥಿನಿ ತನ್ನ ತಂದೆಯನ್ನು ಮತ್ತೊಮ್ಮೆ ನೋಡಿದಂತಾಯಿತು ಎಂದಳು. ಇನ್ನೊಬ್ಬಳು 'ಇದುವರೆಗೆ ನನ್ನನ್ನು ನಮ್ಮ ಮನೆಯಲ್ಲಿ ಯಾರೂ ಇಷ್ಟು ಪ್ರೀತಿಯಿಂದ ಮಾತಾಡಿಸಿಲ್ಲ ಸಾರ್' ಎಂದಳು.

❑

೧೭. ನೀನೇ ಪುಣ್ಯವಂತೆ ಎಂದರು ಕಂಬಾರರು

ಮಹಾರಾಣಿ ಕಲಾ ಕಾಲೇಜಿನ ವಿದ್ಯಾರ್ಥಿನಿಯರು ಮಾಸ್ತಿ ಅವರನ್ನು ಕರೆಯಲು ಹೋಗಿ ಅವರು ಬರಲಿಲ್ಲ ಎಂದು ತಿಳಿಸಿದ ೩ ವರ್ಷಗಳ ನಂತರ ನನ್ನ ಒಬ್ಬ ವಿದ್ಯಾರ್ಥಿನಿ ಕನ್ನಡ ಎಂ.ಎ.ಗೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸೇರಿದಳು. ಮಾಸ್ತಿಯ ಕೃತಿಗಳು ವಿಶೇಷ ಪಠ್ಯವಾಗಿತ್ತು. ಚಂದ್ರಶೇಖರ ಕಂಬಾರರು ಅವುಗಳನ್ನು ಪಾಠ ಮಾಡುವವರಿದ್ದರು. ಅವರು ಮೊದಲನೇ ತರಗತಿಯಲ್ಲಿ 'ವಿದ್ಯಾರ್ಥಿಗಳೇ, ನಿಮ್ಮಲ್ಲಿ ಯಾರಾದರೂ ಮಾಸ್ತಿ ಅವರನ್ನು ನೋಡಿದ್ದೀರಾ? ಅವರ ಮಾತನ್ನು ಕೇಳಿದ್ದೀರಾ? ಅವರ ಪುಸ್ತಕಗಳನ್ನು ಓದಿದ್ದೀರಾ?' ಎಂದು ಕೇಳಿದರು.

ಕೆಲವರು ನೋಡಿದ್ದೇವೆ ಸಾರ್ ಎಂದರು. ಎಲ್ಲಿ ಎಂದರೆ ಪತ್ರಿಕೆಯ ಚಿತ್ರದಲ್ಲಿ, ಟಿವಿ ವಾಹಿನಿಗಳಲ್ಲಿ ಎಂದರು. ಮಾತು ಕೇಳಿಲ್ಲ, ಪುಸ್ತಕ ಓದಿಲ್ಲ ಎಂದರು.

ಆಗ ಒಬ್ಬ ವಿದ್ಯಾರ್ಥಿನಿ ಎದ್ದು ನಿಂತು 'ಸಾರ್, ನಾನು ಅವರನ್ನೇ ನೋಡಿದ್ದೇನೆ, ಮಾತಾಡಿಸಿದ್ದೇನೆ. ಅವರ ಸಣ್ಣಕತೆಗಳನ್ನು ಓದಿದ್ದೇನೆ. ಅವರ ಭಾಷಣ ಕೇಳಿದ್ದೇನೆ' ಎಂದಳು. ಎಲ್ಲಿ ಹೇಗೆ ಎಂದು ಕೇಳಿದಾಗ, ಮೇಲೆ ವಿವರಿಸಿದ ಘಟನೆಯನ್ನು ಹೇಳಿ, ಕ್ಲಾಸಿನಲ್ಲಿ ಮಾಸ್ತಿ ಅವರ ಕಥೆಯನ್ನು ನಾನು ಪಾಠ ಮಾಡಿದ್ದನ್ನು ನನ್ನ ಹೆಸರನ್ನು ಹೇಳಿದಳು.

ಕೂಡಲೇ ಕಂಬಾರರು 'ನಿಮ್ಮ ಮೇಷ್ಟ್ರು ನನ್ನ ಸ್ನೇಹಿತರು, ಶಹಬ್ಬಾಷ್! ನೀನೇ ಪುಣ್ಯವಂತೆ. ನಿನಗೊಬ್ಬಳಿಗಾದರೂ ಆ ಭಾಗ್ಯವಿದೆಯಲ್ಲಾ, ಸಂತೋಷ. ವಿದ್ಯಾರ್ಥಿಗಳೇ, ಈಗಲಾದರೂ ಮಾಸ್ತಿಯವರನ್ನು ಒಮ್ಮೆ ನೋಡಿ ಮಾತಾಡಿಸಿ ಜನ್ಮಸಾರ್ಥಕ ಮಾಡಿಕೊಳ್ಳಿ. ಮಾಸ್ತಿಯನ್ನು ಕಂಡರೆ ಕಲಿಯುವುದನ್ನು ಯಾವ ಪುಸ್ತಕ–ಪಾಠ–ಕ್ಲಾಸು ಪಾಠಗಳಿಂದಲೂ ಕಲಿಯಲು ಸಾಧ್ಯವಿಲ್ಲ' ಎಂದರು.

ಅದೇ ದಿನ ಸಂಜೆ ಆ ವಿದ್ಯಾರ್ಥಿನಿ ನಮ್ಮ ಮನೆಗೆ ಬಂದು 'ಸಾರ್, ನಿಮ್ಮಿಂದ ಈವತ್ತು ಕ್ಲಾಸಲ್ಲಿ ಹಿರೋಯಿನ್ ಆಗಿಬಿಟ್ಟೆ' ಎಂದು ನಡೆದ ಸಂಗತಿ ಹೇಳಿದಳು. 'ಕಂಬಾರರು ನನ್ನ ಮಿತ್ರರು. ಅವರಿಗೆ ಮಾಸ್ತಿ ಅವರನ್ನು ಕಂಡರೆ ತುಂಬಾ ಅಭಿಮಾನ, ಆಸಕ್ತಿ' ಎಂದೆ. ಆ ವಿದ್ಯಾರ್ಥಿನಿ ಇಂದು ಬೆಂಗಳೂರಿನ ಬಿ.ಎಂ.ಎಸ್. ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಶೀಲಾ ಮಳೀಮಠ. ಯುವಜನರ ಮೇಲೆ ಮಾಸ್ತಿಯ ಪ್ರಭಾವಕ್ಕೆ ಇದೊಂದು ನಿದರ್ಶನ ಅಷ್ಟೆ.

❑

೧೮. ಪರಿಷತ್ತಿಗೆ ದುಡಿದರೆ ಸಾಲದು, ತ್ಯಾಗ ಮಾಡಬೇಕು

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಂಪನಾ ಅವರ ಕಾಲದಲ್ಲಿ ೧೯೭೮ರಲ್ಲಿ ಕಾರ್ಯದರ್ಶಿ ಆಗಿದ್ದೆ. ಆಗ ನಡೆದ ಪ್ರಸಂಗ. ಪರಿಷತ್ತನ್ನು ನಡೆಸಿದ ಆದರ್ಶಪ್ರಾಯ ಅಧ್ಯಕ್ಷರಲ್ಲಿ ಮಾಸ್ತಿ ಒಬ್ಬರು. ಅವರು ಪರಿಷತ್ತಿಗೆ ದುಡಿದವರಷ್ಟೇ ಅಲ್ಲ, ತ್ಯಾಗ ಮಾಡಿದವರಲ್ಲಿ ಒಬ್ಬರು. ಯಾವುದೇ ಸಂಸ್ಥೆಯಲ್ಲಿ ಒಬ್ಬ ವ್ಯಕ್ತಿ ಸೇವೆ ಸಲ್ಲಿಸುವಾಗ ಸಂಸ್ಥೆಯ ಒಂದು ಬಿಡಿಕಾಸನ್ನೂ ಯಾವುದೇ ಕಾರಣಕ್ಕೆ ಮುಟ್ಟಬಾರದು, ತನಗಾಗಿ ಬಳಸಬಾರದು ಎಂಬ ತತ್ವವನ್ನು ಕಟ್ಟುನಿಟ್ಟಾಗಿ ಪಾಲಿಸಿದ ಕೆಲವೇ ಅಧ್ಯಕ್ಷರಲ್ಲಿ ಮಾಸ್ತಿಯವರೂ ಒಬ್ಬರು.

ಪರಿಷತ್ತಿನ ನಿಯಮಾನುಸಾರ ಹಲವು ಸೌಲಭ್ಯಗಳನ್ನು ಬಳಸಿಕೊಳ್ಳಲು ಪರಿಷತ್ತಿನ ಅಧ್ಯಕ್ಷರಿಗೆ, ಅಧಿಕಾರಿಗಳಿಗೆ ನ್ಯಾಯಸಮ್ಮತ ಅವಕಾಶಗಳಿರುತ್ತವೆ. ಅದನ್ನು ಬಹು ಮಂದಿ ಪರಿಷತ್ತಿನ ಅಧ್ಯಕ್ಷರು ರಾಜಾರೋಷವಾಗಿ ಬಳಸಿದ್ದಾರೆ. ಅದರಲ್ಲಿ ತಪ್ಪೇನಿಲ್ಲವಾದರೂ, ಅದು ಆದರ್ಶ ಮಾರ್ಗವಲ್ಲ. ಪರಿಷತ್ತಿಗೆ ಮಾಸ್ತಿಯವರದು ಮಾಡಿದ್ದು ಆದರ್ಶ ಸೇವೆ.

ಪರಿಷತ್ತಿಗೆ ಹಿರಿಯರ ಮಾರ್ಗದರ್ಶನಕ್ಕಾಗಿ ಹಿಂದೆ ಹಿರಿಯ ಸಾಹಿತಿಗಳನ್ನು ಸಮಿತಿ ಸಭೆಗಳಿಗೆ ಕರೆಯಲಾಗುತ್ತಿತ್ತು. ಸಮಿತಿಗಳ ಸಭೆಯಲ್ಲಿ ಭಾಗವಹಿಸಿದವರಿಗೆಲ್ಲ ಪ್ರಯಾಣಭತ್ಯೆ ನೀಡುವುದು ಸಂಪ್ರದಾಯ. ಮಾಸ್ತಿ ಅವರು ಸಮಿತಿ ಸಭೆಯೊಂದರಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದರು.

ಆಗ ಪರಿಷತ್ತಿನ ನಿಯಮಾವಳಿಯಂತೆ ಪ್ರಯಾಣದ ವೆಚ್ಚವಾಗಿ ನಗರದಲ್ಲಿರುವವರಿಗೆ ಆಟೋ ಚಾರ್ಜ್ ನೀಡಲಾಗುತ್ತಿತ್ತು. ಆ ಪ್ರಕಾರ ಸಭೆ ಮುಗಿದ ಮೇಲೆ ಮಾಸ್ತಿ ಅವರಿಗೆ ಕೊಡಲು ಹೊರಟಾಗ 'ಹುಚ್ಚು ಹುಡುಗ ನೀನು' ಎಂದು ಹೇಳಿ ನಕ್ಕು 'ಈ ಸಂಸ್ಥೆಯನ್ನು ನಮ್ಮಂಥವರು ಕಟ್ಟಿದವರು, ಸಂಸ್ಥೆಗೆ ಸೇವೆ ಸಲ್ಲಿಸುವವರು ನಮ್ಮ ಕೈಲಾದಷ್ಟು ಧನಸಹಾಯವನ್ನು ಸಂಸ್ಥೆಗೆ ಮಾಡಬೇಕು ಅಷ್ಟೆ. ಪರಿಷತ್ತಿನಿಂದ ಯಾವ ರೂಪದಲ್ಲಿ ಆಗಲಿ, ಯಾವ ಕಾರಣಕ್ಕಾಗಲಿ ಹಣ ಪಡೆಯಬಾರದು. ತಿಳಿಯಿತೇ?' ಎಂದರು. ಆಗ ನಾನು 'ಸಾರ್ ನೀವು ಹೇಳಿದ ಮಾತು ಒಪ್ಪಬೇಕಾದ್ದೇ. ಆದರೆ ಇನ್ನೊಂದು ಮಾತನ್ನು ನೀವು ಗಮನಿಸಬೇಕು. ಪರಿಷತ್ತು ನಿಯಮಾನುಸಾರ ನಡೆಯುವ ಸಂಸ್ಥೆ. ನೀವೂ ಅಧ್ಯಕ್ಷರಾಗಿ ನಿಯಮಾನುಸಾರ ಪರಿಷತ್ತನ್ನು ನಡೆಸಿದ್ದೀರಿ. ಸಭೆಗೆ ಬಂದವರಿಗೆ ಪ್ರಯಾಣ ವೆಚ್ಚ ಕೊಡಬೇಕಾದದ್ದು ಪರಿಷತ್ತಿನ ನಿಯಮ. ಆದ್ದರಿಂದ ನೀವು ತೆಗೆದುಕೊಳ್ಳಬೇಕು. ಈ ಅತ್ಯಲ್ಪ ಹಣ ನಿಮಗೆ ಬೇಕಿದೆ ಎಂದು ನಾನು ತಿಳಿದಿಲ್ಲ ಆದರೆ ಪರಿಷತ್ತನ್ನು ಕಟ್ಟಿ ಬೆಳೆಸಿದ ನೀವು ಸಂಸ್ಥೆಯ ನಿಯಮವನ್ನು ಪರಿಪಾಲಿಸುವುದು ಬೇಡವೇ...?' ಇತ್ಯಾದಿಯಾಗಿ ವಾದ ಮಾಡಿದೆ. ಆಗ ಅವರು 'ನಿಯಮಕ್ಕಿಂತ ಆದರ್ಶ, ನಿಯತ್ತು ವ್ಯಕ್ತಿಗೆ ಮುಖ್ಯ. ಆದ್ದರಿಂದ ನೀನೇನೇ ಹೇಳಿದರೂ ತೆಗೆದುಕೊಳ್ಳುವುದಿಲ್ಲ' ಎಂದರು. ಆಗ ನಾನು 'ಸಾರ್, ಹಾಗಾದರೆ ನೀವೊಂದು ಕೆಲಸ ಮಾಡಿ. ಈ ವೋಚರಿಗೆ

ಸಹಿ ಹಾಕಿ. ಆ ಹಣಕ್ಕೆ ಒಂದು ಪುಸ್ತಕ ಕೊಂಡು ಪರಿಷತ್ತಿನ ಪುಸ್ತಕ ಭಂಡಾರಕ್ಕೆ ನಿಮ್ಮ ಹೆಸರಲ್ಲಿ ಸೇರಿಸುತ್ತೇನೆ. ಪರಿಷತ್ತಿನ ಪುಸ್ತಕಭಂಡಾರ ಬೆಳೆಯುವುದಕ್ಕೆ ನಿಮ್ಮ ವಿರೋಧವಿಲ್ಲವಲ್ಲ; ಮತ್ತೆ ನೀವೇನೂ ಹಣ ಪಡೆದಂತೆ ಆಗಲಿಲ್ಲ' ಎಂದೆ. 'ಜಾಣ ನೀನು' ಎಂದು ನಕ್ಕು ವೋಚರಿಗೆ ಸಹಿ ಹಾಕಿದರು. ಹಣ ಮುಟ್ಟಲಿಲ್ಲ. ಆ ಹಣದ ಮೊತ್ತ ಎಷ್ಟು ಗೊತ್ತೆ? ೨೫ ರೂ.

❑

೧೯. ಅಮೃತಹಸ್ತ ಸ್ಪರ್ಶದಿಂದ ನವಚೇತನ

ಧರ್ಮಸ್ಥಳದಲ್ಲಿ ಅಡಿಗರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನಕ್ಕೆ ಪರಿಷತ್ತಿನ ಪರ ವ್ಯವಸ್ಥಾಪಕನಾಗಿದ್ದೆ. ಸಮ್ಮೇಳನ ಮುಗಿದ ಮೇಲೆ ಮಾಸ್ತಿ ಅವರೊಡನೆ ಕಾಸರಗೋಡಿನಲ್ಲಿ ನಡೆದ ಕೈಯಾರ ಕಿಞ್ಞಣ್ಣ ರೈ ಏರ್ಪಡಿಸಿದ್ದ ಯುವಜನ ಸಮ್ಮೇಳನಕ್ಕೆ ಹೋಗಿದ್ದೆ. ಧರ್ಮಸ್ಥಳದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಂದಿದ್ದ ಮಾಸ್ತಿ ಅವರನ್ನು ಜಿ.ಪಿ.ರಾಜರತ್ನಂ ಮೊದಲಾದ ಇತರ ಸಾಹಿತಿಗಳನ್ನು ಕಿಞ್ಞಣ್ಣ ರೈ ಸಮ್ಮೇಳನಕ್ಕೆ ಕಾಸರಗೋಡಿಗೆ ಆಹ್ವಾನಿಸಿದ್ದರು. ಜಿ.ಪಿ.ರಾಜರತ್ನಂ ಕಾರ್ಯನಿಮಿತ್ತ ಬರದೆ ಹಿಂದಿನ ದಿನವೇ ಬೆಂಗಳೂರಿಗೆ ಹೋದರು. ಅವರ ಬದಲು ಭಾಗವಹಿಸಲು ನನಗೆ ಹೇಳಿದರು. 'ನೋಡಿ, ಯುವಜನ ಸಮ್ಮೇಳನಕ್ಕೆ ಕರೆದಿದ್ದಾರೆ. ನೀವು ಯುವಕರು ಹೋಗಬೇಕು. ನಾನು ಹಿರಿಯ' ಎಂದರು. ರೈ ಅವರಿಗೆ 'ನಿಮ್ಮದು ಯುವಜನ ಸಮ್ಮೇಳನ. ನನಗಿಂತ ಇವರು ಯುವಜನರು. ಇವರನ್ನು ಕರೆದುಕೊಂಡು ಹೋಗಿ' ಎಂದರು. 'ಪುಟ್ಟಮಕ್ಕಳ ಕಾರ್ಯಕ್ರಮ ನನಗಿದೆ, ಗೊತ್ತಲ್ಲಾ' ಎಂದರು. 'ಗೊತ್ತು ಸಾರ್' ಎಂದೆ. ಮಾರನೇ ದಿನ ಅವರು ಬೆಂಗಳೂರಿನಲ್ಲಿ ಗಾಂಧೀ ಸಾಹಿತ್ಯ ಸಂಘದಲ್ಲಿ ಮಕ್ಕಳಿಗೆ ಕಥೆ ಹೇಳುವ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಎಷ್ಟಾದರೂ ಮಕ್ಕಳ ಸಾಹಿತಿ ರಾಜರತ್ನಂ ಅವರು.

ಕಾಸರಗೋಡಿನ ಸಮ್ಮೇಳನಕ್ಕೆ ಮಾಸ್ತಿ ಮತ್ತು ಇತರರೊಂದಿಗೆ ಧರ್ಮಸ್ಥಳ ಸಮ್ಮೇಳನ ಮುಗಿಸಿ ಹೊರಟೆವು. ಮಾಸ್ತಿ ಅಧ್ಯಕ್ಷ ಭಾಷಣ ಮಾಡುತ್ತಾ ಹಿಂದೆ ತಾವು ಬಂದಾಗ ಕರ್ನಾಟಕ ಏಕೀಕರಣಕ್ಕೆ ದುಡಿದ ದೇಶಭಕ್ತರಾದ ಸ್ಥಳದ ನಾಯಕರಾಗಿದ್ದ ಭಂಡಾರಿ (ಅಂತ ಕಾಣುತ್ತೆ, ಹೆಸರು ಸರಿಯಾಗಿ ನನಗೆ ನೆನಪಿಲ್ಲ) ಅವರನ್ನು ನೆನಪಿಸಿಕೊಂಡರು. 'ಅವರ ಮನೇಲಿ ತಿಂದ ಪತ್ರೊಡೆಯ ಸವಿ ಈಗಲೂ ನನ್ನ ನಾಲಿಗೆಯ ಮೇಲೆ ಇದೆ' ಎಂದು ಅವರ ಆತಿಥ್ಯವನ್ನು ಹೊಗಳಿದರು. ಆ ಸಭೆಯಲ್ಲಿ ಅವರ ಕುಟುಂಬದವರು ಬಂದಿದ್ದರು. ಅವರು ಕೂಡಲೆ ರೈ ಅವರನ್ನು ಭೇಟಿ ಮಾಡಿ 'ಈ ಅತಿಥಿಗಳನ್ನೆಲ್ಲ ದಯವಿಟ್ಟು ನಮ್ಮ ಮನೆಗೆ ಊಟಕ್ಕೆ ಕಳಿಸಿ' ಎಂದು ಕೇಳಿಕೊಂಡರು.

ಅನಂತರ ಸಭೆ ಮುಗಿದ ಮೇಲೆ ನಾವೆಲ್ಲ ಹಾಮಾನಾ, ಎಚ್.ಎಂ. ಶಂಕರನಾರಾಯಣರಾವ್, ವೆಂಕಟರಾಮಪ್ಪ, ಮಾಸ್ತಿ, ಡಿ.ಲಿಂಗಯ್ಯ ಇನ್ನು ಹಲವರು, ಅವರ ಮನೆ ಊಟಕ್ಕೆ ಹೊರಟೆವು.

ಹಳೆಯ ದೊಡ್ಡಮನೆ, ಹಾಲಿನಲ್ಲಿ ಟೇಬಲ್ಲುಗಳ ಮೇಲೆ ಊಟ ಬಡಿಸಿದ್ದರು. ಮಾಸ್ತಿ ಅವರು ಭಂಡಾರಿ ಅವರ ಮಗನ ಯೋಗಕ್ಷೇಮ ಕೇಳಿದಾಗ ಮನೆಯವರ ಮುಖ ಚಿಕ್ಕದಾಯಿತು. 'ಯಾಕೆ ಏನಾಯಿತು?' ಎಂದು ಮಾಸ್ತಿ ಕೇಳಿದರು. 'ಅವರಿಗೆ ಅನಾರೋಗ್ಯ. ಒಳಗೆ ಕೋಣೆಯಲ್ಲಿ ಮಲಗಿದ್ದಾರೆ' ಎಂದರು. ಕೂಡಲೇ ಊಟ ಪ್ರಾರಂಭಿಸಬೇಕಾದ ಮಾಸ್ತಿ ಎದ್ದು, 'ಎಲ್ಲಿ ಎಲ್ಲಿದ್ದಾರೆ ಅವರು?' ಅಂತ ಕೇಳಿ ಆ ಕೋಣೆಗೆ ಬಂದರು. ನಾವು ಅವರ ಹಿಂದೆ ಬಂದೆವು. ಮಾಸ್ತಿ ಅವರನ್ನು ನೋಡಿ,

‘ಏನಪ್ಪಾ ಮಲಗಿದ್ದೀಯಾ, ಏನಾಗಿದೆಯಪ್ಪಾ?’ ಎಂದು ಪ್ರೀತಿ, ವಾತ್ಸಲ್ಯದಿಂದ ಮಾತಾಡುತ್ತಾ ಮೈದಡವಿ ಮಾತಾಡಿಸಿದರು. ಅರೆ ಎಚ್ಚರದಲ್ಲಿ ಆ ವ್ಯಕ್ತಿ ಹಾ ಹಾ ಎಂದು ತಡವರಿಸುತ್ತಾ ‘ನೀವು ಮಾಸ್ತಿ ಅವರು ಅಲ್ಲವೇ?’ ಅಂತ ಹೇಳುತ್ತಾ ಕೈ ಮುಗಿಯಲು ಯತ್ನಿಸಿದರು ‘ಬೇಡಿ ಬೇಡಿ. ಮಲಗಿ ವಿಶ್ರಾಂತಿ ತೆಗೆದುಕೊಳ್ಳಿ. ಆರೋಗ್ಯವಂತರಾಗುತ್ತೀರಿ. ಚಿಂತಿಸಬೇಡಿ. ದೇವರಿದ್ದಾನೆ’ ಎಂದು ಸಾಂತ್ವನ ಹೇಳಿದರು. ಆಗ ಮನೆಯವರ ಮುಖದಲ್ಲೆಲ್ಲಾ ಸಂತೋಷ ಉಕ್ಕಿ ಚಿಮ್ಮಿ ಹರಿದಿತ್ತು. ಏಕೆ ಗೊತ್ತೆ? ಹಲವು ದಿನಗಳಿಂದ ಎಚ್ಚರವಿಲ್ಲದೆ ಮಲಗಿದ್ದ ಅವರನ್ನು ಮಾಸ್ತಿಯವರ ಪ್ರೀತಿಯ ಮಾತು ವಾತ್ಸಲ್ಯದ ಸ್ಪರ್ಶದ ಅಮೃತಹಸ್ತದ ಅನುಭವ ಎಚ್ಚರಗೊಳಿಸಿತ್ತು. ಇದು ನಾನು ಕಣ್ಣಾರೆ ಕಂಡ ನೋಟ.

❑

೨೦. ಪ್ರತಿಭಾವಂತರ ಸಾವಿನ ದರ್ಶನ ದೌರ್ಭಾಗ್ಯ

ಜಿ.ಪಿ. ರಾಜರತ್ನಂ ಅವರ ಮೇಲಿನ ಅಭಿಮಾನ ಮಾಸ್ತಿಯವರಿಗೆ ಮೊದಲಿನಿಂದಲೂ ಇತ್ತು. ಜಿ.ಪಿ. ರಾಜರತ್ನಂ ಎಂಡ್ಕುಡ್ಕ ರತ್ನನ ಪದಗಳನ್ನು ಸಹೃದಯ ಬಳಗದೆದುರು ವಾಚಿಸುವಂತೆ ಮಾಡಿ, ಅದನ್ನು ಪ್ರಕಟಿಸಿ, ಅವರು ಕವಿ–ಲೇಖಕ ಆಗಲು ಪ್ರೋತ್ಸಾಹಿಸಿದವರು, ಸ್ಫೂರ್ತಿ ನೀಡಿದವರು ಮಾಸ್ತಿ ಅವರು. ನಿರುದ್ಯೋಗಿ ಆದಾಗ ರಾಜರತ್ನಂ ಅವರನ್ನು ಸಾಹಿತ್ಯ ಗ್ರಂಥ ರಚಿಸಲು ಹೇಳಿ ಆ ಮೂಲಕ ಆರ್ಥಿಕ ನೆರವನ್ನು ನೀಡಿದವರು ಮಾಸ್ತಿ.

ಕಾಸರಗೋಡು ಯುವಜನ ಸಮ್ಮೇಳನದಿಂದ ಮಾಸ್ತಿಯವರೊಡನೆ ಡಿ. ಲಿಂಗಯ್ಯ, ನಾನು ಮತ್ತಿತರರು ಕಾರಿನಲ್ಲಿ ಬೆಂಗಳೂರಿಗೆ ಹಿಂದಿರುಗುವಾಗ ದಾರಿಯಲ್ಲಿ ಆ ದಿನ ರಾತ್ರಿ ಜಿ.ಪಿ. ರಾಜರತ್ನಂ ನಿಧನರಾದ ಸುದ್ದಿ ತಿಳಿಯಿತು. ಕೂಡಲೇ ಬೆಂಗಳೂರಿಗೆ ಬರುತ್ತಿದ್ದ ನಾವು ನೇರವಾಗಿ ಕಾರಿನಲ್ಲಿ ಜಿ.ಪಿ. ರಾಜರತ್ನಂರ ಮನೆ ಸೇರಿ ಶ್ರದ್ಧಾಂಜಲಿ ಅರ್ಪಿಸಿದೆವು. ಅವರ ಪರವಾಗಿ ಸಮ್ಮೇಳನದಲ್ಲಿ ಹಾಕಿದ ಹಾರವನ್ನು ರಾಜರತ್ನಂ ಅವರಿಗೇ ಅರ್ಪಿಸಿ ನಾನು ಕೈ ಮುಗಿದೆ. ಆಗ ಮಾಸ್ತಿ ಶೋಕಿಸುತ್ತಾ ಹೇಳಿದ ಮಾತಿದು: 'ನಮ್ಮಂಥವರು ಬಹಳ ದಿನ ಬದುಕಿರಬಾರದು' ಎಂದಾಗ ಪಕ್ಕದಲ್ಲಿದ್ದ ನಾನು 'ಏಕೆ ಹಾಗೆ ಹೇಳುತ್ತೀರಾ?' ಎಂದು ಕೇಳಿದಾಗ, 'ನಮ್ಮ ಕಣ್ಣೆದುರೇ ಇಂಥ ಪ್ರತಿಭಾವಂತರ ಸಾವನ್ನು ಕಾಣುವ ದೌರ್ಭಾಗ್ಯ ನಮ್ಮದಾಗುತ್ತದಲ್ಲಾ' ಎಂದು ಮರುಗಿದರು.

❑

೨೧. ನನ್ನ ಜತೆ ಮಾತಾಡಲು ಸಂಕೋಚವೇಕೆ?

ಮಾಸ್ತಿ ಅವರನ್ನು ಅದೆಷ್ಟು ಸಲ ಭೇಟಿ ಆಗಿದ್ದೇನೋ ನೆನಪಿಲ್ಲ. ಕೆಲವೊಮ್ಮೆ ಬೆಳಿಗ್ಗೆ ೧೦-೧೧ರ ಸುಮಾರಿನಲ್ಲಿ ವಾಕಿಂಗ್ ಹೊರಟಾಗ ಗವಿಪುರದ ಮನೆಯಿಂದ ಹೊರಟು ರಾಮಕೃಷ್ಣಾಶ್ರಮದ ಮುಂದೆ ಬಂದು ಗೇಟಿನಲ್ಲಿ ನಿಂತು ಕೈಮುಗಿದು, ಮರಾಠ ಹಾಸ್ಟೆಲಿನ ಪಕ್ಕದಿಂದ ಶಂಕರಮಠದ ರಸ್ತೆಯಲ್ಲಿ ಸಾಗಿ ಗಾಂಧಿ ಬಜಾರ್ ರಸ್ತೆಯಿಂದ ಮನೆಗೆ ಸಾಗುತ್ತಿದ್ದರು. ಆಗ ಭೇಟಿಯಾದಾಗಲೆಲ್ಲ ಅವರ ಜತೆ ಉದ್ದಕ್ಕೂ ಮಾತಾಡಿಸುತ್ತಾ ಸಾಗುತ್ತಾ ಹತ್ತಾರು ವಿಷಯಗಳನ್ನು ಪ್ರಶಾಂತ ದನಿಯಲ್ಲಿ ಕೇಳಿದ್ದೀನಿ. ಒಮ್ಮೆ ಹೀಗೆ ವಾಕಿಂಗ್‌ನಲ್ಲಿ ಮಾತಾಡಿದಾಗ, ಪತ್ರಿಕೆಯೊಂದರಲ್ಲಿ ಅವರ ಬಗ್ಗೆ ಟೀಕೆಯೊಂದು ಬಂದಿತ್ತು. ಅದನ್ನು ಬೆಳಿಗ್ಗೆ ಓದಿದ್ದರು. ನಾನು ಆ ಬಗ್ಗೆ ಕೇಳಿದಾಗ 'ಆ ನನ್ನ ಮಿತ್ರರು ಬರೆಯಬೇಕಿರಲಿಲ್ಲ, ನನ್ನನ್ನೇ ಬಂದು ಕೇಳಿದ್ದರೆ ನಾನೇ ಉತ್ತರ ಹೇಳುತ್ತಿದ್ದೆ. ನನ್ನ ಜತೆ ಮಾತಾಡೋಕೆ ಅವರಿಗೇಕೆ ಸಂಕೋಚವೋ ತಿಳಿಯದು' ಎಂದಿದ್ದರು.

❑

೨೨. ದೇಹಕ್ಕೆ ವಯಸ್ಸಾದರೂ ಮನಸ್ಸಿಗೆ ಆಗಿಲ್ಲ

ಇನ್ನೊಮ್ಮೆ ಹಂಪನಾ ಅವರ ಜತೆ ಪರಿಷತ್ತಿನ ವಿಚಾರವಾಗಿ ಹೋಗಿದ್ದಾಗ ಯಾವುದೋ ನಾಟಕವನ್ನು ಅಂತ ಕಾಣುತ್ತೆ, ಬರೆಯುತ್ತಿದ್ದರು ಅದೊಂದು ಯುವಕ-ಯುವತಿಯರ ಪ್ರಣಯ ಪ್ರಸಂಗ ಅಂತ ಕಾಣುತ್ತೆ. ಅದನ್ನು ಲವಲವಿಕೆಯಿಂದ ಹೇಳತೊಡಗಿದರು, ಆ ಬಗ್ಗೆ ಬರೆಯುತ್ತಿದ್ದೇನೆ ಎಂದರು. ಅವರು ಆ ಇಳಿವಯಸ್ಸಿನಲ್ಲಿ ನಗುನಗುತ್ತ ಸಂತೋಷದಿಂದ, ಹೆಮ್ಮೆಯಿಂದ, ಭಾವಪೂರ್ಣವಾಗಿ ಆ ಕಥೆಯನ್ನು ಹೇಳಿದ್ದು ಈಗಲೂ ನೆನಪಿದೆ. ಈಚೆ ಬಂದ ಮೇಲೆ ನಾನು ಹಂಪನಾ ಮಾತಾಡಿಕೊಂಡೆವು, 'ಈ ಅಜ್ಜನಿಗೆ ಅದೆಂಥಾ ತಾರುಣ್ಯಭಾವ ಈ ವಯಸ್ಸಲ್ಲೂ! ನಮಗೆ ಈ ವಯಸ್ಸಿಗೇ ಇಲ್ಲವಲ್ಲಾ. ನಾವೇ ಮುದುಕರು, ಅವರೇ ತರುಣರು' ಎಂದೆ. ಹಂಪನಾ 'ಹೌದು. ನೀನು ಹೇಳೋದು ನಿಜ, ವಯಸ್ಸು ದೇಹಕ್ಕೆ, ಮನಸ್ಸಿಗಲ್ಲ' ಎಂದರು.

ಮಾಸ್ತಿಯವರ ಜತೆ ಮಾತಾಡಿದಾಗಲೆಲ್ಲ, ಇಂಥಾ ಅನುಭವಗಳಷ್ಟೋ ಆಗಿವೆ. ಇನ್ನು ಅವರ ಭಾವ, ಅರ್ಚನ ಮೊದಲಾದ ಕೃತಿಗಳಲ್ಲಿ, ಅವರ ಬಗ್ಗೆ ಬಂದ ಗೌರವ ಗ್ರಂಥಗಳಲ್ಲಿ ಬಂದ ಪ್ರಸಂಗಗಳನ್ನು ಕಂಡರೆ, ಇಷ್ಟು ವಿಪುಲ ರೋಚಕ ಆನಂದಮಯ ಅನುಭವಗಳ ಅಕ್ಷಯಪಾತ್ರೆಯು ಅನನ್ಯವೆನಿಸುತ್ತದೆ. ಕನ್ನಡದ ಬೇರಾವ ಸಾಹಿತಿಗಳಲ್ಲೂ ಇಂಥ ಪ್ರಸಂಗಗಳು ಈ ಪ್ರಮಾಣದಲ್ಲಿ ಇಲ್ಲ ಎನ್ನಿಸುತ್ತೆ.

ಡಿವಿಜಿಯವರು ರಾಳ್ಳಪಳ್ಳಿ ಅವರ ಬಗ್ಗೆ ಒಮ್ಮೆ ಹೇಳಿದ ಮಾತು ನೆನಪಾಗುತ್ತೆ: 'ಇಂಥಾ ಮಹಾಪುರುಷರ ಜತೆಯಲ್ಲಿದ್ದಾಗ ದೊರೆಯುವ ಅನುಭವದ ದನಿ, ಮಾತಿನ ಸೊಗಡು, ಅಂತಃಕರಣದ ನುಡಿ ಸಾಂತ್ವನ, ರಸಾನುಭವ, ಯಾವ ವಿಶ್ವವಿದ್ಯಾನಿಲಯದ ಶಿಕ್ಷಣದಿಂದಲೂ ಸಿಗುವುದಿಲ್ಲ.' ಈ ಮಾತಿಗೆ ಮಾಸ್ತಿಯೇ ಸಾಕ್ಷಿ, ಮಾಸ್ತಿಯವರ ಬಗ್ಗೆ ನಾನೇ ಸಾಕ್ಷಿ.

❑

೨೩. ನಾನೇ ನಿಮ್ಮನ್ನು ಶಿಫಾರಸು ಮಾಡಿದ್ದು

ದೇವುಡು ಅವರು ಮೈಸೂರಿನಿಂದ ಬೆಂಗಳೂರಿಗೆ ನೆಲೆಸಲು ಬರುವ ಮುಂಚೆ ಸ್ವಲ್ಪಕಾಲ ಶೃಂಗೇರಿ ಮಠದ ಸೇವೆಯಲ್ಲಿದ್ದರು. ಆಗ ಸ್ವತಂತ್ರ ಪ್ರವೃತ್ತಿಯ ಸ್ವಾಭಿಮಾನಿ ದೇವುಡು ಕಲಿತ ಪಾಠವೆಂದರೆ 'ಯಾರ ಕೈಕೆಳಗೂ ಕೆಲಸ ಮಾಡಬಾರದು. ಹಾಗೆ ಮಾಡುವುದು ನನ್ನ ಜಾಯಮಾನವಲ್ಲ' ಈ ನಿರ್ಧಾರದಿಂದ ಅವರು ಮುಂದೆ ಜೀವನದಲ್ಲಿ ಎಂಥೆಂಥ ಉನ್ನತ ಹುದ್ದೆಗಳನ್ನು ಅಲಂಕರಿಸುವ ಸುವರ್ಣಾವಕಾಶಗಳು ಬಂದರೂ ಅವುಗಳನ್ನು ಸ್ವೀಕರಿಸಲಿಲ್ಲ. ಒಂಟಿ ಸಲಗದಂತೆ ಸ್ವತಂತ್ರರಾಗಿಯೇ ಉಳಿದರು. ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ದೇವುಡು ಅವರ ಸಲಹೆಯ ಮೇರೆಗೆ ಸ್ಥಾಪಿಸಿದಾಗ ಅದಕ್ಕೆ ಅವರೇ ನಿರ್ದೇಶಕರಾಗಲು ಸೂಚಿಸಿದರು. ಆದರೆ ದೇವುಡು ಅವರು ಸಿ.ಕೆ.ವೆಂಕಟರಾಮಯ್ಯನವರನ್ನು ಆ ಜಾಗಕ್ಕೆ ಸೂಚಿಸಿದರು.

ಆಗ ಸಿ.ಕೆ.ವೆಂ. 'ನಾನೊಬ್ಬನೇ ಈ ಕೆಲಸ ನಿರ್ವಹಿಸಲಾರೆ ನನಗೆ ಸಹಾಯಕರೊಬ್ಬರು ಬೇಕು' ಎಂದಾಗ ಹನುಮಂತಯ್ಯನವರು 'ನಿಮಗೆ ಬೇಕಾದವರನ್ನು ಸೂಚಿಸಿ, ನಾನು ನೇಮಕ ಮಾಡುತ್ತೇನೆ' ಎಂದರು. ಆಗ ಅವರು ದೇವುಡು ಬಳಿ ಬಂದರು. 'ದೇವುಡು ಅವರೇ, ನನ್ನನ್ನು ಹನುಮಂತಯ್ಯನವರು ಸಂಸ್ಕೃತಿ ಇಲಾಖೆಗೆ ನನ್ನನ್ನು ನಿರ್ದೇಶಕರನ್ನಾಗಿ ಮಾಡಿದ್ದಾರೆ. ನನ್ನ ಜತೆಗೆ ಇನ್ನೊಬ್ಬರು ಬೇಕು ಎಂದಿದ್ದಕ್ಕೆ ನಿಮಗೆ ಬೇಕಾದವರನ್ನು ಆರಿಸಿಕೊಳ್ಳಿ ಎಂದಿದ್ದಾರೆ. ನೀವೇಕೆ ನನ್ನ ಜೊತೆ ಕೆಲಸ ಮಾಡಬಾರದು? ನಿಮಗೆ ಪ್ರಿಯವಾದ ಕೆಲಸ ಅಲ್ಲವೇ?' ಎಂದು ಕೇಳಿದರು. ಆಗ ದೇವುಡು, 'ನಿಮ್ಮನ್ನು ನೇಮಕ ಮಾಡಲು ಸೂಚಿಸಿದವನೇ ನಾನು. ಈಗ ನೀವು ನನ್ನನ್ನೇ ಸಹಾಯಕನಾಗಲು ಕೇಳುತ್ತಿದ್ದೀರಿ' ಎಂದು ನಕ್ಕರು. ಸಿ.ಕೆ.ವೆಂ. ನಾಚಿಕೊಂಡು ನನಗಿದು ತಿಳಿದಿರಲಿಲ್ಲ ಕ್ಷಮಿಸಿ ಎಂದರು.

ದೇವುಡು ಅವರ ಮಗ ಗಂಗಾಧರ್ ನನಗೆ ಹೇಳಿದ ಸಂಗತಿಯಿದು.

❑

೨೪. ವಿದ್ವಾಂಸರ ವಿದ್ಯಾರ್ಥಿ ಪ್ರೇಮ

ದೇವುಡು ಅವರು ಶಿಕ್ಷಣತಜ್ಞರು, ಮಕ್ಕಳಪ್ರೇಮಿ; ಮಕ್ಕಳಸಾಹಿತಿಯಾಗಿ ಬಾಳನ್ನು ಕಳೆದವರು. ಆದರ್ಶ ಅಧ್ಯಾಪಕರು ಅವರು. ಅವರ ಮಕ್ಕಳಪ್ರೇಮ ಎಷ್ಟಿತ್ತು ಎಂದರೆ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸಭೆಗಳಿಗೆ ಬರುತ್ತಿದ್ದಾಗಲೆಲ್ಲ ಪರಿಷತ್ತಿನ ಬಳಿ ಇದ್ದ, ಆರ್. ಕಲ್ಯಾಣಮ್ಮ ಸ್ಥಾಪಿಸಿದ ಮಕ್ಕಳಕೂಟಕ್ಕೆ ತಾವಾಗಿ ಬಂದು ಮಕ್ಕಳಿಗೆ ಕಥೆ ಹೇಳುತ್ತಿದ್ದರು. ಈ ರೀತಿ ತಾವಾಗಿ ಬಂದು ಮಕ್ಕಳಿಗೆ ಕಥೆ ಪದ್ಯ, ನಾಟಕ ಹೇಳುತ್ತಿದ್ದ ಮಕ್ಕಳ ಸಾಹಿತಿಗಳೆಂದರೆ ಜಿ.ಪಿ.ರಾಜರತ್ನಂ, ಬಿ.ಶ್ರೀ.ಪಾಂಡುರಂಗರಾವ್ ಮತ್ತು ಹೊಯಿಸಳ ಪರಿಮಳ ಮುಂತಾದ ಇತರ ಮಕ್ಕಳ ಸಾಹಿತಿಗಳು. ೧೯೩೦ರಲ್ಲಿ ಒಮ್ಮೆ ದೇವುಡು ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಬಳಿ ನಿಂತಿದ್ದರು. ಆಗ ಅಲ್ಲೊಂದು ವಿದ್ಯಾರ್ಥಿಗಳ ಮೆರವಣಿಗೆ ಬರುತ್ತಿತ್ತು. ಬೆಂಗಳೂರಿನ ನ್ಯಾಷನಲ್ ಸ್ಕೂಲ್ ಅದುವರೆಗೆ ಹೊಸತರಗು ಪೇಟೆ (ಮಂಡಿಪೇಟೆ)ಯಲ್ಲಿ ಬಾಡಿಗೆ ಕಟ್ಟಡದಲ್ಲಿತ್ತು. ಈಗಿರುವ ನ್ಯಾಷನಲ್ ಸ್ಕೂಲಲ್ಲಿ ಹೊಸ ಹೆಂಚಿನ ಕಟ್ಟಡ ನಿರ್ಮಾಣವಾಗಿ ಅಲ್ಲಿಗೆ ಶಾಲೆಯನ್ನು ಬದಲಾಯಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳೆಲ್ಲ ಸರಸ್ವತಿಪಠ ಹಿಡಿದು ಮಂಗಳವಾದ್ಯಗಳೊಡನೆ ಶಾಲೆಯ ಸಾಮಗ್ರಿ ಹೊತ್ತು ಹೊಸ ಕಟ್ಟಡಕ್ಕೆ ಮೆರವಣಿಗೆ ಹೊರಟಿದ್ದರು.

ಪರಿಷತ್ತಿನ ಮುಂದೆ ವಿದ್ಯಾರ್ಥಿಗಳ ಮೆರವಣಿಗೆ ಬಂದಾಗ ಅಲ್ಲೇ ಮಿತ್ರರೊಡನೆ ನಿಂತಿದ್ದ ದೇವುಡು ಅವರಿಗೆ ವಿಷಯ ತಿಳಿಯಿತು. ಓದುವ ಮಕ್ಕಳಿಗೆ ಸ್ವಂತ ಮನೆ-ಕಟ್ಟಡ ಸಿಕ್ಕಿತಲ್ಲಾ ಎಂಬ ಸಂತೋಷದಿಂದ ಆನಂದಪರವಶರಾದರು. ಅವರಿಗೆ ಸಂತೋಷ ಎಷ್ಟು ಉಕ್ಕಿ ಹರಿಯಿತು ಎಂದರೆ ಜತೆಯಲ್ಲಿದ್ದ ಮಿತ್ರರನ್ನು ಕುರಿತು 'ನಮಗೆ ಮನೆ ಇದ್ದರೆ ನಮ್ಮ ಮಕ್ಕಳಿಗೆ ಸಂತೋಷ. ಶಾಲೆಗೆ ಕಟ್ಟಡ ಸಿಕ್ಕರೆ ದೇಶದ ಎಲ್ಲ ಮಕ್ಕಳಿಗೆ ಸಂತೋಷ, ನಾಡಿಗೆ ಭಾಗ್ಯ. ಇದಕ್ಕಿಂತ ಆನಂದ ಇನ್ನೇನಿದೆ ಹೇಳಿ' ಎಂದವರೇ ಅಲ್ಲೇ ರಸ್ತೆ ಬದಿಯಲ್ಲಿ ಕೈಗಾಡಿ ತುಂಬ ದ್ರಾಕ್ಷಿಯನ್ನಿಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಯನ್ನು ಕಂಡು, ಎಷ್ಟು ಬುಟ್ಟಿ ದ್ರಾಕ್ಷಿ ಇದೆ ಎಂದು ಕೇಳಿ, ಅವನಲ್ಲಿದ್ದ ಬುಟ್ಟಿಗಳ ದ್ರಾಕ್ಷಿಯಷ್ಟನ್ನೂ ಕೊಂಡು, ಗಾಡಿಯನ್ನೇ ಖಾಲಿ ಮಾಡಿದರು. ಆ ಬುಟ್ಟಿ ಬುಟ್ಟಿ ದ್ರಾಕ್ಷಿಯನ್ನು ವಿದ್ಯಾರ್ಥಿಗಳಿಗೆಲ್ಲ ಕೈತುಂಬ ಹಂಚಿ ಸಂತೋಷಪಟ್ಟವರು ದೇವುಡು ಅವರು. ಆದರ್ಶ ವಿದ್ಯಾರ್ಥಿಪ್ರೇಮಿ ಆದ ಅವರು ಆದರ್ಶ ಶಾಲಾ ಸ್ಥಾಪಕರೂ ಹೌದು. ೧೯೪೨ರಲ್ಲಿ ಗಾಂಧೀನಗರ ಪ್ರೌಢಶಾಲೆ ಸ್ಥಾಪಿಸಿದರು. ಬೆಟಗೇರಿ ಕೃಷ್ಣಶರ್ಮ, ಗೋಪಾಲಕೃಷ್ಣ ಅಡಿಗ, ಹೆಚ್.ಎಸ್.ದೊರೆಸ್ವಾಮಿ ಮೊದಲಾದ ಪ್ರಸಿದ್ಧರೆಲ್ಲ ಅಲ್ಲಿ ಅಧ್ಯಾಪಕರಾಗಿ ದೇವುಡು ನೇತೃತ್ವದಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳಿದ್ದಾರೆ.

❑

೨೫. ಆಚಾರದಲ್ಲಿ ಗೀತೆಯ ಅನುಷ್ಠಾನ ಬೇಕು

ದೇವುಡು ಅವರು ಕನ್ನಡಕ್ಕೆ ಶ್ರಮಿಸಿದಷ್ಟೇ ಸಂಸ್ಕೃತ ಭಾಷೆಗಾಗಿ ಶ್ರಮಿಸಿದ್ದಾರೆ. 'ಗೀತಾ ಪ್ರಚಾರ' ಅವರ ಜೀವನ ಧ್ಯೇಯಗಳಲ್ಲಿ ಒಂದಾಗಿತ್ತು. ಆಚಾರ್ಯತ್ರಯರ ಭಾಷ್ಯವುಳ್ಳ ಗೀತಾಗ್ರಂಥವನ್ನು ಉಚಿತವಾಗಿ ಉಡುಗೊರೆಯಾಗಿ ಪ್ರತಿಯೊಬ್ಬ ವಿಶ್ವವಿದ್ಯಾಲಯದ ಪದವೀಧರನಿಗೆ ನೀಡಬೇಕೆಂದು ಅವರ ಆಸೆ ಆಗಿತ್ತು. ಮಕ್ಕಳಿಂದ ಪಂಡಿತರವರೆಗೆ ಎಲ್ಲರಿಗೂ ಉಪಯುಕ್ತವಾಗುವ ಬೇರೆಬೇರೆ ಮಟ್ಟದ ಗೀತಾಗ್ರಂಥಗಳನ್ನು ರಚಿಸುವುದು ಅವರ ಹೆಬ್ಬಯಕೆ ಆಗಿತ್ತು. ಈ ರೀತಿ ಪ್ರಯತ್ನ ಮಾಡಿದವರಲ್ಲಿ ಹೊಸಕೆರೆ ಚಿದಂಬರಯ್ಯ, ಆಲೂರು ವೆಂಕಟರಾಯರು ಮತ್ತು ಆರ್.ಆರ್. ದಿವಾಕರ್ ಗಣ್ಯರು, ದೇವುಡು ಆ ವಿಷಯದಲ್ಲಿ ಆದರ್ಶಪ್ರಾಯರು.

ಗೀತೆಯನ್ನು ಕೇವಲ ಪ್ರಚಾರಕ್ಕೆ ಅಲ್ಲದೆ ಜೀವನದಲ್ಲೇ ಅನುಷ್ಠಾನ ಮಾಡಿದವರು ದೇವುಡು ಅವರು. ಇದಕ್ಕೊಂದು ನಿದರ್ಶನ ಎಂದರೆ, ಒಮ್ಮೆ ಉಡುಪಿಯ ಪರ್ಯಾಯೋತ್ಸವದಲ್ಲಿ ಗೀತೆಯ ಬಗ್ಗೆ ಉಪನ್ಯಾಸ ಮಾಡಲು ದೇವುಡು ಅವರು ಆಹ್ವಾನಿತರಾಗಿದ್ದರು. ವೇದಿಕೆ ಹತ್ತಿ ಉಪನ್ಯಾಸ ಪ್ರಾರಂಭ ಮಾಡುವ ವೇಳೆಗೆ ಅವರ ಕೈಗೆ ಸಣ್ಣ ಚೀಟಿಯೊಂದನ್ನು ವ್ಯವಸ್ಥಾಪಕರು ಕೊಟ್ಟರು. ಅದರಲ್ಲಿ ಅವರ ಹಿರಿಯ ಮಗ ರಾಮು ಕೋಲಾರದಲ್ಲಿ ನಿಧನರಾದ ಸುದ್ದಿ ಇತ್ತು. ಅದನ್ನೋದಿ ಒಂದು ಕ್ಷಣ ಮೌನಿಗಳಾದ ಅವರು ಸಾವರಿಸಿಕೊಂಡು ಮಾತನಾಡಲು ಸಿದ್ಧರಾದರು. ಅವರ ಮುಖಭಾವ ಕಂಡ ಪಕ್ಕದಲ್ಲಿದ್ದವರು, ಏನು ಸುದ್ದಿ ಎಂದು ಕೇಳಿದರು.

ದೇವುಡು ಅವರು 'ಯಾವುದೋ ಪುಸ್ತಕ ಪ್ರಕಟನೆಯ ವಿಚಾರ' ಎಂದು ಹೇಳಿ ನಿರ್ವಿಕಾರಚಿತ್ತರಾಗಿ ಏನೂ ಆಗದವರಂತೆ ಶುದ್ಧಮನಸ್ಕರಾಗಿ ಅತ್ಯಮೋಘವಾಗಿ ಗೀತಾ ಪ್ರವಚನ ಮಾಡಿದರು. ಎಷ್ಟರಮಟ್ಟಿಗೆ ಎಂದರೆ ಸಭೆಯಂತೂ ಎಲೆ ಅಲುಗದ ಸಭೆ ಆಗಿತ್ತು. ಸ್ವಾಮಿಗಳು 'ದಯಮಾಡಿ ಇನ್ನೊಂದು ವಾರ ಇದ್ದು ಮತ್ತೊಂದು ಗೀತಾ ಸಪ್ತಾಹ ಕಾರ್ಯಕ್ರಮ ನಡೆಸಿಕೊಡಿ. ನಿಮ್ಮ ಗೀತಾ ಪ್ರವಚನ ಅಮೋಘ' ಎಂದರು. ಕಾರ್ಯಕ್ರಮ ಮುಗಿದ ಮೇಲೆ ಜತೆಗಿದ್ದ ಆತ್ಮೀಯ ಮಿತ್ರರಾದ ಬೆಳಗೆರೆ ಕೃಷ್ಣಶಾಸ್ತ್ರಿಗಳಿಗೆ ವಿಷಯ ತಿಳಿಸಿದರು. ಆಗ ಅವರು 'ಈ ಸಂಯಮ ನಿಮಗೆ ಹೇಗೆ ಸಾಧ್ಯವಾಯಿತು? ಪುತ್ರಶೋಕವನ್ನು ಪಕ್ಕಕ್ಕಿಟ್ಟು ತಲ್ಲೀನಚಿತ್ತರಾಗಿ ಗೀತಾ ಪ್ರವಚನ ಮಾಡುವ ಶಕ್ತಿ ಎಲ್ಲಿಂದ ಬಂತು?' ಎಂದು ಕೇಳಿದರು. ಅದಕ್ಕೆ ದೇವುಡು ಹೇಳಿದರು. 'ನಾನು ಸಭೆಯಲ್ಲಿ ಗೀತೆಯ ಬಗ್ಗೆ ಭಾಷಣ ಮಾಡಲಿಲ್ಲ. ನನಗೆ ನಾನೇ ಗೀತೋಪದೇಶ ಮಾಡಿಕೊಂಡೆ, ಸ್ಥಿತಪ್ರಜ್ಞನ ಲಕ್ಷಣಗಳನ್ನು – ಸುಖದಲ್ಲಾಗಲಿ ದುಃಖದಲ್ಲಾಗಲಿ, ಲಾಭ ನಷ್ಟಗಳಲ್ಲಾಗಲಿ, ಸಮಭಾವ ತಾಳು – ಎಂಬ ಕೃಷ್ಣನ ಗೀತಾವಾಕ್ಯಗಳನ್ನು ನನಗೆ ನಾನೇ ಬೋಧಿಸಿಕೊಂಡೆ ಅದರಿಂದ ಮಾತಾಡಲು ಸಾಧ್ಯವಾಯಿತು.' ಹೀಗೆ ಜೀವನದಲ್ಲಿ ಗೀತಾ ಸಂದೇಶವನ್ನು ಅನುಷ್ಠಾನಕ್ಕೆ ತಂದುಕೊಂಡ ಗೀತಾಭಕ್ತರು ದೇವುಡು ಅವರು.

೨೬. ದೇವುಡು ಅವರ ವಾಗ್ವಿಲಾಸ

ದೇವುಡು ಅವರ ವಾಗ್ವಿಲಾಸದ ವೈಭವ ಕುರಿತು ಒಂದು ಪ್ರಸಂಗ ಹೇಳಬೇಕು. ಕನ್ನಡದಲ್ಲಿ ಅನಕ್ಕೃ ಅಂಥ ವಾಗ್ಮಿಗಳ ಸಾಲಿಗೆ ನಿಲ್ಲಬಲ್ಲವರು ದೇವುಡು ಅವರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾಳಿದಾಸನ ಬಗ್ಗೆ ಅಮೋಘ ವಿಶೇಷ ಉಪನ್ಯಾಸ ನೀಡಿದಾಗ, ಒಬ್ಬ ವಿದ್ವಾಂಸರು 'ಎಷ್ಟು ವರ್ಷ ಕಾಳಿದಾಸನನ್ನು ಅಭ್ಯಾಸ ಮಾಡಿದಿರಿ ಈ ಉಪನ್ಯಾಸಕ್ಕೆ?' ಎಂದರು. ಅದಕ್ಕೆ ದೇವುಡು ನಕ್ಕು 'ಭಾಷಣ ಪ್ರಾರಂಭ ಮಾಡುವ ಮುಂಚೆ ಕೆಲವು ನಿಮಿಷಗಳು ಮಾತ್ರ' ಎಂದರು.

ದೇವುಡು ಪರಿಷತ್ತಿನಲ್ಲಿ ಭಾಷಣ ಮಾಡಿದಾಗ ಕೇವಲ ಕೈಬೆರಳಿನಷ್ಟೇ ಜನರಿದ್ದರು. ಗೀತಾ ಜಯಂತಿ ಪ್ರಯುಕ್ತ ಏರ್ಪಟ್ಟಿದ್ದ ಕಾರ್ಯಕ್ರಮವದು. 'ಅಯ್ಯೋ ಇಂಥ ದಿನ ಇಂಥ ಕಾರ್ಯಕ್ರಮಕ್ಕೆ ಇಷ್ಟೇ ಜನರು ಬಂದಿದ್ದಾರಲ್ಲಾ' ಎಂದು ನೆರೆದವರು ತಮ್ಮ ಶೋಕ ವ್ಯಕ್ತಪಡಿಸಿದರು. ಆಗ ದೇವುಡು ಹೇಳಿದರು: 'ಏನು ಹೀಗೆ ಹೇಳ್ತೀರಿ. ಸಾವಿರಾರು ಜನ ಬಂದಿದ್ದಾರೆ ನಿಮಗೆ ಕಾಣಿಸುತ್ತಿಲ್ಲವೇ? ನೋಡಿ, ನಾನು ಭಾಷಣಕಾರ ೧ ಸಂಖ್ಯೆ ಇದ್ದಂತೆ. ನನ್ನ ಮುಂದೆ ಇರುವ ಮಹನೀಯರೆಲ್ಲಾ ೦ ಗಳಿದ್ದಂತೆ. ಈ ೬ ಜನ ೬ ಸೊನ್ನೆಗಳು ಎಂದರೆ ೧೦,೦೦,೦೦೦ ಎಂದರೆ ಹತ್ತು ಲಕ್ಷ ಜನ ಸೇರಿದ್ದಾರೆ ಇಲ್ಲಿ' ಎಂದು ಚಮತ್ಕಾರಿಕವಾಗಿ ಹೇಳಿದಾಗ ಜನರೆಲ್ಲ ನಕ್ಕರು.

❑

೨೭. ದೇಹಿ ಎಂದವರಿಗೆ ನಾಸ್ತಿ ಎನ್ನಲಿಲ್ಲ

ದೇವುಡು ಪಠ್ಯಪುಸ್ತಕ ಸಮಿತಿಗಳಲ್ಲಿದ್ದು ಪಠ್ಯಪುಸ್ತಕ ರಚಿಸಿದ್ದಾರೆ. ಸಂಸ್ಕೃತ ಕಲಿಯುವ, ಇಂಗ್ಲಿಷ್ ಕನ್ನಡ ಕಲಿಯುವ ವಿನೂತನ ಗ್ರಂಥಗಳನ್ನು, ಭಾಷಾಂತರ ಗ್ರಂಥಗಳನ್ನು ರಚಿಸಿದ್ದಾರೆ. ಪರೀಕ್ಷಾ ಸಮಿತಿಗಳಲ್ಲಿ, ಗ್ರಂಥ ಪ್ರಕಟನ ಸಮಿತಿಗಳಲ್ಲಿ ಕೆಲಸ ಮಾಡಿದ್ದಾರೆ. ನಮ್ಮ ನಾಡಿನಲ್ಲಿ ಶಿಕ್ಷಣರಂಗದಲ್ಲಿ ಆದರ್ಶ ರೀತಿಯಲ್ಲಿ ಸೇವೆ ಸಲ್ಲಿಸಿದ ಶಿಕ್ಷಣತಜ್ಞರಲ್ಲಿ ದೇವುಡು ಅವರ ಕೊಡುಗೆ ಅನನ್ಯವಾದುದು.

ಸ್ವಾತಂತ್ರ್ಯಪೂರ್ವದಲ್ಲಿ ಪತ್ರಿಕೆ ನಡೆಸಿ, ಸಂಘ ಕಟ್ಟಿ, ಮಕ್ಕಳೊಡನೆ ಬೆರೆತು ಅವರಿಗೆ ಕಥೆ ಹೇಳಿ, ಪದ್ಯ ಹಾಡಿ, ನಾಟಕ ಬರೆದು, ಮಕ್ಕಳ ನಡುವೆ ಮಕ್ಕಳಾಗಿ ಮಕ್ಕಳಿಗೆ ಸೇವೆ ಸಲ್ಲಿಸಿದವರ ಪೈಕಿ ಮಹಿಳಾ ಸಾಹಿತಿಗಳಲ್ಲಿ ಶ್ರೀಮತಿ ಆರ್.ಕಲ್ಯಾಣಮ್ಮನವರೂ, ಪುರುಷ ಸಾಹಿತಿಗಳಲ್ಲಿ ದೇವುಡು ಅವರೂ ಅಗ್ರಗಣ್ಯರು. ದೇವುಡು ಅವರು ಬರೆದ ೧೦೦ಕ್ಕೂ ಹೆಚ್ಚು ಕಥೆಗಳ ಮಕ್ಕಳಪುಸ್ತಕಗಳನ್ನು ಓದಿ ಬೆಳೆದ ಇಂದಿನ ಕಾಲದ ಎಲ್ಲ ಹಿರಿಯರು ಸಾಹಿತಿಗಳು ಗಣ್ಯರು ಆಗಿದ್ದಾರೆ. ಅವರ ದೇಶಾಂತರ ಕಥೆಗಳು, ಬುದ್ಧಿಯ ಕಥೆಗಳು, ಮಂಗಪ್ಪಾಜಿ ಪುರಾಣ, ಯವನ ಪುರಾಣ, ಭೀಮಸೇನ ಬೆಕ್ಕು, ಕಂದನ ಕಥೆಗಳು ಮುಂತಾದವನ್ನು ಓದಿ ನಕ್ಕು ನಲಿಯದ ಮಕ್ಕಳೇ ಆ ಕಾಲದಲ್ಲಿ ಇರಲಿಲ್ಲ.

ಮಕ್ಕಳಕೂಟದಲ್ಲಿ ಮಕ್ಕಳಿಗೆ ನೂರಾರು ಬಾರಿ ಕಥೆ ಹೇಳಿದ್ದಾರೆ. ನಾನು ವಿದ್ಯಾರ್ಥಿಯಾಗಿದ್ದಾಗ ಮಕ್ಕಳಕೂಟದ ಪಕ್ಕದಲ್ಲೇ ಇದ್ದ ಕೋಟೆ ಮಿಡ್ಲ್‌ಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಅವರಿಂದ ಮಕ್ಕಳ ಕಥೆಗಳನ್ನು ಕೇಳಿ ಆನಂದಿಸಿ ಮೆಲುಕು ಹಾಕುತ್ತಾ ಮನೆಗೆ ಹೋಗುತ್ತಿದ್ದೆ. ಒಮ್ಮೆ ಅವರು ಕಥೆ ಹೇಳಿದಾಗ ದೇಹಿ–ನಾಸ್ತಿ ಎಂಬ ಪದಗಳನ್ನು ಪ್ರಯೋಗಿಸಿದ್ದನ್ನು ಕಂಡು ಹಿರಿಯರೊಬ್ಬರು ಅವು ಮಕ್ಕಳ ಕಥೆ ಹೇಳುವಾಗ ಬಳಸುವ ಪದಗಳಲ್ಲ ಎಂದರು. ಆಗ ದೇವುಡು ಬಲಿ ಚಕ್ರವರ್ತಿಯ ಕಥೆ ಹೇಳುತ್ತಾ, 'ಬಲಿ ಚಕ್ರವರ್ತಿ ತನ್ನ ಬಳಿ ದೇಹಿ ಎಂದು ಬಂದವರಿಗೆಲ್ಲ (ಬೇಡಿದಂತೆ ಕೈತೋರಿಸುತ್ತಾ) ನಾಸ್ತಿ (ಇಲ್ಲ ಎನ್ನುತ್ತಿರಲಿಲ್ಲ ಎಂದು ಕೈತಿರುಗಿಸಿ ತೋರಿಸಿದರು) ಎನ್ನುತ್ತಿರಲಿಲ್ಲ. ಕಥೆ ಹೇಳುತ್ತಾ, 'ಮಕ್ಕಳೇ ನಾನು ಹೇಳಿದ ಮಾತು ಅರ್ಥವಾಯಿತೇ?' ಎಂದರು. ಎಲ್ಲ ಮಕ್ಕಳು, 'ಗೊತ್ತಾಯಿತು ನಾಸ್ತಿ ಎಂದರೆ ಇಲ್ಲ ಅಂತ, ದೇಹಿ ಎಂದರೆ ಬೇಕು ಎಂದರ್ಥ' ಎಂದು ದೇವುಡು ಹೇಳಿದಂತೆ ಕೈಗಳಿಂದ ಹಾವಭಾವ ತೋರಿಸಿದರು. ಪ್ರಶ್ನೆ ಕೇಳಿದ ಹಿರಿಯರು ತೆಪ್ಪಗಾದರು.

❑

೨೮. ನನಗೇನೂ ಬೇಡ – ದೇವಸ್ಥಾನಕ್ಕೆ ಜಾಗ ಕೊಡಿ

ಒಮ್ಮೆ ಬೆಂಗಳೂರಿನ ಮಹಾರಾಣಿ ಕಾಲೇಜಿನ ಬಳಿಯ ಓಣಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ದೇವುಡು ಗೀತಾ ಉಪನ್ಯಾಸ ಸಪ್ತಾಹ ಮಾಡಿದರು. ಆಗಿನ ಮುಖ್ಯಮಂತ್ರಿಗಳು ಕೆಂಗಲ್ ಹನುಮಂತಯ್ಯನವರು ಹಲವು ಸಚಿವರೊಡನೆ ಆ ಸಭೆಗೆ ಬಂದಿದ್ದರು. 'ದೇವುಡು ಅವರು ಏನು ಮಾತನಾಡುತ್ತಾರೆ, ಗೊಡ್ಡು ಶಾಸ್ತ್ರಿಯ ಭಾಷಣದಲ್ಲಿ ಏನಿರುತ್ತೆ' ಅಂತ ತಿರಸ್ಕಾರ ಭಾವದಿಂದ ಇದ್ದ ಇತರ ಸಚಿವರು ಮುಖ್ಯಮಂತ್ರಿಗಳ ಮಾತು ತೆಗೆದುಹಾಕಲಾರದೆ ಅವರ ಜತೆ ಬಂದಿದ್ದರಂತೆ. ದೇವುಡು ಅವರ ಭಾಷಣ ಕೇಳಿದ ಮೇಲೆ ಅವರ ಬಗ್ಗೆ ಪೂಜ್ಯ ಭಾವ ತಾಳಿ 'ನಿಮ್ಮ ಮಾತನ್ನು ಕೇಳದೆ ಇದುವರೆಗೆ ನಮ್ಮ ಜನ್ಮವನ್ನು ವ್ಯರ್ಥ ಮಾಡಿಕೊಂಡೆವು' ಎಂದರಂತೆ. ಮುಖ್ಯಮಂತ್ರಿಗಳು 'ನಿಮಗೇನು ಬೇಕು ಕೇಳಿ ಶಾಸ್ತ್ರಿಗಳೇ ಕೊಡ್ತೇನೆ. ಈಗ ನನಗೆ ಅಧಿಕಾರವಿದೆ' ಎಂದರಂತೆ. ಆಗ ದೇವುಡು ಅವರು 'ನನಗೇನೂ ಬೇಡ. ಈ ದೇವಸ್ಥಾನಕ್ಕೆ ಪ್ರವಚನಕ್ಕೆ, ದೇವರ ದರ್ಶನಕ್ಕೆ ಜನ ಬಂದರೆ ಸಾಕಷ್ಟು ಜಾಗ ಇಲ್ಲ. ದೇವಸ್ಥಾನಕ್ಕೆ ಸ್ವಲ್ಪ ಜಾಗ ಕೊಡಿ' ಅಂದರಂತೆ. ಆಗ ದೊರಕಿದ ಜಾಗದಲ್ಲಿ ಈಗ ಕಟ್ಟಡವಿದೆ. ಆಗ ಓಣಿಯಲ್ಲಿ ಆಂಜನೇಯನ ದೇವಸ್ಥಾನವಿತ್ತು. ಈಗ ಓಣಿ ಇಲ್ಲ, ಹೆಸರಿದೆ. ಆಂಜನೇಯ ಇದ್ದಾನೆ. ದೊಡ್ಡ ಕಟ್ಟಡವಿದೆ. ಎಲ್ಲ ದೇವುಡು ಪ್ರವಚನದ ಪ್ರಭಾವ!

❑

೨೯. ಕ್ರಾಪ್ ಇನ್ಶೂರೆನ್ಸ್ ಜಾರಿಗೆ ತರುವೆ

ದೇವುಡು ಅವರು ಕರ್ನಾಟಕ ಏಕೀಕರಣ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಗಣ್ಯ ಸಾಹಿತಿಗಳಲ್ಲಿ ಒಬ್ಬರು. ರಾಜಕೀಯ ವಿದ್ಯಮಾನಗಳೆಲ್ಲ ಗೊತ್ತಿದ್ದರೂ ರಾಜಕೀಯ ರಂಗವನ್ನು ಪ್ರವೇಶಿಸಲಿಲ್ಲ. ಅವರ ಮನೋಭಾವಕ್ಕೆ ರಾಜಕೀಯ ಒಗ್ಗುತ್ತಿರಲಿಲ್ಲ. ಇನ್ನೊಬ್ಬರ ಅಧೀನದಲ್ಲಿರುವುದು, ಮರ್ಜಿಯನ್ನು ಅನುಸರಿಸುವುದು ಅವರ ಜಾಯಮಾನ ಆಗಿರಲಿಲ್ಲ. ಒಂದು ರೀತಿಯಲ್ಲಿ ಒಂಟಿ ಸಲಗ ಅವರು. ವಯಸ್ಕರ ಶಿಕ್ಷಣ ಸಮಿತಿ ರಚನೆಯಾದಾಗ ಹನುಮಂತಯ್ಯನವರು ಯೋಜನೆಯನ್ನು ಕೊಟ್ಟ ದೇವುಡು ಅವರನ್ನು ಕುರಿತು ನೀವೇ ಅದಕ್ಕೆ ಅಧ್ಯಕ್ಷರಾಗಿ ಎಂದಾಗ ಒಲ್ಲದೆ ಸಿ.ಕೆ.ವೆಂಕಟರಾಮಯ್ಯ ಅವರ ಹೆಸರನ್ನು ಸೂಚಿಸಿದರು.

ಇಂಥ ಮನೋಭಾವದ ಶಾಸ್ತ್ರಿಗಳು ಅನಿವಾರ್ಯವಾಗಿ ಮಿತ್ರರ ಒತ್ತಾಯದ ಮೇರೆಗೆ ಸ್ಥಳೀಯ ಚುನಾವಣೆಗೆ ಉಮೇದುವಾರರಾಗಿ ನಿಂತರು. ಎಲ್ಲಿಯೂ ಪ್ರಚಾರ ಮಾಡಲಿಲ್ಲ. ನನಗೆ ಓಟು ಕೊಡಿ ಎಂದು ಕೇಳಲಿಲ್ಲ. ಜನಕ್ಕೆ ಬೇಕಿದ್ದರೆ ಆರಿಸುತ್ತಾರೆ ಎಂದು ಭಾವಿಸಿದರು. 'ಜನಕ್ಕೆ ನೀವು ಅಭ್ಯರ್ಥಿ ಎಂದು ತಿಳಿಯುವುದು ಹೇಗೆ?' ಎಂದು ಮಿತ್ರರು ಕೇಳಿದಾಗ, 'ನಾನು ದೇವುಡು, ಚುನಾವಣಾ ಅಭ್ಯರ್ಥಿ' ಎಂದು ಬೋರ್ಡು ತಗುಲಿಹಾಕಿಕೊಂಡು ಓಡಾಡಿದರು. ಅಲ್ಲಲ್ಲಿ ಭಾಷಣ ಮಾಡಿದರು. ಅವರು ಚುನಾವಣಾ ಭಾಷಣದಲ್ಲಿ ಆಡುತ್ತಿದ್ದ ಮಾತುಗಳು, ಮಂಡಿಸುತ್ತಿದ್ದ ವಿಚಾರಗಳು ಅದ್ಭುತವಾಗಿದ್ದವು. ಒಮ್ಮೆ ಚುನಾವಣಾ ಭಾಷಣದಲ್ಲಿ, 'ನಾನೇನಾದರೂ ಆರಿಸಿ ಬಂದರೆ ಕ್ರಾಪ್ ಇನ್ಶೂರೆನ್ಸ್ (ಬೆಳೆ ವಿಮೆ) ಜಾರಿಗೆ ತರುತ್ತೇನೆ' ಎಂದು ಹೇಳಿದರು. ಭಾಷಣ ಕೇಳುತ್ತಿದ್ದವರಲ್ಲಿ ಒಬ್ಬರು ಹಾಸ್ಯ ಮಾಡಿದರು 'ಕ್ರಾಪ್ ಇಲ್ಲದ ಈ ಆಸಾಮಿ ಕ್ರಾಪ್ ಇನ್ಶೂರೆನ್ಸ್ ಜಾರಿಗೆ ತರುತ್ತಾರಂತೆ' ಎಂದು. ಆದರೆ ಇಂದು ಬೆಳೆವಿಮೆ ಜಾರಿಯಾಗಿ ದೇವುಡು ಅವರ ದೂರದೃಷ್ಟಿಯ ಮಾತು ನಿಜವಾಗಿದೆ.

ಪ್ರಚಾರ, ಪ್ರಭಾವ, ವಶೀಲಿ ಇಲ್ಲದ ಸತ್ಯಸಂಧರು ಚುನಾವಣೆ ಗೆಲ್ಲಲು ಸಾಧ್ಯವೇ? ದೇವುಡು ಚುನಾವಣೆಯಲ್ಲಿ ಸೋತರು.

❑

೩೦. ಬಾಲ್ಯದಲ್ಲೇ ದೈವಕೃಪೆ ಪಡೆದ ಸಾಹಿತಿ

ದೇವುಡು ಅವರು ದೈವಭಕ್ತರು ಅವಧೂತರು, ದೈವಸಿದ್ಧಿ ಪಡೆದವರು, ಬಾಲ್ಯದಲ್ಲೇ ದೇವೀಕೃಪಾಕಟಾಕ್ಷಕ್ಕೆ ಒಳಗಾದವರು. ದತ್ತಾತ್ರೇಯನ ಉಪಾಸಕರು. ಅವರ ಬಾಲ್ಯದ ಆತ್ಮಕಥನ ಪ್ರಸಂಗವೊಂದು ಅವರಿಗೆ ದೇವೀಕೃಪೆ ಬಾಲ್ಯದಲ್ಲೇ ಒದಗಿದ್ದಕ್ಕೆ ಸಾಕ್ಷಿ ಆಗಿದೆ.

ದೇವುಡು ಅವರು ಮೈಸೂರಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದರು. ೧೯೦೬ರ ಸುಮಾರಿನಲ್ಲಿ ಬಾಲಕ ದೇವುಡು ಅವರನ್ನು ಅವರಮ್ಮ ಮನೆಯಲ್ಲಿ ಸೀಮೆಎಣ್ಣೆ ದೀಪದ ಚಿಮಣಿಗೆ ಗಾಜಿನ ಬುರುಡೆ ತರಲು ಕಳಿಸಿದರು. ಎರಡಾಣೆ ಕೊಟ್ಟು, ಜತೆಗೆ ಚಿಕ್ಕ ಹುಡುಗ ಆದ್ದರಿಂದ ಜತೆಗಿರಲಿ ಎಂದು ಮನೆಯಲ್ಲಿದ್ದ ರಾಮು ಎಂಬ ದಡ್ಡಶಿಖಾಮಣಿಯನ್ನು ಕಳಿಸಿದರು. ಗೋಡೆಲ್ಯಾಂಪಿನ ಚಿಮಣಿಯ ಗಾಜಿನ ಬುರುಡೆಯನ್ನು ಒಂದಾಣೆ ಒಂಬತ್ತು ಕಾಸು ಬೆಲೆ ಕೊಟ್ಟು ಕೊಂಡರು. ಮಾಸ್ತಿ ಉಳಿದ ಮೂರು ಕಾಸಿಗೆ ಕಡಲೆಪುರಿ ಕೊಂಡು ತಿನ್ನುತ್ತಾ ಕುಣಿದಾಡುತ್ತಾ ಬಂದರು. ದಾರಿಯಲ್ಲಿ ರಸ್ತೆ ಅಂಚಿನ ಕಟ್ಟೆಯ ಮೇಲೆ ಬರುತ್ತಿದ್ದರು. ದೇವುಡು ಜಾರಿಬಿದ್ದರು. ಚಿಮಣಿ ಒಡೆಯಿತು. ತಕ್ಷಣ ದೇವುಡು ಅವರಿಗೆ ಅವರ ತಾಯಿಯ ನೆನಪಾಯಿತು. ಕೈಯಲ್ಲಿ ಸಿಕ್ಕಿದುದರಲ್ಲಿ ಹೊಡೆಯುವ ತಾಯಿಯ ಚಿತ್ರ ಕಣ್ಣ ಮುಂದೆ ಬಂತು. ದಿಗಿಲಾಗಿ ಅಳಲು ಶುರು ಮಾಡಿದರು. ರೋದನ ಹೆಚ್ಚಾಗಲು ಸುಮಾರು ೪೦-೪೫ ಜನ ಸೇರಿದರು. ವಯಸ್ಸಾದ ಹೆಂಗಸು ಒಬ್ಬಳು ಬಂದಳು, ಹಣೆತುಂಬ ಕುಂಕುಮ, ತಲೆತುಂಬ ಮುಸುಕು, ಬಾಯಿತುಂಬ ಎಲೆ ಅಡಿಕೆ, ಸುತ್ತಲಿನ ಜನರನ್ನೆಲ್ಲಾ ತಳಿಕೊಂಡು ಬಂದು ದೇವುಡು ಅವರನ್ನು 'ಯಾಕಪ್ಪಾ ಅಳುತ್ತೀ, ಏನಪ್ಪಾ ಆಯಿತು?' ಅಂತ ಕೇಳಿ ಅವನ ಕಣ್ಣೀರನ್ನು ಒರೆಸಿ, ವಿಷಯ ತಿಳಿದುಕೊಂಡಳು. ಇಷ್ಟೇನಾ ಎಂದು ತನ್ನ ಎಲೆ ಅಡಿಕೆ ಚೀಲದಿಂದ ಎರಡಾಣೆ ತೆಗೆದುಕೊಟ್ಟು ದೃಷ್ಟಿ ನಿವಾಳಿಸಿ ನೆಟಿಕೆ ಮುರಿದು ತನ್ನ ಪಾಡಿಗೆ ತಾನು ಹೊರಟುಹೋದಳು. ಹತ್ತಾರು ವರ್ಷಗಳಾದ ಮೇಲೂ ದೇವುಡು ಅವರು ತಮ್ಮ ಮಿತ್ರರ ಬಳಿ ಈ ಮಾತು ಹೇಳುತ್ತಿದ್ದರು. 'ಆಗ ನಡೆದುದೆಲ್ಲ ವಿವರವಾಗಿ ಈಗಲೂ ಒಂದಿಷ್ಟೂ ತಪ್ಪದೆ ಮನಸ್ಸಿನ ರಜತಪರದೆಯ ಮೇಲೆ ಕಂಡಂತೆ ಸ್ಪಷ್ಟವಾಗಿ ಕಾಣುತ್ತದೆ. ಆ ತಾಯಿಯ ನೆನಪು, ವಾತ್ಸಲ್ಯ, ನೋಟ, ಮಾತು, ಪ್ರೀತಿ ಮನಸ್ಸಿನಲ್ಲಿ, ಹೃದಯದಲ್ಲಿ ವಜ್ರಖಚಿತವಾಗಿದೆ. ಆಕೆಯ ನೆನಪು, ಅನುಗ್ರಹ ಇಂದಿಗೂ ನನ್ನನ್ನು ದಯೆಯತ್ತ ನಡೆಸುತ್ತಿದೆ. ಈ ನನ್ನ ಕೈ, ಸುರಿವ ಕಂಬನಿ ಒರೆಸಿ ನಗೆಯುಂಟುಮಾಡಲು ಕಾರಣವಾಗಿರುವ ಕೈದೀವಿಗೆ, ಆ ತಾಯಿಯ ನೆನಪು' ಎಂದಿದ್ದಾರೆ. ದೇವುಡು ರಚಿಸಿದ ಕಾದಂಬರಿಗಳ ಪ್ರಕಾಶಕ, ನನ್ನ ಆಪ್ತಮಿತ್ರ ಶಾರದಾ ಪ್ರಕಾಶನದ ಬಸವರಾಜ್ ಈ ವಿಷಯವನ್ನು ಹೇಳಿದರು.

❑

೩೧. ಕಾದಂಬರಿತ್ರಯದ ಅವಧೂತ

ಶೃಂಗೇರಿ ಜಗದ್ಗುರುಗಳಿಂದ ಮಂತ್ರೋಪದೇಶ ಪಡೆದು 'ದತ್ತಸಿದ್ಧಿ' ಪಡೆದ ದೇವುಡು ಅವರು ಗಾಯಿತ್ರಿ ಸಾಕ್ಷಾತ್ಕಾರ ಹೊಂದಿದವರು. ಅವರ ಅಧ್ಯಾತ್ಮಸಿದ್ಧಿ ಹೊರಜಗತ್ತಿಗೆ ಅಷ್ಟಾಗಿ ತಿಳಿದಿಲ್ಲ. ಬೇಂದ್ರೆ ಅವರು ದೇವುಡು ಅವರನ್ನು ಅವಧೂತರೆಂದು ತಿಳಿದಿದ್ದರು. ದೇವುಡು ಅವರನ್ನು ಕುರಿತು ಬೇಂದ್ರೆ ಅವರು ಬರೆದ ಪದ್ಯವೊಂದರಲ್ಲಿ.

ಬಾಲನಂಥ ದೇವುಡು । ಉನ್ಮತ್ತನಾದ ದೇವುಡು ।
ಜಡ-ಪಿಶಾಚಿ ದೇವುಡು । ಹುಚ್ಚು-ಮರುಳು ದೇವುಡು
ಜೀವನವೇ ನಾಟಕ । ತಾನೂ ಒಬ್ಬ ನಾಟಕ
ಆಟವೋ ಬೂಟಾಟವೋ ನೋಟವೆಂದ ದೇವುಡು

ಎಂದಿದ್ದಾರೆ. ದೇವುಡು ಅವರು ತಮ್ಮ ಅಧ್ಯಾತ್ಮ ಸಿದ್ಧಿಯ ಫಲವನ್ನು ಸಾಂದರ್ಭಿಕವಾಗಿ ಇತರರಿಗೂ ನೀಡಿದ್ದಾರೆ. ಆದರೆ ಅದು ಗುಪ್ತದಾನ.

ಅರಮನೆಯ ಶ್ರೀ ಚೆಲುವಾಜಮ್ಮಣ್ಣಿ ಅವರಿಗೆ ಗೌರೀ ಪಂಚಾಕ್ಷರೀ ಉಪದೇಶ ಮಾಡಿದರು. ೧೯೪೩ರಲ್ಲಿ ಹಿರಿಯೂರಿನಲ್ಲಿ ರಾಮೋತ್ಸವ ಸಂದರ್ಭದಲ್ಲಿ ಉಪನ್ಯಾಸಕ್ಕೆ ಹೋದಾಗ ವ್ಯವಸ್ಥಾಪಕರೂ ಶಾಲಾ ಮುಖ್ಯೋಪಾಧ್ಯಾಯರೂ ಆದ ವೆಂಕಟೇಶಯ್ಯ ಅವರು ಹಾಸಿಗೆ ಹಿಡಿದು ಮಲಗಿದ್ದಾಗ ಅವರ ಕೈ ಹಿಡಿದು ಹತ್ತಿಪ್ಪತ್ತು ಕ್ಷಣ ಧ್ಯಾನ ಮಾಡಿ ಅವರ ಸುಸ್ತು, ಜ್ವರವನ್ನು ಪೂರ್ಣವಾಗಿ ಮಂಗಮಾಯ ಮಾಡಿದರು. 'ಲೋಕದಲ್ಲಿ ಜಡ-ಚೇತನ ಎಂದು ಸೃಷ್ಟಿ ಎರಡು ವಿಧವಾಗಿದ್ದರೂ ಜಡ ಚಲಿಸಿದರೆ ಚೇತನವಾಗುತ್ತದೆ. ಚೇತನ ಇಲ್ಲದಿದ್ದರೆ ಜಡವಾಗುತ್ತದೆ. ಈ ಅನುಭವ ನೋಡುವವರ ವಿಧಾನದ ಮೇಲೆ ನಿಂತಿದೆ' ಎಂದು ಅತೀತಾನುಭವವನ್ನು ಕುರಿತು ಒಂದೆಡೆ ದೇವುಡು ವಿವರಿಸಿದ್ದಾರೆ. ಇಂಥಾ ಅಧ್ಯಾತ್ಮ ಸಿದ್ಧಿ ಇದ್ದುದರಿಂದಲೇ ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನದಂಥ ಅಪೂರ್ವ ಧಾರ್ಮಿಕ ಕಾದಂಬರಿತ್ರಯ ಬರೆಯಲು ಸಾಧ್ಯವಾಯಿತು.

❑

೩೨. ಜಗತ್ತಿನಲ್ಲಿ ಯಾರೂ ನನ್ನನ್ನು ಕೊಳ್ಳಲಾರರು

ದೇವುಡು ಅವರು ಕೇವಲ ಸಾಹಿತಿ, ವೇದಾಂತಿ ಶಿಕ್ಷಣತಜ್ಞ ಅಷ್ಟೇ ಆಗಿರಲಿಲ್ಲ. ದೇಶಪ್ರೇಮಿ, ಭಾಷಾಪ್ರೇಮಿ ಆಗಿದ್ದರು. ಗಾಂಧಿಭಕ್ತರಾಗಿದ್ದರು. ಗಾಂಧಿಸೇವಾನಿಷ್ಠರಾದ ಸಿದ್ದವನಹಳ್ಳಿ ಕೃಷ್ಣಶರ್ಮ, ತಿ.ತಾ.ಶರ್ಮ ಮೊದಲಾದವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದವರು. ಒಂದು ಕಾಲದಲ್ಲಿ ನಿಷ್ಠಾವಂತ ಕಾಂಗ್ರೆಸ್ಸಿಗರಲ್ಲಿ ದೇವುಡು ಅವರೂ ಒಬ್ಬರಾಗಿದ್ದರು. ೧೯೩೬ರಲ್ಲಿ ಗಾಂಧೀಜಿ ನಾಲ್ವಡಿ ಕೃಷ್ಣರಾಜ ಒಡೆಯರ ಆಹ್ವಾನದ ಮೇರೆಗೆ ಬೆಂಗಳೂರಿಗೆ ಬಂದಾಗ ಗಾಂಧಿಬಿಡಾರದಲ್ಲಿ ಸ್ವಯಂಸೇವಕರ ಮೇಲ್ವಿಚಾರಣೆ ವಹಿಸಿದವರು ದೇವುಡು ಅವರು. ಅವರ ಕೈ ಕೆಳಗೆ ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದವರಲ್ಲಿ ನ್ಯಾಷನಲ್ ಕಾಲೇಜಿನ ಡಾ.ಎಚ್.ನರಸಿಂಹಯ್ಯನವರೂ ಒಬ್ಬರಾಗಿದ್ದರು.

ರಾಜಕೀಯ ಚಳುವಳಿಗಳ ಸಭೆಗಳಲ್ಲಿ ಗುಂಡೇಟಿಗೂ ಜಗ್ಗದೆ ಭಾಗವಹಿಸುತ್ತಿದ್ದವರು ದೇವುಡು ಅವರು. ೧೯೩೦ರಲ್ಲಿ ನಾರೀಮನ್ ಗಲಾಟೆಯ ಚಳುವಳಿ ನಡೆದಾಗ ಬೆಂಗಳೂರಿನ ಮೈಸೂರು ಬ್ಯಾಂಕ್ ಚೌಕದ ಬಳಿ ಉಜ್ವಲ ಭಾಷಣ ಮಾಡಿ ಗೋಲಿಬಾರಿನಲ್ಲಿ ಗಾಯಗೊಂಡವರು ದೇವುಡು. ೧೯೨೮ರಲ್ಲಿ ಬೆಂಗಳೂರಿನ ಸುಲ್ತಾನ್ ಪೇಟೆ ಗಣಪತಿ ಗಲಭೆಯ ಸಭೆಯೊಂದು ಬಳೇಪೇಟೆ ಚೌಕದಲ್ಲಿ ನಡೆದಾಗ ಗುಂಡಿನ ಮಳೆಯನ್ನು ಪೊಲೀಸರು ಸುರಿಸಿದರು. ಆಗ ಆ ಗುಂಡಿನ ಸುರಿಮಳೆಯ ನಡುವೆ ಜೀವದ ಹಂಗು ತೊರೆದು ನುಗ್ಗಿ ಹಣ್ಣು ಹಣ್ಣು ವೃದ್ಧರೊಬ್ಬರನ್ನು ರಕ್ಷಿಸಿದವರು ದೇವುಡು ಅವರು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮೆರವಣಿಗೆಯಲ್ಲಿ ಪೊಲೀಸರನ್ನು ಪ್ರತಿಭಟಿಸಿ ಮುನ್ನುಗ್ಗಿ ಬಲವಾಗಿ ಲಾಠಿ ಏಟು ತಿಂದು ಹಲವಾರು ತಿಂಗಳು ನರಳಿದವರು ದೇವುಡು ಅವರು. ಇಂಥ ಸಾಹಸಗಳು ಅದೆಷ್ಟೋ. ಸ್ವಾತಂತ್ರ್ಯ ಹೋರಾಟದಲ್ಲಿ ಹೀಗೆ ನಿರಂತರ ಭಾಗವಹಿಸಿದ ಅವರು ಸ್ವಾತಂತ್ರ್ಯ ಬಂದ ಮೇಲೆ ಸರ್ಕಾರದಿಂದ ಪೆನ್ಷನ್, ಸೈಟ್, ಪ್ರಶಸ್ತಿ, ಮಾಸಾಶನ ಯಾವುದನ್ನೂ ಬಯಸದೆ ಅದನ್ನು ಕೊಟ್ಟರೂ ಬೇಡವೆಂದು ತಿರಸ್ಕರಿಸಿದ ಅಪ್ಪಟ ದೇಶಪ್ರೇಮಿ. ಒಮ್ಮೆ ಸ್ವಾತಂತ್ರ್ಯ ಹೋರಾಟದಲ್ಲಿ ಇವರ ಪ್ರಭಾವವನ್ನು ತಡೆಯಲಾಗದೆ ದಿವಾನರೊಬ್ಬರು ಇವರಿಗೆ 'ನೀವು ರಾಜಕಾರಣದಿಂದ ನಿವೃತ್ತರಾಗುವುದಾದರೆ ಸರಕಾರದಿಂದ ಪ್ರತಿ ತಿಂಗಳೂ ನಿವೃತ್ತಿ ವೇತನ ದೊರೆಯುವಂತೆ ಇತರ ಸೌಲಭ್ಯ ಪಡೆಯುವಂತೆ ಏರ್ಪಾಡು ಮಾಡುತ್ತೇನೆ' ಎಂದರಂತೆ. ಆಗ ದೇವುಡು ನಕ್ಕು, 'ನೀವು ನನ್ನ ಬೆಲೆ ಎಷ್ಟು ಅಂತ ತಿಳಿದಿಲ್ಲ. ನನ್ನ ದೇಶಪ್ರೇಮದ ಬೆಲೆ ಎಷ್ಟಿದೆ ಎಂದರೆ, ಜಗತ್ತಿನಲ್ಲಿ ಯಾವ ಕೋಟ್ಯಧೀಶನೇ ಆಗಲಿ ಸರಕಾರವೇ ಆಗಲಿ ನನ್ನನ್ನು ಕೊಳ್ಳಲಾರರು' ಎಂದರಂತೆ.

❑

೩೩. ಅತಿಥಿ ಸತ್ಕಾರದಲ್ಲಿ ಅಗ್ರಗಣ್ಯ ವಿದ್ವನ್ಮಣಿ

ಅತಿಥಿ ಸತ್ಕಾರಕ್ಕೆ ಬಡತನಕ್ಕೆ ಸಂಬಂಧವಿಲ್ಲ ಎಂದು ದೇವುಡು ತಮ್ಮ ಜೀವನದಲ್ಲಿ ಅನೇಕ ಬಾರಿ ತೋರಿಸಿಕೊಟ್ಟಿದ್ದಾರೆ. ದೀನಾರ್ತರನ್ನು ಕಂಡರೆ ಅವರ ಹೃದಯ ಕರಗುತ್ತಿತ್ತು. ಸಂಪದ್ಗಿರಿ ರಾಯರು ಹೇಳುವಂತೆ 'ದೇವುಡು ಅವರ ಎರಡು ಕಣ್ಣುಗಳು ಎರಡು ನೀರಿನ ಟ್ಯಾಂಕುಗಳಾಗಿದ್ದವು. ಕಷ್ಟ ಕಾರ್ಪಣ್ಯದಲ್ಲಿರುವವರನ್ನು ಕಂಡರೆ ಸಾಕು, ಅವು ಧುಮ್ಮಿಕ್ಕುತ್ತಿದ್ದವು.'

ಒಮ್ಮೆ ಅವರ ಪತ್ನಿ ಗೌರಮ್ಮನವರು 'ಮನೆಯಲ್ಲಿ ಈವತ್ತು ಒಂದು ಅಕ್ಕಿ ಕಾಳೂ ಇಲ್ಲ. ಬರುವವರಿಗೆ ಇರಲಿ, ಇರುವವರಿಗೂ ಊಟವಿಲ್ಲ' ಎಂದರು. ಆಗ ದೇವುಡು ಪ್ರಕಾಶಕರೊಬ್ಬರ ಬಳಿಗೆ ಹೋಗಿ ಪುಸ್ತಕವೊಂದನ್ನು ವಾರದೊಳಗೆ ಬರೆದುಕೊಡುವ ಭರವಸೆ ಕೊಟ್ಟು ಸಾಕಷ್ಟು ಹಣ ತಂದರು. ಮನೆಗೆ ಬರುವ ವೇಳೆಗೆ ಸರಿಯಾಗಿ ಮಿತ್ರರೊಬ್ಬರು ತಮ್ಮ ಸಂಕಷ್ಟ ಸ್ಥಿತಿ ಹೇಳಿಕೊಂಡಾಗ ಸಾಲವಾಗಿ ತಂದ ಹಣದಲ್ಲಿ ಅಂದು ಊಟದ ಖರ್ಚಿಗೆ ಅಂತ ೫ ರೂ. ಉಳಿಸಿಕೊಂಡು ಉಳಿದ ಹಣವನ್ನೆಲ್ಲಾ ಅವನ ಕೈಗಿಟ್ಟು, 'ಈ ಹೊತ್ತು ಊಟಕ್ಕೆ ಅಂತ ೫ ರೂ. ಇಟ್ಟುಕೊಂಡಿದ್ದೇನೆ ಉಳಿದಿದ್ದೆಲ್ಲಾ ಕೊಟ್ಟಿದ್ದೇನೆ. ದೇವರು ನಿನಗೆ ಒಳ್ಳೆಯದು ಮಾಡಲಿ' ಎಂದರು. ಆ ಹಣವನ್ನು ಮತ್ತೆ ಇವರು ಕೇಳಲಿಲ್ಲ, ಅವರೂ ಕೊಡಲಿಲ್ಲ.

ಎಷ್ಟೋ ಸಲ ಮನೆಯಲ್ಲಿ ಆಹಾರ ಪದಾರ್ಥಗಳು ಎಷ್ಟು ಖಾಲಿ ಇರುತ್ತಿತ್ತು ಎಂದರೆ, ಒಮ್ಮೆ ಬೆಳಗೆರೆ ಕೃಷ್ಣಶಾಸ್ತ್ರಿಗಳು ಅವರ ಮನೆಗೆ ಬಂದಾಗ ದೇವುಡು ಅವರು, 'ಕೃಷ್ಣಶಾಸ್ತ್ರಿಗಳು ಬಂದಿದ್ದಾರೆ. ಏನಾದರೂ ಕೊಡು' ಎಂದರು. ಮನೆಯೆಲ್ಲ ತಡಕಾಡಿದರೂ ಏನೂ ಇರಲಿಲ್ಲ. ಕೊನೆಗೆ ಡಬ್ಬವೊಂದರ ಬುಡದಲ್ಲಿ ಸೇರಿಕೊಂಡಿದ್ದ ೨ ಕೋಡುಬಳೆ ತಂದು ಮುಂದಿಟ್ಟರು. ಆಗ ದೇವುಡು ನಗುತ್ತಾ 'ಬೆಳೆಗೆರೆಯ ಬಚ್ಚುಬಾಯಿ ನೋಡಿಲ್ವಾ ನೀನು? ಕೋಡುಬಳೆ ತಂದಿಟ್ಟಿದ್ದೀಯಲ್ಲಾ' ಎಂದರು. ಅವರು ಕಣ್ ಕಣ್ ಬಿಟ್ಟಾಗ ದೇವುಡುಗೆ ಮನೆಯಲ್ಲಿ ಏನೂ ಇಲ್ಲ ಎಂದು ತಿಳಿಯಿತು. ಆಗ ದೇವುಡು 'ಹೋಗಲಿ ಬಿಡು, ಕೃಷ್ಣಶಾಸ್ತ್ರಿ ಏನೂ ತಿಳಿದುಕೊಳ್ಳೋದಿಲ್ಲ. ಮನೆಯಲ್ಲಿ ಏನೂ ಇಲ್ಲ ಅಂತ ಹೇಳಲು ಸಂಕೋಚ ಪಡಬೇಕಾಗಿಲ್ಲ. ಒಂದು ಲೋಟ ಮಜ್ಜಿಗೆ ಕೊಡು' ಎಂದರು.

❑

೩೪. ರಸ್ತೆಯಲ್ಲಿ ಹೆಣ್ಣುಮಕ್ಕಳನ್ನು ನೋಡುವುದಿಲ್ಲ

ಪಂಡಿತವರೇಣ್ಯ ಎಂ.ಆರ್.ಶ್ರೀ. ಅವರ ವ್ಯಕ್ತಿತ್ವದ ಇನ್ನೊಂದು ಮುಖ ಎಂದರೆ ವಿನೋದಪರತೆ. ಇದಕ್ಕೆ ಹತ್ತಾರು ನಿದರ್ಶನಗಳನ್ನು ನೀಡಬಹುದು. ನಾನು ಕಂಡ ಒಂದು ಪ್ರಸಂಗ: ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಮಧ್ಯಾಹ್ನ ಊಟಕ್ಕೆ ಮನೆಗೆ ಹೋಗುತ್ತಿದ್ದರು (ಆಗ ಪರಿಷತ್ತು ಬೆಳಿಗ್ಗೆ ೯ ರಿಂದ ೧೨, ಸಂಜೆ ೪ರಿಂದ ೭ರ ವರೆಗೆ ತೆರೆದಿರುತ್ತಿತ್ತು. ಈಗಿನ ಹಾಗೆ ಸರಕಾರಿ ಕಚೇರಿ ಆಗಿರಲಿಲ್ಲ). ಅವರ ಮನೆಯಿಂದ ಸ್ವಲ್ಪ ದೂರದಲ್ಲಿ ನಮ್ಮ ಮನೆ ಇತ್ತು. ಅದೇ ವೇಳೆ ಶಾಲೆಯಿಂದ ನಮ್ಮ ಮನೆಗೆ ಹೋಗುತ್ತಿದ್ದೆ. ಅವರ ಜತೆಯಲ್ಲಿ ನಾನೂ ಹೋಗುತ್ತಿದ್ದೆ. ಒಮ್ಮೆ ಚಾಮರಾಜಪೇಟೆ ನಾಲ್ಕನೇ ರಸ್ತೆಯಲ್ಲಿ ಅವರ ಮನೆಯ ಬಳಿ ಅವರು ಬರುವ ವೇಳೆಗೆ ಅವರ ಶ್ರೀಮತಿಯವರು ಸರಸರನೇ 'ರೀ, ರೀ' ಎಂದು ಕರೆಯುತ್ತಾ ಬಂದರು, ಎಂ.ಆರ್.ಶ್ರೀ. ತಲೆ ಎತ್ತಿ ನೋಡದೇ ಮನೆ ಬಾಗಿಲವರೆಗೆ ಬಂದರು. ಬಾಗಿಲಲ್ಲಿ ಅವರ ಮನೆಯವರು, 'ಅಲ್ಲಿಂದ ರಸ್ತೇಲಿ ನಿಮ್ಮನ್ನು ಕೂಗುತ್ತಾ ಬರುತ್ತಲೇ ಇದ್ದೀನಿ, ನೀವು ತಲೆಯೆತ್ತಿ ನೋಡೋದೇ ಬೇಡವಾ?' ಎಂದರು. (ಆಗ ಅವರು ಮನೆಗೆ ಬಂದ ನೆಂಟರಿಗೆ ವಿಳ್ಳೇದೆಲೆ, ತೆಂಗಿನಕಾಯಿ, ಇತ್ಯಾದಿ ಅಂಗಡಿಯಿಂದ ತರಲು ಹೊರಟಿದ್ದರು) ಅದಕ್ಕೆ ಎಂ.ಆರ್.ಶ್ರೀ. ಅವರು ಪ್ರಶಾಂತವಾಗಿ ಹೇಳಿದರು, 'ಲೇ, ನನಗೆ ರಸ್ತೇಲಿ ಹೆಂಗಸರ ಕಡೆ ತಲೆ ಎತ್ತಿ ನೋಡೋ ಅಭ್ಯಾಸವಿಲ್ಲ ಕಣೆ.' ಈ ಸಂದರ್ಭದಲ್ಲಿ ನಾನು ಅವರ ಮಗ ನನ್ನ ಗೆಳೆಯ ಭೀಮನನ್ನು ನೋಡಲು ಅವರೊಡನೆ ಅವರ ಮನೆಗೆ ಹೊರಟಿದ್ದೆ.

❑

೩೫. ತಿಂಡಿ ಪ್ರಮಾಣ ಊಟದ ಪ್ರಮಾಣದಷ್ಟು ಇರಲಿ

ಇನ್ನೊಂದು ಪ್ರಸಂಗವನ್ನು ಹಾ.ಮಾ.ನಾ ಅವರು ವಿವರಿಸಿದ್ದಾರೆ: ಹಾ.ಮಾ.ನಾ. ಅವರ ಅತಿಥಿಗಳಾಗಿ ಭಾರತದ ಗಮಕಿ ಬಿಂದೂರಾಯರು, ಶ್ರೀನಿವಾಸಮೂರ್ತಿಗಳು ಅವರ ಮನೆಗೆ ಬಂದಿದ್ದರು. ಅಂದು ಗುರುವಾರವಾದ್ದರಿಂದ ಗಮಕಿ ಬಿಂದೂರಾಯರು (ಸಂಪ್ರದಾಯಸ್ಥರು) ರಾತ್ರಿ ಊಟ ಮಾಡುವುದಿಲ್ಲ, ಫಲಾಹಾರ ಸ್ವೀಕರಿಸುತ್ತೇನೆ ಎಂದರು. ಬೆಳಿಗ್ಗೆಯಿಂದ ಕಾರ್ಯಕ್ರಮ ಬಾಹುಳ್ಯದಿಂದ ಬಿಂದೂರಾಯರು ಊಟ ಮಾಡಿರಲಿಲ್ಲ ಆಗ ಶ್ರೀನಿವಾಸಮೂರ್ತಿಗಳು ಹಾ.ಮಾ.ನಾ. ಅವರಿಗೆ ಹೇಳಿದರಂತೆ: 'ನೋಡಪ್ಪಾ, ಫಲಾಹಾರದ ಪ್ರಮಾಣ ಊಟಕ್ಕಿಂತ ಕಡಿಮೆ ಆಗಿರಬಾರದು!' 'ಅರ್ಥವಾಯಿತು' ಎಂದರಂತೆ ಹಾ.ಮಾ.ನಾ. ಅವರು.

ಶ್ರೀನಿವಾಸಮೂರ್ತಿಗಳ ಇನ್ನೊಂದು ಪ್ರಸಂಗ ನೆನಪಾಗುತ್ತದೆ. ಅವರೊಮ್ಮೆ ಸಂಸಾರ ಸಮೇತ ಮೈಸೂರಿಗೆ ಹೋಗಿ ಪರಿಚಿತ ಹೋಟೆಲಲ್ಲಿ ಇಳಿದಿದ್ದರು. ಹೋಟೆಲಿನವನು ಇವರಿಗೆ ಸಾಕಷ್ಟು ಪರಿಚಯ ಇದ್ದವನು. ಪ್ರತಿಸಲ ಎಂ.ಆರ್.ಶ್ರೀ. ಮೈಸೂರಿಗೆ ಬಂದಾಗ ಆ ಹೋಟೆಲಲ್ಲಿ ಇಳಿದುಕೊಳ್ಳುತ್ತಿದ್ದರು. 'ಈ ಸಲ ಏನು ಬಂದಿದ್ದೀರಿ?' ಎಂದು ಲೋಕಾಭಿರಾಮವಾಗಿ ಕೇಳಿದ. 'ಸ್ವಲ್ಪ ಆರಾಮವಾಗಿ ಇರೋಣ ಅಂತ ಬಂದಿದ್ದೇನೆ' ಅಂದಾಗ, 'ಮತ್ತೆ ಸಂಸಾರಾನ ಕರೆದುಕೊಂಡು ಬಂದಿದ್ದೀರ!' ಅಂದ ವಿನೋದವಾಗಿ. ಅದಕ್ಕೆ ಎಂ.ಆರ್.ಶ್ರೀ. 'ಸಜ್ಜನ ಗೃಹಸ್ಥರು ಪ್ರವಾಸದಲ್ಲಿ ಆರಾಮವಾಗಿ ಹೋಟೆಲಲ್ಲಿ ಇರೋದು ಸಂಸಾರದವರೊಂದಿಗೆ ನಿಮಗೆ ತಿಳಿದಿಲ್ಲವೇ?' ಎಂದರಂತೆ. 'ನಮ್ಮಲ್ಲಿ ಎಷ್ಟೋ ಸಲ ಆರಾಮವಾಗಿ ಇರಲು ಕೆಲವು ಗೃಹಸ್ಥರು ಸಂಸಾರ ಬಿಟ್ಟು ಬರುತ್ತಾರೆ, ಅದಕ್ಕೆ ಕೇಳಿದೆ' ಎಂದನಂತೆ ನಗುನಗುತ್ತಾ. (ಅವರ ಮಗ ಭೀಮ ನನ್ನ ಶಾಲಾ ಕಾಲದ ಸಹಪಾಠಿ ಹೇಳಿದ್ದು).

❑

೩೬. ನಮ್ಮ ಮನೇಲಿ ಮಾಡಿ ಮುಂಜೀನ

ಎಂ.ಆರ್.ಶ್ರೀ. ಅವರ ಮಿತ್ರತ್ವ ಆದರ್ಶಪ್ರಾಯವಾದುದು. ತಮ್ಮ ಮಿತ್ರರ ಸುಖದುಃಖಗಳಲ್ಲಿ ಭಾಗಿಯಾಗುವುದು, ನೆರವಾಗುವುದು ಅವರಿಗೆ ಸಂಭ್ರಮಿಸುವ ಕಾರ್ಯವಾಗಿತ್ತು. ಎಂ.ಆರ್.ಶ್ರೀ. ಮತ್ತು ವಿ.ಸೀ. ಪರಮಾಪ್ತರು.

ಒಮ್ಮೆ ವಿ.ಸೀ. ಅವರು ತಮ್ಮ ಮಗನ ಮುಂಜಿ ಮಾಡಲು ಮನೆಯಲ್ಲಿ ಸ್ಥಳಾವಕಾಶ ಸಾಲದು, ಇನ್ನೆಲ್ಲಿ ಮಾಡುವುದು ಎಂದು ಚಿಂತಾಕ್ರಾಂತರಾಗಿದ್ದರು. ಈ ವಿಷಯವನ್ನು ತಿಳಿದ ಆಪ್ತಮಿತ್ರರಾಗಿದ್ದ ಎಂ.ಆರ್.ಶ್ರೀಯವರು ವಿ.ಸೀ. ಅವರನ್ನು ಕರೆದು 'ಅಲ್ಲಯ್ಯಾ, ನನ್ನ ಮನೆಯ ಹಜಾರ ಸಾಕಷ್ಟು ದೊಡ್ಡದಲ್ಲವೇ? ನಮ್ಮ ಕುಟುಂಬ ನಿನ್ನ ಸೇವೆಗೆ ಇರುತ್ತದೆ ಎಂಬುದನ್ನು ಮರೆತುಹೋದೆಯಾ?' ಎಂದು ತಮ್ಮ ಮನೆಯಲ್ಲಿ ಮುಂಜಿಗೆ ವ್ಯವಸ್ಥೆ ಮಾಡುವ ಏರ್ಪಾಡುಗಳಿಗೆ ತಾವೇ ಮುಂದಾದರು. ಇದಲ್ಲವೇ ಸ್ನೇಹದ ರೀತಿ, ಪ್ರೀತಿ!

ಕೇವಲ ಮನೆಯಲ್ಲಿ ಮುಂಜಿಗೆ ಅವಕಾಶ ಮಾಡಿಕೊಟ್ಟಿದ್ದೇ ಅಲ್ಲದೆ ಮುಂಜಿಗೆ ಬೇಕಾದ ಊಟದ ವ್ಯವಸ್ಥೆ, ಬಂದವರನ್ನು ಸ್ವಾಗತಿಸುವ ಕೆಲಸ, ತಳಿರು ತೋರಣ ಅಲಂಕಾರ ಮುಂತಾದ ಕಾರ್ಯಗಳಲ್ಲಿಯೂ ತಮ್ಮ ಮಗನಿಗೆ ಮುಂಜಿ ಮಾಡುವ ರೀತಿ ಕಾರ್ಯಪ್ರವೃತ್ತರಾಗಿದ್ದರು ಎಂ.ಆರ್.ಶ್ರೀ.

❑

೩೭. ಪರಿಷತ್ತಿನಲ್ಲಿ ನಾನು ದೊಡ್ಡ ಜವಾನ ನೀನು ಚಿಕ್ಕ ಜವಾನ

ಎಂ.ಆರ್.ಶ್ರೀ. ಅವರು ಶಿಸ್ತಿನ ಸಿಪಾಯಿ, ಅಚ್ಚುಕಟ್ಟಿನ ಮೂರ್ತಿ. ಕೇವಲ ಉಡುಪಷ್ಟೇ ಶುಭ್ರವಲ್ಲ, ಅವರ ಕರ್ತವ್ಯಶೀಲತೆ ಪರಿಶುಭ್ರ; ನಾನೇ ಕಂಡಂತೆ ಪರಿಷತ್ತಿನಲ್ಲಿ ನಡೆದ ಒಂದು ಪ್ರಸಂಗ: ಅವರ ಕಾಲದಲ್ಲಿ ಪು.ತಿ.ನ. ಅವರ ಗೋಕುಲ ನಿರ್ಗಮನ ಸಮಗ್ರ ಕಾವ್ಯದ ವಾಚನವನ್ನು ಏರ್ಪಡಿಸಿದ್ದರು. ಪ್ರತಿ ವಾರಕ್ಕೊಮ್ಮೆ ಎಲ್.ಜಿ. ಸುಮಿತ್ರ, ಕಮಲ, ವಿಮಲ–ಎಲ್.ಗುಂಡಪ್ಪನವರ ಮಕ್ಕಳು–ಹಾಡುತ್ತಿದ್ದರು, ಸಂಜೆ ೪ರ ಸುಮಾರಿಗೆ ಹಳೇ ಸಭಾಂಗಣದಲ್ಲಿ ಜಮಖಾನ ಹಾಸಿ (ಆಗ ಕುರ್ಚಿಗಳಿರಲಿಲ್ಲ ಪರಿಷತ್ತಿನಲ್ಲಿ) ಎರಡು ಒಂದಡಿ ಎತ್ತರದ ಉದ್ದನೆಯ ಚಿಕ್ಕ ಸ್ಕ್ರೀನ್‌ಗಳನ್ನು ಅಡ್ಡ ಇಡುತ್ತಿದ್ದರು (ಸ್ತ್ರೀ–ಪುರುಷರು ಬೇರೆ ಬೇರೆ ಕುಳಿತುಕೊಳ್ಳಲು.) ಒಂದು ದಿನ ಪರಿಷತ್ತಿನ ಜವಾನರಲ್ಲಿ ಒಬ್ಬನಾದ (ಆಗಿದ್ದವರು ಇಬ್ಬರೇ; ಹನುಮಯ್ಯ, ಕರಿಯಣ್ಣ) ಕರಿಯಣ್ಣ ತಡವಾಗಿ ಬಂದ. ಆ ವೇಳೆಗೆ ಅಲ್ಲೇ ವಾಚನಾಲಯದಲ್ಲಿದ್ದ ನಮ್ಮನ್ನೆಲ್ಲ ಕಂಡು ನಮ್ಮ ಸಹಾಯದಿಂದ ಎಂ.ಆರ್.ಶ್ರೀ. ಅವರು ಕಸಪೊರಕೆ ತಂದು ಕಸ ಗುಡಿಸಿ ಜಮಖಾನ ಹಾಸಿ ಕಾರ್ಯಕ್ರಮಕ್ಕೆ ಸಿದ್ಧತೆ ಪೂರೈಸಿದರು. ತಡವಾಗಿ ಬಂದ ಕರಿಯಣ್ಣ 'ತಪ್ಪಾಯಿತು. ಸ್ವಾಮಿ, ತಡವಾಯಿತು' ಎಂದ. ಅದಕ್ಕೆ ಎಂ.ಆರ್.ಶ್ರೀ, 'ನೋಡು, ನೀನೂ ಜವಾನ: ನಾನೂ ಜವಾನ. ಪರಿಷತ್ತಿನಲ್ಲಿ ನೀನು ಚಿಕ್ಕ ಜವಾನ, ನಾನು ದೊಡ್ಡ ಜವಾನ. ವ್ಯವಸ್ಥೆಯಲ್ಲಿ ಏರುಪೇರಾದರೆ ನಿನ್ನನ್ನು ಯಾರೂ ಕೇಳೋಲ್ಲ. ನನ್ನನ್ನು, ದೊಡ್ಡ ಜವಾನನನ್ನು ಕೇಳ್ತಾರೆ' ಎಂದರು. ಅಂದಿನಿಂದ ಅವರಿದ್ದಷ್ಟು ಕಾಲ ಒಂದು ದಿನವೂ ಕರಿಯಣ್ಣ ಪರಿಷತ್ತಿಗೆ ತಡವಾಗಿ ಬರಲಿಲ್ಲ. ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ಮಾಡುವುದರಲ್ಲಿ ಎಂ.ಆರ್.ಶ್ರೀ. ನಿಷ್ಣಾತರಾಗಿದ್ದರು.

ಎಂ.ಆರ್.ಶ್ರೀ. ಪರಿಷತ್ತಿನ ಒಳಗೆ ಬರುವಾಗ ತಮ್ಮ ಪಾದರಕ್ಷೆಗಳನ್ನು ಹೊರಗೆ ಬಿಡುತ್ತಿದ್ದರು. ಸಾಹಿತ್ಯ ಪರಿಷತ್ತು ಶಾರದೆಯ ದೇಗುಲ, ತಾವು ಸೇವೆ ಮಾಡುವ ಭಕ್ತರು ಎಂದು ಎಂ.ಆರ್.ಶ್ರೀ. ತಿಳಿದಿದ್ದರು. ಆಗ ಪರಿಷತ್ತಿನ ಹಳೆಯ ಕಟ್ಟಡದಲ್ಲಿ ಪರಿಷತ್ತಿನ ಪುಸ್ತಕ ಭಂಡಾರವಿತ್ತು. ಅದಕ್ಕೆ ಸರಸ್ವತೀ ಭಂಡಾರ ಎಂದು ಹೆಸರಿತ್ತು. ಸಭಾಂಗಣದಿಂದ ಪರಿಷತ್ತಿನ ಕಚೇರಿ ಕೋಣೆಗೆ ಹೋಗಬೇಕಿತ್ತು. ಇಂಥ ಪ್ರಸಂಗಗಳು ಇನ್ನೆಷ್ಟೋ!

❑

೩೮. ಹಣದ ವಿಚಾರದಲ್ಲಿ ಭಯಂಕರ ಕಟ್ಟುನಿಟ್ಟಿನ ಅಧ್ಯಕ್ಷ

ಎಂ.ಆರ್.ಶ್ರೀ ವಿನಯಶೀಲತೆಗೆ ಒಂದು ನಿದರ್ಶನವೆಂದರೆ ಅವರಿಗೆ ಒಂದು ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ. ಸಾಹಿತ್ಯ ಪರಿಷತ್ತಿನ ಸಿಬ್ಬಂದಿಗೆ ಅವರನ್ನು ಕಂಡರೆ ಅಪಾರ ಗೌರವ, ಅಷ್ಟೇ ಭಯವೂ ಇತ್ತು. ಕೆಲಸ ಸರಿಯಾಗಿ ಮಾಡದಿದ್ದರೆ ಸೌಮ್ಯವಾಗಿ ವಿನಯದ ನುಡಿಗಳಲ್ಲೇ ಕ್ರಮ ಕೈಗೊಳ್ಳುತ್ತಿದ್ದರು. ಒಮ್ಮೆ ಸಿಬ್ಬಂದಿಯ ಪದಾಧಿಕಾರಿ ಒಬ್ಬರು ಅಂದಿನ ಹಣದಲ್ಲಿ ತುರ್ತಾಗಿ ವೈಯಕ್ತಿಕ ವೆಚ್ಚಕ್ಕಾಗಿ ಸ್ವಲ್ಪ ಹಣವನ್ನು ಬಳಸಿಕೊಂಡಿದ್ದರು. ಮಾರನೇ ದಿನ ಆ ಹಣವನ್ನು ಪರಿಷತ್ತಿಗೆ ಭರ್ತಿ ಮಾಡುವವರಿದ್ದರು. ಹಣದ ಲೆಕ್ಕವನ್ನು ಅವರು ಒಪ್ಪಿಸುತ್ತಿದ್ದಾಗ ಎಂ.ಆರ್.ಶ್ರೀ ಅವರ ಗಮನಕ್ಕೆ ಈ ಸಂಗತಿ ಬಂದಿತು. ಕೂಡಲೇ ಎಂ.ಆರ್.ಶ್ರೀ ಒಂದು ಬಿಳಿ ಹಾಳೆ ತಂದಿರಿಸಿ 'ರಾಜೀನಾಮೆ ಬರೆಯಿರಿ ನಿಮ್ಮ ಸ್ಥಾನಕ್ಕೆ' ಎಂದು ಬರೆಯಿಸಿಕೊಂಡರು. ತಮ್ಮ ಜೇಬಿನಿಂದ ಆ ದಿನದ ಪರಿಷತ್ತಿನ ಹಣದ ಜಮೆಗೆ ಆ ಮೊತ್ತವನ್ನು ತಾವೇ ಸೇರಿಸಿ ಅದನ್ನು ಬ್ಯಾಂಕಿಗೆ ಕಟ್ಟಿಸಿದರು. ಈ ಘಟನೆ ನಡೆದಾಗ ಪರಿಷತ್ತಿನ ಗ್ರಂಥಭಂಡಾರದಲ್ಲಿ ಪುಸ್ತಕ ಓದುತ್ತಾ ಕುಳಿತಿದ್ದೆ. ಆಗ ಪುಸ್ತಕಭಂಡಾರ, ಕಚೇರಿ ಒಟ್ಟಿಗೆ ಒಂದೇ ಕಡೆ ಇತ್ತು. ಕಚೇರಿಯ ವಿದ್ಯಮಾನವೆಲ್ಲ ಪುಸ್ತಕ ಭಂಡಾರದಲ್ಲಿದ್ದವರಿಗೆ ತಿಳಿಯುತ್ತಿತ್ತು. ಹೀಗೆ ಕಟ್ಟುನಿಟ್ಟಿನ ಶಿಸ್ತಿನವರಾಗಿದ್ದರು ಎಂ.ಆರ್.ಶ್ರೀ.

ಮಾಸ್ತಿ, ಎ.ಆರ್.ಕೃ. ಮೊದಲಾದವರು ಪರಿಷತ್ತಿಗಾಗಿ ತಮ್ಮ ಕೈಯಿಂದಲೇ ಹಣ ಹಾಕಿ ಸೇವೆ ಸಲ್ಲಿಸಿದವರು ಮತ್ತು ಒಂದು ಬಿಡಿಗಾಸಾದರೂ ಸರಿ, ಪರಿಷತ್ತಿನ ಹಣ ಅಪವ್ಯಯ ಆಗದ ಹಾಗೆ ಶಿಸ್ತಿನಿಂದ ವರ್ತಿಸುತ್ತಿದ್ದವರು. ಈ ಕಾಲದಲ್ಲಿ ಅಂಥಾ ನಿಷ್ಠಾವಂತ ಸಾರ್ವಜನಿಕ ಸೇವಾಸುಧಾರಕರನ್ನು ಕಾಣುವುದು ಬಲು ಕಷ್ಟ.

❑

೩೯. ಶರಣರ ಗುಣ ಮರಣದಲ್ಲಿ ನೋಡು

ಸಾಹಿತ್ಯ ಸೇವೆಗೆ ಜಾತಿ ಕುಲಗಳಿಲ್ಲ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅನೇಕ ಸಾಹಿತಿಗಳು ಇದಕ್ಕೆ ನಿದರ್ಶನಪ್ರಾಯರಾಗಿದ್ದಾರೆ. ಉತ್ತಂಗಿ ಚೆನ್ನಪ್ಪನವರು ಕ್ರೈಸ್ತರು. ಆದರೆ ಅವರು ಸರ್ವಜ್ಞವಚನಗಳನ್ನು ಅದ್ಭುತವಾಗಿ ಸಂಪಾದಿಸಿ ಇತರ ವೀರಶೈವ ಕೃತಿಗಳನ್ನು ರಚಿಸಿ ವೀರಶೈವ ಸಾಹಿತಿಗಳ ಸಾಲಿಗೆ ಸೇರಿದ್ದಾರೆ. ದೇವುಡು ಅವರು ಕಟ್ಟಾ ವೈದಿಕರು. ಆದರೆ ಉತ್ತಂಗಿ ಚೆನ್ನಪ್ಪನವರನ್ನು ಅತಿಥಿಯನ್ನಾಗಿ ಊಟಕ್ಕೆ ಕರೆದು, ಒಬ್ಬ ಸ್ವಾಮಿಗಳು ಮನೆಗೆ ಬಂದರೆ ಅವರಿಗೆ ಅರ್ಘ್ಯ ಪಾದ್ಯಾದಿಗಳನ್ನು ನೀಡಿ ಸತ್ಕರಿಸುವಂತೆ ಸತ್ಕರಿಸಿ ಸಹಪಂಕ್ತಿ ಭೋಜನ ಮಾಡಿದವರು. 'ನಮ್ಮ ಮನೆಗೆ ಇಂದು ಬಂದಿರುವ ನೀವು ಏಸುಕ್ರಿಸ್ತನ ಸ್ವರೂಪಿಗಳು' ಎಂದು ಗೌರವಿಸಿದರು. ಅದಕ್ಕೆ ಉತ್ತಂಗಿಯವರು 'ನಾನು ಏಸುಕ್ರಿಸ್ತನ ಭಕ್ತ ಅಷ್ಟೇ. ಅವನ ಪ್ರತಿನಿಧಿ ಅಲ್ಲ' ಎಂದರು. ಅದಕ್ಕೆ ದೇವುಡು 'ನಮ್ಮಲ್ಲಿ ಭಗವಂತ ಭಕ್ತಪರಾಧೀನ. ಭಗವಂತನ ದರ್ಶನವನ್ನು ಭಕ್ತನ ಮೂಲಕ ಮಾಡುತ್ತೇವೆ. ನಿಮ್ಮಲ್ಲಿ ನಾನು ಏಸುಕ್ರಿಸ್ತನನ್ನೇ ಕಾಣುತ್ತಿದ್ದೇನೆ' ಎಂದರು.

ಅಂತೆಯೇ ಎಂ.ಆರ್.ಶ್ರೀ. ಅವರು ಬ್ರಾಹ್ಮಣರಾದರೂ ವೀರಶೈವ ಸಾಹಿತ್ಯವನ್ನು ಯಾವ ವೀರಶೈವ ಸಾಹಿತಿಗೂ ಕಡಿಮೆ ಇಲ್ಲದಂತೆ ಅಧ್ಯಯನ ಮಾಡಿದವರು. ಗ್ರಂಥ ರಚನೆ ಮಾಡಿದವರು. ಪ್ರವಚನಗಳನ್ನು ಮಾಡಿದವರು.

ಅವರು ೧೬-೯-೧೯೫೩ರಲ್ಲಿ ಬೆಂಗಳೂರು ಚಾಮರಾಜಪೇಟೆಯ ಮನೆಯಲ್ಲಿ ಕಾಲರಾದಿಂದ ವಿಧಿವಶರಾದರು. ಆಗ ಅವರ ಅಂತ್ಯಸಂಸ್ಕಾರ ಕಾಲದಲ್ಲಿ ನೂರಾರು ಜನ ವೀರಶೈವರು ಬಂದಿದ್ದರು. ಅವರೆಲ್ಲ ಎಂ.ಆರ್.ಶ್ರೀ. ಅವರನ್ನು, ಅವರು ಬರೆದ ವೀರಶೈವ ಗ್ರಂಥಗಳನ್ನು ಓದಿ, ಅವರು ವೀರಶೈವರೆಂದೇ ಭಾವಿಸಿದ್ದರು. ಅವರ ಅಂತ್ಯಸಂಸ್ಕಾರದ ಸಂದರ್ಭದಲ್ಲಿ ವಿದ್ಯಾರ್ಥಿಯಾಗಿದ್ದ ನಾನು ಅವರ ಮಗ ಭೀಮನ ಮಿತ್ರನಾಗಿ ಭಾಗವಹಿಸಿದ್ದೆ.

❑

೪೦. ಗುರುಗಳ ಹೆಸರು ಹೇಳಿದರೆ ಕೈಮುಗಿಯುವರು

ಕನ್ನಡದಲ್ಲಿ ಪಂಪ ಪೊನ್ನ ರನ್ನರು ರತ್ನತ್ರಯರು ಎಂದು ಪ್ರಸಿದ್ಧರಾಗಿದ್ದಾರಷ್ಟೆ. ಹಾಗೆಯೇ ಆಧುನಿಕ ಕನ್ನಡದಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರು, ತಿರುಮಲೆ ತಾತಾಚಾರ್ಯಶರ್ಮರು, ರಾಳ್ಳಪಲ್ಲಿ ಅನಂತಕೃಷ್ಣಶರ್ಮರು ಶರ್ಮತ್ರಯರೆಂದೂ, ಆರ್.ನರಸಿಂಹಾಚಾರ್, ಡಿ.ಎಲ್.ನರಸಿಂಹಾಚಾರ್, ಪು.ತಿ.ನರಸಿಂಹಾಚಾರ್ ಆಚಾರ್ಯತ್ರಯರೆಂದೂ ಹೆಸರಾದಂತೆ ಬಿ.ಎಂ.ಶ್ರೀ., ಎಂ.ಆರ್.ಶ್ರೀ., ತೀ.ನಂ.ಶ್ರೀ. ಅವರು ಶ್ರೀತ್ರಯರೆಂದು ಹೆಸರಾಗಿದ್ದಾರೆ. ಶ್ರೀತ್ರಯರಲ್ಲಿ ಎಂ.ಆರ್.ಶ್ರೀ. ಅವರು ವ್ಯಕ್ತಿತ್ವದಲ್ಲಿ ಎದ್ದುಕಾಣುವ ವ್ಯಕ್ತಿ ಆಗಿದ್ದಾರೆ.

ಎಂ.ಆರ್.ಶ್ರೀ ಅವರು ನಿಟ್ಟೂರು ಶ್ರೀನಿವಾಸರಾಯರಿಗೆ ಶಿವಮೊಗ್ಗ ಹೈಸ್ಕೂಲಿನಲ್ಲಿ ಗುರುಗಳಾಗಿದ್ದರು. ಅವರು ಪಾಠ ಮಾಡುತ್ತಿದ್ದಾಗ ಗಲಾಟೆ ಮಾಡಿದ ಹುಡುಗನನ್ನು ಹತ್ತಿರ ಇದ್ದ ಹುಡಿಗೆಯರ ಶಾಲೆಯವರೆಗೆ ಹೋಗಿ ಬರುವಂತೆ ಮಾಡುತ್ತಿದ್ದರಂತೆ. ಆ ಕಾಲಕ್ಕೆ ಹುಡುಗಿಯರ ಶಾಲೆಯ ಮುಂದೆ ಹುಡುಗರು ತಿರುಗಾಡಿದರೆ ಅವಮಾನವೆಂದು ಭಾವಿಸುತ್ತಿದ್ದ ಕಾಲ. ನಿಟ್ಟೂರರಿಗೆ ಎಂ.ಆರ್.ಶ್ರೀ ಬಗ್ಗೆ ಬಲು ಗೌರವ. ನಿಟ್ಟೂರರು ತಮ್ಮ ಆತ್ಮಕಥೆಯನ್ನು ಹೇಳಿ ಬರೆಯಿಸಿದಾಗ ನಾನು, ಹೆಚ್.ಕೆ.ರಂಗನಾಥ್, ಎಂ.ಎಚ್.ಕೃಷ್ಣಯ್ಯ ಪ್ರಶ್ನೆಗಳನ್ನು ಕೇಳುತ್ತಾ ಹೋದೆವು ಅವರು ಉತ್ತರಿಸುತ್ತಾ ಹೋದರು. ಆಗ ಹೇಳಿದ ಮಾತುಗಳಿವು. ಎಂ.ಆರ್.ಶ್ರೀ ಬಗ್ಗೆ ಮಾತು ಬಂದಾಗಲೆಲ್ಲ ನಿಟ್ಟೂರರು ಆ ಇಳಿವಯಸ್ಸಿನಲ್ಲೂ, 'ಮಹಾನುಭಾವರು ನಮ್ಮ ಗುರುಗಳು' ಎಂದು ಎರಡು ಕೈಗಳಲ್ಲಿ ನಮಸ್ಕರಿಸಿ ಅವರ ಬಗ್ಗೆ ಮಾತನಾಡಲು ಪ್ರಾರಂಭಿಸುತ್ತಿದ್ದರು. ಎಂ.ಆರ್.ಶ್ರೀ ಅವರ ಬಗ್ಗೆ ವಿದ್ಯಾರ್ಥಿಗಳಿಗೆ ಇದ್ದ ಗೌರವಭಾವವನ್ನು ಈ ಪ್ರಸಂಗ ಸೂಚಿಸುತ್ತದೆ.

❑

೪೧. ಶಬರಿ ಪದ್ಯ ಬರೆದವರು ನಮ್ಮಪ್ಪ ಸರ್

ವಿ.ಸೀ. ಅವರ ಮಕ್ಕಳಲ್ಲಿ ಒಬ್ಬನಾದ ಸತ್ಯನಾರಾಯಣ ಅರ್ಥಾತ್ ಸತ್ಯ ನನ್ನ ಬಾಲ್ಯದ ಸಹಪಾಠಿ, ಪ್ರೈಮರಿ, ಮಾಧ್ಯಮಿಕ ಶಾಲೆಗಳಲ್ಲಿ ಒಟ್ಟಿಗೆ ಓದಿದ ಗೋಲಿ ಗೆಳೆಯರಲ್ಲಿ ಅವನೂ ಒಬ್ಬ. ಅವರ ಮನೆ ಚಾಮರಾಜಪೇಟೆಯ ೨ನೇ ರಸ್ತೆಯಲ್ಲಾದರೆ ನಮ್ಮ ಮನೆ ೪ನೇ ರಸ್ತೆಯಲ್ಲಿ, ಇಬ್ಬರ ಶಾಲೆಯೂ ಕೋಟೆ ಮಾಧ್ಯಮಿಕ ಶಾಲೆ. ಆಟದ ಮೈದಾನ, ಶಾಲೆಯ ವೇಳೆ ಬಿಟ್ಟರೆ ಅವರ ಮನೆಯ ಮುಂದೆ ಪುಟ್ಟ ಪಥವೇ ನಮ್ಮ ಆಟದಂಗಳ. ಎದುರುಮನೆ ಪಿಟೀಲು ಸುಬ್ಬಾಶಾಸ್ತ್ರಿಗಳ ಮನೆಯ ವರಾಂಡಾ ಇನ್ನೊಂದು ಆಟದ ಅಂಗಳ. ತಪ್ಪಿದರೆ ವಿ.ಸೀ. ಮನೆಯಲ್ಲಿ ಹಿಂಭಾಗದಲ್ಲಿದ್ದ ಹಲಸಿನಮರದ ಬುಡ. ಹೀಗೆ ಶಾಲೆಯಲ್ಲೂ ಆಮೇಲೂ ನಾವಿಬ್ಬರೂ ಒಟ್ಟಿಗಿರುತ್ತಿದ್ದೆವು.

ಕೋಟೆಶಾಲೆಯಲ್ಲಿ ನಾವು ಓದುತ್ತಿದ್ದಾಗ ಪಠ್ಯದಲ್ಲಿದ್ದ ಕಾದಿರುವಳು ಶಬರಿ ಪಾಠ ಮಾಡುವಾಗ ಕನ್ನಡದ ಮೇಷ್ಟ್ರು 'ಏನ್ರಯ್ಯಾ, ಈ ಪದ್ಯ ಬರೆದವರು ಯಾರು ಗೊತ್ತೇ? ಇಲ್ಲೇ ದಿನಾ ಎದುರಿಗಿರುವ ಪರಿಷತ್ತಿನ ಬಳಿ ಸಂಜೆ ಸಿಗುತ್ತಾರೆ ನೋಡಿದ್ದೀರಾ?' ಎಂದು ಕೇಳಿದರು. ಆಗ ನನ್ನ ಗೆಳೆಯ ಸತ್ಯ 'ಚೆನ್ನಾಗಿ ಗೊತ್ತು. ಅವರು ನಮ್ಮಪ್ಪ' ಎಂದ. ಮೇಷ್ಟ್ರು 'ತಲೆಹರಟೆ, ವಿ.ಸೀ. ನಿಮ್ಮಪ್ಪಾನ?' ಎಂದರು. 'ಹೌದು ಸಾರ್' ಎಂದ. 'ಅಲ್ಲ ಕಣೋ, ನಿಮ್ಮಪ್ಪನ ಹೆಸರು ವಿ.ಸೀತಾರಾಮಯ್ಯ ಅಂತ ಇರಬಹುದು. ಅಂದ ಮಾತ್ರಕ್ಕೆ ಇಂಥ ಸೊಗಸಾದ ಪದ್ಯ ಬರೆದ ಕವಿ ನಿಮ್ಮಪ್ಪ ಆಗಿಬಿಡ್ತಾರಾ...' ಎಂದರು. ಅದಕ್ಕೆ ಸತ್ಯ 'ನಾನೇನು ಸುಳ್ಳು ಹೇಳ್ತಿಲ್ಲ' ಎಂದಾಗ ನಾನು, 'ಸಾರ್ ಅವನು ಹೇಳುತಿರೋದು ನಿಜ' ಎಂದೆ. 'ಹಾಗಲಕಾಯಿಗೊಂದು ಬೇವಿನಕಾಯಿ ಸಾಕ್ಷಿ ಬೇರೆ. ಕೂತ್ಕೋ ಸುಮ್ನೆ' ಎಂದರು. ಪಾಠ ಮಾಡಿದರು. ತರಗತಿ ಮುಗಿದ ಮೇಲೆ ಈಚೆ ಬರುತ್ತಾ ಎದುರಿಗೆ ಬಂದ ಹೆಡ್ಮಾಸ್ಟರಿಗೆ 'ನೋಡಿ ಸಾರ್. ಈ ಪೋಕರಿ, ನಾನು ವಿ.ಸೀ. ಅವರ ಕಾದಿರುವಳು ಶಬರಿ ಪದ್ಯ ಪಾಠ ಮಾಡುವಾಗ ಇದನ್ನು ಬರೆದವರು ಯಾರು ಗೊತ್ತೇ ಎಂದು ಕೇಳಿದರೆ ನಮ್ಮಪ್ಪ ಅಂತಾನೆ' ಅಂದರು. ಆಗ ಅವರು 'ಹೌದ್ರೀ, ಅವರು ವಿ.ಸೀತಾರಾಮಯ್ಯನವರ ಮಗ' ಎಂದರು. ನಮ್ಮ ಕನ್ನಡ ಮೇಷ್ಟ್ರು ಮಾತಾಡದೇ ಮುಂದಕ್ಕೆ ಹೋದರು.

❑

೪೨. ಕಾರಂತರು ವಿ.ಸೀ.ಗೆ ಸೋತರು

ವಿ.ಸೀ. ಮನೆಯ ಮುಂದಿನ ಅಂಗಳದ ಆಟಗಾರನಾದ ನನಗೆ, ಪಿಟೀಲು ಸುಬ್ಬಾಶಾಸ್ತ್ರಿಯವರ ಮಗ ಶರ್ಮನಿಗೆ, ಕನ್ನಡದ ಸಾಹಿತಿಗಳ ದರ್ಶನ ಸುಲಭವಾಗಿ ಆಗುತ್ತಿತ್ತು. ಕಾರಂತರ ಪರಿಚಯ ಆಗಿದ್ದೂ ಹಾಗೇನೇ. ಮನೆಯ ಮುಂದೆ ಒಮ್ಮೆ ಆಟವಾಡುತ್ತಿದ್ದಾಗ ನಮ್ಮನ್ನು ದಾಟಿಕೊಂಡು ಕಾರಂತರು ಮನೆಯೊಳಕ್ಕೆ ಹೋದರು. ನಾನು 'ಯಾರೋ ಇವರು?' ಎಂದೆ, ಸತ್ಯ 'ಕಾರಂತರು ಕಣೋ. ನಮ್ಮಪ್ಪನಿಗೆ ತುಂಬಾ ಫ್ರೆಂಡು. ಬರ್‍ತಾ ಇರ್‍ತಾರೆ' ಎಂದ. ಆಗಲೇ ಬಾಲಪ್ರಪಂಚ ಪುಸ್ತಕದ ಚಿತ್ರಗಳನ್ನು ಕಂಡು ಬೆರಗಾಗಿದ್ದೆವು ನಾವು. ಅವರ ಢಂಢಂ ಡೋಲು, ಬೂರ್ ಬೂರ್ ತಿಮ್ಮಕ್ಕ, ಮೊಸರು ಕಡೆಯೇ ತಿಮ್ಮಕ್ಕ ಪದ್ಯಗಳು ನಮಗೆ ಗೊತ್ತಿದ್ದವು. ಹೋಗಿ ಕಿಟಕಿಯಲ್ಲಿ ಬಗ್ಗಿ ನೋಡಿದೆವು, ಕಾರಂತರು 'ಯಾರು? ಏನು ಬೇಕು?' ಅಂದಾಗ ನಾವು ಗಾಬರಿಯಿಂದ ಆಚೆಗೆ ಓಡಿದೆವು. ಆಮೇಲೆ ಸತ್ಯ ಬಂದು 'ನಮ್ಮಪ್ಪ ಕರೀತಿದ್ದಾರೆ ಬನ್ರೋ' ಎಂದ. ನಾವು ಹೋದಾಗ ವಿ.ಸೀ. 'ಅವರು ನಮ್ಮ ಹುಡುಗನ ಸ್ನೇಹಿತರು' ಎಂದು ಹೇಳಿದಾಗ ಕಾರಂತರು ನಮ್ಮನ್ನು ಮಾತಾಡಿಸಿ ತಮಾಷೆ ಮಾಡಿದರು. ಆ ಮಾತುಗಳು ನಮಗಿಂದು ನೆನಪಿಲ್ಲ. ಆದರೆ ಹಿಂದಕ್ಕೆ ತಲೆ ಬಾಚಿದ ರೀತಿ, ಮೀಸೆ, ಕಣ್ಣುಗಳು ಇನ್ನೂ ನೆನಪಿವೆ. ವಿ.ಸೀ. ನಮಗೆಲ್ಲಾ ಅಲ್ಲಿದ್ದ ಹಣ್ಣೊಂದನ್ನು ಕೊಟ್ಟರು. ಅದನ್ನು ತೆಗೆದುಕೊಂಡು ಹೋಗಿ ಕಾಗೆ ಎಂಜಲು ಮಾಡಿ, ಬಾಯಲ್ಲಿ ಷರಟಿನ ಬಟ್ಟೆ ಮೂಲಕ ಕಚ್ಚಿ ಹಂಚಿಕೊಂಡು ತಿಂದೆವು. ಆಗಾಗ ಹಣ್ಣಿನ ಸಮಾರಾಧನೆ ವಿ.ಸೀ.ಯಿಂದ ನಮಗೆ ಆಗುತ್ತಿತ್ತು. ಹೀಗಾಗಿ ಬಾಲ್ಯದಲ್ಲೇ ವಿ.ಸೀ. ನಮಗೆ ಹಣ್ಣು ಕೊಡೋ ಮಾವ, ಸತ್ಯನ ಅಪ್ಪ ಆಗಿದ್ದರು.

ಹಣ್ಣು ಎಂದಾಗ ನೆನಪಾಗುತ್ತೆ. ವಿ.ಸೀ ಶುಚಿರುಚಿಗಳಲ್ಲಿ ಎತ್ತಿದ ಕೈ. ಹಣ್ಣುಗಳನ್ನು ಆರಿಸುವುದರಲ್ಲಿ ಅವರನ್ನು ಸರಿಗಟ್ಟುವರೇ ಇಲ್ಲ ಎಂದರೆ ತಪ್ಪಲ್ಲ. ಒಮ್ಮೆ ಕಾರಂತರು 'ಸದಾ ನೀವೇ ಹಣ್ಣು ತರುವುದು ಏಕೆ? ನಾನು ತರುತ್ತೇನೆ' ಎಂದು ಒಮ್ಮೆ ಮಾರುಕಟ್ಟೆಯಿಂದ ಒಂದು ರಾಶಿ ಮಾವಿನಹಣ್ಣು ತಂದರು. ವಿ.ಸೀ ಅದನ್ನು ನೋಡಿ, 'ಕಾರಂತರೇ, ನೀವೇನು ತಂದಿದ್ದು?' ಎಂದರು. 'ಮಾವಿನ ಹಣ್ಣು' ಎಂದರೆ, 'ಅದು ಸರಿ. ಯಾವ ಮಾವಿನಹಣ್ಣು' ಎಂದರೆ 'ಸೊಗಸಾದ ರಸಪುರಿ' ಎಂದರೆ, 'ಹೌದೇ?' ಎಂದು ಆ ಹಣ್ಣುಗಳನ್ನು ಬೇರೆ ಬೇರೆ ಮಾಡಿ, 'ಇದು ಮಲಗೋವಾ, ಇದು ನಾಟಿ, ಇದು ರಸಪುರಿ, ಇದು ತೋತಾಪುರಿ' ಎಂದೆಲ್ಲಾ ಬೇರೆ ಬೇರೆ ಮಾಡಿ 'ರುಚಿ ನೋಡಿ, ತಿಳಿಯುತ್ತೆ' ಎಂದಾಗಲೇ ತಿಳಿದದ್ದು ಎಲ್ಲಾ ಬೇರೆ ಜಾತಿಯವು ಕಲಬೆರಕೆ ಆಗಿದ್ದವು ಎಂದು. ಕಾರಂತರು 'ಸೀತಣ್ಣ, ಇನ್ನು ಮೇಲೆ ಹಣ್ಣು ತರೋ ಕೆಲಸಕ್ಕೆ ಕೈ ಹಾಕೊಲ್ಲ' ಎಂದರಂತೆ.

❑

೪೩. ಹುಟ್ಟುಹಬ್ಬಕ್ಕೆ ಮಿತ್ರರಿಗೆ ಉಡುಗೊರೆ

ಕಾರಂತರಿಗೂ, ವಿ.ಸೀ ಅವರಿಗೂ ಗಳಸ್ಯ ಕಂಠಸ್ಯ ಪ್ರೇಮ. ಹತ್ತಾರು ವರ್ಷಗಳು ಒಂದೇ ಸಮ ಪ್ರೀತಿ, ಸ್ನೇಹ ಕಾರಂತರಂಥ ವ್ಯಕ್ತಿಯಲ್ಲಿ ಉಳಿದು ಬರುವುದು ಸಾಮಾನ್ಯ ಸಂಗತಿಯಲ್ಲ. ವಿ.ಸೀ. ಬಗ್ಗೆ ಕಾರಂತರೇ ಹೇಳಿದ ಈ ಮಾತನ್ನು ಗಮನಿಸಬೇಕು. 'ನನ್ನ ಬದುಕಿನ ಮೇಲೆ ನಿಡುಗಾಲ ಪ್ರಭಾವ ಬೀರಿದ ವ್ಯಕ್ತಿಗಳ ಸಂಖ್ಯೆ ತೀರಾ ಕಡಿಮೆ. ನಾವು ನಮ್ಮ ಜೀವನದ ಯಾತ್ರೆಯನ್ನು ನಡೆಯಿಸುವಾಗ ಅನೇಕರನ್ನು ಸಂಧಿಸುತ್ತೇವೆ. ಅವರಲ್ಲಿ ನಮಗೆ ದುಃಖ ಕೊಡುವವರು ಇರುತ್ತಾರೆ. ಸಂತೋಷ ಕೊಡುವವರೂ ಇರುತ್ತಾರೆ. ಅವರೆಲ್ಲ ಸ್ವಲ್ಪ ಕಾಲ ನಮ್ಮ ಜೀವನದಲ್ಲಿ ಸಂಧಿಸುತ್ತಾರೆ. ಸ್ಪಂದಿಸುತ್ತಾರೆ. ಅನಂತರ ಹೊರಟುಹೋಗುತ್ತಾರೆ. ಆದರೆ ತಮ್ಮ ಬದುಕಿನಿಂದ ನಮ್ಮ ಬದುಕಿನ ಮೇಲೆ ಅಚ್ಚೊತ್ತಿ ಕೊನೆಯ ತನಕವೂ ಸ್ಮರಣೆಯನ್ನು ಉಳಿಸುವವರ ಸಂಖ್ಯೆ ಕೇವಲ ಒಂದು ಮುಷ್ಟಿಯ ಬೆರಳುಗಳಷ್ಟು ಮಂದಿಯೂ ಇರುವುದಿಲ್ಲ. ನಮಗೆ ಸಾವಿರ ಸಾವಿರ ಜನರ ಸಂಪರ್ಕ ಆಗಿಯೇ ಇರುತ್ತದೆ. ಅಂಥವರಿಂದ ಉಂಟಾಗುವ ಪ್ರಭಾವ ನಮ್ಮನ್ನು ಹೊಂದಿರುವಂತೆ ಅವರನ್ನೂ ಹೊಂದಿರುತ್ತದೆ.

ಅವರ ಬದುಕಿನ ಮೌಲ್ಯಕ್ಕೂ ನಮ್ಮದಕ್ಕೂ ಹೊಂದಿಕೆ ಇರುವಲ್ಲಿ ಅವರ ನೆನಪು ನಮ್ಮನ್ನು ಹೆಚ್ಚಾಗಿ ಅಂಟಿಕೊಳ್ಳಬಹುದು. ತಮ್ಮ ಬದುಕಿನಲ್ಲಿ ಸೊಗಸು ಏನು, ಅದರ ಸತ್ಯ ಏನು, ಸರಸ ಏನು, ವಿರಸ ಏನು– ಎಂಬುದನ್ನು ತಮ್ಮ ಬದುಕಿನಿಂದಲೇ ತೋರಿಸುತ್ತಾ ಬಾಳಿದವರು ಕೆಲವರೇ. ಅಂಥವರ ಪೈಕಿ ನನ್ನ ಬದುಕಿನ ಎಟುಕಿಗೆ ದೊರೆತ ವ್ಯಕ್ತಿಗಳಲ್ಲಿ ವಿ.ಸೀತಾರಾಮಯ್ಯನವರು ಬಲು ಗಣ್ಯರು' ಎಂದಿದ್ದಾರೆ. ಅಚಲ ಅನುಪಮ ಸ್ನೇಹ ವಿಶ್ವಾಸದ ಗೆಳೆತನಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ?

ಪ್ರತಿ ವರ್ಷವೂ ಕಾರಂತರು ತಮ್ಮ ಹುಟ್ಟುಹಬ್ಬದ ಪ್ರಯುಕ್ತ ವಿ.ಸೀ. ಅವರಿಗೆ ಉಡುಗೊರೆ ಕಳಿಸುತ್ತಿದ್ದರು. ನಾವು ಹುಟ್ಟುಹಬ್ಬದ ದಿನ ಹುಟ್ಟುಹಬ್ಬದವರಿಗೆ ಉಡುಗೊರೆ ಕೊಡಬೇಕು ಎನ್ನುತ್ತೇವೆ. ಕಾರಂತರ ರೀತಿಯೇ ಬೇರೆ. ಹಾಗೆ ಒಮ್ಮೆ ಅವರು ವಿ.ಸೀ. ಅವರಿಗೆ ಕೋಟು ಹೊಲಿಸಿಕೊಳ್ಳಲು ಬಟ್ಟೆ ಕಳಿಸಿದ್ದರು. ಅದರೊಂದಿಗೆ ಚೀಟಿ ಇಟ್ಟಿದ್ದರು. 'ಈ ಬಟ್ಟೆಯಲ್ಲಿ ಕೋಟು ಹೊಲಿಸಿಕೊಂಡು ಹಾಕಿಕೊಳ್ಳಬೇಕು. ನನ್ನ ಹುಟ್ಟುಹಬ್ಬಕ್ಕಾಗಿ ಕಳಿಸಿದ್ದೇನೆ. ಒಂದು ಎಚ್ಚರಿಕೆ ಮಾತು. ಕೋಟನ್ನು ಹೊಲಿಸಿದ ವೆಚ್ಚದ ಬಿಲ್ಲನ್ನು ನನಗೆ ತಪ್ಪದೆ ಕಳಿಸಬೇಕು' ಎಂದು ಚೀಟಿಯಲ್ಲಿ ಬರೆದಿತ್ತು. ನನ್ನ ಮಿತ್ರ ಸತ್ಯನೊಡನೆ ನಾನು ಕೋಟು ತರಲು ಹೋದಾಗ ಸತ್ಯ ದರ್ಜಿಗೆ 'ಬಿಲ್ಲು ಬೇಕಂತೆ ನಮ್ಮಪ್ಪನಿಗೆ' ಎಂದು ಹೇಳಿದ. 'ಏಕೆ ಬಿಲ್ಲು? ಕೋಟು ಹೊಲಿದುಕೊಟ್ಟಿದ್ದೇನೆ' ಎಂದ ದರ್ಜಿ. 'ಇಲ್ಲ. ನಮ್ಮಪ್ಪನ ಫ್ರೆಂಡು ಕಾರಂತರು ಕಳಿಸಿದ್ದು ಈ ಬಟ್ಟೆ, ಅವರಿಗೆ ಬಿಲ್ ಕಳಿಸಬೇಕು' ಎಂದಾಗಲೇ ಈ ವಿಷಯ ತಿಳಿದಿದ್ದು.

❑

೪೪. ವಿಶಿಷ್ಟ ರೀತಿಯ ಅತಿಥಿ ಸತ್ಕಾರ

ತಿಂಡಿ ಸಮಾರಾಧನೆ ಮತ್ತು ಕಾಫೀ ಸಮಾರಾಧನೆಯಲ್ಲಿ ವಿ.ಸೀ. ಅವರ ಆತಿಥ್ಯದ ಸವಿಯನ್ನು, ವೈಖರಿಯನ್ನು, ಠೀವಿಯನ್ನು ಬಣ್ಣಿಸಲು ಬಾಯಿಲ್ಲವಯ್ಯಾ! ಹಣಕಾಸಿನ ಶ್ರೀಮಂತಿಕೆ ಇದ್ದವರಿಗೂ ಸಾಧ್ಯವಿಲ್ಲದ ಸ್ನೇಹ, ಪ್ರೀತಿಯ, ಅಂತಃಕರಣದ ಚೆಲುವಿನಾರಾಧನೆ, ರೂಪಾರಾಧನೆ, ರಸಸಮಾರಾಧನೆಗಳ ರಸಿಕರು ಅವರು. ತಿಂಡಿ-ಕಾಫಿ ಎಲ್ಲರ ಮನೆಯಲ್ಲೂ ಕೊಡುತ್ತಾರೆ. ವಿ.ಸೀ. ಅವರೂ ಕೊಡುತ್ತಾರೆ ಮನೆಗೆ ಬಂದವರಿಗೆ, ನಿಜ. ಆದರೆ ಅವರು ಕೊಡುವ ರೀತಿ, ಅದರ ರುಚಿ, ಅದರ ಹಿಂದಿನ ಪ್ರೀತಿ ಬೇರೆಡೆ ಇಲ್ಲ. ಏಕೆಂದರೆ ಪರಿಕರಗಳ ಬಗ್ಗೆ ಅವರಿಗೆ ಹೆಚ್ಚು ನಿಗಾ. ಕಾಫಿಪುಡಿ ವಿಶ್ವೇಶ್ವರಪುರದ ಅಂಗಡಿ ಒಂದರಿಂದಲೇ ಬರಬೇಕು, ಹಾಲು ಹೀಗೆ ಗಟ್ಟಿಯಾಗಿರಬೇಕು. ಸಕ್ಕರೆ ಇಷ್ಟೇ ಹಾಕಬೇಕು ಇತ್ಯಾದಿ ಷರತ್ತುಗಳ ಮೇಲೆ ಸಿದ್ಧವಾಗುತ್ತದೆ, ಊಟ-ತಿಂಡಿ ಕಾಫಿಗಳು ವಿ.ಸೀ. ಮನೆಯಲ್ಲಿ. ಅವರ ರುಚಿ, ಶುಚಿ, ಅಭಿರುಚಿಗಳಂತೆ ಸಿದ್ಧವಾಗಿರುತ್ತದೆ ಅತಿಥಿಗಳಿಗೆ.

ವಿ.ಸೀ. ಅವರದು ವಿಶಿಷ್ಟ ವ್ಯಕ್ತಿತ್ವ. ಸ್ವಾತಂತ್ರ್ಯ ಪೂರ್ವದಲ್ಲಿ, ಅನಂತರವೂ ಸಾಕಷ್ಟು ಕಾಲ ಚಾಮರಾಜಪೇಟೆಯಲ್ಲಿ ಮತ್ತು ಇತರ ಕಡೆಗಳಲ್ಲಿ ಅಂಗಡಿ ಸಾಲಿನ ಒಂದು ಕಡೆ ಕ್ಷೌರಿಕರು ಸಾಲಾಗಿ ಕುಳಿತಿರುತ್ತಿದ್ದರು. ಅವರನ್ನು ಮನೆಗೆ ಕರೆದುಕೊಂಡು ಹೋಗಿ ಸಂಪ್ರದಾಯಸ್ಥರು ದಿನ-ವಾರ ನೋಡಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದರು. ಕೆಲವು ಮನೆಯಲ್ಲಿ ಮಕ್ಕಳಿಗೂ ಆಗಲೇ ತಲೆಕ್ಷೌರ ಮಾಡಿಸುತ್ತಿದ್ದರು. ನಮ್ಮ ಮನೆಯಲ್ಲೂ ಅಂಥ ಪದ್ಧತಿ ಇತ್ತು. ಸಾಮಾನ್ಯವಾಗಿ ಒಬ್ಬನೇ ಕ್ಷೌರಿಕ ಖಾಯಂ ಆಗಿ ಬರುತ್ತಿದ್ದ. ಅವನನ್ನೇ ಕರೆಯುತ್ತಿದ್ದರು.

ವಿ.ಸೀ. ಮನೆಗೂ ಖಾಯಂ ಕ್ಷೌರಿಕನೊಬ್ಬ ಬರುತ್ತಿದ್ದ. ಮನೆಯ ಮುಂದಿನ ಅಂಗಳದಲ್ಲಿ ತಲೆಕ್ಷೌರ ಮಾಡಿಸಿಕೊಳ್ಳುತ್ತಿದ್ದರು. ಕ್ಷೌರಕ್ಕೂ ಮುಂಚೆ ತಾವು ಕಾಫಿ ಕುಡಿದು ಅವನಿಗೂ ಕಾಫಿ ಕೊಡುತ್ತಿದ್ದರು. ಅವನ ಸಂಸಾರದ ಸುಖದುಃಖವನ್ನೆಲ್ಲಾ ವಿಚಾರಿಸುತ್ತಿದ್ದರು. ಕೆಲವೊಮ್ಮೆ ಅವನಿಗೆ ಸಣ್ಣಪುಟ್ಟ ಸಹಾಯ ಮಾಡಿದ್ದರಂತೆ. ವಿ.ಸೀ. ಅವರು ನಿಧನರಾದಾಗ ಅಂತ್ಯದರ್ಶನಕ್ಕೆ ಬಂದಾಗ ಆ ಕ್ಷೌರಿಕ 'ನನ್ನ ಪಾಲಿನ ದೇವರಾಗಿದ್ದರು. ಕಷ್ಟಸುಖಗಳನ್ನು ವಿಚಾರಿಸಿಕೊಳ್ಳುತ್ತಿದ್ದರು' ಎಂದು ಮರುಗಿದನಂತೆ.

❑

೪೫. ಆದರ್ಶ ಶಿಕ್ಷಕರು ಎಂದರೆ ಇವರೇ

ವಿ.ಸೀ ಅವರು ಹಲವಾರು ಉದ್ಯೋಗಗಳಲ್ಲಿ ದುಡಿದರೂ ಅವರು ಜನಪ್ರಿಯರಾದುದು, ಪ್ರಸಿದ್ಧರಾದುದು ಅಧ್ಯಾಪಕವೃತ್ತಿಯಿಂದ, ಸಾಹಿತ್ಯಸೇವೆಯಿಂದ. ಕನ್ನಡ ನಾಡಿನ ಅಪೂರ್ವ ವಾಗ್ಮಿಗಳಲ್ಲಿ ಅವರೊಬ್ಬರು. ಅನಕೃ ಅವರಂಥ ವಾಗ್ಮಿಗಳ ಸಾಲಿಗೆ ಸೇರುವವರು. ಆದರೆ ಇಬ್ಬರ ಮಾತಿನ ಶೈಲಿ ಬೇರೆ ಬೇರೆ. ಎಂ.ಎ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವ್ಯಾಸಂಗಿಗಳಾದ ಅವರು ಕನ್ನಡ ಉಪನ್ಯಾಸಕರಾದರು. ಇಂಗ್ಲಿಷ್ ಅಧ್ಯಾಪಕರಿಗಿಂತ ಇಂಗ್ಲಿಷಿನಲ್ಲಿ ಹೆಚ್ಚು ಪ್ರಾವೀಣ್ಯ ಗಳಿಸಿದ್ದ ಅವರು ಇಂಗ್ಲಿಷಿನಲ್ಲಿ ಕನ್ನಡ ಪಾಠ ಮಾಡುವ ಮೇಷ್ಟ್ರೆಂದೇ ಹೆಸರು ಗಳಿಸಿದ್ದರು. ಅವರ ಪಾಠದ ತರಗತಿಗಳಲ್ಲಿ ಅವರ ಕಾಲೇಜಿನ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಬೇರೆ ತರಗತಿಯ, ಕಾಲೇಜಿನ ವಿದ್ಯಾರ್ಥಿಗಳು ಪಾಠ ಕೇಳಲು ಸೇರುತ್ತಿದ್ದರು. ಆಕಾಶವಾಣಿಯಲ್ಲೂ ವಿಶಿಷ್ಟ ಸೇವೆ ಸಲ್ಲಿಸಿದವರು ಅವರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ ಸಿಕ್ಕರೂ, ನಿಜವಾದ ಪ್ರೊಫೆಸರ್ ಆಗಿದ್ದರೂ, ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಪದವಿಗೆ ಅರ್ಹತೆ ಇದ್ದರೂ, ಅದು ಅವರಿಗೆ ದೊರೆಯಲಿಲ್ಲ. ಯಾರಾದರೂ ಪ್ರೊಫೆಸರ್ ಎಂದು ಕರೆದರೆ 'ಹಾಗೆ ಕರೆಯಬೇಡಿ. ನಾನು ಪ್ರೊಫೆಸರ್ ಅಲ್ಲವಪ್ಪಾ' ಎನ್ನುತ್ತಿದ್ದರು.

ನಾನೂ ನನ್ನ ಸ್ನೇಹಿತರೂ ಹತ್ತಾರು ವರ್ಷ ಕಾಲೇಜುಗಳಲ್ಲಿ ಕನ್ನಡ ಪಾಠ ಮಾಡಿದ್ದೇವೆ. ನಾನು ಕಾಲೇಜಲ್ಲಿ ಮಾತ್ರ ಪಾಠ ಮಾಡಿದ್ದೇನೆ. ಉಳಿದ ನನ್ನ ಹಲವು ಇತರೆ ವಿಷಯದ ಅಧ್ಯಾಪಕ ಮಿತ್ರರಂತೆ ಟ್ಯೂಷನ್ ಮಾಡಿಲ್ಲ. ವಿ.ಸೀ. ಅವರು ಕಾಲೇಜಲ್ಲೇ ಅಷ್ಟೇ ಅಲ್ಲದೆ ಉಚಿತ ಪಾಠ ಮಾಡಿದ್ದಾರೆ. ಖಾಸಗೀ ಪಾಠವನ್ನು ಹಣಕ್ಕಾಗಿ ಎಂದೂ ಹೇಳಿದವರಲ್ಲ. ಬಿ.ಎಂ.ಶ್ರೀ. ಅವರು ಅವರ ಗುರುಗಳು. ಅವರೂ ಅಷ್ಟೇ. ನ್ಯಾಷನಲ್ ಸ್ಕೂಲಿನಲ್ಲಿ ಫೇಲಾದ ಇಂಟರ್‌ಮಿಡಿಯೇಟ್ ವಿದ್ಯಾರ್ಥಿಗಳಿಗೆ ಉಚಿತ ಪಾಠ ಹೇಳಿದವರು. ವಿ.ಸೀ. ಅವರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಪಾಠ ಮಾಡಿದ್ದನ್ನು ನಾನು ಕದ್ದು ಕೇಳಿದ್ದೇನೆ. ಪ್ರಸಿದ್ಧ ವೈದ್ಯರೂ ಆದ ರಾಶಿ ಮತ್ತು ಅವರ ಮಿತ್ರರೂ ಒಮ್ಮೆ ಕಿಟಕಿಯ ಬಳಿ ನಿಂತು ನಾಗವರ್ಮನ ಕರ್ಣಾಟಕ ಕಾದಂಬರಿ ಸಂಗ್ರಹದ ಪಾಠ ಕೇಳಿ 'ಅಯ್ಯೋ ನಾವು ವಿಜ್ಞಾನದ ವಿದ್ಯಾರ್ಥಿಗಳು ನಮಗೆಲ್ಲಿ ಈ ಭಾಗ್ಯ' ಎಂದು ಕೊರಗಿ ವಿ.ಸೀ.ಯಲ್ಲಿ ಪಾಠ ಕೇಳುವ ಆಸೆ ವ್ಯಕ್ತಪಡಿಸಿದಾಗ, ಕಾಲೇಜಿನ ಇತರ ವೇಳೆಯಲ್ಲಿ ಅವರಿಗೆ ನಾಗವರ್ಮನ ಕಾದಂಬರಿ ಪಾಠ ಹೇಳಿದರು. ಅವರ ಆಪ್ತ ಮಿತ್ರರಾದ ಕೆ.ಎಸ್. ನರಸಿಂಹಸ್ವಾಮಿ ಅವರಿಗೆ ಇಲಿಯಟ್, ಡ್ರೈಡನ್ ಮುಂತಾದ ಪ್ರಸಿದ್ಧ ಆಂಗ್ಲಕವಿಗಳನ್ನು ಕುರಿತು ಇಂಗ್ಲಿಷ್ ಪ್ರೊಫೆಸರಿಗಿಂತ ಮಿಗಿಲಾಗಿ ಪಾಠ ಹೇಳಿದ್ದಾರೆ. ಇಂಥ ಆದರ್ಶ ಶಿಕ್ಷಕರು ಅಪರೂಪ ಎಂದರೆ ತಪ್ಪಿಲ್ಲ.

❑

೪೬. ತಲೆತಾಗಿದರೆ ತಾನೇ ಬುದ್ಧಿ ಬರುವುದು

ಕನ್ನಡ ಸಾಹಿತ್ಯ ಪರಿಷತ್ತು ತಯಾರಿಸಿದ ಸುದೀರ್ಘ ಕಾಲದ ಅನೇಕ ವಿದ್ವಾಂಸರ ಫಲವಾಗಿ ಮೂಡಿಬಂದ ಬೃಹತ್ ಕನ್ನಡಕೋಶ ಕನ್ನಡ ನಿಘಂಟು. ನಾಡಿನಲ್ಲಷ್ಟೇ ಅಲ್ಲ, ದೇಶವಿದೇಶಗಳಲ್ಲಿ ಪರಿಷತ್ತಿಗೆ ಖ್ಯಾತಿ ತಂದುಕೊಟ್ಟ ನಿಘಂಟು ಕೃತಿ. ಇದಕ್ಕೆ ಅನೇಕ ಜನ ಸಂಪಾದಕರು ಆಗಿಹೋದರು. ಅವರಲ್ಲಿ ಜಿ.ವೆಂ. ಅವರೂ ಒಬ್ಬರು. ಜಿ.ವೆಂ. ಅವರು ಪ್ರಧಾನ ಸಂಪಾದಕರಾದಾಗ ನಡೆದ ಒಂದು ಸಂಗತಿ. ಆ ಸಮಿತಿಯಲ್ಲಿ ತೀ.ನಂ.ಶ್ರೀ., ವೆಂಕಟಾಚಲಶಾಸ್ತ್ರಿ, ಡಿ.ಎಲ್.ಎನ್., ಬಸವಾರಾಧ್ಯ, ಮರಿಯಪ್ಪಭಟ್ಟ ಮೊದಲಾದ ವಿದ್ವಾಂಸರು ಸಮಿತಿಯಲ್ಲಿದ್ದರು. ಅಧಿಕಾರದ ಪ್ರಯುಕ್ತ ಪರಿಷತ್ತಿನ ಪದಾಧಿಕಾರಿಗಳೂ ನಿಯುಕ್ತರಾಗಿದ್ದರು. ಹೀಗಾಗಿ ಪರಿಚಿತರೂ ಅಪರಿಚಿತರೂ ಸೇರಿದ ನಿಘಂಟು ಸಮಿತಿ ಆಗಿತ್ತು. ಆಗಾಗ ವಿದ್ವತ್ತಿನ ಜನರ ಮಧ್ಯೆ ರೋಚಕ ಮಾತುಕತೆಗಳಾಗುತ್ತಿದ್ದವು. ಹಾಸ್ಯ–ಮಾರ್ಮಿಕ ನುಡಿಗಳು ಪ್ರತಿಧ್ವನಿಸುತ್ತಿದ್ದವು. ಪರಿಷತ್ತಿನ ನಿಘಂಟು ಕಚೇರಿ ಒಂದು ಕಾಲದಲ್ಲಿ ಪರಿಷತ್ತಿನ ಹಳೆಯ ಕಟ್ಟಡದ ಬಲಗಡೆ ವರಾಂಡದಲ್ಲಿ ಇರುತ್ತಿತ್ತು. ಇಕ್ಕಟ್ಟಾದ ಜಾಗ. ಕಿಟಕಿ ಬಾಗಿಲುಗಳನ್ನು ತೆರೆದರೆ ತಲೆ ತಾಗುತ್ತಿತ್ತು. ಬಾಗಿಲುಗಳನ್ನು ಮುಚ್ಚುತ್ತಾ ಸಾಗಬೇಕಾಗಿತ್ತು. ಒಮ್ಮೆ ಕಿಟಕಿಗಳ ಬಳಿ ಸಾಗುತ್ತಾ ಬಂದ ವಿದ್ವಾಂಸರ ಹಿಂದೆ ಜಿ.ವಿ. ಬರುತ್ತಿದ್ದರು. ಸಾಕಷ್ಟು ಎತ್ತರವಿದ್ದ ತೀನಂಶ್ರೀ ಅವರು ಜಿ.ವಿ. ಅವರಿಗೆ 'ಕಿಟಕಿ ಬಾಗಿಲು ತೆರೆದಿದೆ ಎಚ್ಚರ, ತಲೆ ತಾಗೀತು, ನೋಡಿಕೊಂಡು ಬನ್ನಿ', ಎಂದರು. (ಜಿ.ವಿ. ಅವರು ಕುಳ್ಳಾದ ವ್ಯಕ್ತಿ) ಆಗ ತೀ.ನಂ.ಶ್ರೀ.ಗೆ ಜಿ.ವಿ. 'ನಾನು ಕುಳ್ಳ, ತಲೆ ತಾಗುವುದಿಲ್ಲ' ಎಂದರು ನಗುತ್ತಾ. ಅದಕ್ಕೆ ತೀ.ನಂ.ಶ್ರೀ. 'ತಲೆ ತಾಗುವುದು ಒಳ್ಳೆಯದು .ಇಲ್ಲದಿದ್ದರೆ ಬುದ್ಧಿ ಬರೋಲ್ಲ' ಎಂದು ನಗೆಚಾಟಿಕೆ ಹಾರಿಸಿದರು. ವಿ.ಸೀ. ಅವರು ಮನೆಗೆ ವೆಂಕಣ್ಣಯ್ಯನವರು ಬಂದಾಗ ಆರೂವರೆ ಅಡಿ ವೆಂಕಣ್ಣಯ್ಯನವರಿಗೆ ಆರು ಅಡಿಯ ವಿ.ಸೀ. ಮನೆ ಬಾಗಿಲು ತಾಗಿದಾಗ 'ಅಯ್ಯೋ! ಎಂಥ ಕೆಲಸವಾಯಿತು...' ಎಂದು ವಿ.ಸೀ ಪರಿತಪಿಸಿದರು. ಆಗ ವೆಂಕಣ್ಣಯ್ಯ ಹೇಳಿದರು, 'ಸೀತಾರಾಮಯ್ಯ ಮನುಷ್ಯನಿಗೆ ತಲೆ ತಾಕಬೇಕು. ಆಗಲೇ ಬುದ್ಧಿ ಬರೋದು. ನೀವೇನೂ ಚಿಂತಿಸಬೇಡಿ' ಎಂದರು ನಗುತ್ತಾ. ಆದರೆ ವಿ.ಸೀ ಮಾರನೇ ದಿನವೇ ಆ ಕೋಣೆಗೆ ಏಳು ಅಡಿ ಎತ್ತರದ ಬಾಗಿಲು ಮಾಡಿಸಿದರು!

❑

೪೭. ಮರ ಕಡಿಸುವುದನ್ನು ಸಹಿಸಲಾರೆ

ವಿ.ಸೀ.ಯವರಂಥ ವೃಕ್ಷಪ್ರೇಮಿ, ಪರಿಸರಪ್ರೇಮಿ ಸಾಹಿತಿ ಕನ್ನಡದಲ್ಲಿ ಅಪರೂಪ. ನಮ್ಮ ಸಾಹಿತಿಗಳಲ್ಲಿ ಗಿಡಮರಗಳ ಬಗ್ಗೆ ತಮ್ಮ ಬರಹಗಳಲ್ಲಿ ಪ್ರೀತಿ ತೋರಿಸಿದವರಿದ್ದಾರೆ. ನಿಜಜೀವನದಲ್ಲಿ ಅಲ್ಲ. ಕೆಲವು ಸಾಹಿತಿಗಳು ಸುಂದರ ಮಲ್ಲಿಗೆತೋಟ ಇದ್ದ ಅಂಗಳದಲ್ಲಿ ಅದನ್ನು ಕಡಿದು ಬಾಡಿಗೆಗೆ ಅಂಗಡಿ ಕಟ್ಟಿಸಿದ್ದಾರೆ. ಆ ಗುಂಪಿಗೆ ಸೇರಿದವರಲ್ಲ ವಿ.ಸೀ. ಬಿ.ಜಿ.ಎಲ್.ಸ್ವಾಮಿ, ಸ್ವಿ.ವಿ.ರಾಮನ್, ಅಂಥ ರಸಿಕ ವರ್ಗಕ್ಕೆ ಸೇರಿದವರು. ವಿ.ಸೀ. ಅವರ ವೃಕ್ಷಪ್ರೀತಿ, ವೃಕ್ಷಾಸಕ್ತಿ, ವೃಕ್ಷ ಪರಿಜ್ಞಾನಕ್ಕೆ ನನ್ನ ಅನುಭವದ ಸಂಗತಿಗಳನ್ನೇ ಹೇಳಬಹುದಾಗಿದೆ.

ವಿ.ಸೀ. ಅವರ ಮನೆಯ ಹಿತ್ತಲಲ್ಲಿ ದೊಡ್ಡ ಹಲಸಿನಮರ ಒಂದಿತ್ತು. ಅದರ ಬುಡದಲ್ಲಿ ಆಟವಾಡಿದ, ಅದರ ಹಣ್ಣಿನ ಸವಿ ಕಂಡ ಅನುಭವ ನನ್ನದು. ಅಲ್ಲಿ ಔಟ್‌ಹೌಸ್ ಕಟ್ಟಿಸಲು, ಅದಕ್ಕಾಗಿ ಆ ಮರ ಕಡಿಸಲು, ಮಕ್ಕಳು ನಿರ್ಧರಿಸಿದಾಗ ವಿ.ಸೀ. ಅವರಿಗಾದ ವ್ಯಥೆ ಅಷ್ಟಿಷ್ಟಲ್ಲ. ಆ ಸಮಯಕ್ಕೆ ಸರಿಯಾಗಿ ಕು.ಶಿ.ಹರಿದಾಸಭಟ್ಟರು ವಿ.ಸೀ. ಅವರನ್ನು ಸಮಾರಂಭವೊಂದಕ್ಕೆ ಆಹ್ವಾನಿಸಲು ಅವರ ಮನೆಗೆ ಬಂದರು. ವಿ.ಸೀ. ಕೂಡಲೇ 'ನೀವು ಈಗ ಬಂದು ಕರೆದಿದ್ದು ಬಹಳ ಒಳ್ಳೆಯದಾಯಿತು. ಖಂಡಿತ ಕಾರ್ಯಕ್ರಮಕ್ಕೆ ಬರುತ್ತೇನೆ' ಎಂದರು. 'ಈಗ ಕರೆದಿದ್ದು ಒಳ್ಳೆಯದಾಯಿತು ಎಂದಿರಲ್ಲ, ಏನು ವಿಶೇಷ?' ಎಂದು ಹರಿದಾಸಭಟ್ಟರು ಕೇಳಿದರು. ವಿ.ಸೀ. ಆಗ ಹೇಳಿದರು: 'ನನ್ನ ಮಕ್ಕಳು ಮನೆಯ ಹಿಂಭಾಗದಲ್ಲಿ ಔಟ್‌ಹೌಸ್ ಕಟ್ಟಲು ತೀರ್ಮಾನಿಸಿದ್ದಾರೆ. ಅದಕ್ಕಾಗಿ ಹಿತ್ತಲಲ್ಲಿರುವ ಹಳೆಯ ಹಲಸಿನ ಮರವನ್ನು ಕಡಿದು ಹಾಕುತ್ತಾರಂತೆ. ಆ ಘೋರ ಕಾರ್ಯ ನಡೆಯುವಾಗ ನಾನು ಇಲ್ಲಿ ಇರಬಯಸುವುದಿಲ್ಲ. ಆದ್ದರಿಂದ ಸಂತೋಷವಾಗಿ ನಿಮ್ಮ ಸಮಾರಂಭಕ್ಕೆ ಬರುತ್ತೇನೆ ಎಂದೆ'.

ಅವರ ಮನೆಯ ಹಿತ್ತಲಲ್ಲಿ ಇದ್ದ ಹಲಸಿನ ಮರದ ಹಣ್ಣಿನ ಸವಿ ಸವಿದವನು, ಆ ಮರದ ಬುಡದಲ್ಲಿ ಅವರ ಮಗನೊಂದಿಗೆ ಬಾಲ್ಯದಲ್ಲಿ ಆಟವಾಡಿದ ಸವಿನೆನಪು ನನಗೆ ಈಗಲೂ ಇದೆ.

❑

೪೮. ಸಸ್ಯಕಾಶಿಯ ಪ್ರಸಿದ್ಧ ಸಾಹಿತಿಗಳು

ಲಾಲ್‌ಬಾಗ್ ಕೇವಲ ವಿ.ಸೀ., ಕೆ.ಎಸ್.ನ., ಮೋಟಗಾನಹಳ್ಳಿ ತ್ರಿಮೂರ್ತಿಗಳಿಗಷ್ಟೇ ಅಲ್ಲ, ಕನ್ನಡದ ಅನೇಕ ಸಾಹಿತಿಗಳಿಗೆ ನಿತ್ಯ ಯಾತ್ರಾಸ್ಥಳವಾಗಿದೆ.

ಕುವೆಂಪು ಅವರು ಬೆಂಗಳೂರಿನಲ್ಲಿದ್ದಾಗ ವಿಶ್ವೇಶ್ವರಪುರಂನಲ್ಲಿ ವಾಸವಾಗಿದ್ದರು. ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಅವರು ದಿನಾ ಲಾಲ್‌ಬಾಗ್ ಯಾತ್ರೆ ಮಾಡುತ್ತಿದ್ದರು.

ಹೊಸಕೆರೆ ಚಿದಂಬರಯ್ಯನವರು ಕನ್ನಡದ ಪ್ರಸಿದ್ಧ ವಾಗ್ಮಿ, ವೇದಾಂತಿ, ಸಾಹಿತ್ಯಗ್ರಂಥಗಳ ರಚನಕಾರರು. ಅವರು ಶಂಕರಮಠದ ನಿವಾಸದಲ್ಲಿದ್ದಾಗ ನಿತ್ಯ ಲಾಲ್‌ಬಾಗಿಗೆ ಹೋಗಿ ಬರುತ್ತಿದ್ದರು.

ಹೆಚ್.ನರಸಿಂಹಯ್ಯನವರು ಬೆಳಗಿನ ಹೊತ್ತು ಲಾಲ್‌ಬಾಗ್ ಸಂಚಾರ ಮಾಡುತ್ತಿದ್ದವರಲ್ಲಿ ಒಬ್ಬರು. ಅವರು ವಿನೋದವಾಗಿ ಒಂದು ಮಾತನ್ನು ಹೇಳುತ್ತಿದ್ದರು. 'ಅನೇಕರು ನಾಯಿಯೊಡನೆ ಲಾಲ್‌ಬಾಗಿಗೆ ವಾಕಿಂಗ್ ಬರ್ತಾರೆ. ಆ ನಾಯಿಗಳಲ್ಲಿ ಒಂದಾದರೂ ಕನ್ನಡ ನಾಯಿ ಇಲ್ಲ, ಎಲ್ಲಾ ಟೈಗರ್, ಡಿಂಕೂ, ಜಾನಿ, ಬೆಲ್ ಇತ್ಯಾದಿ ಇಂಗ್ಲಿಷ್ ನಾಯಿಗಳೇ!' ಎನ್ನುತ್ತಿದ್ದರು.

ವಿ.ಸೀ., ಕೆ.ಎಸ್.ನ., ಮೋಟಗಾನಹಳ್ಳಿ ಈ ತ್ರಿಮೂರ್ತಿ ಸಾಹಿತಿಗಳ ಮಾತುಕತೆಗಳು ಸಾಹಿತ್ಯದ ರಸಕವಳವಾಗಿರುತ್ತಿತ್ತು. ದಾರಿಯುದ್ದಕ್ಕೂ ವಿ.ಸೀ. ಅವರು ಎಡಬಲಗಳ ಗಿಡಮರಗಳ ವೈಶಿಷ್ಟ್ಯ ತಿಳಿಸುತ್ತಾ ಇದ್ದರೆ, ಮಧ್ಯೆ ಮಧ್ಯೆ ಸಂಸ್ಕೃತದ ಚಾಟೂಕ್ತಿಗಳನ್ನು ಪ್ರಸಿದ್ಧ ಸಂಸ್ಕೃತ ಕಾವ್ಯಗಳ ರಸಭರಿತ ಸೂಕ್ತಿಗಳನ್ನು ಮೋಟಗಾನಹಳ್ಳಿ ಉಲ್ಲೇಖಿಸುತ್ತಿದ್ದರೆ, ಕೆ.ಎಸ್.ನ. ಸಾಮಾಜಿಕ ವಾಸ್ತವ ಸಂಗತಿಗಳ ಬಗ್ಗೆ ಸೊಂಪಾದ ಚುಟುಕು ನುಡಿ ಆಡುತ್ತಿದ್ದರು. ಇಂಥಾ ಸಾಹಿತ್ಯಸಂಗಮ ಯಾತ್ರೆ ಈಗ ಲಾಲ್‌ಬಾಗ್‌ನಲ್ಲಿ ಅಪರೂಪ.

❑

೪೯. ತ್ರಿಮೂರ್ತಿಗಳ ನಿತ್ಯಯಾತ್ರೆ ಲಾಲ್‌ಬಾಗಿಗೆ

ವಿ.ಸೀ. ಎಂದರೆ ಲಾಲ್‌ಬಾಗ್, ಲಾಲ್‌ಬಾಗ್ ಎಂದರೆ ವಿ.ಸೀ. ಲಾಲ್‌ಬಾಗನ್ನು ಕುರಿತು ಹಲವಾರು ಕವನಗಳನ್ನು ಬರೆದಿದ್ದಾರೆ. ವಿ.ಸೀ. ಲಾಲ್‌ಬಾಗ್ ಯಾತ್ರೆ ಪ್ರತಿದಿನದ ಪಂಪಾಯಾತ್ರೆ ಎನ್ನಬೇಕು. ಈ ಯಾತ್ರೆಯ ನಿತ್ಯ ಯಾತ್ರಿಕರು ಮೂವರು, ವಿ.ಸೀ., ಕೆ.ಎಸ್.ನರಸಿಂಹಸ್ವಾಮಿ, ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಕವಿ, ಶಾಸ್ತ್ರಿ ರಸಿಕತ್ರಯರು ಕನ್ನಡ ಸಾಹಿತ್ಯ ಅಂಗಳದಲ್ಲಿ ಸಂಜೆ ಸಂಧಿಸುತ್ತಿದ್ದರು. ಪರಿಷತ್ತಿನ ಹಿಂದೆ ರಾಮೇಶ್ವರ ದೇವಸ್ಥಾನದ ಬಳಿ ಇದ್ದ ಶಾಸ್ತ್ರಿಗಳು, ಪಕ್ಕದ ಗ್ರೈನ್ ಮರ್ಚೆಂಟ್ ಬ್ಯಾಂಕಿನ ಆವರಣದಲ್ಲಿದ್ದ ಹೌಸಿಂಗ್ ಬೋರ್ಡಿನಲ್ಲಿ ಕೆಲಸ ಮಾಡುತ್ತಿದ್ದ ಕೆಎಸ್‌ನ ಅವರು ಪರಿಷತ್ತಿನ ಅಂಗಳಕ್ಕೆ ಜಮಾಯಿಸುವ ವೇಳೆಗೆ ಸೆಂಟ್ರಲ್ ಕಾಲೇಜಿನಿಂದ ವಿ.ಸೀ. ಬಂದು ಸೇರಿಕೊಂಡಾಗ ಲಾಲ್‌ಬಾಗ್ ಯಾತ್ರೆ ಪ್ರಾರಂಭವಾಗುತ್ತಿತ್ತು. ಆ ದೃಶ್ಯ ನೋಡಲು ಎರಡು ಕಣ್ಣುಗಳು ಸಾಲವು. ಕೈಯಲ್ಲಿ ಛತ್ರಿ, ಕ್ಲೋಸ್ ಕಾಲರ್ ಕೋಟು, ಕಚ್ಚೆಪಂಚೆ, ಮೈಸೂರು ರುಮಾಲು, ಶಿಸ್ತಿನ ವಿ.ಸೀ.; ಕಚ್ಚೆಪಂಚೆ, ಕ್ಲೋಸ್ ಕಾಲರ್ ಕೋಟು, ನಶ್ಯದ ಡಬ್ಬಿ, ಕೈಯಲ್ಲಿ ಕೋಲು, ಕರಿಟೋಪಿ, ಹಣೆಯ ಮೇಲೆ ಗಂಧದ ಆಜಾನುಬಾಹು, ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ; ಕ್ರಾಪಿನ ತಲೆ, ಹೆಗಲಮೇಲೆ ಶಲ್ಯ, ದಟ್ಟಿಪಂಚೆ, ಜುಬ್ಬ ಅಥವಾ ಷರಟಿನ ನರಸಿಂಹಸ್ವಾಮಿ ಈ ಮೂವರ ಸಂಧ್ಯಾ ಜಂಬೂ ಸವಾರಿ, ನೋಡುವವರ ಕಣ್ಣಿಗೆ ಹಬ್ಬ; ಅದೊಂದು ಚಲಿಸುವ ಕನ್ನಡ ಸಾಹಿತ್ಯ ಸಮ್ಮೇಳನ.

ಆ ಮೂವರ ಜತೆಯನ್ನು ಚಲಿಸುವ ಸಾಹಿತ್ಯ ಸಮ್ಮೇಳನ ಎಂದೆ ನಿಜ. ಒಂದೆರಡು ಬಾರಿ, ಕೆಲವೊಮ್ಮೆ ಅವರಿಲ್ಲದಾಗ, ವಿ.ಸೀ. ಜತೆ ಲಾಲ್‌ಬಾಗ್ ಯಾತ್ರಾಭಾಗ್ಯ ನನಗೆ ದೊರಕಿದೆ. ವಿ.ಸೀ. ಅವರು ಒಂಟಿಯಾಗಿ ಲಾಲ್‌ಬಾಗಿಗೆ ಹೋಗುತ್ತಿರಲಿಲ್ಲ. ಸದಾ ಸತ್ಸಂಗವಾಸಿ. ಮೌನಕ್ಕಿಂತ ಅವರಿಗೆ ಮಾತು ಪ್ರಿಯ. ಆಗೆಲ್ಲಾ ವಿ.ಸೀ. ಜತೆಯಲ್ಲಿ ಇದ್ದವರೊಡನೆ ಅವರು ಮಾತಾಡುತ್ತಾ ಮಾತಾಡುತ್ತಾ ಅಲ್ಲಲ್ಲೇ ದಾರಿಯಲ್ಲೇ ಪೃಷ್ಠಕ್ಕೆ ಕೋಲೂರಿಕೊಂಡು ಪುಟ್ಟ ಪುಟ್ಟ ಉಪನ್ಯಾಸಗಳನ್ನು ನೀಡುತ್ತಾ ಮಾತಿನ ಮಂಟಪ ನಡೆಸುತ್ತಾ ಸಾಗುತ್ತಿದ್ದರು.

ಅವರ ಸಂಚಾರದ ನಕ್ಷೆ ಪ್ರಾರಂಭ–ನ್ಯಾಷನಲ್ ಕಾಲೇಜು ಸಾಲುಮರಗಳ ರಸ್ತೆ (ಈಗಿನ ಮರಗಳಲ್ಲ, ಆಗಿನ ಬೃಹದ್ ವೃಕ್ಷಗಳ ಸಾಲುಮರಗಳು ಇದ್ದ ಕಾಲ. ಮಧ್ಯಾಹ್ನವಾದರೂ ಬಿಸಿಲೇ ಬೀಳದಷ್ಟು ದಟ್ಟವಾಗಿ ಬೆಳೆದ ಮರಗಳ ಸಾಲು. ಹತ್ತಾರು ವರ್ಷ ಆ ಮರಗಳ ಬುಡದಲ್ಲಿ ಪುಸ್ತಕಗಳನ್ನು ಓದಿದ ಭಾಗ್ಯ ನನ್ನದು. ಓದಲು ಮನೆಯಲ್ಲಿ ಜಾಗವಿರಲಿಲ್ಲ.) ಆ ಸಾಲುಮರಗಳ ರಸ್ತೆಯಿಂದ ವಾಣೀವಿಲಾಸ ರಸ್ತೆಗೆ ಹೊರಟು ಲಾಲ್‌ಬಾಗ್ ಪ್ರವೇಶಿಸಿ, ಒಳಗೆಲ್ಲಾ ಸುತ್ತಾಡಿ, ಮಹಾದ್ವಾರದಿಂದ ಮಿನರ್ವಾ ಟಾಕೀಸ್ ರೋಡಿನಿಂದ ಸ್ಕೌಟ್ ಹೆಡ್‌ಕ್ವಾರ್ಟರ್ಸ್ ಮುಂದೆ ಹಾಯ್ದು, ಪರಿಷತ್ತಿನ ಕಡೆ ಇಲ್ಲವೆ ಶಾಸ್ತ್ರಿಗಳ ಮನೆಯ ಕಡೆ ಸೇರಿ ಚೆದುರುತ್ತಿದ್ದರು. ಒಮ್ಮೊಮ್ಮೆ ದಿಕ್ಕು ಬದಲಾಯಿಸಿ

ಮಿನರ್ವಾ ಕಡೆಯಿಂದ ಹೊರಟು ಲಾಲ್‌ಬಾಗ್ ಮೂಲಕ ನ್ಯಾಷನಲ್ ಕಾಲೇಜ್ ಕಡೆಯಿಂದ ಬಂದಿದ್ದೂ ಉಂಟು. ಹೇಗೇ ಸುತ್ತು ಬರಲಿ, ಆಗಿನ ಯಜ್ಞಪ್ಪನ ಹೋಟಲಿನ, ಈಗಿನ ಎಂ.ಟಿ.ಆರ್.ನ ದೋಸೆ ಆತಿಥ್ಯ ತಪ್ಪಿದ್ದಲ್ಲ. ಅವರ ದೋಸೆ ಪ್ರಬಂಧಕ್ಕೆ ಎಂ.ಟಿ.ಆರ್. ದೋಸೆಯೇ ಆಕರವೆಂದರೆ ತಪ್ಪಲ್ಲ. ಒಂದೊಂದು ಸಲ ಈ ತ್ರಿಮೂರ್ತಿಗಳು ಒಟ್ಟುಗೂಡುತ್ತಿರಲಿಲ್ಲ. ವಿ.ಸೀ. ಒಬ್ಬರೇ ಆದಾಗ ಇನ್ನಾರನ್ನಾದರೂ ಜತೆ ಮಾಡಿಕೊಂಡು ಹೋಗುತ್ತಿದ್ದರು. ಸಾಹಿತ್ಯಕ್ಷೇತ್ರದಲ್ಲಿ ಒಂಟಿಸಲಗ ಆದರೂ, ವಾಯು ವಿಹಾರದಲ್ಲಿ ಒಂಟಿ ಹೋಗುತ್ತಿರಲಿಲ್ಲ.

❑

೫೦. ಕೃಷ್ಣರಾಜೇಂದ್ರ ಪರಿಷನ್ಮಂದಿರದ ಉದ್ಘಾಟನೆ ಪ್ರಸಂಗ

ಲಾಲ್‌ಬಾಗಿನ ಸಂಜೆ ಯಾತ್ರೆಗೆ ಮೋಟಗಾನಹಳ್ಳಿ, ಕೆ.ಎಸ್.ನ. ಬಾರದಿದ್ದಾಗ ಪರಿಷತ್ತಿನ ಕಟ್ಟಡದ ಎದುರಿನಲ್ಲಿ ಕಾಂಪೌಂಡ್ ಮೇಲೆ (೩ ಅಡಿ ಕಾಂಪೌಂಡ್ ಆಗಿತ್ತು) ಕುಳಿತಿದ್ದ ನಮ್ಮಂಥ ಸಾಹಿತ್ಯಪ್ರೇಮಿ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುತ್ತಿದ್ದರು. ಆ ಭಾಗ್ಯ ನನಗೆ ಹಲವು ಬಾರಿ ಸಿಕ್ಕಿದೆ. ಆಗೆಲ್ಲ ದಾರಿಯುದ್ದಕ್ಕೂ ನನಗೆ ಶ್ರೀ ಕೃಷ್ಣ ಅರ್ಜುನನಿಗೆ ಉಪದೇಶಿಸಿದಂತೆ ಬೋಧೆ, ನನ್ನದೇನಿದ್ದರೂ ಅರ್ಜುನನಂತೆ ಪ್ರಶ್ನಿಸುವುದು ಅಷ್ಟೆ. ತೆರೆದ ಬಾಗಿಲು, ಅರಿವಿನ ಮಿಂಚು, ರಸಧಾರೆ ಅವರ ಮಾತುಗಳು. ಸ್ವಾರಸ್ಯವಾದ ಸಾಹಿತ್ಯದ ಭಾಗಗಳನ್ನು, ಚಿಟ್ಟೆ ಕಥೆಗಳನ್ನು, ಕವಿಗಳ ಮನೋಧರ್ಮಗಳನ್ನು ವಿವರಿಸುತ್ತಿದ್ದ ಅವರು ಯಾರ ಬಗ್ಗೆಯೂ ವೈಯಕ್ತಿಕ ನೆಲೆಯಲ್ಲಿ ಮಾತಾಡುತ್ತಿರಲಿಲ್ಲ. ಏನಿದ್ದರೂ ವ್ಯಕ್ತಿತ್ವದ ನಿರೂಪಣೆ, ಸಾಹಿತ್ಯದ ನಿಲುವು, ವಿನೋದ ದೃಷ್ಟಿಗಳು ವ್ಯಕ್ತವಾಗುತ್ತಿದ್ದವು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗದ ಪ್ರಖ್ಯಾತ ಸಾಹಿತಿಗಳ ಅನೇಕ ಸಂಗತಿಗಳನ್ನು ಅವರು ಹೇಳುತ್ತಿದ್ದರು. ನೆನಪಿಟ್ಟುಕೊಳ್ಳಲು ಸಾಧ್ಯವಿಲ್ಲದಷ್ಟು ಸಂಗತಿಗಳನ್ನು ತಿಳಿಸುತ್ತಿದ್ದರು. ಒಮ್ಮೆ ಅವರ ಜೊತೆ ಲಾಲ್‌ಬಾಗಿಗೆ ವಾಕಿಂಗ್ ಹೋದಾಗ ಅವರು ೧೮ ಜನರ ವಿಚಾರಗಳನ್ನು, ೩೨ ಪುಸ್ತಕಗಳ ಮಾತುಗಳನ್ನು ಹೇಳಿದ್ದನ್ನು ಲೆಕ್ಕ ಹಾಕಿದ್ದೆ. ಎಷ್ಟೋ ಸ್ವಾರಸ್ಯದ ಸಂಗತಿಗಳನ್ನು ಹೇಳಿದ್ದುಂಟು.

ಅವುಗಳಲ್ಲಿ ಎರಡು ಸಂಗತಿಗಳು ನೆನಪಿಗೆ ಬರುತ್ತಿವೆ. ಮೊದಲನೆಯದಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಹಳೆಯ ಕಟ್ಟಡ ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಕಟ್ಟಡದ ಉದ್ಘಾಟನೆಯನ್ನು ಆಗ ಚೀಫ್ ಇಂಜಿನಿಯರಾಗಿದ್ದು ಪರಿಷತ್ತಿನ ಕಟ್ಟಡ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕರ್ಪೂರ ಶ್ರೀನಿವಾಸರಾಯರ ಕೈಲಿ ಮಾಡಿಸಬೇಕೆಂದು ನಿರ್ಧರಿಸಿದ್ದರು. ಆ ಸಮಯದಲ್ಲಿ ಕರ್ಪೂರ ಶ್ರೀನಿವಾಸರಾಯರು ವಯಸ್ಸಾಗಿ, ಸ್ಥೂಲಕಾಯರಾಗಿದ್ದರು ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದರು. ಹೊರಗೆ ಬರುವುದೇ ಕಷ್ಟವಾಗಿತ್ತು. ಬೇರೆ ಯಾರ ಕೈಲಾದರೂ ಉದ್ಘಾಟನೆ ನಡೆಸಿಕೊಳ್ಳಿ ಎಂದು ಅವರು ತಿಳಿಸಿದರು. ಆದರೆ ಪರಿಷತ್ತಿನವರು ಒಪ್ಪಲಿಲ್ಲ. ಪರಿಷತ್ತಿಗಾಗಿ ದುಡಿದ ಅವರೇ ಬರಬೇಕೆಂದರು. ಹಾಗಾಗಿ ಅವರು ಬರಲೇ ಬೇಕಾಯಿತು. ಆಗ ಅವರು ತಮ್ಮ ಹಳೆಯ ಕಾರಿನಲ್ಲಿ ಕುಳಿತು ಬಂದರು. ಕಾರಿನಿಂದ ಇಳಿದು ನಡೆಯಲಾಗುತ್ತಿರಲಿಲ್ಲ. ರಸ್ತೆಯಲ್ಲಿಯೇ ಕಾರು ನಿಲ್ಲಿಸಿ ಕಾರಿನಲ್ಲಿ ಕುಳಿತ ಕಡೆಯಿಂದಲೇ ಶಿಲಾಫಲಕಕ್ಕೆ ಕಟ್ಟಿದ ಬಟ್ಟೆಯ ಉದ್ದನೇ ಹಗ್ಗವನ್ನು ಎಳೆದು ಬಟ್ಟೆ ಸರಿಸಿ ಉದ್ಘಾಟನೆ ನಡೆಸಿದರು. 'ಒಂದು ಸಂಸ್ಥೆಗೆ ನಿಜವಾಗಿ ದುಡಿದವರನ್ನು ಗುರುತಿಸುವುದು ಮತ್ತು ಸಂಸ್ಥೆಯ ಮೇಲಿನ ಪ್ರೇಮದಿಂದ ಕೈಲಾಗದಿದ್ದರೂ ಬಂದು ಕರ್ತವ್ಯ ನಡೆಸುವುದು ಈಗಿನವರಲ್ಲಿ ಎಲ್ಲಿದೆಯಪ್ಪ?' ಎಂದಿದ್ದರು ವಿ.ಸೀ. ಡಿವಿಜಿ ಅವರು ಈ ಬಗ್ಗೆ ಜ್ಞಾಪಕ ಚಿತ್ರಶಾಲೆಯಲ್ಲಿ ಬರೆದಿದ್ದಾರೆ.

೫೧. ಎಂ.ಟಿ.ಆರ್.ನಲ್ಲಿ ಮಸಾಲೆದೋಸೆ

ವಿ.ಸೀ. ಅವರಿಗೆ ಮಸಾಲೆ ದೋಸೆ ಬಲುಪ್ರಿಯ. ಅವರು ತಮ್ಮ ಪ್ರಬಂಧ ಸಂಕಲನವೊಂದರಲ್ಲಿ 'ದೋಸೆ' ಎಂದು ಒಂದು ಸುದೀರ್ಘ ಪ್ರಬಂಧವನ್ನೇ ಬರೆದಿದ್ದಾರೆ. ಅದರಲ್ಲಿ ರುಚಿಕಟ್ಟಾದ ಮಸಾಲೆದೋಸೆ ಹೇಗಿರುತ್ತದೆ, ಹೇಗಿರಬೇಕು ಎಂದೆಲ್ಲಾ ವಿವರಿಸಿದ್ದಾರೆ. ಲಾಲ್‌ಬಾಗ್ ಯಾತ್ರೆ ಎಂದರೆ ವಾಪಸ್ ಬರುವಾಗ ಎಂ.ಟಿ.ಆರ್.(ಯಜ್ಞಪ್ಪನ ಹೋಟೆಲ್)ನಲ್ಲಿ ಮಸಾಲೆ ದೋಸೆ ಸ್ವಾಹಾಕಾರ್ಯ ಕಡ್ಡಾಯ. ಖಾಯಂ ಗಿರಾಕಿಗಳಾದ ಇವರು ಬಂದರೆ ಗಲ್ಲಾಪೆಟ್ಟಿಗೆಯ ಮೇಲೆ ಕುಳಿತ ಮಾಲಿಕರ ನಗೆಮುಖ ಸ್ವಾಗತ–ಉಪಚಾರ. ಒಮ್ಮೆ ಇವರ ಜತೆ ಹೋದಾಗ ಬಿಲ್ಲು ಕೊಡಲು ನಾನು ಮುಂದಾದೆ. ಆಗ ಯಾವುದೋ ಹಣ ನನ್ನ ಜೇಬಲ್ಲಿತ್ತು. ವಿ.ಸೀ.ಗೆ ದೋಸೆ ಕೊಡಿಸಿದೆ ಎಂದು ಸ್ನೇಹಿತರಲ್ಲಿ ಹೇಳಿಕೊಳ್ಳುವ ಆಸೆಯಿಂದ, 'ಸಾರ್, ನಾನು ಕೊಡ್ತೇನೆ ಬಿಲ್ಲನ್ನು' ಎಂದು ಜೇಬಿಗೆ ಕೈ ಹಾಕಿದೆ. ಆಗ ವಿ.ಸೀ. ನನ್ನ ಕೈ ತಡೆದು ಬಿಲ್ ಪಾವತಿಸಿ ಹೇಳಿದರು. 'ನೀವು ವಿದ್ಯಾರ್ಥಿ. ನಿಮಗೆಲ್ಲಿಂದ ಬರುತ್ತೆ ಹಣ? ಸಂಪಾದನೆ ಇದೆಯೋ? ಹಿರಿಯರು ಬೇರೆ ಉದ್ದೇಶಕ್ಕೆ ಕೊಟ್ಟ ಹಣವನ್ನು ಇದಕ್ಕೆ ಬಳಸಲು ನಿಮಗೆಲ್ಲಿದೆ ಅಧಿಕಾರ? ಅಲ್ಲವೇ?' ಎಂದರು. ನಾನು ತೆಪ್ಪಗಾದೆ. 'ಏನೋ ಸಾರ್... ನಿಮ್ಮಂಥ ಹಿರಿಯ ಸಾಹಿತಿಗಳಿಗೆ ದೋಸೆ ಕೊಡಿಸಿದ ಹೆಮ್ಮೆ, ತೃಪ್ತಿ ನನಗಿರುತ್ತೆ ಅಂತ ಹಣ ಕೊಡಬೇಕೆಂದಿದ್ದೆ' ಎಂದೆ. ಅದಕ್ಕವರು 'ಕಂಡವರ ಹಣದಲ್ಲಿ ನಮ್ಮ ಚಪಲವನ್ನು ತೀರಿಸಿಕೊಳ್ಳಬಾರದು. ನಮ್ಮ ಸಂಪಾದನೆಯಲ್ಲಿ ನಮ್ಮ ಚಪಲ ತೀರಬೇಕು. ನೀವಿನ್ನೂ ವಿದ್ಯಾರ್ಥಿಗಳು. ನೀವು ಸಂಪಾದನೆ ಮಾಡಿದಾಗ ಬಿಲ್ಲನ್ನು ಕೊಡುವಿರಂತೆ' ಎಂದು ಜೀವನಪಾಠ ಹೇಳಿದರು.

❑

೫೨. ವಿದ್ವತ್ತಿನ ಗಣಿ ಸಾಹಿತ್ಯ ಶಿರೋಮಣಿ

ಒಮ್ಮೆ ಪರಿಷತ್ತಿನ ಮುಂದೆ ನಿಂತಿದ್ದ ವಿ.ಸೀ. ಜತೆ ಲಾಲ್‌ಬಾಗ್ ಸಂಚಾರ ಹೊರಟಾಗ, 'ಇವತ್ತು ಮಳೆ ಬರುವ ಹಾಗಿದೆ. ಸ್ವಲ್ಪ ದೂರ ಹೋಗಿ ಬರೋಣ' ಎಂದು ಹೇಳಿ ನ್ಯಾಷನಲ್ ಕಾಲೇಜಿನ ಹಿಂಭಾಗದಲ್ಲಿ ಇದ್ದ ಬ್ಯಾಸ್ಕೆಟ್ ಬಾಲ್ ಮೈದಾನದಲ್ಲಿ ಬಂದು ಕುಳಿತರು. ಅಂದು ವಿ.ಸೀ. ಅವರ ಎಡ-ಬಲಭುಜಗಳು (ಕೆಎಸ್‌ನ-ಮೋಟಗಾನಹಳ್ಳಿ) ಇಲ್ಲದ್ದು ಬಿಕೋ ಎನಿಸುತ್ತಿತ್ತು. ಅಲ್ಲಿ ಕೂತಾಗ, ಬಿ.ಎಂ.ಶ್ರೀ. ಅವರ ವಿಷಯ ಹೇಳುತ್ತಾ ಹೇಳಿದ ಸಂಗತಿ ಇದು.

ಪರಿಷತ್ತಿನ ಪಂಪಭಾರತವನ್ನು ಸಂಪಾದಿಸುತ್ತಿದ್ದ ಕಾಲ. ಹೇಗೆ ಆ ಕಾರ್ಯ ನಡೆಯುತ್ತಿತ್ತು, ಶಂಕರಪುರದ ೪ನೇ ರಸ್ತೆಯ ಸೂರಪ್ಪನವರ ಮನೆಯಿಂದ ಪರಿಷತ್ತಿನ ಕಟ್ಟಡದವರೆಗೆ ಪರಿಷತ್ತಿನ ಕಚೇರಿ ಹೇಗೆ ಪಲ್ಲಟಗೊಂಡಿತು ಇತ್ಯಾದಿ ಹೇಳುತ್ತಾ, ಪರಿಷತ್ತು ಸಿದ್ಧಪಡಿಸುತ್ತಿದ್ದ ಪಂಪಭಾರತದ ಗ್ರಂಥ ಸಂಪಾದನಾ ಕಾರ್ಯದ ಸಮಸ್ಯೆಗಳನ್ನು, ಅವುಗಳ ಪರಿಹಾರವಾಗುತ್ತಿದ್ದ ರೀತಿಯನ್ನು ಹೇಳಿದರು.

ಪಂಪಭಾರತದ ಶಿಶುಪಾಲ ವಧಾ ಪ್ರಸಂಗದಲ್ಲಿ (೬-೪೨) ಒಂದು ಪದ್ಯ ಬರುತ್ತದೆ.

ಮುಳಿದು ಶಿಶುಪಾಲನಾ ಸಭೆ
ಯೊಳಗೆ ಮಹಾಪ್ರಳಯ ಜಲಧಿ ನಾದದಿಂ ಇರದೆ ಉ
ಚ್ಚಳಿಸಿ ನುಡಿದಂ ತೆ। ಕಳೆ!
ಕಳೆ ಹರಿಗೆ ಎತ್ತಿದ ಅನರ್ಘ್ಯದರ್ಘ್ಯಮ್ಯಂ ಧರ್ಮಸುತಾ

ಶಿಶುಪಾಲನು ಕೆರಳಿ ಆ ಸಭೆಯಲ್ಲಿ ಪ್ರಳಯಕಾಲದ ಸಾಗರ ಘೋಷದಿಂದ ಇದ್ದ ಕಡೆಯಿಂದ ಮೇಲಕ್ಕೆ ನೆಗೆದು ಹೇಳಿದನು. ಧರ್ಮಜನೇ ಕೃಷ್ಣನಿಗೆ ನೀಡಲು ಎತ್ತಿದ ಅಮೂಲ್ಯ ಅಗ್ರೋದಕವನು ಚೀ ತೆಗೆತೆಗೆ ಎಂದು ಕರ್ಕಶವಾಗಿ ಹೇಳಿದನು.

ಇಲ್ಲಿ ಹಸ್ತಪ್ರತಿಯಿಂದ ಪದ್ಯ ಎತ್ತಿಕೊಳ್ಳುವಾಗ, ಉಚ್ಚಳಿಸಿನುಡಿದಂ ತೆಕಳೆ ಕಳೆ ಎಂದಿದ್ದನ್ನು ನೋಡಿದ ತೋಗರೆಯವರು, ತೆಕಳೆ ಎಂದರೇನು ಎಂದಾಗ ಅಲ್ಲಿದ್ದವರಿಗೆ ಯಾರಿಗೂ ಏನೂ ಹೊಳೆಯಲಿಲ್ಲ. ಆಗ ಅವರೆಲ್ಲ ಬಿ.ಎಂ.ಶ್ರೀ ಅವರಲ್ಲಿ ಈ ಬಗ್ಗೆ ಪ್ರಸ್ತಾಪಿಸಿದಾಗ ಅವರಿಗೂ ತಕ್ಷಣಕ್ಕೆ ಏನೂ ತಿಳಿಯದೆ, 'ವಿಚಾರ ಮಾಡಿ ನಾಳೆ ಹೇಳುತ್ತೇನೆ' ಎಂದರು. ಮಾರನೇ ದಿನ ಹೇಳಿದರಂತೆ, 'ತೆಕಳೆ ಅಲ್ಲ ಅದು. ತೆ ಕಳೆಕಳೆ. ತೆ ಎಂದರೆ ಚೀಃ ಎಂದು ಉದ್ಗಾರದ ಅವ್ಯಯ. ತಮಿಳಿನಲ್ಲಿ ತೆ ಎಂದರೆ ಛೀಃ ಎಂದರ್ಥವಿದೆ' ಎಂದು ಹೇಳಿದರು. ಇಂಥ ಹತ್ತಾರು ಸಂಗತಿಗಳನ್ನು ವಿ.ಸೀ. ಹೇಳಿದರು.

❑

೫೩. ಸಸ್ಯಶಾಸ್ತ್ರ ವಿಶಾರದ ಕನ್ನಡ ಸಾಹಿತಿ

ಲಾಲ್‌ಬಾಗಿಗೆ ಸಾವಿರಾರು ಜನ ದಿನವೂ ದೇಶವಿದೇಶಗಳಿಂದ ಬರುತ್ತಾರೆ. ಸ್ಥಳೀಯ ಜನರಂತೂ ಲೆಕ್ಕವೇ ಇಲ್ಲ. ಆದರೆ ಅವರಾರಿಗೂ ಲಾಲ್‌ಬಾಗಿನ ಗಿಡಗಳ ಹೆಸರು, ಯಾವ ದೇಶದ್ದು, ಅದರ ಉಪಯೋಗ ವೈಶಿಷ್ಟ್ಯ ಒಂದೂ ತಿಳಿದಿರುವುದಿಲ್ಲ. ವಿ.ಸೀ. ಹಾಗಲ್ಲ. ಲಾಲ್‌ಬಾಗಿನ ಪ್ರತಿಯೊಂದು ಗಿಡಮರಬಳ್ಳಿಗಳ ಪರಿಚಯ ಹೊಂದಿದ್ದರು. ಯಾವ ಯಾವ ಗಿಡ ಯಾವ ಕಾಲಕ್ಕೆ ಹೂ ಬಿಡುತ್ತೆ, ಯಾವ ಮರ ಯಾವಾಗ ಫಲ ಕೊಡುತ್ತೆ ಇತ್ಯಾದಿ ಎಲ್ಲ ವಿಷಯ ಗೊತ್ತಿತ್ತು. ಅದಕ್ಕೆ ನಿದರ್ಶನ ಈ ಪ್ರಸಂಗ.

ಲಾಲ್‌ಬಾಗಿನಲ್ಲಿ ವಿ.ಸೀ. ನಾನು, ಒಮ್ಮೆ ತಿರುಗಾಡುತ್ತಿದ್ದು, ಮಳೆ ಬಂತು. ಅಲ್ಲೇ ಇದ್ದ ಗುಲಾಬಿತೋಟದ ಮರದ ಕೆಳಗೆ ನಿಂತೆವು. ಬ್ಯಾಂಡ್ ಸ್ಟ್ಯಾಂಡ್ ಬಳಿ ಬಂದಾಗ, 'ನೀವು ಕರ್ನಾಟಕ ಇತಿಹಾಸ ಓದಿದ್ದೀರಾ?' ಎಂದರು. 'ಸುಮಾರಾಗಿ' ಎಂದೆ. 'ಕದಂಬರು ಅಂತ ರಾಜಮನೆತನ ಕೇಳಿದ್ದೀರಲ್ಲಾ, ಮಯೂರ ವರ್ಮ ದೊರೆಯ ವಿಚಾರ ಗೊತ್ತಲ್ಲ. ದೇವುಡು ಅವರು ಸೊಗಸಾದ ಕಾದಂಬರಿ ಬರೆದಿದ್ದಾರೆ. ಆ ಕದಂಬ ಮನೆತನದ ಲಾಂಛನ ಕದಂಬವೃಕ್ಷ. ಅದನ್ನು ನೋಡಿದ್ದೀರಾ?' ಎಂದರು. ಇಲ್ಲ ಎಂದಾಗ 'ನಾವು ನಿಂತಿದ್ದೀವಲ್ಲಾ, ಈ ಮರವೇ ಕದಂಬವೃಕ್ಷ' ಎಂದು ತೋರಿಸಿ ಅದರ ವಿವರಗಳನ್ನೆಲ್ಲಾ ತಿಳಿಸಿದರು. ಲಾಲ್‌ಬಾಗಿನ ಪ್ರತಿ ಗಿಡಮರ, ಅದರ ಶಾಸ್ತ್ರೀಯ ಹೆಸರು, ಹೂ ಬಿಡುವ ಕಾಲ, ಅದು ಯಾವ ದೇಶದ ಮರ, ಇತ್ಯಾದಿ ಎಲ್ಲ ವಿವರ ವಿ.ಸೀ. ಅವರಿಗೆ ಗೊತ್ತಿತ್ತು. ಲಾಲ್‌ಬಾಗಿನಲ್ಲಿ ಓಡಾಡಿದವರು ಸಾವಿರಾರು ಜನರಿರಬಹುದು. ಗಿಡಮರ ಪರಿಚಯ ಅವರಿಗಿದ್ದಂತೆ ಬಿ.ಜಿ.ಎಲ್.ಸ್ವಾಮಿ ಅವರನ್ನು ಬಿಟ್ಟರೆ ಉಳಿದವರಿಗಿರಲಿಲ್ಲ. ಕುವೆಂಪು ಅವರು ಬೆಂಗಳೂರಿನಲ್ಲಿದ್ದಾಗ ವಿಶ್ವೇಶ್ವರಪುರದಲ್ಲಿ ವಾಸವಾಗಿದ್ದರು, ಲಾಲ್‌ಬಾಗಿಗೆ ದಿನಾ ಸಂಚಾರ ಮಾಡುತ್ತಿದ್ದರು. ಪ್ರಕೃತಿ ಸೌಂದರ್ಯವನ್ನಷ್ಟೇ ಸವಿಯುತ್ತಿದ್ದರು.

ಹೀಗೆ ಒಂದು ಸಲ ಲಾಲ್‌ಬಾಗಿನ ಮಹಾದ್ವಾರದ ಕಡೆ ಬಂದಾಗ, ಒಬ್ಬ ಗರ್‍ಮಾಗರಂ ಕಡಲೇಕಾಯಿಯವನು ಬಂದ. ವಿ.ಸೀ. ಅವರು ಕಡ್ಲೆಕಾಯಿಯವನನ್ನು ಬಾರಪ್ಪಾ ಎಂದು ಕರೆದರು. ನಾನು ಹಾಕಿಸಿಕೊಳ್ಳಲು ಕರ್ಚೀಫ್ ತೆಗೆದೆ. 'ಬೇಡ ಬೇಡ. ಸ್ವಲ್ಪ ಇರಿ' ಎಂದು ಹೇಳಿ ಅಲ್ಲೇ ಜಪಾನು ಬ್ರಿಡ್ಜ್ ಬಳಿ ಇದ್ದ ಮರವೊಂದರಿಂದ ೨ ಎಲೆ ಕಿತ್ತುಕೊಂಡು ಬಂದರು. ನನಗೊಂದು ಕೊಟ್ಟು ಅವರೊಂದು ತೆಗೆದುಕೊಂಡು 'ಇದರಲ್ಲಿ ಹಾಕಪ್ಪಾ ಕಡಲೆಕಾಯಿ' ಎಂದರು. ಅದು ಪೊಟ್ಟಣದ ಮರದ ಎಲೆ. ಅದರಲ್ಲಿ ಸುರುಳಿ ಎಲೆಗಳು ಬಿಡುತ್ತವೆ. ಕಾಗದದಲ್ಲಿ ಪೊಟ್ಟಣ ಕಟ್ಟಿರುವ ಹಾಗೆ ಎಲೆಗಳು ಆ ಮರದಲ್ಲಿ ಬಿಡುತ್ತವೆ. ನೀರು ಹಾಕಿದರೂ ಸೋರುವುದಿಲ್ಲ. ಆ ಗಿಡದ ವಿವರಗಳನ್ನು ಮರೆತಿದ್ದೇನೆ. ಆದರೆ ಆ ಗಿಡವನ್ನು ಮರೆತಿಲ್ಲ. ಎಷ್ಟೋ ಸಲ ಆ ಗಿಡದ ಬಳಿ ಓಡಾಡಿದ್ದರೂ ಎಲೆಯ ವೈಖರಿಯನ್ನು ಗಮನಿಸಿರಲಿಲ್ಲ, ಪ್ರಕೃತಿಯ ಆರಾಧಕರು ಎಂದರೆ ವಿ.ಸೀ. ಅವರೇ ಎನ್ನಬೇಕು.

೫೪. ವಿದ್ವಾಂಸರ ಮಾತು ರಸಕವಳ

ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಸೇವೆ ಸಲ್ಲಿಸಿದವರಲ್ಲಿ ವಿ.ಸೀ. ಅವರು ಒಬ್ಬರು. ಅವರು ಪರಿಷತ್ತಿಗೆ ನಡೆದೇ ಬರುತ್ತಿದ್ದರು. ಒಮ್ಮೆ ಅನಾರೋಗ್ಯದಲ್ಲಿಯೇ ಕಾರ್ಯಕ್ರಮಕ್ಕೆ ಭಾಗವಹಿಸಲು ಬಂದರು. ಕಾರು ಕಳಿಸುತ್ತೇವೆ ಎಂದರೂ ಒಪ್ಪಲಿಲ್ಲ. ಅವರ ಮಕ್ಕಳ ಹೆಗಲಮೇಲೆ ಕೈಹಾಕಿಕೊಂಡು ನಡೆದೇ ಬಂದರು. 'ಹೀಗೆ ಮಾಡಬಹುದೇ?' ಎಂದು ನಾನು ಕೇಳಿದಾಗ, 'ಕನ್ನಡ ದೇವಿಯ ಸೇವೆ ಮಾಡುವ ಲೆಂಕರು ನಾವು, ಇದು ಸರಸ್ವತೀ ಮಂದಿರ, ದೇವಸ್ಥಾನಕ್ಕೆ ನಡೆದುಕೊಂಡೇ ಬರಬೇಕು ಅಲ್ಲವೇ?' ಎಂದರು.

ರಾಶಿ ಅವರ ಮನೋನಂದನ ಪುಸ್ತಕದ ಬಿಡುಗಡೆ ಕಾರ್ಯಕ್ರಮ ಪರಿಷತ್ತಿನ ಮಹಡಿಯಲ್ಲಿತ್ತು. ಆಗ ನಾನು ಪರಿಷತ್ತಿನ ಕಾರ್ಯದರ್ಶಿ ಆಗಿದ್ದೆ. ಮಹಡಿ ಹತ್ತಲು ಆಗದೆ ಮಹಡಿಯ ಮೇಲಿನ ಕಾರ್ಯಕ್ರಮವನ್ನು ಕೆಳಗೇ ಮಾಡಿದೆ. ಆಗ ರಾಶಿ ಜತೆಗಿದ್ದರು. ರಾಶಿಯತ್ತ ತಿರುಗಿ 'ಮೇಲಕ್ಕೆ ಬನ್ನಿ ಎಂದು ಕರೆಯುತ್ತಿದ್ದಾರೆ. ಮೇಲಕ್ಕೆ ಹೋಗಲು ಪ್ರಯತ್ನಿಸಿದರೂ ಆಗುತ್ತಿಲ್ಲ. ಇಲ್ಲೇ ಇರಬೇಕಾದ ಸ್ಥಿತಿ ಇದೆ ನೋಡಿ' ಎಂದು ವಿ.ಸೀ. ಹೇಳಿ ನಕ್ಕರು. ಆಗ ರಾಶಿ 'ನಾನು ಮೇಲಕ್ಕೆ ಹೋಗಲು ಸಿದ್ಧ. ಆದರೆ ನನ್ನನ್ನು ಕರೆಯಲಿಲ್ಲ. ನಿಮ್ಮನ್ನು ಕೇಳಿದರು. ಮೇಲಕ್ಕೆ ಬರ್‍ತೀರಾ ಅಂತ' ಅಂದರು ಆಗ ವಿ.ಸೀ. 'ಜನ ಬಯಸಿದಷ್ಟು ದಿನ ಇರಬೇಕಾಗುತ್ತೋ ಏನೋ. ದೇವರು ಆ ಶಕ್ತಿ ಕೊಡಬೇಕು ಅಷ್ಟೆ' ಎಂದರು. ಹೀಗೆ ಅವರ ಮಾತು ಅರ್ಥಗರ್ಭಿತವಾಗಿರುತ್ತಿತ್ತು, ಸದಾ ಕಾಲವೂ.

❑

೫೫. ತನುಮನದ ಶುಚಿತ್ವದ ಸದ್ಗೃಹಸ್ಥ

ವಿ.ಸೀ. ಎಂದರೆ ಕಣ್ಮುಂದೆ ನಿಲ್ಲುವ ರೂಪಾರಾಧಕ ಸಜ್ಜನ ಶಿರೋಮಣಿ. ಅಚ್ಚುಕಟ್ಟಿಗೆ, ಶಿಸ್ತಿಗೆ ಇನ್ನೊಂದು ಹೆಸರು ವಿ.ಸೀ. ಅವರು ಪೇಟಾ ಕಟ್ಟಿಕೊಂಡರೆ ನಿರಿಗೆ ಇಲ್ಲದೆ ರಾಜರ ಕಿರೀಟದಂತೆ ಕರಾರುವಾಕ್ಕಾಗಿ ಕಟ್ಟಿದ ಪೇಟಾ. ಪಂಚೆಯ ನಿರಿಗೆಯಲ್ಲಿ ಎಲ್ಲೂ ಸಿಕ್ಕಿಲ್ಲ ಮತ್ತು ಶುಭ್ರ ಶ್ವೇತವಸ್ತ್ರ. ವೇಷಭೂಷಣಗಳಲ್ಲಿ ಸರಳ ಸುಂದರಾಂಗ. ಇನ್ನು ಅಂತರಂಗದ ಶುಚಿಯಲ್ಲಿ ವಿ.ಸೀ.ಯನ್ನು ಸರಿಗಟ್ಟುವ ಸಾಹಿತಿಗಳು ಕನ್ನಡದಲ್ಲಿ ಹೆಚ್ಚಿಲ್ಲ. ಅನೀತಿ, ಅಶ್ಲೀಲ ಪೌರುಷದ ನುಡಿಗಳು ಅಪ್ಪಿತಪ್ಪಿ ಅವರ ಬಾಯಿಂದ ಬರುವುದಿಲ್ಲ. ಮನಸ್ಸಿನಲ್ಲಿ ಹೊಳೆಯುವುದೇ ಇಲ್ಲ. ತನುಶುಚಿ ಮನಶುಚಿಗೆ ಇನ್ನೊಂದು ಹೆಸರೇ ವಿ.ಸೀ. ಇದಕ್ಕೊಂದು ನಿದರ್ಶನ ಈ ಮುಂದಿನ ಪ್ರಸಂಗ.

ವಿ.ಸೀ. ಅವರ ಜತೆ ಒಮ್ಮೆ ಭಾರತ್ ಟಾಕೀಸ್ ಬಳಿ ಇದ್ದ ಕನ್ನಡ ಸಾಹಿತಿ ಜಟ್ಟಿ ಕೆ. ವಿ. ಅಯ್ಯರ್‌ರ ವ್ಯಾಯಾಮ ಶಾಲೆಗೆ ಹೋಗಿದ್ದೆ. ಆಗ ಅವರು ಸ್ನಾಯುನೋವಿಗಾಗಿ ನೀವಿಸಿಕೊಳ್ಳುವ ಚಿಕಿತ್ಸೆಗೆ ಹೋಗುತ್ತಿದ್ದರು. ಅಯ್ಯರ್ ಅವರು ಅವರನ್ನು ಬರಮಾಡಿಕೊಂಡು ಚಿಕಿತ್ಸೆ ನೀಡಿದರು. ಕೋಣೆಯಿಂದ ಈಚೆಗೆ ಬರುವಾಗ ಅಲ್ಲಿ ಶಾಂತಲೆಯ ಕಂಚಿನ ವಿಗ್ರಹ ಇತ್ತು. ಕೆ.ವಿ.ಅಯ್ಯರ್ ಅವರ ಶಾಂತಲಾ ಕಾದಂಬರಿಯ ಮೇಲೆ ಅದರ ಚಿತ್ರವಿದೆ. ಅದನ್ನು ನೋಡಿ 'ಸುಂದರಮೂರ್ತಿ, ಚೆಲುವಿನ ಗಣಿ ನಾಟ್ಯರಾಣಿ' ಎಂದರು. ಅಯ್ಯರ್ ಅವರು 'ಕೈಲಿ ಎತ್ತಿ ನೋಡಿ ಆನಂದಿಸಿ' ಎಂದರು. ಅದನ್ನು ಎತ್ತಿಕೊಂಡು ನೋಡಲು ವಿ.ಸೀ. ಕೈ ಹಾಕಿದರು ವಿಗ್ರಹದ ಭುಜದ ಬಳಿಗೆ. ಅದು ಪೂರ್ಣವಾಗಿ ಕಂಚಿನಿಂದ ಮಾಡಿದ ಘನ ವಿಗ್ರಹ. ಟೊಳ್ಳು ವಿಗ್ರಹ ಆಗಿರಲಿಲ್ಲ. ಹಲವು ಕೆಜಿ ಭಾರ ಇತ್ತು. ಅದನ್ನು ವಿ.ಸೀ. ಅವರಿಗೆ ಎತ್ತಲಾಗಲಿಲ್ಲ. ಅಯ್ಯರ್ ನಕ್ಕು,'ಹಾಗಲ್ಲಾ, ವಿಗ್ರಹವನ್ನು ಎತ್ತುವುದು ಹೀಗೆ' ಎಂದು ಅದರ ಪೃಷ್ಠಭಾಗಕ್ಕೆ, ಕಟಿ ಭಾಗಕ್ಕೆ ಕೈ ಹಾಕಿ ವಿಶಿಷ್ಟ ಭಂಗಿಯಲ್ಲಿ ಎತ್ತಿದರು. ಅಯ್ಯರ್. ಅದನ್ನು ಕಂಡು 'ಛೇ ಛೇ ಅಲ್ಲೇ ಇರಲಿ ಎತ್ತಬೇಡಿ' ಎಂದರು. `ಸ್ತ್ರೀ ವಿಗ್ರಹವಾದರೂ ಕಟಿ ಪೃಷ್ಠಗಳಿಗೆ ಕೈ ಹಾಕುವುದೇ!' ಎಂದರು. ಅಯ್ಯರ್ ನಕ್ಕರು. ವಿಗ್ರಹವನ್ನು ಎತ್ತಲಿಲ್ಲ.

❑

೫೬. ಕುತ್ಕೊಂಡು ಮಲಕ್ಕೋ ಬೇಕು ಮಗಾ

ಗಮಕಿ ರಾಮಾರಾಧ್ಯರು ಗಾಂಧೀ ಸಾಹಿತ್ಯ ಸಂಘ ಮತ್ತು ಕನ್ನಡಸಾಹಿತ್ಯ ಪರಿಷತ್ತಿನಲ್ಲಿ ಗಮಕ ಶಿಕ್ಷಣ ಬೋಧನೆ ಮಾಡಿದ ಜನಪ್ರಿಯ ವ್ಯಕ್ತಿ. ಗಮಕಿ ಅಷ್ಟೇ ಅಲ್ಲದೆ ಸಾಹಿತಿಯೂ ಆಗಿದ್ದರು. ಅವರ ಅಪೂರ್ವ ಸಾಹಿತ್ಯದ ಕೊಡುಗೆ ಎಂದರೆ ಹತ್ತು ಸಾವಿರ ಗಾದೆಗಳ ಕೋಶವನ್ನು (ಎರಡು ಬೃಹತ್ ಸಂಪುಟಗಳು) ಹತ್ತಾರು ವರ್ಷದ ಪರಿಶ್ರಮದಿಂಧ ಗಾದೆಗಳನ್ನು ಸಂಗ್ರಹಿಸಿದ್ದಾರೆ.

ಸದಾ ಗಾದೆಗಳ ಸಂಗ್ರಹದಲ್ಲಿ ಇದ್ದರೆಂದರೆ ತಪ್ಪಾಗದು. ಒಮ್ಮೆ ನಾನು ಪರಿಷತ್ತಿನ ಬಳಿ ಅವರೊಡನೆ ಮಾತನಾಡುತ್ತಿದ್ದಾಗ ಪ್ರಾಸಂಗಿಕವಾಗಿ ಹಾಸನದ ಕಾಲೇಜಿನಲ್ಲಿದ್ದಾಗ ೧೯೭೧-೭೩ರ ಘಟನೆಯೊಂದನ್ನು ಹೇಳುತ್ತಿದ್ದೆ. ಹಾಸನದಲ್ಲಿ ಹಳ್ಳಿ ಹಳ್ಳಿಗೆ ಶಾಲೆಗಳ ಕಾರ್ಯಕ್ರಮಕ್ಕೆ ಭಾಷಣಕ್ಕೆ ಹೋಗುತ್ತಿದ್ದ ಕಾಲೇಜು ಮೇಷ್ಟ್ರು ನಾನೊಬ್ಬನೇ. ಹಳ್ಳಿ ಬಸ್ಸಿನಲ್ಲಿ ಬೆಳಿಗ್ಗೆ ಹೊರಟರೆ ಸಂಜೆ ಕಾರ್ಯಕ್ರಮ ಆದ ಮೇಲೆ ವಾಪಸ್ಸಿಗೆ ಬಸ್ ಇರುತ್ತಿರಲಿಲ್ಲ. ಅಲ್ಲೇ ಯಾರದೋ ಅಧ್ಯಾಪಕರ ಮನೆಯಲ್ಲೋ, ಶಾನುಭೋಗರ ಮನೆಯಲ್ಲೋ ಉಳಿದುಕೊಂಡು ಬೆಳಿಗ್ಗೆ ಮೊದಲ ಬಸ್ಸಿಗೆ ಬಂದು ಕಾಲೇಜಿಗೆ ಹೋಗುತ್ತಿದ್ದೆ. ಹೀಗೆ ಸಕಲೇಶಪುರದ ಕೆಂಪಮ್ಮನ ಕೋಟೆಯ ಬಳಿಯ ಹಳ್ಳಿಯೊಂದಕ್ಕೆ ಶಾಲಾ ವಾರ್ಷಿಕೋತ್ಸವಕ್ಕೆ ಹೋಗಿ ರಾತ್ರಿ ಒಬ್ಬ ಅಧ್ಯಾಪಕರ ಮನೆಯಲ್ಲಿ ಉಳಿದಿದ್ದೆ. ರಾತ್ರಿ ಊಟವಾದ ಮೇಲೆ ಅವರ ಪಡಸಾಲೆಯಲ್ಲಿ ಕುಟುಂಬದವರಲ್ಲಿ ಮಾತುಕತೆ ಆಗುತ್ತಿತ್ತು. ತಂದೆ-ಮಗ-ಮೊಮ್ಮಗರ ನಡುವೆ. ಮೈಸೂರಿನಲ್ಲಿ ಪಿ.ಯು.ಸಿ. ಓದಬೇಕೆಂದು ಎಸ್.ಎಸ್.ಎಲ್.ಸಿ. ಪಾಸಾದ ಮೊಮ್ಮಗನ ಹಠ. ಈಗ ಬೇಡ, ಹಣವಿಲ್ಲ. ಡಿಗ್ರಿಗೆ ಹೋದಾಗ ನೋಡೋಣ, ಈಗ ಹಾಸನದ ಕಾಲೇಜಿಗೆ ಹೋಗು ಅಂತ ಅಪ್ಪನ ಉಪದೇಶ. ಹೀಗೆ ಅಪ್ಪ-ಮಗರ ನಡುವೆ ಮಾತುಕತೆ ಆಗುತ್ತಿತ್ತು. ಮಾತು ಬಿಸಿ ಏರಿದಾಗ ಮಂಚದ ಮೇಲಿದ್ದ ತಾತ ಹೇಳಿದ, 'ಮಗಾ, ಕುಂತ್ಕೊಂಡು ಮಲಕ್ಕೋಬೇಕು. ಈ ವರ್ಷ ಹಾಸನಕ್ಕೆ ಹೋಗು' ಅಂತ. ಹೀಗೆ ಹೇಳುತ್ತಿದ್ದಂತೆಯೇ, ರಾಮಾರಾಧ್ಯರು ತಕ್ಷಣ ಜೇಬಿನಿಂದ ಪೆನ್ನು ಪೇಪರು ತೆಗೆದುಕೊಂಡು ಸ್ವಲ್ಪ ತಾಳಿ ಅಂತ, 'ಕುತ್ಕೊಂಡು ಮಲಕ್ಕೋಬೇಕು' ಮಾತನ್ನು ಬರೆದುಕೊಂಡರು.

❑

೫೭. ಅಹಿಂಸೆ ಎಂದರೆ ನಾನು ತಿಳಿದಿರುವುದು ಹೀಗೆ

ಪಂಡಿತ ಡಿ. ಪದ್ಮನಾಭಶರ್ಮರು ನನಗೆ ಹೈಸ್ಕೂಲಿನಿಂದ ಅವರು ನಿಧನರಾಗುವವರೆಗೂ ಗುರುಗಳಾಗಿದ್ದರು. ಜೈನಧರ್ಮದ ಬಗ್ಗೆ ನೂರಾರು ಗ್ರಂಥಗಳನ್ನು ಬರೆದ ಜೈನಪಂಡಿತರು ಅವರು. ಜೈನಧರ್ಮವನ್ನು ವಿಶಿಷ್ಟ ರೀತಿಯಲ್ಲಿ ಅನುಷ್ಠಾನದಲ್ಲಿ ಇಟ್ಟುಕೊಂಡವರು. ಅವರ ಮನೆತನದವರು ದೇವರಾಜ ಅರಸು ಮನೆಯವರಿಗೆ ಗುರುಗಳಾದವರು. ಅವರೊಡನೆ ಅನೇಕ ಕಡೆ ಉಪನ್ಯಾಸಗಳಿಗೆ ಹೋಗಿದ್ದೇನೆ.

ಒಮ್ಮೆ ರಾಯಚೂರಿನಲ್ಲಿರುವ ಮಹಾವೀರ ಜಯಂತಿ ಕಾರ್ಯಕ್ರಮಕ್ಕೆ ನಾವಿಬ್ಬರೂ ಹೋಗಿದ್ದೆವು. ಅಲ್ಲಿನ ಸ್ಥಳೀಯ ಪತ್ರಿಕೆಯಲ್ಲಿ 'ಈ ಸಂಜೆ ಕೋಟೆಯಲ್ಲಿ ಡಿ. ಪದ್ಮನಾಭಶರ್ಮ ಅವರು ಮತ್ತು ಜಿ. ಅಶ್ವತ್ಥನಾರಾಯಣ ಅವರು ಮಹಾವೀರ ಜಯಂತಿಯ ಪ್ರಯುಕ್ತ **ಉಪವಾಸ** ಮಾಡುವರು' ಎಂದು ಪ್ರಕಟವಾಗಿತ್ತು. **ಉಪನ್ಯಾಸ** ಎಂಬುದಕ್ಕೆ ಬದಲಾಗಿ **ಉಪವಾಸ** ಎಂದು ಅಚ್ಚಾಗಿತ್ತು, ಅದು ನಿಜವೂ ಆಯಿತು.

ಆ ಸಂಜೆ ಉಪನ್ಯಾಸ ಕಾರ್ಯಕ್ರಮ ಮುಗಿದ ಮೇಲೆ ಟಿ.ಬಿ.ಗೆ ರಾತ್ರಿ ಹಿಂತಿರುಗಿದೆವು. ಸಂಪ್ರದಾಯಸ್ಥ ಜೈನರು ರಾತ್ರಿ ಊಟ ಮಾಡುವುದಿಲ್ಲ, ಸಂಜೆಯಲ್ಲಿ ಮುಗಿಸುತ್ತಾರೆ. ಬಂದ ಅತಿಥಿಗಳು ಜೈನ ಮಹನೀಯರು ಎಂದು ವ್ಯವಸ್ಥಾಪಕರು ರಾತ್ರಿ ಫಲಹಾರಕ್ಕಾಗಲಿ, ಊಟಕ್ಕಾಗಲಿ, ವ್ಯವಸ್ಥೆ ಮಾಡಿರಲಿಲ್ಲ. ಕಾರಣಾಂತರಗಳಿಂದ ಬೆಳಿಗ್ಗೆ ನಮಗೆ ಊಟದ ವ್ಯವಸ್ಥೆ ಆಗಿರಲಿಲ್ಲ. ಇಬ್ಬರೂ ಉಪವಾಸವಿದ್ದೆವು. ಆಗ ಶರ್ಮರು, 'ನೋಡಿ,ನನಗೆ ಉಪವಾಸ ಮಾಡಿ ಅಭ್ಯಾಸವಿದೆ. ನೀವು ಯುವಕರು. ನಿಮಗೆ ಅಭ್ಯಾಸವಿಲ್ಲ ಮತ್ತು ಎಳೆವಯಸ್ಸಿನಲ್ಲಿ ಹುಡುಗರು ಉಪವಾಸ ಮಾಡಬಾರದು. ಬೆಳೆಯುವ ವಯಸ್ಸು ಅದು' ಎಂದರು. ನಾನು 'ಪರವಾಯಿಲ್ಲ ಸಾರ್, ಶಿವರಾತ್ರಿಯ ದಿನ ಉಪವಾಸವಿದ್ದು ಅಭ್ಯಾಸವಿದೆ' ಎಂದೆ. ಅವರು ನಕ್ಕು 'ಆಗ ಮಕ್ಕಳಿಗೆಲ್ಲ ಫಲಹಾರದ ವ್ಯವಸ್ಥೆ ಇರುತ್ತದೆ ಅಲ್ಲವೆ? ದೊಡ್ಡವರು ಉಪವಾಸ ಮಾಡುತ್ತಾರೆ ಅಲ್ಲವೆ?' ಎಂದರು. 'ಬನ್ನಿ, ನಿದ್ದೆ ಬರುತ್ತಿಲ್ಲ. ಒಂದು ಸುತ್ತು ಹಾಕಿ ಬರೋಣ' ಎಂದು ಟಿ.ಬಿ.ಯಿಂದ ಆಚೆ ವಾಕಿಂಗ್ ಹೊರಟೆವು. ಅಲ್ಲೊಂದು ಬಾಳೆಹಣ್ಣಿನ, ಚಾ ಅಂಗಡಿ ತೆರೆದಿತ್ತು, ಬಸ್ ಸ್ಟ್ಯಾಂಡ್ ಬಳಿ.

ಶರ್ಮರು ಅಲ್ಲಿ ನಿಂತು 'ನೀವು ಬೆಳಗಿನಿಂದ ಹಸಿದಿದ್ದೀರಿ. ನನ್ನಿಂದ ನಿಮಗೆ ಉಪವಾಸದ ಶಿಕ್ಷೆ ಆಗಿದೆ. ಹೋಗಿ ಎರಡು ಬಾಳೆಹಣ್ಣು ತಿಂದು ಚಾ ಕುಡಿದು ಬನ್ನಿ' ಎಂದರು. 'ಪರವಾಯಿಲ್ಲ ಸಾರ್, ಬೇಡಿ' ಎಂದೆ. 'ನಾನು ಹೇಳಿದಂತೆ ಮಾಡಲೇಬೇಕು. ನಾನು ನಿಮ್ಮ ಮೇಷ್ಟ್ರು' ಎಂದರು. ನಗುತ್ತಾ ಸರಿ ಎಂದೆ. 'ಗುರುವಾಜ್ಞೆ ಮೀರಿದರೆ ಘೋರ ನರಕ ಅಂತ ನೀವೇ ಪಾಠ ಹೇಳಿದ್ದೀರಿ. ಬಾಳೆಹಣ್ಣನ್ನು ನುಂಗಿ ಚಾ ಕುಡಿದು ಬರುತ್ತೇನೆ' ಎಂದೆ. ಬೇಡವೆಂದರೂ ಹಣ ಕೊಟ್ಟರು. ಆಮೇಲೆ 'ಹೀಗೇಕೆ ಮಾಡಿದಿರಿ, ಒಂದು ದಿನ ಉಪವಾಸ ಇದ್ದರೆ ಪ್ರಾಣ ಹೋಗುತ್ತಿತ್ತೆ?' ಎಂದೆ, 'ಅರ್ಧ ರಾತ್ರಿಯಲ್ಲಿ ಸಾಬಿ ಅಂಗಡಿಯಲ್ಲಿ ಚಾ ಕುಡಿಸಿದಿರಲ್ಲ!'ಎಂದೆ ತಮಾಷೆಗಾಗಿ. ಆಗ ಅವರು ಹೇಳಿದ

ಮಾತು ಈಗಲೂ ನೆನಪಿದೆ. 'ನಾನು ಜೈನ, ಅಹಿಂಸಾವಾದಿ. **ಅಹಿಂಸೆ ಎಂದರೆ ನಾನು ಹಿಂಸೆ ಮಾಡುವುದಿಲ್ಲ ಎಂದಷ್ಟೇ ಅರ್ಥವಲ್ಲ. ನನ್ನಿಂದ ಯಾವ ರೀತಿಯಲ್ಲಿಯೂ ಯಾರಿಗೂ ಹಿಂಸೆ ಆಗಬಾರದು ಎಂದು ಅರ್ಥ**. ನೀವು ಉಪವಾಸದಿಂದ ಬಳಲಿದರೆ ಅದು ಪಾಪದ ಕೆಲಸ ಆಗುತ್ತದೆ. ಆ ಹಿಂಸೆಗೆ ನಾನು ಕಾರಣನಾಗುತ್ತೇನೆ. ನಾನು ಜೈನನಾಗಿ ಉಳಿಯೋಲ್ಲ. ನಾನು ಜೈನನಾಗಿ ಉಳಿಯಲು ನಿಮಗೆ ಸಾಬಿ ಅಂಗಡಿ ಚಾ ಕುಡಿಸಿ ಬಾಳೆಹಣ್ಣು ತಿನ್ನಿಸಿದ್ದೇನೆ' ಎಂದರು.

ಆಗ ನಾನು, 'ಸ್ಥಳೀಯ ಪತ್ರಿಕೆ ಡಿ. ಪದ್ಮನಾಭಶರ್ಮ ಅವರು ಮತ್ತು ಜಿ. ಅಶ್ವತ್ಥನಾರಾಯಣ ಅವರು **ಉಪವಾಸ** ಮಾಡುವರು ಎಂದು ಹೇಳಿದ ಮಾತು ನನ್ನ ವಿಚಾರದಲ್ಲಿ ಸುಳ್ಳಾಯಿತು, ನಿಮ್ಮ ವಿಚಾರದಲ್ಲಿ ನಿಜವಾಯಿತು' ಎಂದೆ. ಇಬ್ಬರೂ ನಕ್ಕೆವು.

❑

೫೮. ದೇವರ ಮನೆಯಲ್ಲಿ ಕುಮಾರವ್ಯಾಸ

ಕೆ.ಎಲ್.ನಾರಾಯಣರಾಯರು ಚಾಮರಾಜಪೇಟೆಯಲ್ಲಿ ೪ನೇ ಬೀದಿ, ೪ನೇ ಕ್ರಾಸಿನಲ್ಲಿದ್ದ ವಠಾರದ ಮನೆಯಲ್ಲಿ ವಾಸವಾಗಿದ್ದರು. ನನ್ನ ತಾಯಿ-ತಂದೆಯವರೂ ಆ ವಠಾರದಲ್ಲೇ ಇದ್ದವರು. ಹಾಗಾಗಿ ಪಕ್ಕದ್ಮನೆ ಸಹವಾಸಿಗಳಾಗಿದ್ದೆವು. ಅವರ ಕಿರುಮಗ ರಾಮಚಂದ್ರ ನನ್ನ ಬಾಲ್ಯಮಿತ್ರ. ಕೆ.ಎಲ್.ನಾರಾಯಣರಾಯರು ಆದಾಯ ತೆರಿಗೆ ಇಲಾಖೆಯಲ್ಲಿದ್ದರು. ೧೯೩೯ರಲ್ಲಿ ಪರಿಷತ್ತಿನಲ್ಲಿ ಬಿಂದೂರಾಯರ ಶಿಷ್ಯರಾಗಿ ಗಮಕ ಕಲಿತರು. ಅವರೊಂದಿಗೆ ಕಲಿತವರಲ್ಲಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರೂ ಒಬ್ಬರು.

ಗಮಕವಾಚನದಲ್ಲಿ ಪರಿಶ್ರಮ ಹೊಂದಿದ್ದರೂ ಗಮಕವನ್ನು ಸಾರ್ವಜನಿಕವಾಗಿ ಹಾಡಲಿಲ್ಲ. ಸ್ವಂತ ಅಭ್ಯಾಸಕ್ಕೆ ಇರಿಸಿಕೊಂಡಿದ್ದರು. ದಿನವೂ ಬೆಳಿಗ್ಗೆ ದೇವರ ಪೂಜೆಯ ಕಾಲದಲ್ಲಿ ಕುಮಾರವ್ಯಾಸ ಭಾರತವನ್ನು ದೇವರ ಪೂಜೆಯ ಅಂಗವಾಗಿ ಹಾಡಿಕೊಳ್ಳುತ್ತಿದ್ದರು. ನನಗೆ ಕುಮಾರವ್ಯಾಸನ ಪರಿಚಯವಾದದ್ದು ಅವರ ವಾಚನ ಕೇಳಿದ್ದರಿಂದಲೇ. ದೇವರನಾಮ ಮತ್ತು ಕುಮಾರವ್ಯಾಸನ ಕಾವ್ಯ ಎರಡೂ ಸಮಾನ ಆಗಿತ್ತು ಅವರಿಗೆ.

ಈ ಸಂದರ್ಭದಲ್ಲಿ ನನಗೆ ನೆನಪಾಗುವ ಸಂಗತಿ ಎಂದರೆ ಪ್ರಸಿದ್ಧ ಸಾಹಿತಿಗಳಾದ ತಿ.ತಾ.ಶರ್ಮರ ಧರ್ಮಪತ್ನಿ ತಿರುಮಲೆ ರಾಜಮ್ಮನವರ ಸಂಜೆಯ ದಿನಚರಿ. ಬೆಂಗಳೂರಿನ ಶಂಕರಪುರದ ಮನೆಯಲ್ಲಿದ್ದಾಗ ಅವರು ಸಂಜೆಯಾದರೆ ಮನೆಯ ಮುಂದೆ ಇದ್ದ ಬೃಂದಾವನದ ಬಳಿ ದೀಪ ಹಚ್ಚಿ ದೇವರನಾಮಗಳನ್ನು ಹಾಡುತ್ತಿದ್ದರು. ಆಕೆ ಪ್ರಸಿದ್ಧ ವೀಣಾವಾದಕಿ. ವೀಣೆ ಶೇಷಣ್ಣನವರಲ್ಲಿ ಕಲಿತಿದ್ದರು. ವೈಣಿಕ ಶೇಷಣ್ಣನವರನ್ನು ಕುರಿತು ಪುಸ್ತಕವೊಂದನ್ನು ಬರೆದಿದ್ದಾರೆ. ಅವರು ದೇವರನಾಮಗಳನ್ನು ಹಾಡುವುದರ ಜತೆಯಲ್ಲಿ ಗಾಂಧಿ ಮೊದಲಾದ ದೇಶಭಕ್ತರ ರಚನೆಗಳನ್ನೂ ಹಾಡುತ್ತಿದ್ದರು. ಇದೇಕೆ ಎಂದು ಒಮ್ಮೆ ಕೇಳಿದ್ದಕ್ಕೆ ದೇಶ ಬೇರೆ ಅಲ್ಲ ದೇವರು ಬೇರೆ ಅಲ್ಲ. ದೇವರನಾಮ, ದೇಶಭಕ್ತಿ ಗೀತೆ ಎರಡೂ ದೇವರಪೂಜೆಯ ಸಮಯದಲ್ಲಿ ಎಲ್ಲರೂ ಹಾಡಬೇಕಾದುದು ಕರ್ತವ್ಯ ಎಂದಿದ್ದರು.

❑

೫೯. ಒಂದು ಲೋಟಾ ಬಾದಾಮಿ ಹಾಲು ಕೊಡಬಾರದೇ?

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅನೇಕ ಪ್ರಸಿದ್ಧ ಗಮಕ ವಿದ್ವಾಂಸರು ಗಮಕ ತರಗತಿಗಳನ್ನು ನಡೆಸುತ್ತಿದ್ದರು. ಗಮಕಿ ಬಿಂದೂರಾಯರು ಡಿವಿಜಿ ಅವರ ಕಾಲದಲ್ಲಿ ಗಮಕ ತರಗತಿಗಳು ಪ್ರಾರಂಭವಾದವು. ಬಿಂದೂರಾಯರ ಮತ್ತು ಗಮಕಿ ಕಳಲೆ ಸಂಪತ್ಕುಮಾರಾಚಾರ್ಯರ ಬಳಿ ಗಮಕ ಕಲಿತ ಮಂಡ್ಯ ಜಿಲ್ಲೆಯ ಮಾದಾಪುರದಲ್ಲಿ ೧೯೧೪ರಲ್ಲಿ ಜನಿಸಿದ ಎಂ.ಎಸ್.ಚಂದ್ರಶೇಖರಯ್ಯನವರು ಅವರು ೧೫-೬-೧೯೬೫ ರಂದು ನಿಧನರಾಗುವವರೆಗೂ ಸುಮಾರು ೨೫ ವರ್ಷಗಳ ಕಾಲ ಪರಿಷತ್ತಿನಲ್ಲಿ ಗಮಕ ತರಗತಿಗಳ ಶಿಕ್ಷಕರಾಗಿದ್ದರು. ನ್ಯಾಷನಲ್ ಮಿಡ್ಲ್ ಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು. ಮಾಗಡಿ ಕರಣಿಕರ ಪಾಠಶಾಲೆಯಲ್ಲಿ ವಾಸವಾಗಿದ್ದರು. ಸೊಗಸಾಗಿ ಜೈಮಿನಿ ಭಾರತವನ್ನು ವಾಚಿಸುತ್ತಿದ್ದರು. ಅವರು ಒಮ್ಮೆ ಅದ್ಭುತವಾಗಿ ಸೀತೆ/ವನವಾಸ ಪ್ರಸಂಗವನ್ನು ವಾಚಿಸಿದಾಗ ಈವತ್ತು ನಿಮ್ಮ ಕಾವ್ಯವಾಚನ ಅದ್ಭುತವಾಗಿತ್ತು ಎಂದೆ ನಾನು. ಆಗ ಅವರು, 'ಇನ್ನೊಂದು ಲೋಟ ಕೇಸರಿ ಹಾಕಿದ ಬಾದಾಮಿ ಹಾಲನ್ನು ಕೊಟ್ಟಿದ್ದರೆ ಇನ್ನೂ ಅದ್ಭುತವಾಗಿ ಹಾಡುತ್ತಿದ್ದೆ' ಎಂದಿದ್ದರು. ಸರಳಜೀವಿ, ನೇರವಾಗಿ ಮಾತಾಡುತ್ತಿದ್ದರು. ಪರಿಷತ್ತಿನಲ್ಲಿ ಸಿಕ್ಕಾಗಲೆಲ್ಲ ಮಾತಾಡಿಸುತ್ತಿದ್ದರು. ಅವರಷ್ಟು ಭಾವಪೂರ್ಣವಾಗಿ ರಾಗಬದ್ಧವಾಗಿ ತನ್ಮಯತೆಯಿಂದ ಕನ್ನಡ ಕಾವ್ಯಗಳನ್ನು ಗಮಕದಲ್ಲಿ ಹಾಡುವವರನ್ನು ನಾನು ನೋಡೇ ಇಲ್ಲ.

❑

೬೦. ಎದುರಿಗೆ ಸಿಕ್ಕರೂ ಪಲಾಯನವಾದಿ

ಟಿ.ಕೇಶವಭಟ್ಟರು ಎ.ಪಿ.ಎಸ್.ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಬಂದಂದಿನಿಂದ ನನಗೆ ಪರಿಚಯ. ಘನವಿದ್ವಾಂಸರು. ಆದರೆ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಹೇಳುವುದಾದರೆ ಪ್ರಯೋಜನವಿಲ್ಲದ ಮೇಷ್ಟ್ರು– ಗಲಾಟೆ ಕ್ಲಾಸಿನ ಮೇಷ್ಟ್ರು, ಅವರ ಪಾಂಡಿತ್ಯ ಪಾಠ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಸೂಕ್ತವಾಗಿತ್ತು. ಹಳಗನ್ನಡದಲ್ಲಿ ಕಾವ್ಯ ರಚಿಸುವ ಶಕ್ತಿ ಅವರದು. ವ್ಯಾಕರಣ, ಛಂದಸ್ಸು, ಯಕ್ಷಗಾನಗಳಲ್ಲಿ ಅಪರಿಮಿತ ಪಾಂಡಿತ್ಯ. ಸರಳ ವ್ಯಕ್ತಿ, ಸಜ್ಜನ, ಸಹೃದಯ, ದೇಶಪ್ರೇಮಿ. ಕಟ್ಟಾ ಆರ್.ಎಸ್.ಎಸ್. ಅಭಿಮಾನಿ. ನನ್ನ ಮನೆಯಾಕೆ ಮತ್ತು ಅವರು ಕಾಲೇಜಿನಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದವರು.

ತುರ್ತುಪರಿಸ್ಥಿತಿಯ ಸಂದರ್ಭ. ಎನ್.ಆರ್.ಕಾಲೋನಿಯಲ್ಲಿ ನಮ್ಮ ಮನೆ. ಪದೇ ಪದೇ ಸಿಗುತ್ತಿದ್ದರು. ಮಾತಾಡುತ್ತಿದ್ದೆವು. ಕೆಲವು ದಿನಗಳ ನಂತರ ಇದ್ದಕ್ಕಿದ್ದಂತೆ ಎದುರು ಸಿಕ್ಕರೂ ಮುಖ ತಿರುಗಿಸಿಕೊಂಡು ಹೋಗುತ್ತಿದ್ದರು. ಯಾರೇ ಮಾತಾಡಿಸಿದರೂ ಏನೂ ತಿಳಿಯದವರಂತೆ ಅತ್ತ ಹೋಗುತ್ತಿದ್ದರು. ದೂರದಲ್ಲಿ ಕಂಡರೆ ತಪ್ಪಿಸಿಕೊಂಡು ಹೋಗುತ್ತಿದ್ದರು. ಇದ್ದಕ್ಕಿದ್ದಂತೆ ಇವರಿಗೇನಾಯಿತು ಎಂದುಕೊಂಡೆ. ತುರ್ತುಪರಿಸ್ಥಿತಿ ಮುಗಿದ ಮೇಲೆ ಒಂದು ದಿನ, 'ಪೋಲೀಸು, ಸಿಐಡಿಗಳು ಸದಾ ನನ್ನ ಮೇಲೆ ನಿಗಾ ಇಟ್ಟಿದ್ದರು. ನಾನು ಯಾರ ಜತೆ ಮಾತಾಡಿದರೂ ಅವರನ್ನು ಬೆನ್ನಟ್ಟುತ್ತಿದ್ದರು. ನಿಮಗೆ ತೊಂದರೆ ಆಗಬಾರದೆಂದು ನಾನು ಹಾಗೆ ವರ್ತಿಸುತ್ತಿದ್ದೆ' ಎಂದರು. ಆಗ ಅವರು ಹೇಳಿದ ಮತ್ತೊಂದು ಸಂಗತಿ–

ಅವರ ಮನೆಗೆ ಆ ಕಾಲದಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿ 'ನನಗೆ ಪಾಠ (ಟ್ಯೂಷನ್) ಹೇಳಬೇಕು' ಎಂದು ಬಂದ. 'ನನಗೆ ಉದ್ಯೋಗದಲ್ಲಿ ಪ್ರಮೋಷನ್ನಿಗೆ ಪ್ರಿಪಾಸಾಗಬೇಕಾಗಿದೆ' ಎಂದ. ಸಂಜೆ ಪಾಠ ಹೇಳುತ್ತಿದ್ದರು. ಒಮ್ಮೆ ಅವರ ಮನೆಗೆ ಅವರ ಸ್ನೇಹಿತರು ಗುಪ್ತಚರ ಇಲಾಖೆಯಲ್ಲಿದ್ದವರು ಬಂದರು. ಬಂದೊಡನೆ 'ಈ ವಿದ್ಯಾರ್ಥಿಯೇಕೆ ಬಂದ?' ಎಂದು ಕೇಳಿದರು. 'ಪಾಠಕ್ಕೆ' ಎಂದು ಹೇಳಿದರು.

ಗುಪ್ತಚರ ಇಲಾಖೆಯ ಸ್ನೇಹಿತರು ಒಳಗೆ ಕರೆದು ಭಟ್ಟರಿಗೆ ಹೇಳಿದರು. 'ಆತ ಸರ್ಕಾರಿ ಗುಪ್ತಚಾರ. ಮಾಹಿತಿ ಸಂಗ್ರಹಕ್ಕೆ ಪಾಠದ ವಿದ್ಯಾರ್ಥಿಯಾಗಿ ಬಂದಿದ್ದಾನೆ, ಮೊದಲು ಕಳಿಸು' ಎಂದರು. ಆಮೇಲೆ ಉಪಾಯವಾಗಿ ಪಾಠ ಹೇಳಲು ಬಿಡುವಿಲ್ಲ. ಸಂಜೆ ಹೊತ್ತು ಬೇರೆ ಕಡೆ ಕಾರ್ಯಕ್ರಮಕ್ಕೆ ಹೋಗಬೇಕು ಎಂದು ತಪ್ಪಿಸಿಕೊಂಡರು.

ಕೇಶವಭಟ್ಟರ ಬಗ್ಗೆ ಕಣ್ಣಿಟ್ಟ ಪೋಲೀಸರಿಗೆ ಸಂಘ ಚಟುವಟಿಕೆಗಳ ಬಗ್ಗೆ ಕೆಲವು ಮಾಹಿತಿಗಳು ಅವರ ದಿನಚರಿ ಪುಸ್ತಕದಲ್ಲಿದೆ ಎಂದು ತಿಳಿಯಿತು. ಅದನ್ನು ಪಡೆಯಲು ಅವರ ಮನೆಗೆ ಬಂದರು. ಭಟ್ಟರು ಮನೆಯಲ್ಲಿ ಇರಲಿಲ್ಲ ಅವರ ಪತ್ನಿ ಇದ್ದರು. 'ಕೆಂಪು ಬಣ್ಣದ ಡೈರಿ ಬರೆದಿದ್ದಾರೆ, ಅದು ಬೇಕು ಕೊಡಿ' ಎಂದರು. 'ಸರಿ ಕೂತುಕೊಳ್ಳಿ, ತಂದುಕೊಡುವೆ' ಎಂದು ಒಳಗೆ ಹೋಗಿ, (ಪೋಲೀಸರು ಏಕೆ ಕೇಳಿದರು ಎಂಬುದು

ಆಕೆಗೆ ತಿಳಿದಿತ್ತು.) ಅದರಲ್ಲಿ ಸಂಘದ ಬಗ್ಗೆ ಬರೆದ ಮಾಹಿತಿಗಳ ಪುಟಗಳನ್ನು ಹರಿದು ತೆಗೆದು ಡೈರಿಯನ್ನು ಪೋಲೀಸ್ ಅಧಿಕಾರಿಗೆ ಕೊಟ್ಟಾಗ ತೆಗೆದುಕೊಂಡು ಹೋದರು. ಆಮೇಲೆ ಅದನ್ನು ಪರಿಶೀಲಿಸಿದಾಗ ಅವರಿಗೆ ಬೇಕಾದ ಮಾಹಿತಿಗಳ ಪುಟಗಳೇ ಇರಲಿಲ್ಲ. ನನ್ನ ಪತ್ನಿ ನನಗಿಂತ ಜಾಣೆ ಎಂದು ನಗುತ್ತಾ ಕೇಶವಭಟ್ಟರು ಹೇಳಿದ ಪ್ರಸಂಗವಿದು. ಗೃಹಿಣಿ ಗೃಹರಕ್ಷಕಿಯೂ ಹೌದು, ಪತಿರಕ್ಷಕಿಯೂ ಹೌದು.

ಅವರು ಪಿ.ಹೆಚ್.ಡಿ. ಪದವಿಗಾಗಿ ದಕ್ಷಿಣಕನ್ನಡ ಜಿಲ್ಲೆಯ ಯಕ್ಷಗಾನ-ಜಾನಪದ ಕೃತಿಗಳ ಬಗ್ಗೆ ಮಹಾ ಪ್ರಬಂಧ ರಚಿಸಿದ್ದರು. ಬಡಗುತಿಟ್ಟು-ತೆಂಕುತಿಟ್ಟು ಪದ್ಧತಿವಾದಿಗಳು ಯಕ್ಷಗಾನದಲ್ಲಿರುವುದು. ಒಂದು ತಿಟ್ಟಿನವರು, ಪ್ರಬಂಧವನ್ನು ಪರಿಶೀಲಿಸಿದವರು ಕಡಲತೀರದ ಸುಪ್ರಸಿದ್ಧ ಸಾಹಿತಿಗಳು, ಇದೆಂಥ ಬುರ್ನಾಸು ಎಂದು ತಿರಸ್ಕರಿಸಿಬಿಟ್ಟರು. ಅವರ ತಿಟ್ಟು ಪಾರ್ತಿಸುಬ್ಬನ ತಿಟ್ಟಿನವರು. ಹೀಗಾಗಿ ಅವರಿಗೆ ಪಿ.ಹೆಚ್.ಡಿ. ದೊರೆಯಲಿಲ್ಲ. ಅವರ ಸಂಶೋಧನೆಯ ಕೆಲವು ಭಾಗ ಚಿಕ್ಕ ಗ್ರಂಥವಾಗಿ ಪ್ರಕಟವಾಯಿತು ಅಷ್ಟೆ. ತೆರೆಮೆರೆಯಲ್ಲಿ ದೊಡ್ಡ ವಿದ್ವಾಂಸರ ಕೈವಾಡ ಅನೇಕರಿಗೆ ತಿಳಿಯಿತು. ಎಸ್. ಅನಂತನಾರಾಯಣರ ಮಹಾಪ್ರಬಂಧದ ಕಥೆಯೂ ಇಂಥದ್ದೇ.

❑

೬೧. ದೀರ್ಘಕಾಲದ ನಂತರ ಮರಳಿ ಬಂದ ಪುಸ್ತಕ

ನನಗೆ ಅನೇಕ ವಿದ್ವಾಂಸರ ಪರಿಚಯ ಸಂದರ್ಭವಶಾತ್ ಆಗಿದೆ. ಆ ಪೈಕಿ ಕೆಲವರು ಮರೆಯಲಾಗದ ವಿದ್ವಾಂಸರಾಗಿದ್ದಾರೆ. ಆ ಪೈಕಿ ಪಿ.ಬಸವಣ್ಣನವರೊಬ್ಬರು. ಅವರ ಜೀವನ ಶ್ರೀಮಂತ ಸಂಸಾರಿ ಶುದ್ಧ ಸಂನ್ಯಾಸಿ ಆದ ಕಥೆ. ಕುಟುಂಬ ವೈರಾಗ್ಯದಿಂದ ಸಂನ್ಯಾಸ ಸ್ವೀಕರಿಸಿದವರು. ಅದೇನೇ ಇರಲಿ, ಅವರು ಸಜ್ಜನರು, ಸಾತ್ವಿಕರು, ಸರಳಜೀವಿಗಳು. ಮಠಾಧಿಪತಿ ಅಲ್ಲದ ಸಾಧುಸಂನ್ಯಾಸಿ ಅವರು. ಅದಕ್ಕಿಂತ ಹೆಚ್ಚಾಗಿ ಸಾಹಿತಿಗಳು. ಕಾವ್ಯ ರಚಿಸಿದ್ದಾರೆ. ವಿದ್ವಾಂಸರು. ಶಾಸ್ತ್ರಗ್ರಂಥವನ್ನು ಛಂದಸ್ಸಿನ ಬಗ್ಗೆ ರಚಿಸಿದ್ದಾರೆ. ಅವರ ಕೃತಿಗಳು ಜೀವನ ಎಂ.ಫಿಲ್ ಅಧ್ಯಯನಕ್ಕೆ ಯೋಗ್ಯವಾಗಿದೆ.

ಅವರನ್ನು ನೆನೆದಾಗ ಮೂರು ಸಂಗತಿಗಳು ನೆನಪಾಗುತ್ತದೆ. ನಾಗಪ್ಪ ಅವರ ಜೈಮಿನಿ ಭಾರತ ಟೀಕೆಯನ್ನು ನನ್ನಿಂದ ಒಮ್ಮೆ ಅವರು ಒಯ್ದಿದ್ದರು. ಅದು ೧೯೩೫ರಲ್ಲಿ ಪ್ರಕಟವಾದದ್ದು. ಎಲ್ಲಿಯೂ ಸಿಗುತ್ತಿರಲಿಲ್ಲ. ನನ್ನ ಬಳಿ ಇತ್ತು ಕೊಟ್ಟೆ. ಹಲವಾರು ವರ್ಷಗಳಾದ ಮೇಲೆ ಅವರು ತಮ್ಮ ಗ್ರಂಥಸಂಗ್ರಹವನ್ನು ಪರಿಶೀಲಿಸುತ್ತಿದ್ದಾಗ ಇದು ಕಣ್ಣಿಗೆ ಬಿತ್ತು. 'ಅಯ್ಯೋ ಎಂಥ ಕೆಲಸವಾಯ್ತು! ಹಿಂದಿರುಗಿಸಲೇ ಇಲ್ಲ!' ಕೂಡಲೇ ಕೊಳ್ಳೇಗಾಲದಿಂದ ಬೆಂಗಳೂರಿಗೆ ಬಂದರು. ನಮ್ಮ ಮನೆಗೆ ಅದನ್ನು ಕೊಡಲೆಂದೇ ಬಂದರು. 'ನಿಮ್ಮ ಪುಸ್ತಕವನ್ನು ಕೊಡುವುದನ್ನೇ ಮರೆತುಬಿಟ್ಟಿದ್ದೆ ಎಂಥ ಘೋರ ಅಪರಾಧ ಮಾಡಿದೆ! ಅದಕ್ಕೆ ಕೂಡಲೇ ಈ ಪುಸ್ತಕ ಹಿಂದಿರುಗಿಸಲೆಂದೇ ಕೊಳ್ಳೇಗಾಲದಿಂದ ಬಂದೆ' ಎಂದರು. 'ಮುಂದಿನ ಸಲ ಬಂದಾಗ ನಿಧಾನವಾಗಿ ಬನ್ನಿ, ಮಾತಾಡೋಣ ಈಗ ಬೇರೆ ಕೆಲಸ ಇದೆ, ಬೇಗ ಹೋಗಬೇಕಾಗಿದೆ ಎನ್ನುತ್ತಿದ್ದೀರಿ' ಎಂದೆ. 'ಇನ್ನೆಲ್ಲಿ ಬರುವುದು ಬೆಂಗಳೂರಿಗೆ. ವಯಸ್ಸಾಯಿತು, ಕೈಲಾಗುತ್ತಿಲ್ಲ' ಎಂದರು. ಸಾಮಾನ್ಯವಾಗಿ ಬೆಂಗಳೂರಿಗೆ ಬಂದರೆ ಭೇಟಿಯಾಗುತ್ತಿದ್ದರು. ಇಲ್ಲವೇ ಫೋನ್ ಮಾಡುತ್ತಿದ್ದರು. ಅಲ್ಲಿಂದೀಚೆಗೆ ಭೇಟಿಯಾಗಿರಲಿಲ್ಲ. ಕೊಳ್ಳೇಗಾಲದಲ್ಲಿ ನಿಧನರಾದರಂತೆ.

ಅವರನ್ನು ನೆನೆದಾಗಲೆಲ್ಲ ಹಲವಾರು ನೆನಪುಗಳು ಮರುಕಳಿಸುತ್ತಿವೆ.

❑

೬೨. ಕನ್ನಡ ಅಧ್ಯಾಪಕನಿಗೆ ಭರ್ಜರಿ ಸ್ವಾಗತ

ಸರ್ಕಾರಿ ಕೆಲಸದಲ್ಲಿ ಇರುವವರಿಗೆ ವರ್ಗಾವಣೆ ಕಟ್ಟಿಟ್ಟ ಬುತ್ತಿ. ರಾಜಕೀಯ ಮತ್ತು ಧಾರ್ಮಿಕ ಗುರುಗಳ ಬೆಂಬಲ ಇರುವವರಿಗೆ ಮತ್ತು ಖಾಸಗೀ ಕಾಲೇಜಿನವರಿಗೆ ವರ್ಗಾವಣೆ ಇರುವುದಿಲ್ಲ. ನಾನು ಕೊಳ್ಳೇಗಾಲಕ್ಕೆ ಬೆಂಗಳೂರಿನ ಸರ್ಕಾರಿ ಡಿಗ್ರಿ ಕಾಲೇಜಿನಿಂದ ವರ್ಗವಾದಾಗ ಆ ವಿಷಯ ಮಿತ್ರರಾದ ಪಿ.ಬಸವಣ್ಣನವರಿಗೆ ತಿಳಿಯಿತು. ಮಾರನೇ ದಿನವೇ ಅಲ್ಲಿ ದೇವಸ್ಥಾನದ ಸಭಾಂಗಣವೊಂದರಲ್ಲಿ ನನಗಾಗಿ ಕಾರ್ಯಕ್ರಮ ಏರ್ಪಡಿಸಿದರು. 'ಆಧ್ಯಾಪಕರ ಆಗಮನಕ್ಕೆ ಸ್ವಾಗತ ಕಾರ್ಯಕ್ರಮ'. ಊರಿನ ಗಣ್ಯರನ್ನು ಆಹ್ವಾನಿಸಿದ್ದರು. ಅವರಿಗೆಲ್ಲಾ ಅವರು ಹೇಳಿದ್ದು; 'ಶ್ರೇಷ್ಠ ಅಧ್ಯಾಪಕರು, ವಿದ್ವಾಂಸರು, ಕಲೆಗಾರರು ಯಾವುದಾದರೂ ಊರಿಗೆ ಬಂದರೆ, ನೆಲಸಿದರೆ ಅಥವಾ ಹಲವು ಕಾಲ ಇದ್ದರೆ ಅದು ಊರಿನ ಪುಣ್ಯ. ಜನರ ಅದೃಷ್ಟ. ಈವತ್ತು ನಮ್ಮ ಕೊಳ್ಳೇಗಾಲಕ್ಕೆ ಪ್ರೊ.ಜಿ.ಅ.ನಾ. ಅವರು ಕಾಲೇಜಿಗೆ ವರವಾಗಿ ಬಂದಿದ್ದಾರೆ. ಹಲವಾರು ವರ್ಷ ಇರುತ್ತಾರೆ. ಇದು ನಮ್ಮ ಭಾಗ್ಯ. ಅವರಿಂದ ನಮ್ಮ ವಿದ್ಯಾರ್ಥಿಗಳಿಗೆ ಶ್ರೇಷ್ಠ ಕನ್ನಡ ಶಿಕ್ಷಣ ದೊರೆಯುತ್ತದೆ. ಅವರಿಗೆ ಸ್ವಾಗತ ಬಯಸಬೇಕಾದ್ದು ನಮ್ಮ ಕರ್ತವ್ಯ. ಕಾಲೇಜಲ್ಲಿ ಅವರನ್ನು ಸ್ವಾಗತಿಸುತ್ತಾರೆ. ಅದು ಸಂಪ್ರದಾಯ. ಊರು ಸ್ವಾಗತಿಸುವುದು ಸಂಸ್ಕೃತಿ ಲಕ್ಷಣ. ಇಷ್ಟಕ್ಕೂ ಅವರ ಜ್ಞಾನಲಾಭ ನಮ್ಮ ವಿದ್ಯಾರ್ಥಿಗಳಿಗಲ್ಲವೇ?!' ಎಂದು. ಹೀಗೆ ಒಂದು ಊರಿಗೆ ವರ್ಗವಾಗಿ ಹೋದ ಒಬ್ಬ ಶಿಕ್ಷಕನಿಗೆ ಆತ್ಮೀಯ ಗೌರವಪೂರ್ವಕ ಸ್ವಾಗತ ಸಿಕ್ಕಿದ್ದು ನನ್ನ ಜೀವನದಲ್ಲೇ ಇದೊಂದೇ ಸಲ. ನಾನು ಮಾಗಡಿ, ಬೆಂಗಳೂರು, ಹಾಸನ, ಮಂಡ್ಯ ಮೊದಲಾದ ಕಡೆಗಳಲ್ಲಿ ಕೆಲಸ ಮಾಡಿದ್ದೇನೆ. ಆದರೆ ಯಾವ ಊರಿನ ಜನರೂ ನೀವು ಬಂದಿರಾ ನೀವು ಹೋದಿರಾ ಅಂತ ಕೇಳಿಲ್ಲ.

❑

೬೩. ಪೋಲೀಸ್ ಇನ್ಸ್ಪೆಕ್ಟರ್ ದೊರಕಿಸಿ ಕೊಟ್ಟ ದಾಸಸಾಹಿತ್ಯ

ನಾನು ವಿಜಯದಾಸರ ಕೀರ್ತನೆಗಳನ್ನು, ಉಗಾಭೋಗಗಳನ್ನು ಸರ್ಕಾರದ ಸಮಗ್ರದಾಸ ಸಾಹಿತ್ಯಮಾಲೆಗೆ ಪ್ರಕಟನೆಗಾಗಿ ಸಂಗ್ರಹಿಸುತ್ತಿದ್ದೆ. ಈ ಕೆಲಸವನ್ನು ವಹಿಸಿದವರು ಶ್ರೀನಿವಾಸ ಹಾವನೂರರು. ದಾಸಸಾಹಿತ್ಯ ಕ್ಷೇತ್ರಕ್ಕೆ ನನ್ನನ್ನು ಸೆಳೆದವರು ಅವರು. ವಿಜಯದಾಸರ ಕೀರ್ತನೆಗಳ ಸಂಗ್ರಹಕ್ಕೆ ತೊಡಗಿದಾಗ ಇತರ ದಾಸಸಾಹಿತ್ಯ ಸಂಶೋಧಕರಿಗೆ ಆದ ಅಡ್ಡಿ ಆತಂಕಗಳೂ ನನಗೂ ಆಗಿವೆ. ಈ ಪೈಕಿ ಒಂದು ಪ್ರಸಂಗ ಹೀಗಿದೆ.

ಗೋರೆಬಾಳ ಹನುಮಂತರಾವ್ ಮನೆಗೆ ಭೇಟಿ

ರಾಯಚೂರಿನ ಲಿಂಗಸೂಗೂರಿಗೆ ಉಪನ್ಯಾಸ ಮಾಡಲು (ಧರ್ಮಚಕ್ರದ ವಿಹಾರದ ಅಂಗವಾಗಿ ಜೈನಧರ್ಮ ಕುರಿತು ಮಾತಾಡಲು) ಹೋಗಿದ್ದೆ. ಆ ಕಾರ್ಯಕ್ರಮ ಗೋರೆಬಾಳ ಹನುಮಂತರಾಯರ ಮನೆಯ ಬಳಿ, ವೇದಿಕೆಯಲ್ಲಿ ಸಾರ್ವಜನಿಕ ಸಭೆ ಏರ್ಪಟ್ಟಿತ್ತು. ಸಂಜೆ ಕಾರ್ಯಕ್ರಮ. ಬೆಳಿಗ್ಗೆ ಹನುಮಂತರಾಯರ ಮನೆಗೆ ಹೋದಾಗ ಬಾಗಿಲ ಬಳಿ ನಿಂತು ಸದ್ದು ಮಾಡಿದೆ. ಹಳೆಯ ದೊಡ್ಡ ಮನೆ. ಒಳಗಿನಿಂದ ಅವರ ಮಗಳು ಅಳಿಯ ಅಂತ ಕಾಣುತ್ತೆ, ತಿಳಿಯದು. ಬಂದು ಏನು ಯಾರು ಎಂದು ಕೇಳಿದರು. 'ಗೋರೆಬಾಳ ಅವರ ಪುಸ್ತಕಗಳು ಕೊಳ್ಳಲು ಬೇಕಿದೆ, ಮುಖ್ಯವಾಗಿ ವಿಜಯದಾಸರ ಕೃತಿಗಳು' ಎಂದೆ. ನೀವು ಯಾರು ಏನು ಎಂದು ಕೇಳಿ ನಾನು ಮಾಧ್ವನಲ್ಲ ಎಂದು ತಿಳಿದು, 'ಇಲ್ಲಿ ಅವರ ಪುಸ್ತಕಗಳು ಯಾವುದೂ ಇಲ್ಲ' ಎಂದು ಹೇಳಿ ಕಳಿಸಿಬಿಟ್ಟರು. ಗೋರೆಬಾಳ ಅವರು ಆ ವೇಳೆಗೆ ತೀರಿಕೊಂಡಿದ್ದರು. (ಜನನ-೧೯೯೩; ಮರಣ-೧೯೬೮) ತೆಪ್ಪಗಾಗಿ ಹಿಂದೆ ಬಂದೆ. ಸಂಜೆ ಭಾಷಣವಾಯಿತು. ಜನ ಮೆಚ್ಚಿದರು. ಅಲ್ಲಿ ಪರ್ವತಯ್ಯ ಅಂತ ಕಾಣುತ್ತೆ, ಒಬ್ಬ ಅಧ್ಯಾಪಕರು ಪರಿಚಯವಾದರು. ಅವರ ಬಳಿ 'ಗೋರೆಬಾಳ ಅವರ ಪುಸ್ತಕಗಳು ಬೇಕಿತ್ತು. ಬೆಳಿಗ್ಗೆ ಹೋಗಿದ್ದೆ, ಬಾಗಿಲಲ್ಲೇ ಸಾಗಹಾಕಿದರು' ಎಂದೆ.

ಅದಕ್ಕೆ ಅವರು 'ಅದರಲ್ಲೇನೂ ಅಚ್ಚರಿಯಿಲ್ಲ. ಗೋರೆಬಾಳ ಅವರಷ್ಟು ಉದಾರಿಗಳು ಹಿರಿಯರು ಉಳಿದವರಲ್ಲ. ನನ್ನ ಅನುಭವ ಕೇಳಿ; ರಾಯಚೂರು ಕನ್ನಡ ಸಾಹಿತ್ಯ ಸಮ್ಮೇಳನ ನಡೆದ ಕಾಲದಲ್ಲಿ ನನಗೆ ಸಮ್ಮೇಳನದ ವಿಶೇಷ ಸಂಚಿಕೆಗೆ ಗೋರೆಬಾಳ ಅವರ ಬಗ್ಗೆ ಲೇಖನ ಬರೆಯಲು ಸ್ವಾಗತ ಸಮಿತಿಯವರು ತಿಳಿಸಿದರು. ನಾನು ಮಾಹಿತಿಗಾಗಿ ಅವರ ಮನೆಗೆ ಹೋದಾಗ, ಈ ಊರಿನಲ್ಲಿ ಪರಿಚಿತ ಶಾಲಾ ಮಾಸ್ತರನಾಗಿದ್ದರೂ ನನಗೆ ಮಾಹಿತಿ ಕೊಡಲಿಲ್ಲ. ಅವರ ಕೃತಿಗಳನ್ನು ನೀಡಲಿಲ್ಲ. ನೀನಾರು ಅವರ ಬಗ್ಗೆ ಬರೆಯಲು ಎಂಬ ಧಾಟಿಯಲ್ಲಿ ನನ್ನೊಡನೆ ವರ್ತಿಸಿದರು ಅಲ್ಲಿದ್ದವರು. ನಾನು ಬೇರೆ ಕಡೆ ಲಭ್ಯವಾದಷ್ಟು ಸಂಗತಿಗಳನ್ನು ಸಂಗ್ರಹಿಸಿದ ಲೇಖನ ಬರೆದೆ' ಎಂದರು.

ಸಂಜೆ ನನ್ನ ಭಾಷಣದ ಪರಿಣಾಮವಾಗಿ ನಾರಾಯಣರಾವ್ ಎಂಬ ಪೋಲೀಸ್ ಅಧಿಕಾರಿಗಳ ಪರಿಚಯವಾಯಿತು. ಮಾತಿನ ನಡುವೆ ನನ್ನ ಮಗಳು ಎಂ.ಎ. ಕನ್ನಡವನ್ನು ಮೈಸೂರಿನಲ್ಲಿ ಓದುತ್ತಿದ್ದಾಳೆ. ಅವಳಿಗೆ ದಾಸ ಸಾಹಿತ್ಯದ ಕೃತಿಗಳು ಬೇಕಾಗಿವೆ ಎಂದರು. 'ಅವೆಲ್ಲವನ್ನು ಗೋರೆಬಾಳ ಅವರು ಪ್ರಕಟಿಸಿದ್ದಾರೆ. ಅವರ ಮನೆ ಇಲ್ಲೇ ಇದೆ, ಹೋಗೋಣ' ಎಂದರು. ನಾನು ಬೆಳಗಿನ ಅನುಭವವನ್ನು ಹೇಳಿದೆ.

'ನಾನು ನಿಮ್ಮ ಜತೆ ಬರುತ್ತೇನೆ. ನೀವು ನಿಮ್ಮ ಮಗಳಿಗೆ ಪರೀಕ್ಷೆಗೆ ದಾಸ ಸಾಹಿತ್ಯ ಪುಸ್ತಕಗಳು ಬೇಕಾಗಿದೆ, ಕೊಳ್ಳುತ್ತೇನೆ ಎಂದು ಹೇಳಿ ಅಷ್ಟೇ. ಇವರಾರು ಎಂದರೆ ನಮ್ಮ ಮಗಳ ಮೇಷ್ಟ್ರು ಅಂತ ಹೇಳಿ. ನನಗೆ ಬೇಕಾದ ಮತ್ತು ನಿಮ್ಮ ಮಗಳಿಗೆ ಬೇಕಾದ ಪುಸ್ತಕಗಳನ್ನು ಆರಿಸುತ್ತೇನೆ. ಮಾತಾಡದೆ ಹಣ ಕೊಟ್ಟು ಬನ್ನಿ. ಆಚೆ ಬಂದ ಮೇಲೆ ನನ್ನ ಪುಸ್ತಕ ನಿಮ್ಮ ಮಗಳ ಪುಸ್ತಕ ಹಂಚಿಕೊಳ್ಳೋಣ' ಎಂದೆ. ಸರಿ ಎಂದರು. ಅವರ ಮನೆ ಗೇಟಿಗೆ ಹೋದಾಗ ಯಥಾಪ್ರಕಾರ ಯಾರು ನೀವು ಏಕೆ ಬಂದಿರಿ ಎಂದು ಕೇಳಿದರು. ನಾನು ಮೊದಲೇ 'ನಿಮಗೆ ತಿಳಿದಿರುವ ಪ್ರಸಿದ್ಧ ದಾಸ ಸಾಹಿತಿಗಳ ಅಥವಾ ವ್ಯಕ್ತಿಗಳ ಹೆಸರು ಹೇಳಿ' ಎಂದಿದ್ದೆ; 'ಮೈಸೂರಿನ ಗುರುಗೋವಿಂದ ವಿಠಲದಾಸರ ಪೈಕಿ, ಇಂಥವರು ನಮ್ಮ ಹಿರಿಯರು' ಎಂದರು. ಅಪ್ಪಟ ಮಾಧ್ವರು ಎಂದು ಅವರಿಗೆ ಅರಿವಾಗಿ ಒಳಗೆ ಬನ್ನಿ ಎಂದರು. ಪುಸ್ತಕಗಳನ್ನು ತಂದು ಅವರ ಮುಂದೆ ಇಟ್ಟರು. ಪುಸ್ತಕಗಳನ್ನು ಆರಿಸಿದೆ. ಹಣ ಕೊಟ್ಟರು. ಹೊರಗೆ ಬಂದೆವು. ನಮಗೆ ಬೇಕಾದ ಪುಸ್ತಕಗಳನ್ನು ಹಂಚಿಕೊಂಡೆವು. ಅವರಿಗೆ ಕೃತಜ್ಞತೆ ಸಲ್ಲಿಸಿದೆ. ನನ್ನ ಬಳಿ ಇರುವ ವಿಜಯದಾಸರ ಗೋರೆಬಾಳ ಪುಸ್ತಕಗಳು ನನಗೆ ದೊರೆತದ್ದು ಹೀಗೆ.

❑

೬೪. ನನ್ನ ಪತ್ರಕ್ಕೆ ಡಿ.ವಿ.ಜಿ. ಕೊಟ್ಟ ಉತ್ತರ

ಮನುಸ್ಮೃತಿ, ಪರಾಶರಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿಗಳು ಸ್ಮೃತಿಗಳಲ್ಲೆಲ್ಲಾ ಅತ್ಯಂತ ಜನಪ್ರಿಯ ಹಾಗೂ ಬಳಕೆಯಲ್ಲಿರುವ ಸ್ಮೃತಿಗ್ರಂಥಗಳು. ಇವುಗಳ ಕನ್ನಡಾನುವಾದವನ್ನು ಹಲವರು ಮಾಡಿದ್ದಾರೆ. ಪರಾಶರಸ್ಮೃತಿಯು ಉಳಿದ ಸ್ಮೃತಿಗಳಿಗಿಂತ ಮುಂಚೆ ಕನ್ನಡದಲ್ಲಿ ವ್ಯಾಖ್ಯಾನ ಸಹಿತ ಅನುವಾದವಾಗಿದೆ. ರೈಸರ ಬಳಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಚಿಂಚೋಳಿ ವೆಂಕಣ್ಣಾಚಾರ್ಯ ಎಂಬ ಪಂಡಿತರು ಇದನ್ನು ಅನುವಾದಿಸಿದ್ದಾರೆ.

ಕರ್ನಾಟಕದಲ್ಲಷ್ಟೇ ಅಲ್ಲ ಭಾರತದಲ್ಲೇ ಮೊದಲು ದೇಸೀ ಭಾಷೆಗೆ ಅನುವಾದವಾದ ಗ್ರಂಥಗಳಲ್ಲಿ ಇದು ಮೊದಲನೆಯದು. ಏಷ್ಯಾಟಿಕ್ ಸೊಸೈಟಿಯವರು ೧೯ನೆಯ ಶತಮಾನದ ಕೊನೆಯಲ್ಲಿ ಪ್ರಕಟಿಸುವ ಮುಂಚೆಯೇ ಕನ್ನಡದಲ್ಲಿ ಸಂಸ್ಕೃತದ ತಾಳೆಗರಿ ಗ್ರಂಥದ ಪ್ರತಿಯಿಂದ ಅನುವಾದಗೊಂಡ ಗ್ರಂಥ. ಅಚ್ಚಾದ ಗ್ರಂಥ(೧೮೯೦) ಚಿಂಚೋಳಿ ವೆಂಕಣ್ಣಾಚಾರ್ಯರ ಈ ಗ್ರಂಥದ ಬಗ್ಗೆ ಡಿವಿಜಿ ಅವರು ಜ್ಞಾಪಕಚಿತ್ರಶಾಲೆ-೩ (ಸಾಹಿತ್ಯೋಪಾಸಕರು) ಪುಟ ೨೬ರಲ್ಲಿ ಹೀಗೆ ಬರೆದಿದ್ದಾರೆ.

ಚಿಂಚೋಳಿ ವೆಂಕಣ್ಣಾಚಾರ್ಯರ ಪರಾಶರ ಮಾಧವೀಯ ಅನುವಾದ ಹರೀರಾಮ್ ಮಿಸ್ಸರ್ (ಮಿಶ್ರ) ಅವರ ಟವನ್ ಮುದ್ರಾಶಾಲೆಯಲ್ಲಿ ೧೮೯೦ರಲ್ಲಿ ಅಚ್ಚಾಯಿತು. ಈ ಅಚ್ಚುಕೂಟ ೧೯೦೬ರ ವರೆಗೆ ಬೆಂಗಳೂರು ಸಿಟಿಮಾರ್ಕೆಟ್ಟಿನ ವಾಯುವ್ಯ ದಿಕ್ಕಿನಲ್ಲಿ ಆ ಮಾರ್ಕೆಟ್ಟಿನ ಭಾಗವಾದ ಒಂದು ಕಟ್ಟಡದಲ್ಲಿ ಇತ್ತು. ಕನ್ನಡ ತೆಲುಗು ಬಾಳಬಂಧು (ಮರಾಠಿ) ಇಂಗ್ಲಿಷ್ ನಾಲ್ಕು ಭಾಷೆಗಳ ಗ್ರಂಥಗಳು ಈ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿದ್ದವು. ಅಲ್ಲಿನ ಅಚ್ಚಿನ ಮೊಳೆಗಳು ಮಂಗಳೂರಿನ ಬೇಸಲ್ ಮಿಷನ್ನಿನಲ್ಲಿ ತಯಾರಾಗಿದ್ದವು. ಒಂದು ಪೋಸ್ಟ್‌ಕಾರ್ಡಿನಲ್ಲಿ ೫೬ ಸಾಲು ಅಚ್ಚಾಗುವಷ್ಟು ಸಣ್ಣಕ್ಷರದ ರೂಬಿ (Ruby fonts) ಎಂಬ ಸಣ್ಣ ಅಚ್ಚಿನ ಮೊಳೆಗಳು ಆ ಪ್ರೆಸ್ಸಿನಲ್ಲಿದ್ದವು. ಮಿಸ್ಸರ್ ನಂತರ ಅವರ ಮಕ್ಕಳು ಕೆಲವು ಕಾಲ ನಡೆಸಿದರು. ಆಮೇಲೆ ಪ್ರೆಸ್ ಮುಚ್ಚಿತು.

ಹರೀರಾಂ ಮಿಸ್ಸರ್ ಉತ್ತರಭಾರತದ ಬ್ರಾಹ್ಮಣರು, ವಿದ್ಯಾವಿನಯ ಸಂಪನ್ನರು. ಕೆಲವು ಕಾಲ ಮುನಿಸಿಪಲ್ ಕೌನ್ಸಿಲರ್ ಆಗಿದ್ದರು. ಡಿ.ವಿ.ಜಿ. ಅವರಿಗೆ ಇವರು ಪರಿಚಿತರಾಗಿದ್ದರು. ಈ ಮಿಸ್ಸರ್ ಪ್ರೆಸ್ಸಿನಲ್ಲಿ ಅಚ್ಚಾದ ಬೃಹದ್ಗ್ರಂಥ ೧೧೦೦ ಪುಟಗಳಿಗೂ ಮೀರಿದ ಗ್ರಂಥ. ಚಿಂಚೋಳಿ ವೆಂಕಣ್ಣಾಚಾರ್ಯ ಅವರು ಅನುವಾದಿಸಿದ ಗ್ರಂಥ ಪರಾಶರ ಮಾಧವೀಯ ಧರ್ಮಶಾಸ್ತ್ರವು. (೧೮೯೦)

ಈ ಗ್ರಂಥವು ಪುರೋಹಿತರೊಬ್ಬರಿಂದ ನನಗೆ ದೊರೆಯಿತು. ಅದರಲ್ಲಿ ಡಿವಿಜಿ ಅವರ ಜ್ಞಾಪಕಚಿತ್ರಶಾಲೆಯಲ್ಲಿ ಇಲ್ಲದ ವಿವರಗಳು ಇದ್ದವು. ಆ ವಿವರಗಳನ್ನೆಲ್ಲಾ ಸೂಚಿಸಿ ಡಿವಿಜಿಯವರಿಗೆ ಕಾಗದ ಬರೆದೆ. ಆಗ ಅವರು ಅನಾರೋಗ್ಯದಿಂದ ಇದ್ದಿದ್ದರಿಂದ ಭೇಟಿಗೆ ಅವಕಾಶ ಸಿಗಲಿಲ್ಲ. ಹಾಗಾಗಿ ಕಾಗದ ಬರೆದೆ. ಮಾರನೇ ದಿನವೇ ಉತ್ತರ ಬಂತು: 'ಹಳಬರನ್ನು ನೆನಪಿಸಿ ಸಂತೋಷ ತಂದಿದ್ದೀರಿ. ತುಂಬ ಉಪಕಾರ ಮಾಡಿದಿರಿ.

ನೀವು ತಿಳಿಸಿರುವ ವಿಷಯಗಳೆಲ್ಲ ಜ್ಞಾಪಕಚಿತ್ರಶಾಲೆಯಲ್ಲಿ ಸೇರತಕ್ಕವು. ಪುನರ್ಮುದ್ರಣದ ಯೋಗ ಬರಬೇಕು ಪುಸ್ತಕಕ್ಕೆ, ಅಷ್ಟೇ' ಎಂದು ಬರೆದಿದ್ದರು.

ಅನಂತರ ಡಿವಿಜಿಯವರ ಆ ಪತ್ರದ ನಕಲನ್ನು ಮತ್ತು ನನ್ನ ಪತ್ರವನ್ನು ನಿಟ್ಟೂರು ಶ್ರೀನಿವಾಸರಾಯರಿಗೆ ಕೊಟ್ಟೆ. 'ಪ್ರಕಾಶಕರಿಗೆ ತಿಳಿಸುತ್ತೇನೆ' ಎಂದರು. ಆಮೇಲೇನಾಯಿತೋ ತಿಳಿಯಲಿಲ್ಲ. ಜ್ಞಾಪಕಚಿತ್ರಶಾಲೆ ಹಲವು ಬಾರಿ ಮುದ್ರಣವಾದರೂ ಡಿವಿಜಿಯವರ ಪತ್ರವಾಗಲಿ, ನನ್ನ ಪತ್ರವಾಗಲಿ ಪ್ರಕಟವಾಗಲಿಲ್ಲ. ಇತ್ತೀಚೆಗೆ ಪ್ರಕಟವಾದ **ಡಿವಿಜಿ ಪತ್ರಗಳು** ಗ್ರಂಥದಲ್ಲೂ ಸೇರಿಲ್ಲ. ಕಾರಣ ತಿಳಿಯದು.

❑

೬೫. ಬಿ.ಎಂ.ಶ್ರೀ. ಮಿತ್ರರು ತಲೆ ತಗ್ಗಿಸಿದರು

ಬಿ.ಎಂ.ಶ್ರೀಕಂಠಯ್ಯನವರು ಅಪೂರ್ವ ವಾಗ್ಮಿಗಳು ಎಂಬುದು ಎಲ್ಲರಿಗೂ ತಿಳಿದಿದೆ. ಪ್ರಚಂಡ ಉಪನ್ಯಾಸಕರು ತಾವಷ್ಟೇ ಅಲ್ಲ, ಉಳಿದವರೂ ಆಗಿದ್ದಾರೆ ಎಂಬುದು ಬಿ ಎಂ.ಶ್ರೀ. ಅವರಿಗೆ ಗೊತ್ತಿತ್ತು. ಅಂಥವರನ್ನು ಗುರುತಿಸಿ ಬೇರೆ ಬೇರೆ ಸಮಾರಂಭಗಳಲ್ಲಿ ಉಪನ್ಯಾಸಗಳಿಗೆ ಆಹ್ವಾನಿಸಿ ಗೌರವಿಸುತ್ತಿದ್ದರು.

ಮೈಸೂರಿನ ಚರ್ಚ್ ಒಂದರಲ್ಲಿ ರೆವರೆಂಡ್ ಟಾಮ್ ಲಿನ್ಸನ್ ಎಂಬ ಕನ್ನಡ ಪಾದ್ರಿ ಇದ್ದರು. ಕನ್ನಡದಲ್ಲಿ ಸೊಗಸಾಗಿ ಮಾತನಾಡುತ್ತಿದ್ದರು. ಅವರು ಬಿ.ಎಂ.ಶ್ರೀ.ಗಿಂತ ಚೆನ್ನಾಗಿ ಮಾತನಾಡುತ್ತಾರೆ ಎಂದು ಕೆಲವರು ಹೇಳುತ್ತಿದ್ದರು. ಟಾಮ್‌ಲಿನ್ಸನ್ ಕನ್ನಡ ಬಲ್ಲವರಷ್ಟೇ ಅಲ್ಲದೆ ಕನ್ನಡ ಪ್ರೇಮಿಯೂ ಆಗಿದ್ದರು. ಅವರು ಸುಬೋಧ ರಾಮರಾಯರು ಬರೆದ ೧೪೦ ಜೀವನಚರಿತ್ರೆಗಳಲ್ಲಿ ಒಂದಾದ ಏಸುಕ್ರಿಸ್ತ ಜೀವನ ಚರಿತ್ರೆ ಓದಿ ಸಂತೋಷಪಟ್ಟು ಅದರ ೫೦ ಪ್ರತಿಗಳನ್ನು ಕೊಂಡು ತನ್ನ ಕ್ರೈಸ್ತ ಬಾಂಧವರಿಗೆಲ್ಲಾ ಹಂಚಿದರಂತೆ. (ಕೊರಟಿ ಶ್ರೀನಿವಾಸರಾವ್–ದಾಸಸಾಹಿತ್ಯ ಪ್ರವರ್ತಕರು ಪುಟ ೬೦) ಇಂಥ ಟಾಮ್ ಲಿನ್ಸನ್ ಅವರನ್ನು ನಂಜನಗೂಡಿನಲ್ಲಿ ತಿರುಮಲಾಂಬಾ ನಿವಾಸದಲ್ಲಿ ನಡೆದ ಸಾಹಿತ್ಯದ ಕಾರ್ಯಕ್ರಮಕ್ಕೆ ಕನ್ನಡ ಸಾಹಿತ್ಯದ ಉಪನ್ಯಾಸಕ್ಕೆ ಬಿ.ಎಂ.ಶ್ರೀ. ಆಹ್ವಾನಿಸಿದ್ದರು.

ಮೈಸೂರಿನಿಂದ ರೈಲಿನಲ್ಲಿ ಟಾಮ್ ಲಿನ್ಸನ್ ಕಾರ್ಯಕ್ರಮಕ್ಕೆ ನಂಜನಗೂಡಿಗೆ ಹೊರಟಾಗ ಇವರ ಪಕ್ಕದಲ್ಲಿ ಇಬ್ಬರು ನಂಜನಗೂಡಿನ ವಕೀಲರು ಕುಳಿತಿದ್ದರು. ಅವರು ಕನ್ನಡ ಪುಸ್ತಕ ಓದುತ್ತಾ ಕುಳಿತಿದ್ದ ಟಾಮ್ ಲಿನ್ಸನ್‌ರನ್ನು ಗೇಲಿ ಮಾಡತೊಡಗಿದರು. ಏಕವಚನದಲ್ಲಿ ಹೀನಾಮಾನವಾಗಿ ತೆಗಳುತ್ತಿದ್ದರು. ಕೆಂಚ ಕೋತಿ, ಅನಿಷ್ಟಧರ್ಮಿ ಇತ್ಯಾದಿಯಾಗಿ ಬೈಯುತ್ತಾ ಹೀಯಾಳಿಸಿಕೊಂಡೇ ಬಂದರು. ಟಾಮ್ ಲಿನ್ಸನ್ ಏನೂ ಮಾತಾಡದೆ ಕನ್ನಡ ಪುಸ್ತಕ ವಾಚನದಲ್ಲಿ ನಿಮಗ್ನರಾಗಿದ್ದರು. ನಂಜನಗೂಡು ಬಂತು. ಮೂವರೂ ಇಳಿದರು. ಇಳಿಯುವಾಗ 'ಹಾಗೆಲ್ಲಾ ಯಾರನ್ನೂ ಹೀಯಾಳಿಸಬಾರದು' ಎಂದು ಕನ್ನಡದಲ್ಲಿ ಹೇಳಿದರು. 'ಈ ಕೆಂಚ ಕೋತಿ ನಮಗೆ ಬುದ್ಧಿ ಹೇಳೋಕೆ ಬರುತ್ತೆ' ಎಂದು ಇಬ್ಬರೂ ನಗೆಯಾಡಿದರು. ಸ್ವಲ್ಪ ಹೊತ್ತಿಗೆ ಬಿ.ಎಂ.ಶ್ರೀ. ಅವರು ರೈಲುನಿಲ್ದಾಣಕ್ಕೆ ಬಂದು ಟಾಮ್ ಲಿನ್ಸನ್ ಅವರನ್ನು ಸ್ವಾಗತಿಸಿದರು. ಬಳಿಯಲ್ಲಿದ್ದ ಇಬ್ಬರು ವಕೀಲರು ಬಿ.ಎಂ.ಶ್ರೀ. ಅವರಿಗೆ ಪರಿಚಿತರಾಗಿದ್ದರು. 'ಓಹೋ! ನೀವು ಮೈಸೂರಿನಿಂದ ಬಂದಿರಾ? ಬಲು ಸಂತೋಷ. ಈವತ್ತು ಕನ್ನಡ ಕಾರ್ಯಕ್ರಮ ತಿರುಮಲಾಂಬಾ ನಿವಾಸದಲ್ಲಿದೆ. ಇವರೇ ಮುಖ್ಯ ಅತಿಥಿಗಳು. ಅದ್ಭುತ ಕನ್ನಡ ಉಪನ್ಯಾಸಕರು. ..... ವಿಷಯವಾಗಿ ಮಾತನಾಡುತ್ತಾರೆ' ಎಂದು ಹೇಳಿ ಆ ವಕೀಲರಿಬ್ಬರಿಗೆ 'ಟಾಮ್ ಲಿನ್ಸನ್‌ರು ಚೆನ್ನಾಗಿ ಕನ್ನಡ ಓದಿಕೊಂಡಿದ್ದಾರೆ. ಕನ್ನಡ ಸೊಗಸಾಗಿ ಮಾತಾಡುತ್ತಾರೆ' ಎಂದರು. ಇಬ್ಬರೂ ವಕೀಲರ ಮುಖ ಇಂಗು ತಿಂದ ಮಂಗನಂತಾಗಿತ್ತು. ಇದು ಬಿ.ಎಂ.ಶ್ರೀ. ವಿದ್ಯಾರ್ಥಿಯಾಗಿದ್ದ ಹಿರಿಯ ಸಾಹಿತಿಗಳು ಹೇಳಿದ ಕಥೆ.

೬೬. ಗುರುಗೋವಿಂದಸಿಂಗ್ ಪುಸ್ತಕದ ಮಹಿಮೆ

ಸುಬೋಧ ರಾಮರಾಯರು ಚಾಮರಾಜಪೇಟೆಯಲ್ಲಿ ೪ನೇ ರಸ್ತೆಯ ೨ನೇ ಕ್ರಾಸ್ ಬಳಿಯಲ್ಲಿ ಮೈನ್ ರೋಡ್ ಮನೆಯಲ್ಲಿದ್ದರು. ಪಾಮಿಡಿ ಸುಬ್ಬರಾಯರ ವಿದ್ಯಾರ್ಥಿ ನಿಲಯ, ಮಸಾಲೆದೋಸೆಗೆ ಹೆಸರಾದ ಗಜೇಂದ್ರ ವಿಲಾಸ, ಊಟಕ್ಕೆ ಪ್ರಸಿದ್ಧವಾದ ಲಕ್ಷ್ಮೀವಿಲಾಸ ಬೋರ್ಡಿಂಗ್ ಲಾಜಿಂಗ್ ಹೋಂ, ಎಂ.ಆರ್.ಶ್ರೀ ಮನೆ ಮೊದಲಾದವು ಅವರ ಮನೆಯ ಅಕ್ಕಪಕ್ಕದಲ್ಲೇ ಇದ್ದವು. ಲಕ್ಷ್ಮೀವಿಲಾಸ ಹೋಟೆಲ್‌ನಲ್ಲಿ ಅನೇಕ ವಿದ್ಯಾರ್ಥಿಗಳು ಕೊಠಡಿಯಲ್ಲಿ ಅನ್ನ ಮಾಡಿಕೊಂಡು ಇಲ್ಲಿಂದ ಹುಳಿ, ಸಾರು ಕೊಂಡು ತೆಗೆದುಕೊಂಡು ಹೋಗುತ್ತಿದ್ದರು. ಇಂದು ಯಾವ ಹೋಟೆಲಿನಲ್ಲೂ ಹುಳಿ, ಸಾರು ವಿದ್ಯಾರ್ಥಿಗಳಿಗೆ ಮಾರುತ್ತಿಲ್ಲ.

ನಮ್ಮ ಮನೆಯೂ ಅದೇ ರಸ್ತೆಯಿಂದ ೮-೧೦ ಮನೆಗಳ ಆಚೆ ಇತ್ತು. ಎಂ.ಆರ್.ಶ್ರೀ. ಅವರ ಮಗ ಭೀಮ, ವಿ.ಸೀ. ಮಗ ಸತ್ಯ, ಪಿಟೀಲು ಸುಬ್ಬಾಶಾಸ್ತ್ರಿಗಳ ಮಗ ನಾವೆಲ್ಲರೂ ಗೋಲಿ ಸ್ನೇಹಿತರು. ಮಿಡ್ಲ್‌ಸ್ಕೂಲಿನಲ್ಲಿ ಓದುತ್ತಿದ್ದೆವು. ೧೯೫೦-೧೯೫೩ನೇ ಇಸವಿ ಕಾಲ.

ಒಂದು ದಿನ ನಾವೆಲ್ಲ ಎಂ.ಆರ್.ಶ್ರೀ ಮನೆಯ ಮುಂದೆ ಗೋಲಿ ಆಡುತ್ತಿದ್ದೆವು. ಮಧ್ಯಾಹ್ನ. ಅಂದು ರಜಾದಿನ. ಗುರುಗೋವಿಂದ ಸಿಂಗ್ ಜನ್ಮದಿನ. ರಾಮರಾಯರು ಕನ್ನಡಕ್ಕೆ ಸಿಖ್ ಸಾಹಿತ್ಯವನ್ನು ಮಕ್ಕಳಿಗೆ ತಂದುಕೊಟ್ಟವರಲ್ಲಿ ಮೊದಲಿಗರು. ಸಿಖ್‌ಧರ್ಮವೀರರು-೧(೧೯೩೨), ಸಿಖ್‌ಧರ್ಮವೀರರು-೨ (೧೯೩೨), ಗುರುಗೋವಿಂದಸಿಂಗ್ (೧೯೨೮), ಗುರುನಾನಕ್ (೧೯೨೮), ರಾಜಾ ರಣಜಿತ್ ಸಿಂಗ್ (೧೯೨೬) ಐದು ಕೃತಿಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಇದು ನಮಗೆ ಗೊತ್ತಿರಲಿಲ್ಲ.

ಅಂದು ಗೋಲಿ ಆಡುತ್ತಿದ್ದಾಗ ರಾಮರಾಯರ ಮನೆ ಮುಂದೆ ಮಿಲಿಟೆರಿ ಟ್ರಕ್ ಒಂದು ಬಂದು ನಿಂತಿತು. ಆಗ ಪೋಲೀಸು ಮಿಲಿಟರಿ ಕಂಡರೆ ಜನರಲ್ಲಿ ಭಯವಿತ್ತು. ಟ್ರಕ್ಕಿನಿಂದ ಹತ್ತಿಪ್ಪತ್ತು ಜನ ಮಿಲಿಟೆರಿ ಉಡುಪಿನಲ್ಲಿದ್ದವರು ದಡದಡನೆ ಕೆಳಗಿಳಿದರು. ರಾಮರಾಯರ ಮನೆಯ ಒಳಕ್ಕೆ ನುಗ್ಗಿದರು. ನಾವೆಲ್ಲ ಗಾಬರಿಯಿಂದ ನೋಡುತ್ತಿದ್ದೆವು. ಸ್ವಲ್ಪ ಹೊತ್ತಿಗೆ ಎಲ್ಲರೂ ಹೊರಗೆ ಬಂದು ಟ್ರಕ್ ಹತ್ತಿ ಹೊರಟುಹೋದರು. ಕೂಡಲೇ ಅಕ್ಕಪಕ್ಕದ ಮನೆಯವರು ರಾಮರಾಯರ ಮನೆಗೆ ಮಿಲಿಟೆರಿ ಟ್ರಕ್ ಏಕೆ ಬಂತು ಅಂತ ಹೋಗಿ ವಿಚಾರಿಸಿದರು. ರಾಮರಾಯರು ಏನಪರಾಧ ಮಾಡಿದ್ದಾರೆ ಅಂತ ಅವರಿಗೆ ಗಾಬರಿ. ಸ್ವಲ್ಪ ಹೊತ್ತಿಗೆ ರಾಮರಾಯರು ಹಣ್ಣಿನ ಬುಟ್ಟಿಗಳನ್ನು ಹಿಡಿದು ಮನೆಯ ಮುಂದೆ ನಿಂತು ಹಣ್ಣುಗಳನ್ನು ಅಕ್ಕಪಕ್ಕದವರಿಗೆ, ಗೋಲಿ ಆಡುತ್ತಿದ್ದ ನಮ್ಮನ್ನೆಲ್ಲ ಕರೆದು ಹಂಚಿದರು. ಏಕೆ ಅಂತ ತಿಳಿಯಲಿಲ್ಲ. ಆಮೇಲೆ ತಿಳಿಯಿತು. ನಡೆದ ಸಂಗತಿ ಇದು;

ರಾಮರಾಯರು ಬರೆದ ಸಿಖ್ ಗ್ರಂಥಗಳನ್ನು ಅದರಲ್ಲಿ ಗುರುಗೋವಿಂದಸಿಂಗ್ ಗ್ರಂಥವನ್ನು ಯಾರೋ ಕನ್ನಡಿಗರು ಕಂಟೋನ್ಮೆಂಟ್ ಮಿಲಿಟೆರಿ ಕ್ಯಾಂಪಿನಲ್ಲಿ ಇದ್ದ ಸಿಖ್ ಸೈನಿಕರಿಗೆ ಓದಿ ಇಂಗ್ಲಿಷಿನಲ್ಲಿ ಹೇಳಿದ್ದರಂತೆ. ಅದರಿಂದ ಸಂತೋಷಗೊಂಡ ಆ ಸೈನಿಕರು ನಮ್ಮ ಗುರುಗಳ ಬಗ್ಗೆ ಕನ್ನಡದಲ್ಲಿ ಇಷ್ಟು ಚೆನ್ನಾಗಿ ಪುಸ್ತಕ ಬರೆದಿದ್ದಾರಲ್ಲಾ ಎಂದು ಸಂತೋಷಪಟ್ಟು ಗುರುಗೋವಿಂದ ಸಿಂಗ್ ಜನ್ಮದಿನದ ನೆನಪಿಗೆ ರಾಮರಾಯರ ಮನೆಗೆ ಬಂದು ಹಣ್ಣುಗಳನ್ನು (ಬುಟ್ಟಿಗಟ್ಟಲೆ) ಕೊಟ್ಟು ಗೌರವಿಸಿದರು.

ಆ ದಿನ ಅವರು ಹಂಚಿದ ಹಣ್ಣನ್ನು ತಿಂದ ಸವಿನೆನಪು ನನಗೆ ಇಂದೂ ಇದೆ.

ಇದು ರಾಮರಾಯರು ನನಗೆ ಪರಿಚಯವಾದ ರೀತಿ. ಇದಕ್ಕೂ ಮುಂಚೆ ನಮ್ಮ ಫೋರ್ಟ್ ಮಿಡ್ಲ್ ಸ್ಕೂಲ್‌ನ ಶನಿವಾರದ ಲೈಬ್ರರಿ ಪಿರಿಯಡ್‌ನಲ್ಲಿ ಅವರ **ಸುಬೋಧ ಕುಸುಮಾಂಜಲಿ** ಗ್ರಂಥದ ಜೀವನಚರಿತ್ರೆಗಳಲ್ಲಿ ಚಂದ್ರಹಾಸ, ಧ್ರುವ ಗ್ರಂಥಗಳನ್ನು ಓದಿದ್ದೆ. ಇವರೇ ಬರೆದಿದ್ದು ಅಂತ ಗೊತ್ತಿರಲಿಲ್ಲ.

❑

೬೬೬. ಮಕ್ಕಳ ಸಾಹಿತಿ – ಕುಸುಮಾಂಜಲಿ ಗ್ರಂಥಮಾಲೆ

ನಾನು ಕಂಡ ಈ ಪ್ರಸಂಗವನ್ನು ಸುಬೋಧ ರಾಮರಾಯರನ್ನು ಕುರಿತು ಜೀವನಚರಿತ್ರೆಗಳನ್ನು ಬರೆದ ಪ್ರೊ.ಎಲ್.ಎಸ್.ಶೇಷಗಿರಿರಾಯರು ಸಾರ್ಥಕ ಸುಬೋಧ ಗ್ರಂಥದಲ್ಲಿ (ಪುಟ ೩೩) ಬರೆದಿರುವುದು ಹೀಗೆ; 'ರಾಯರು ಗುರುನಾನಕರನ್ನು ಕುರಿತು ಪುಸ್ತಕ ಬರೆದರು. ಅದನ್ನು ಓದಿ ಸಂತೋಷಪಟ್ಟು ಕೆಲವು ಸೈನ್ಯಾಧಿಕಾರಿಗಳು ಅವರನ್ನು ಹುಡುಕಿಕೊಂಡು ಬಂದು ಅಭಿನಂದಿಸಿ ನಾನಕರ ಜಯಂತಿಯಂದು ಭಾಷಣ ಮಾಡಲು ಕರೆದುಕೊಂಡು ಹೋದರು.'

ಕೊರಟಿ ಶ್ರೀನಿವಾಸ ರಾಯರು ದಾಸ ಸಾಹಿತ್ಯ ಪ್ರವರ್ತಕರು. ಗ್ರಂಥದಲ್ಲಿ (ಪು.೬೧ರಲ್ಲಿ) ಈ ಪ್ರಸಂಗವನ್ನು ಪ್ರಸ್ತಾಪಿಸುವುದು ಹೀಗೆ. 'ಗುರುನಾನಕ್ ಜೀವನ ಚರಿತ್ರೆಯನ್ನು ಓದಿದ ಸಿಕ್ ಸಾರ್ಜೆಂಟನು ಅವರ ಮನೆಯವರೆಗೆ ಜೀಪಿನಲ್ಲಿ ಮಿಲಿಟೆರಿ ಸಮವಸ್ತ್ರದಲ್ಲಿ ಬಂದವನು ಮನೆಯವರಿಗೆಲ್ಲ ಗಾಬರಿಗೊಳಿಸಿ ರಾಮರಾಯರಿಗೆ ಗ್ರಂಥಕ್ಕಾಗಿ ಸೆಲ್ಯೂಟ್ ಮಾಡಿ ಹೋದನಂತೆ.'

ಈ ಪ್ರಸಂಗದ ನಿರೂಪಣಾ ವ್ಯತ್ಯಾಸವೇನೇ ಇರಲಿ, ಸುಬೋಧ ರಾಮರಾಯರು ಗುರುನಾನಕ್ ಮತ್ತು ಗುರುಗೋವಿಂದ ಸಿಂಗ್ ಗ್ರಂಥ ಎರಡನ್ನೂ ಬರೆದಿದ್ದಾರೆ. ಆ ಗ್ರಂಥ ಓದಿ ಪ್ರಭಾವಿತರಾಗಿ ಸಿಖ್‌ರು ಅವರ ಮನೆಗೆ ಭೇಟಿ ಕೊಟ್ಟಿದ್ದರು ಎಂಬ ಸಂಗತಿ ನಿಜ. ಆದರೆ ಆ ಸಿಖ್‌ರು ಕನ್ನಡದಲ್ಲಿ ಬರೆದ ಪುಸ್ತಕವನ್ನು ಓದಿರಲಿಲ್ಲ. ಅಲ್ಲಿ ಅವರ ಜತೆ ಇದ್ದ ಕನ್ನಡಿಗರು ಅದನ್ನು ಓದಿ ಇಂಗ್ಲಿಷಿನಲ್ಲಿಯೋ ಹಿಂದಿಯಲ್ಲೋ ಅನುವಾದಿಸಿ ಹೇಳಿದ್ದರು ಎಂಬುದು ನಿಜ.

ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಸಾಂಪ್ರದಾಯಿಕ ಧಾರ್ಮಿಕ ವ್ಯಕ್ತಿಯೊಬ್ಬ ಅನ್ಯಧರ್ಮೀಯ ಮತದ ಗುರುವಿನ ಜೀವನ ಚರಿತೆಯನ್ನು ಆ ಧರ್ಮದವರೇ ಮೆಚ್ಚಿಕೊಳ್ಳುವಂತೆ ಬರೆಯುವುದು ಬಲು ಕಷ್ಟದ ಕೆಲಸ. ಅದಕ್ಕೆ ಅನ್ಯಧರ್ಮ ಅಭ್ಯಾಸ, ಆ ಧರ್ಮದ ಬಗ್ಗೆ ಪ್ರೀತಿ ಶ್ರದ್ಧೆ ಇರಬೇಕು. ಆ ರೀತಿಯ ಅಪರೂಪದ ಜೀವನಚರಿತ್ರಕಾರರು ಸುಬೋಧ ರಾಮರಾಯರು. ರಾಮರಾಯರು ಪೈಗಂಬರ್, ಯೇಸು ಮೇಲೂ ಜೀವನಚರಿತ್ರೆ ಬರೆದಿದ್ದಾರೆ. ಮುಸ್ಲಿಂರು ಪೈಗಂಬರ್ ದಿನಾಚರಣೆಯಂದು ಉಪನ್ಯಾಸಕ್ಕೆ ಕರೆದರೆ ಬಿ.ಎಂ.ಶ್ರೀ. ಅಷ್ಟೇ ಸೊಗಸಾಗಿ ಕನ್ನಡ ಮಾತಾಡುತ್ತಿದ್ದ ಟಾಮ್ ಲಿನ್ಸನ್ ಎಂಬ ಮೈಸೂರು ಪಾದ್ರಿ ಕ್ರಿಸ್ತನ ಜೀವನ ಚರಿತ್ರೆಯ ೫೦ ಪುಸ್ತಕಗಳನ್ನು ಕೊಂಡು ತನ್ನವರಿಗೆ ಹಂಚಿದನು.

ವೃತ್ತಾಕಾರದ ಸಹಪಂಕ್ತಿ ಭೋಜನ ಪ್ರಸಂಗ

ಸರ್ವಧರ್ಮ ಪುರಸ್ಕಾರ; ಸರ್ವದೇವ ನಮಸ್ಕಾರ ಎಂಬ ಉದಾರ ಧಾರ್ಮಿಕರಾದ ಸುಬೋಧ ರಾಮರಾಯರು ಎಲ್ಲ ಜಾತಿ ಧರ್ಮದವರಿಗೆ ತಮ್ಮ ಮನೆಯಲ್ಲಿ ನಡೆದ

ಸಮಾರಂಭದಲ್ಲಿ ಭೋಜನ ಏರ್ಪಡಿಸಿದ್ದರು. ಅವರ ಮನೆತನದ ಹಿರಿಯರೊಬ್ಬರು ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದಾಗ ಅದಕ್ಕೆ ಬೆಲೆ ಕೊಡಲಿಲ್ಲ ರಾಮರಾಯರು.

ಇದನ್ನು ಓದಿದಾಗ ನನಗೆ ರೊದ್ದ ಶ್ರೀನಿವಾಸರಾಯರು ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದವರ ಬಗ್ಗೆ ಶ್ರೀನಿವಾಸ ಹಾವನೂರರು ಒಮ್ಮೆ ಹೇಳಿದ ಸಂಗತಿ ನೆನಪಾಗುತ್ತದೆ.

ರೊದ್ದ ಶ್ರೀನಿವಾಸರಾಯರು ಧಾರವಾಡದ ಸಾರ್ವಜನಿಕ ಜೀವನದಲ್ಲಿ ಗಣ್ಯರಾದವರು. ಮಸೀದಿ, ದೇವಸ್ಥಾನ, ಚರ್ಚ್‌ಗಳಿಗೆ ನೆರವಾಗಿ ಎಲ್ಲ ಧರ್ಮೀಯರಿಗೂ ಪ್ರೀತಿಪಾತ್ರರಾಗಿದ್ದರು. ಒಮ್ಮೆ ಅವರ ಮನೆಯಲ್ಲಿ ಧಾರ್ಮಿಕ ಸಮಾರಂಭವೊಂದು ಏರ್ಪಟ್ಟಿತ್ತು. ಅದಕ್ಕೆ ಊರಿನ ಎಲ್ಲ ಧರ್ಮೀಯ ಮಿತ್ರರನ್ನೂ, ಗಣ್ಯರನ್ನೂ ಭೋಜನಕ್ಕೆ ಆಹ್ವಾನಿಸಿದ್ದರು. ಊಟದ ವೇಳೆಗೆ ಒಬ್ಬ ಆರಾಧ್ಯ ಸ್ವಾಮಿಗಳು ಪಾದಪೂಜೆಗೆ ಆಗಮಿಸಿದರು. ಅವರು ಎಲ್ಲ ಧರ್ಮದ ಜನ ಭೋಜನಕ್ಕೆ ಬಂದುದ್ದನ್ನು ಕಂಡು ಪಾದಪೂಜೆ ಸ್ವೀಕರಿಸದೆ 'ನಿಮಗೆ ಬಹಿಷ್ಕಾರ ಹಾಕುತ್ತೇವೆ' ಎಂದು ಬೆದರಿಸಿ ವಾಪಾಸ್ ಹೋಗಿಬಿಟ್ಟರು.

ರೊದ್ದ ಶ್ರೀನಿವಾಸರಾಯರಿಗೆ ಚಿಂತೆಯಾಯಿತು. ಒಂದು ಕಡೆ ಸ್ವಾಮಿಗಳ ವಿರೋಧ. ಇನ್ನೊಂದೆಡೆ ಊರಿನ ಜನರನ್ನೆಲ್ಲಾ ತಾವೇ ಭೋಜನಕ್ಕೆ ಕರೆದು ಹಿಂದಕ್ಕೆ ಕಳಿಸಲಾಗದ ಸಮಸ್ಯೆ. ಚಿಂತಿತರಾಗಿ ಅವರ ವಯಸ್ಸಾದ ತಾಯಿಯನ್ನು ಏನು ಮಾಡಬೇಕೆಂದು ಕೇಳಿದರಂತೆ. ಆಕೆ ಹಳೇ ಸಂಪ್ರದಾಯದಾಕೆ. ಆದರೂ ಮಾನವತಾವಾದಿ, ಉದಾರಳು. ಆಕೆ ಏನು ಸಮಸ್ಯೆ ಎಂದು ಕೇಳಿದಾಗ ಮಗ, 'ಏಕಪಂಕ್ತಿಯಲ್ಲಿ ಅನ್ಯಧರ್ಮೀಯರಿಗೆ ಭೋಜನ ಹಾಕುವುದು ಧರ್ಮನಿಷಿದ್ಧ ಎಂದು ಸ್ವಾಮಿಗಳು ವಿರೋಧಿಸಿದ್ದಾರೆ. ಪಾದಪೂಜೆಗೆ ಬರದೆ ಹಿಂತಿರುಗಿದ್ದಾರೆ' ಎಂದು ಹೇಳಿದಾಗ, ಆಕೆ ಹೇಳಿದ ಮಾತು ಮಾನನೀಯವಾದುದು. 'ನೋಡು ಮಗೂ, ಶಾಸ್ತ್ರ ಸಂಪ್ರದಾಯದಲ್ಲಿ ಏಕಪಂಕ್ತಿಯಲ್ಲಿ ಭೋಜನವನ್ನು ಹಾಕಬಾರದು ಅಂತ ಹೇಳುತ್ತೆ ಅಲ್ಲವೇ?' ಹೌದು ಎಂದ ಮಗ.

'ಹಾಗಾದರೆ ಒಂದು ಕೆಲಸ ಮಾಡು. ಎಲ್ಲರನ್ನೂ ವೃತ್ತಾಕಾರವಾಗಿ (ಸರ್ಕಲ್ಲಾಗಿ) ಕೂಡಿಸಿ ಭೋಜನ ಹಾಕು. ಶಾಸ್ತ್ರ ವಿರುದ್ಧ ಆಗುವುದಿಲ್ಲ. ಶಾಸ್ತ್ರದಲ್ಲಿ ವೃತ್ತಾಕಾರವಾಗಿ ಕೂಡಿಸಿ ಊಟ ಹಾಕಬಾರದು ಎಂದಿಲ್ಲವಲ್ಲಾ' ಎಂದರು. ರೊದ್ದ ಶ್ರೀನಿವಾಸರಾಯರು ಹಾಗೇ ಮಾಡಿದರು. ಇದೇನಿದು ಪದ್ಧತಿ ಎಂದು ಒಬ್ಬರು ಕೇಳಿದಾಗ, 'ನಮ್ಮ ಮನೆಯಲ್ಲಿ ಹಿರಿಯರು ಅನುಸರಿಸಿಕೊಂಡು ಬರುತ್ತಿರುವ ಪದ್ಧತಿ ಇದು. ಇದನ್ನು ನಾವು ಅನುಸರಿಸುತ್ತೇವೆ' ಎಂದುಬಿಟ್ಟರು.

ಸುಬೋಧ ರಾಮರಾಯರ ಮಿತ್ರರು ಹೇಳಿದ ಕಥೆ ಇದು.

ಸ್ಥಾಪಕರ ಉದ್ದೇಶಕ್ಕೆ ತಿಲಾಂಜಲಿ ಕೊಟ್ಟರು

ಸುಬೋಧ ರಾಮರಾಯರು ಬಡ ಮಾಧ್ವ ವಿದ್ಯಾರ್ಥಿಗಳಿಗಾಗಿ ಮಾಧ್ವ ಯುವಕ ಸಂಘವನ್ನು ಕೆ.ಆರ್.ರಸ್ತೆಯಲ್ಲಿ ನಿವೇಶನ ಪಡೆದು ಸ್ಥಾಪಿಸಿದ್ದಾರೆ. ಅದು ಇಂದಿಗೂ ನಡೆಯುತ್ತಿದೆ. ನೂರಾರು ಜನ ವಿದ್ಯಾರ್ಥಿಗಳು ಅಲ್ಲಿ ಓದಿ ಗಣ್ಯರಾಗಿದ್ದಾರೆ.

ಅಲ್ಲಿ ಒಳ್ಳೆಯ ಗ್ರಂಥ ಭಂಡಾರ ಸ್ಥಾಪಿಸಿದ್ದರು. ಕನ್ನಡದ ಅಪರೂಪದ ಶ್ರೇಷ್ಠ ಗ್ರಂಥಗಳು ಅಲ್ಲಿದ್ದವು. ನಾಡಿನ ವಿದ್ವಾಂಸರು, ಹಿರಿಯರು ರಾಮರಾಯರಿಗೆ ಕೊಟ್ಟ ಗ್ರಂಥಗಳೆಲ್ಲ ಅಲ್ಲಿದ್ದುವು. ಬಹಳ ವರ್ಷಗಳ ನಂತರ ಕಾಲೇಜು, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅವಕಾಶ ನೀಡಿದಾಗ ಹೊಸ ಕಟ್ಟಡ ನಿರ್ಮಾಣ ಆದಾಗ, ಹಳೆಯ ಕನ್ನಡ ಗ್ರಂಥಗಳು ಅನವಶ್ಯಕವೆಂದು ಹೊಸ ಇಂಗ್ಲಿಷ್ ಗ್ರಂಥಗಳಿಗೆ ಸ್ಥಳಾವಕಾಶ ಬೇಕೆಂದು ಹಳೆಯ ಅಪೂರ್ವ ಗ್ರಂಥಗಳನ್ನು ಕಾಸಿಗೊಂದು ಕೊಸರಿಗೊಂದು ಎಂಬಂತೆ ಹರಾಜು ಹಾಕಿದರು. ನಾನು ಒಂದೆರಡು ಗ್ರಂಥ ಕೊಂಡೆ ಕೆಲವು ಆಣೆಗಳಿಗೆ. (ಆಗ ನಾನು ವಿದ್ಯಾರ್ಥಿ, ಹಣವಿರಲಿಲ್ಲ) ಹೊಸನೀರು ಹಳೆನೀರನ್ನು ಕೊಚ್ಚಿಕೊಂಡು ಹೋಯಿತು. ಶ್ರೇಷ್ಠ ಕನ್ನಡ ಭಂಡಾರ ಇಲ್ಲವಾಯಿತು.

ರಾಮರಾಯರು ಮಾಧ್ವ ಯುವಕ ಸಂಘದ ವಿದ್ಯಾರ್ಥಿಗಳು ಕನ್ನಡದ ಶ್ರೇಷ್ಠ ಗ್ರಂಥಗಳನ್ನೆಲ್ಲ ಓದಿ ವಿಶ್ವಕುಟುಂಬಿಗಳಾಗಬೇಕೆಂದು **ಸರ್ವ ಸಂಗ್ರಹ ಕನ್ನಡ ಪುಸ್ತಕ ಭಂಡಾರ**ವನ್ನು ಸ್ಥಾಪಿಸಿದ್ದರು. ಇದನ್ನು ತಿಳಿಯದೆ ನಂತರ ಬಂದ ಅಧಿಕಾರಿಗಳು ಹರಾಜು ಹಾಕುವುದರ ಮೂಲಕ ಅದಕ್ಕೆ ತಿಲಾಂಜಲಿ ಇತ್ತಿದ್ದರು.

ಸುಬೋಧ ರಾಮರಾಯರು–ಮಾಧ್ವ ಯುವಕ ಸಂಘ

ಸುಬೋಧ ರಾಮರಾಯರು ಎಷ್ಟು ಕಷ್ಟಪಟ್ಟು ಮಾಧ್ವ ಯುವಕ ಸಂಘವನ್ನು ನಡೆಸಿದರು ಎಂಬುದನ್ನು ಅಲ್ಲಿ ಓದಿದ ನನ್ನ ಆತ್ಮೀಯ ಮಿತ್ರರು ಹೇಳಿದ್ದಾರೆ. ಹಾಸ್ಟೆಲ್ ಪ್ರಾರಂಭ ಮಾಡಿದಾಗ ವಿದ್ಯಾರ್ಥಿಗಳ ಊಟಕ್ಕಾಗಿ ದವಸಧಾನ್ಯ ತರಲು ಸಾಧ್ಯವಾಗದೆ ಯೋಜನೆಯೊಂದನ್ನು ರೂಪಿಸಿದರು. ತಮಗೆ ಪರಿಚಯವಿದ್ದ ಪ್ರತಿಯೊಬ್ಬರ ಮನೆಯ ಅಡುಗೆಮನೆಯಲ್ಲಿ ತಗುಲಿ ಹಾಕಲು ಒಂದೊಂದು ಚೀಲ ಕೊಟ್ಟರು. ಅದರಲ್ಲಿ ಆ ಮನೆಯ ಗೃಹಿಣಿಯರು ಅಡುಗೆ ಮಾಡುವಾಗ ತಾವು ಬಳಸುವ ಬೇಳೆ, ಅಕ್ಕಿ, ಉಪ್ಪು, ಮೆಣಸಿನಕಾಯಿ, ತರಕಾರಿಗಳಲ್ಲಿ ಸ್ವಲ್ಪ ಭಾಗವನ್ನು ಆ ಚೀಲಕ್ಕೆ ಹಾಕುವುದು. ಅದನ್ನು ಪ್ರತಿ ಸಂಜೆ ವಿದ್ಯಾರ್ಥಿಗಳು ಸಂಗ್ರಹಿಸಿಕೊಂಡು ಬಂದು ಮಾರನೇ ದಿನ ಅಡುಗೆಗೆ ಬಳಸುವುದು. ಹೀಗೆ ಇತರೆ ಬ್ರಾಹ್ಮಣ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳು ವಾರಾನ್ನ ಭಿಕ್ಷಾನ್ನಕ್ಕೆ ಹೋಗುತ್ತಿದ್ದರು. ಜನರು ತಮಗಿದ್ದ ಊಟದಲ್ಲಿಯೇ ಹಿಡಿಯನ್ನವನ್ನು ಭಿಕ್ಷಾನ್ನದ ವಿದ್ಯಾರ್ಥಿಗಳಿಗೆ ತೆಗೆದಿಟ್ಟು ಹಾಕುತ್ತಿದ್ದರು. ಅನುಕೂಲವಿದ್ದವರು ವಾರಕ್ಕೊಮ್ಮೆ ಮನೆಗೆ ಬಂದು ಊಟ ಮಾಡಿಕೊಂಡು ಹೋಗಲು ಹೇಳುತ್ತಿದ್ದರು. ನಾನು ಮಾಧ್ಯಮಿಕ ಶಾಲೆ–ಹೈಸ್ಕೂಲ್ ಓದುತ್ತಿದ್ದ ಕಾಲದಲ್ಲಿ ಎಪ್ಪತ್ತರಲ್ಲಿ ಹತ್ತಾರು ಜನ ನನ್ನ ಸಹಪಾಠಿಗಳು ಭಿಕ್ಷಾನ್ನ–ವಾರಾನ್ನದಿಂದ ಜೀವಿಸುತ್ತಾ ಇದ್ದರು. ಅವರಲ್ಲಿ ಹಲವಾರು ಗಣ್ಯ ಅಧಿಕಾರಿಗಳಾದರು.

ಸುಬೋಧ ರಾಮರಾಯರು ಇಂಥ ವಾರಾನ್ನ–ಭಿಕ್ಷಾನ್ನ ವಿದ್ಯಾರ್ಥಿಗಳ ಕಷ್ಟ ಕಂಡು ಸ್ಥಾಪಿಸಿದ ವಿದ್ಯಾರ್ಥಿ ನಿಲಯ ಮಾಧ್ವ ಯುವಕ ಸಂಘ. ಇಂದು ಭವ್ಯ ಕಟ್ಟಡದಲ್ಲಿರುವ ಮಾಧ್ಯ ಯುವಕ ಸಂಘದ ಇಂದಿನ ವಿದ್ಯಾರ್ಥಿಗಳಿಗೆ ಅಂದಿನ ಇತಿಹಾಸ ನೆನಪಿಲ್ಲ.

೬೭. ಶ್ರದ್ಧೆ ಭಕ್ತಿ ಮುಖ್ಯ; ಪತ್ರ ಫಲ ಪುಷ್ಪ ನೀರು ನೆಪ ಮಾತ್ರ

ಗೀತೆಯ ಒಂಬತ್ತನೆಯ ಅಧ್ಯಾಯವಾದ ಭಕ್ತಿಯೋಗದಲ್ಲಿ ಒಂದು ಶ್ಲೋಕದ ಅರ್ಥ ಹೀಗಿದೆ:

ಎಲೆಯನೊ ಹೂವನೊ ಹಣ್ಣನೊ ನೀರನೊ
ಆವನು ಭಕ್ತಿಯೊಳೆನಗೆಂದು
ಅರ್ಪಿಸುವನೊ ಆ ಪರಿಶುದ್ಧಾತ್ಮನ
ಭಕ್ತ್ಯರ್ಪಿತವನು ನಾನುಣ್ಣುವೆ (ಪುತಿನ ಅನುವಾದ)

ಶ್ರದ್ಧಾಭಕ್ತಿಯಿಂದ ದಲಿತ ಗೃಹಿಣಿಯೊಬ್ಬಳು ಪುಷ್ಪಗಳನ್ನು ಅರ್ಪಿಸುತ್ತಿದ್ದ ರೀತಿ ಈ ಶ್ಲೋಕದ ಬಗ್ಗೆ ಏಕಶ್ಲೋಕವ್ಯಾಖ್ಯಾನ ಮಾಡುತ್ತಿದ್ದಾಗ ನನಗೆ ನೆನಪಾಯಿತು. ಏಕಶ್ಲೋಕವ್ಯಾಖ್ಯಾನವೆಂದರೆ ಗೀತೆಯ ಅಥವಾ ಮಹಾಕಾವ್ಯದ ಸುಭಾಷಿತದಂತಹ ವಾಕ್ಯವನ್ನು ಕುರಿತು ಉಪನ್ಯಾಸ ಮಾಡುವುದಕ್ಕೆ ಏಕಶ್ಲೋಕವ್ಯಾಖ್ಯಾನವೆನ್ನುತ್ತಾರೆ. ದೇವುಡು ಅವರು ಈ ಶ್ಲೋಕದ ಮೇಲೆ ಎರಡು ಘಂಟೆಗಳ ಕಾಲ ಉಪನ್ಯಾಸ ಮಾಡಿದ್ದನ್ನು ನಾನು ಕೇಳಿದ್ದೇನೆ.

ಪತ್ರಂ ಪುಷ್ಪಂ ಫಲಂ ತೋಯಂ ಎಂಬ ಗೀತೆಯ ನುಡಿ ನೆನೆದಾಗಲೆಲ್ಲ ಪಾರಿಜಾತ ಪುಷ್ಪ ನೆನಪಾಗುತ್ತದೆ. ಪಾರಿಜಾತದಡಿಯಲ್ಲಿ ಗೋಕಾಕರ ದಿವ್ಯ ಪಾಠ ಮಾಡಿದಾಗ ಹುಡುಗರೆಲ್ಲ ಈ ಪ್ರಸಂಗ ಕೇಳಿ ಸಂತೋಷ ಪಟ್ಟಿದ್ದಾರೆ. ಈಗ ಹತ್ತಾರು ವರ್ಷಗಳ ಹಿಂದೆ ನಮ್ಮ ಮನೆಯ ಸಾಲಿನಲ್ಲಿ ಒಂದು ಪಾರಿಜಾತದ ಗಿಡವಿತ್ತು. ಅದು ಬುಟ್ಟಿಗಟ್ಟಲೆ ಹೂ ಬಿಡುತ್ತಿತ್ತು. ಆ ಮರ ಇದ್ದಿದ್ದು ರಸ್ತೆಬದಿಯ ಫುಟ್‌ಪಾತಿನಲ್ಲಿ. ಒಬ್ಬ ಗೃಹಿಣಿ ದಿನಾ ಸಂಜೆ ಆ ಮರದ ಬುಡದ ಫುಟ್‌ಪಾತಿನ ಕಸವನ್ನು ಗುಡಿಸುತ್ತಿದ್ದವಳು ಮಾರನೇ ದಿನ ಬೆಳಿಗ್ಗೆ ಮರವನ್ನು ಅಲ್ಲಾಡಿಸಿ ಹೂಗಳನ್ನು ಗುಡ್ಡೆ ಮಾಡಿ ದಿನಪತ್ರಿಕೆಯ ಹಾಳೆಯಲ್ಲಿ ರಸ್ತೆಸಾಲಿನ ಹಲವಾರು ಮನೆಗಳ ಮುಂದೆ ಆ ಹೂವಿನ ಕಾಗದದ ಉಂಡೆಗಳನ್ನು ಇಟ್ಟು ಹೋಗುತ್ತಿದ್ದಳು. ಆ ಮನೆಗಳವರು ಅವನ್ನು ದೇವರ ಪೂಜೆಗೆ ಬಳಸುತ್ತಿದ್ದರು.

ಆಕೆಯ ಇನ್ನೊಂದು ದಿನನಿತ್ಯದ ಸೇವೆಯೆಂದರೆ ನಮ್ಮ ಮನೆಯ ಬಳಿಯಿದ್ದ ದೇವಸ್ಥಾನದ ಮುಂದೆ ರಂಗೋಲಿ ಹಾಕುವುದು.

ಒಮ್ಮೆ ನಾನು, 'ಹೀಗೆ ಪಾರಿಜಾತದ ಹೂಗಳನ್ನು ಎಲ್ಲರ ಮನೆಯ ಮುಂದೆ ದಿನಾ ಬೆಳಿಗ್ಗೆ ತಂದಿಡುತ್ತೀರಿ ಏಕೆ' ಎಂದು ಕೇಳಿದೆ. ಆಕೆ ಕೊಟ್ಟ ಉತ್ತರ ಗೀತಾನುಷ್ಠಾನಕ್ಕೆ ಸಾಕ್ಷಿಯಾಗಿತ್ತು.

'ನನಗೆ ಮಂತ್ರ, ಶಾಸ್ತ್ರ ಗೊತ್ತಿಲ್ಲ. ಮಂತ್ರ, ಶಾಸ್ತ್ರ ತಿಳಿದವರು ಮಾಡುವ ದೇವರ ಪೂಜೆ ಶ್ರೇಷ್ಠವಾದುದು. ಅದನ್ನು ಮಾಡುವವರಿಗೆ ಕಿಂಚಿತ್ ನೆರವಾಗುವುದು ಪುಣ್ಯದ

ಕೆಲಸ. ಇದರಲ್ಲಿ ನನ್ನದೇನಿದೆ? ದೇವರು ಬೆಳೆಸಿದ ಪಾರಿಜಾತದ ಮರ ಹೂ ಕೊಡುತ್ತೆ. ನಿಮ್ಮಂಥ ಪುಣ್ಯಾತ್ಮರು ಪೂಜೆ ಮಾಡುತ್ತೀರಿ. ಅದಕ್ಕೆ ಇದು ನನ್ನ ಅಳಿಲುಸೇವೆ ಅಷ್ಟೆ' ಎಂದಳು. 'ನನಗೆ ಗೊತ್ತಿರುವ ದೇವರ ಸೇವೆ ಇಷ್ಟೇ. ಕಸ ಗುಡಿಸುವುದು, ದೇವಸ್ಥಾನದ ಮುಂದೆ ರಂಗೋಲಿ ಹಾಕುವುದು, ಪೂಜೆ ಮಾಡುವವರಿಗೆ ಮರದ ಹೂವನ್ನು ತಂದಿಡುವುದು.'

ಈ ರೀತಿಯ ಸೇವೆಯು ಪಾರಿಜಾತ ಹೂವನ್ನು ಕಂಡಾಗಲೆಲ್ಲ ನೆನಪಾಗುತ್ತೆ. ಭಗವಂತನಿಗೆ ಪ್ರಿಯರಾದ ನಿಜವಾದ ಭಕ್ತರು ಹೇಗಿರುತ್ತದೆ ಎಂದು ತಿಳಿಯುತ್ತೆ

❑

೬೮. ನಾನು ಗೀತಾಭ್ಯಾಸಿ ಆದೆನು

ಮಲ್ಲೇಶ್ವರದ ಶ್ರೀ ರಾಮಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಚರ್ಚಾಸ್ಪರ್ಧೆಯಲ್ಲಿ ಗೆದ್ದಿದ್ದ ನನಗೆ ವಿನೋಬಾ ಅವರ ಗೀತಾ ಪ್ರವಚನ ಮತ್ತೆರಡು ಪುಸ್ತಕಗಳನ್ನು ಗಾಂಧಿ ಸಾಹಿತ್ಯ ಸಂಘದ ಅಧ್ಯಕ್ಷರಾದ ಸಿದ್ದವನಹಳ್ಳಿ ಕೃಷ್ಣಶರ್ಮರು ಬಹುಮಾನವಾಗಿ ಕೊಟ್ಟರು. ಆಗ ತಾನೇ ಕೆಲವು ದಿನಗಳ ಹಿಂದೆ ಗೀತಾ ಪ್ರವಚನ ಶರ್ಮರು ಮಾಡಿದ ಕನ್ನಡ ಅನುವಾದ ಪ್ರಕಟವಾಗಿತ್ತು. ಗಟ್ಟಿ ರಟ್ಟಿನ ಪ್ರತಿ ಅದು. ಚಾಮರಾಜಪೇಟೆಯಿಂದ ಮಲ್ಲೇಶ್ವರಕ್ಕೆ ನಡೆದು ಹೋದಾಗ ದಾರಿಯಲ್ಲಿ ಒಂದಿಬ್ಬರು ಗೆಳೆಯರು ಸಿಕ್ಕಿ ಅವರಿಂದ ಬೀಳ್ಕೊಂಡು ಹೋಗಲು ತಡವಾಯಿತು. ಆ ವೇಳೆಗೆ ಬಹುಮಾನ ವಿನಿಯೋಗ ಮುಗಿದಿತ್ತು. ಯಾರದೋ ಅತಿಥಿಗಳ ಉಪನ್ಯಾಸ ನಡೆಯುತ್ತಿತ್ತು. ನಾನು ಬಂದದ್ದನ್ನು ತಿಳಿದು ಭಾಷಣದ ನಂತರ ವೇದಿಕೆಗೆ ಕರೆದು, ಬಹುಮಾನ ಕೊಟ್ಟರು. 'ಏನ್ ಹುಡುಗ ನೀನು. ಬಹುಮಾನ ಪಡೆದಿದ್ದೀಯ. ಸಭೆಗೆ ತಡವಾಗಿ ಬಂದಿದ್ದೀಯ. ಹೀಗೆ ಮಾಡಬೇಡ ಇನ್ನೊಂದು ಸಲ. ಕಾರ್ಯಕ್ರಮಕ್ಕೆ ಶಾಲೆಗೆ ವಿದ್ಯಾರ್ಥಿಗಳು ಸಕಾಲಕ್ಕೆ ಬರಬೇಕು ತಿಳಿಯಿತೇ' ಎಂದು ಹೇಳಿದರು. ಆ ಮಾತು, ಆ ಗೀತಾ ಪ್ರತಿ ನನ್ನ ಬಾಳಿನ ಗತಿಯನ್ನೇ ಬದಲಿಸಿತು.

ಗೀತಾಪ್ರವಚನ ಓದಿದ್ದು ಎಷ್ಟು ಖುಷಿ ಆಯಿತು ಎಂದರೆ, ಗೀತೆ ನನ್ನ ಜೀವನದಲ್ಲಿ ಪರಿವರ್ತನೆ ಮಾಡಿತು. ಕ್ರಿಕೆಟ್ ಸ್ಕೋರರ್, ಫುಟ್ಬಾಲ್ ಆಟಗಾರ ಆಗಿದ್ದ ನಾನು ಸಾಹಿತ್ಯಾಭ್ಯಾಸಿ ಆದೆ. ಕನ್ನಡದಲ್ಲಿರುವ ಪುಸ್ತಕಗಳನ್ನೆಲ್ಲ ಓದಬೇಕು ಅಂತ ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕಭಂಡಾರದಲ್ಲಿ ಕಾಲ ಕಳೆಯತೊಡಗಿದೆ. ಶಾಲೆಯ ವೇಳೆ ಬಿಟ್ಟರೆ ಪರಿಷತ್ತು ಮನೆ ಆಗಿತ್ತು. ಹೀಗಾಗಿ ಎಂ.ಆರ್.ಶ್ರೀ. ಕಾಲದಲ್ಲಿ ಫೋರ್ಟ್ ಹೈಸ್ಕೂಲ್ ವಿದ್ಯಾರ್ಥಿ ಆಗಿದ್ದಾಗ ಓದಿನ ಹುಳು ಆದೆ. ಅದಕ್ಕೆ ಹಲವು ಕಾರಣಗಳಲ್ಲಿ ಒಂದು ಶರ್ಮರು ನೀಡಿದ ಗೀತಾ ಪ್ರವಚನ ಗ್ರಂಥ. ಇಂದಿಗೂ ಅದು ನನಗೆ ಬೈಬಲ್ ವೇದ ಖುರಾನ್. ಗೀತೆಯ ಮೇಲೆ ಮುನ್ನೂರಕ್ಕೂ ಹೆಚ್ಚು ಪುಸ್ತಕ ಸಂಗ್ರಹಿಸಿದ್ದೇನೆ. ಗೀತಾ ನಿಘಂಟು ಮಾಡುತ್ತಿದ್ದೇನೆ. ಗೀತೆಯ ಬಗ್ಗೆ ಪುಸ್ತಕದ ಓದಿನ ಬಲದಿಂದ ಭಾಷಣಗಳನ್ನು ಮಾಡುತ್ತಿದ್ದೇನೆ. ಗೀತೆ ನನ್ನ ನಿರಂತರ ವ್ಯಾಸಂಗಗಳಲ್ಲಿ ಒಂದು. ಇದಕ್ಕೆ ಬೀಜಪ್ರಾಯ ಪ್ರಸಂಗ ಸಿದ್ಧವನಹಳ್ಳಿ ಹೇಳಿದ ಮಾತು ಕೊಟ್ಟ ವಿನೋಬಾ ಗೀತಾ ಪ್ರವಚನ ಗ್ರಂಥ.

❑

೬೯. ನನ್ನ ಕಾಲದ ಚರ್ಚಾಸ್ಪರ್ಧೆಗಳ ರೀತಿ

ಒಂದು ಕಾಲದಲ್ಲಿ ಮಧ್ಯಮ ವರ್ಗದವರಿಗೆ ಕಾಲೇ ವಾಹನವಾಗಿತ್ತು. ನಡಿಗೆಯೇ ಜೀವನರಥವಾಗಿತ್ತು. ಚಾಮರಾಜಪೇಟೆಯಿಂದ ಮಲ್ಲೇಶ್ವರಕ್ಕೆ ನಡಿಗೆಯೇ ನಮ್ಮ ಸಂಚಾರ ಸಾಧನ. ಆಗ ಸೈಕಲ್ ಜಟಕಾ ಸಿಟಿಬಸ್ ಕಾರು ಇದ್ದವು. ಅವು ನಮ್ಮಂಥವರಿಗೆ ಗಗನಕುಸುಮಗಳಾಗಿದ್ದವು. ಸು.೧೯೫೩ರಲ್ಲಿ ಮಲ್ಲೇಶ್ವರದ ಶ್ರೀ ರಾಮಮಂದಿರದಲ್ಲಿ ಗಾಂಧಿ ಸಾಹಿತ್ಯಸಂಘದ ವಾರ್ಷಿಕೋತ್ಸವ ಸಮಾರಂಭವಿತ್ತು. ಆ ಕಾರ್ಯಕ್ರಮದಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ನಡೆದ ಚರ್ಚಾಸ್ಪರ್ಧೆಯಲ್ಲಿ ನನಗೆ ಬಹುಮಾನ ಬಂದಿತ್ತು. ಪ್ರತಿ ಚರ್ಚಾಸ್ಪರ್ಧೆಯಲ್ಲೂ ಬಹುಮಾನಗಳಿಸುವ ಚರ್ಚಾಪಟು ಆಗಿದ್ದೆ. ಕಾಲೇಜು ಓದುವಾಗ, ಅಷ್ಟೇಕೆ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ೧೯೬೪-೬೫ರಲ್ಲೂ ಕಾಲೇಜುಗಳ ಚರ್ಚಾಸ್ಪರ್ಧೆಗಳಲ್ಲಿ ಧಾರವಾಡ, ಹುಬ್ಬಳ್ಳಿ, ಬೆಳಗಾಂಗಳಲ್ಲಿ ಬಹುಮಾನ ಗಿಟ್ಟಿಸಿರುವೆ.

ಮಲ್ಲೇಶ್ವರದ ಗಾಂಧಿಸಾಹಿತ್ಯ ಸಂಘದ ಸಿದ್ದವನಹಳ್ಳಿ ಕೃಷ್ಣಶರ್ಮರು ನಡೆಸುತ್ತಿದ್ದ ಚರ್ಚಾಸ್ಪರ್ಧೆ ವಿಶೇಷ ತರಹದ್ದಾಗಿತ್ತು. ಬೇರೆ ಶಾಲಾ ಕಾಲೇಜುಗಳಲ್ಲಿ ಶಾಲೆಯ ಅಂಗಳಗಳಲ್ಲಿ ಕ್ವಾಡ್ರಾಗಲ್‌ಗಳಲ್ಲಿ ಕನ್ನಡ ಚರ್ಚಾಸ್ಪರ್ಧೆ ನಡೆಯುತ್ತಿತ್ತು. ನೂರಾರು ಜನ ಬೇರೆ. ಶಾಲೆಯ ಜನರು, ತಾಯಿತಂದೆಯರೂ, ಅಣ್ಣ ತಮ್ಮ ತಂಗಿಯರೂ ಬರುತ್ತಿದ್ದರು. ಒಂದು ರೀತಿ ಅದು ಶಾಲಾ ಕಾರ್ಯಕ್ರಮ ಆಗುತ್ತಿರಲಿಲ್ಲ. ಸಾರ್ವಜನಿಕ ಸಭೆ ಆಗಿರುತ್ತಿತ್ತು. ಲೌಡ್ ಸ್ಪೀಕರ್ ಹಾಕುತ್ತಿದ್ದರು. ಮೈಸೂರು ಬ್ಯಾಂಕ್ ಸರ್ಕಲ್ ಬಳಿ ಇರುವ ಬೆಂಗಳೂರು ಸರ್ಕಾರಿ ಲಾ ಕಾಲೇಜಿನಲ್ಲಿ ನಡೆಯುತ್ತಿದ್ದು ಅಂತರ ಕಾಲೇಜು ಕನ್ನಡ ಚರ್ಚಾಸ್ಪರ್ಧೆಯಲ್ಲಿ ವಿದ್ಯಾರ್ಥಿಗಳ ಮಾತುಗಳನ್ನು ಕೇಳಲು ಕಾಲೇಜು ಕಾಂಪೌಂಡು ಆಚೆ ರಸ್ತೆಯ ಫುಟ್‌ಪಾತ್‌ನಲ್ಲಿ ಜನ ಸೇರುತ್ತಿದ್ದರು. ಅದು ಕನ್ನಡ ಚರ್ಚಾಕೂಟಗಳ ಸುವರ್ಣಯುಗ.

ಈಚೆಗೆ ಕನ್ನಡ ಚರ್ಚಾಕೂಟಗಳು ಶಾಲೆ-ಕಾಲೇಜಿನ ಕೊಠಡಿಗಳಲ್ಲಿ ನಡೆಯುತ್ತದೆ. ಶಾಲಾ-ಕಾಲೇಜುಗಳಲ್ಲಿ ನೂರಾರು ವಿದ್ಯಾರ್ಥಿಗಳಿದ್ದರೂ ತರಗತಿ ಪಾಠದಂತೆ ೩೦ ರಿಂದ ೫೦ ವಿದ್ಯಾರ್ಥಿಗಳಿಗೆ ಚರ್ಚಾಕೂಟ ನಡೆಯುತ್ತದೆ. ಕಾಲೇಜಿನ ವಿದ್ಯಾರ್ಥಿಗಳಿಗೇ ಕಾರ್ಯಕ್ರಮ ತಿಳಿಯುವುದಿಲ್ಲ. ಕನ್ನಡ ಚರ್ಚಾಕೂಟಗಳ ಶಿಲಾಯುಗವೆನ್ನಬಹುದು. ನಾನು ಚರ್ಚಾಕೂಟಗಳ ಸುವರ್ಣಯುಗದಲ್ಲಿ ಸ್ಪರ್ಧಿಯಾಗಿ ಶಿಲಾಯುಗದಲ್ಲಿ ತೀರ್ಪುಗಾರನಾಗಿ ನೂರಾರು ಚರ್ಚಾಕೂಟಗಳಲ್ಲಿ ಅರ್ಧ ಶತಮಾನ ಕಾಲ ಭಾಗವಹಿಸಿದ್ದೇನೆ.

ಮಾತು ಎಲ್ಲಿಗೋ ಹೋಯಿತು. ಗಾಂಧಿ ಸಾಹಿತ್ಯ ಸಂಘದ ಚರ್ಚಾಕೂಟದಲ್ಲಿ ಬಹುಮಾನ ಪಡೆದ ವಿಚಾರ ಹೇಳುತ್ತಿದ್ದೆ.

ಸಿದ್ಧವನಹಳ್ಳಿ ಕೃಷ್ಣಶರ್ಮರು ಅದ್ಭುತ ವ್ಯಕ್ತಿ. ಗಾಂಧಿವಾದಿ. ಯುವಕರನ್ನು ಸಂಘಟಿಸುವಲ್ಲಿ, ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದರಲ್ಲಿ ಅನುಪಮ ವ್ಯಕ್ತಿ. ಅವರು

ಬೇರೆ ಕಡೆಗಿಂತ ಭಿನ್ನವಾಗಿ ಚರ್ಚಾಸ್ಪರ್ಧೆ ಏರ್ಪಡಿಸುತ್ತಿದ್ದರು. ಬೇರೆ ಶಾಲಾ ಕಾಲೇಜುಗಳಲ್ಲಿ ವೇದಿಕೆಯ ಮೇಲೆ ವಿಶೇಷ ಅತಿಥಿಗಳು, ಅಧ್ಯಕ್ಷರು, ಎಡಭಾಗದಲ್ಲಿ ಡೆಸ್ಕು ಅಥವಾ ಟೇಬಲ್ಲು ಕುರ್ಚಿಗಳಲ್ಲಿ ಮೂರು ಜನ ತೀರ್ಪುಗಾರರು, ಬಲಭಾಗದಲ್ಲಿ ಪರ–ವಿರೋಧ ಮಾತಾಡುವ ವಿದ್ಯಾರ್ಥಿಗಳು, ಸಭೆಯಲ್ಲಿ ವಿದ್ಯಾರ್ಥಿಗಳು, ಬೇರೆ ಶಾಲೆಯವರು ಮತ್ತು ಆ ಶಾಲೆಯವರು ಹಾಗೂ ಪೋಷಕರು, ಅಧ್ಯಾಪಕರು ಇರುತ್ತಿದ್ದರು. ಧ್ವನಿವರ್ಧಕ ವ್ಯವಸ್ಥೆ ಇರುತ್ತಿತ್ತು.

ಆದರೆ ಕೃಷ್ಣಶರ್ಮರು ಗಾಂಧಿ ಸಾಹಿತ್ಯ ಸಂಘದ ಪುಟ್ಟ ಸಭಾಂಗಣದಲ್ಲಿ ಚರ್ಚಾಸ್ಪರ್ಧೆ ನಡೆಸುತ್ತಿದ್ದರು. ಗಾಂಧಿ ಸಾಹಿತ್ಯಕ್ಕೆ ಸಂಬಂಧಿಸಿದ ರಾಷ್ಟ್ರೀಯ ವಿಚಾರಗಳ ವಿಷಯ ಚರ್ಚೆಗಿರುತ್ತಿತ್ತು. ಬಹಳ ಜನ ಇರುತ್ತಿರಲಿಲ್ಲ. ನೂರರ ಒಳಗೆ ವಿದ್ಯಾರ್ಥಿಗಳಿರುತ್ತಿದ್ದರು. ಸ್ಪರ್ಧಿಗಳನ್ನು ೧೦ರಿಂದ ೨೦ ಜನರನ್ನು ಒಳಗಡೆ ಕೋಣೆಯಲ್ಲಿ ಕೂಡಿ ಹಾಕಿ ಒಬ್ಬೊಬ್ಬರನ್ನು ಈಚೆ ಕರೆದು ಸಂದರ್ಶನ ಕಾರ್ಯಕ್ರಮ ಮಾಡುತ್ತಾರಲ್ಲಾ, ಹಾಗೆ ಹೊರಗೆ ಕರೆದು ವೇದಿಕೆಯ ಬಳಿ ಮಾತಾಡಲು (ಪರ ಅಥವಾ ವಿರೋಧವಾಗಿ) ಅವಕಾಶ ನೀಡುತ್ತಿದ್ದರು, ಸಾಮಾನ್ಯವಾಗಿ ಮೂರು ನಿಮಿಷ ಅಥವಾ ಐದು ನಿಮಿಷಗಳ ಕಾಲ.

ಹೀಗೇಕೆ ಮಾಡುತ್ತೀರಿ? ನಾವು ವಿರೋಧಿಗಳ ಮಾತನ್ನು ಕೇಳಿ ಆ ಬಗ್ಗೆ ಚರ್ಚಿಸಲು, ವಿರೋಧಿಸಲು ಅವಕಾಶ ಕೊಡಬೇಕು ಎಂದು ಒತ್ತಾಯ ಮಾಡಿದಾಗ ಅವರು ಹೇಳಿದ ಮಾತುಗಳಿವು; 'ನಾನು ವಿದ್ಯಾರ್ಥಿಗಳ ವಾಕ್ಪಟುತ್ವವನ್ನು ಪರೀಕ್ಷಿಸಲು ಸ್ಪರ್ಧೆ ಏರ್ಪಡಿಸಿದ್ದೇನೆ. ಪ್ರತಿ ವಿದ್ಯಾರ್ಥಿಯ ವಾದ ವೈಖರಿ ಅವನ ವಿಚಾರಗಳೇನು ಎಂದು ತಿಳಿಯಬೇಕು. ಹೊರಗಡೆ ಎಲ್ಲರನ್ನೂ ಕೂಡಿಸಿದರೆ, ಉಳಿದವರ ಮಾತಿನ ಪ್ರಭಾವಕ್ಕೆ ಒಳಗಾಗಿ ಅವರ ವಾದಕ್ಕೆ ಉತ್ತರಿಸುವ ಚಪಲದಿಂದ ಅವರ ವಿಚಾರಗಳು ನೇರವಾಗಿ ಹೊರಬರುವುದಿಲ್ಲ. ವಿದ್ಯಾರ್ಥಿಯ ಸ್ವಂತ ವಿಚಾರಗಳು ಸ್ವತಂತ್ರವಾಗಿ ಅಭಿವ್ಯಕ್ತ ಆಗಬೇಕು. ಅದಕ್ಕೇ ಈ ವ್ಯವಸ್ಥೆ.'

ಇಂಥಾ ಚರ್ಚಾಸ್ಪರ್ಧೆಯಲ್ಲಿ ನನಗೆ ಬಹುಮಾನ ಬಂದಿತ್ತು.

❑

೨೦. ತಿಲಕರ ಗೀತಾರಹಸ್ಯದ ಬಗ್ಗೆ ಸುಳ್ಳು ಹೇಳಿದ್ದು

ನನಗೆ ಗೀತಾ ಪ್ರೇಮ ಉಂಟಾಗಲು ಇನ್ನೆರಡು ಕಾರಣಗಳಿವೆ. ಕೋಟೆ ಶಾಲೆಯಲ್ಲಿ ಓದುತ್ತಿದ್ದಾಗ ರಾಜಗುಪ್ತ ಎಂಬ ತೆಲುಗು ಮೇಷ್ಟ್ರು ಇದ್ದರು. ಸಂಸ್ಕೃತ ಬಲ್ಲವರಾಗಿದ್ದ ಅವರು ಸಂಸ್ಕೃತ ಅಧ್ಯಾಪಕರು ರಜೆಯಲ್ಲಿದ್ದಾಗ ಸಂಸ್ಕೃತ ತರಗತಿ ತೆಗೆದುಕೊಳ್ಳುತ್ತಿದ್ದರು. ಅವರು ಭಗವದ್ ಗೀತೆಯನ್ನು ಪಾಠ ಮಾಡುತ್ತಿದ್ದರು. ಪಠ್ಯದ ಪಾಠ ಸ್ವಲ್ಪ ಅಷ್ಟೇ. ನಮಗೆಲ್ಲಾ ಉಚಿತವಾಗಿ ಗೀತೆ ಪುಸ್ತಕ (ಸಂಸ್ಕೃತ ಲಿಪಿಯದು (೫ ಪೈಸೆ) ಗೋರಖಪುರ ಪ್ರೆಸ್ಸಿನ ಪ್ರಕಟನೆ) ಕೊಟ್ಟಿದ್ದರು. ಸರಳವಾಗಿ ಪುಟ್ಟ ಕತೆಗಳನ್ನು ಹೇಳುತ್ತಾ ಗೀತಾ ಶ್ಲೋಕ ಹೇಳಿಕೊಡುತ್ತಿದ್ದರು. ಹೀಗಾಗಿ ಗೀತೆಯಲ್ಲಿ ಆಸಕ್ತಿ ಉಂಟಾಯಿತು.

ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಭಂಡಾರಕ್ಕೆ ಬಿಡುವಿದ್ದಾಗಲೆಲ್ಲಾ ಹೋಗಿ ಮಕ್ಕಳ ಪುಸ್ತಕಗಳನ್ನು ಓದುತ್ತಿದ್ದೆ. ಒಮ್ಮೆ ಆ ಸರಸ್ವತೀ ಭಂಡಾರದಲ್ಲಿ ಬಾಲಗಂಗಾಧರ ತಿಲಕರ **ಗೀತಾ ರಹಸ್ಯ** ಕೃತಿಯ ಎರಡು ಭಾಗಗಳು ಕಣ್ಣಿಗೆ ಬಿತ್ತು. ತಿರುವಿ ಹಾಕಿದಾಗ ಏನೇನೋ ವಿಷಯಗಳ ವಿಮರ್ಶೆ ಮತ್ತು ಗೀತೆಯ ಪಠ್ಯ, ಅದರ ಅನುವಾದ ಇತ್ತು. ಎಷ್ಟು ದೊಡ್ಡ ಪುಸ್ತಕ, ಎಷ್ಟೊಂದು ವಿಚಾರಗಳು ಎಂದು ಬೆರಗಾದೆ. ಓದಬೇಕು ಎಂದುಕೊಂಡೆ. ನಮ್ಮ ಫೋರ್ಟ್ ಹೈಸ್ಕೂಲ್ ಲೈಬ್ರರಿಯಲ್ಲಿದ್ದರೆ ಮನೆಗೆ ತೆಗೆದುಕೊಂಡು ಹೋಗಿ ಓದಬೇಕೆಂದು ನೋಡಿದೆ. ನಮ್ಮ ಶಾಲಾ ಲೈಬ್ರರಿಯಲ್ಲಿ ಪ್ರತಿ ಇತ್ತು. ಶಿವರಾಮಯ್ಯ ಅಂತ ಫಿಜಿಕ್ಸ್ ಮೇಷ್ಟ್ರು ಲೈಬ್ರರಿಯನ್ನು ನೋಡಿಕೊಳ್ಳುತ್ತಿದ್ದರು. ಅವರನ್ನು ಕೇಳಿದಾಗ 'ಅದು ದೊಡ್ಡ ಪುಸ್ತಕ,ತಿಲಕರು ದೊಡ್ಡ ವಿದ್ವಾಂಸರು, ಅವರ ಪುಸ್ತಕ ನಿನಗೇನು ಅರ್ಥವಾಗತ್ತೆ? ಕೊಡೋಲ್ಲ' ಎಂದರು. ಆಗ ನಾನು ಸಂಸ್ಕೃತ ವಿದ್ಯಾರ್ಥಿ ಆದರೂ ಕನ್ನಡ ಚಟುವಟಿಕೆಗಳಲ್ಲಿ, ಚರ್ಚಾಸ್ಪರ್ಧೆ, ಎಸ್ಸೇ ರೈಟಿಂಗ್ ಪದ್ಯವಾಚನ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬಹುಮಾನ ಪಡೆದು ಕನ್ನಡ ಮೇಷ್ಟ್ರು ಡಿ.ಪದ್ಮನಾಭಶರ್ಮರಿಗೆ ಪ್ರೀತಿಯ ವಿದ್ಯಾರ್ಥಿ ಆಗಿದ್ದೆ. ಅವರು ಮೊದಲ ಬಾರಿ ಪ್ರಕಟಿಸಿದ ಅವರ ಮೊದಲ ಪುಸ್ತಕ 'ಕಂತಿ ಹಂಪನ ಸಮಸ್ಯೆಗಳು' ಗ್ರಂಥವನ್ನು ಪ್ರೀತಿಯಿಂದ ನನ್ನನ್ನು ಕರೆದು ಕೊಟ್ಟಿದ್ದರು.

ಅವರಿಗೆ ಈ ಗೀತೆಯನ್ನು ಓದಲು ಕೊಡಿಸಿ ಎಂದಾಗ 'ನಮ್ಮ ಹುಡುಗ ಓದಲು ಆಸಕ್ತಿ ಇದೆ, ಕೊಡಿ ಇವನಿಗೆ' ಎಂದರು. 'ಜೋಪಾನವಾಗಿ ತಂದುಕೊಡಬೇಕು ಮುಂದಿನ ವಾರ' ಎಂದರು. ಅಷ್ಟರಲ್ಲಿ ಬೇಸಿಗೆ ರಜಾ ಬಂತು. ಪುಸ್ತಕ ನನ್ನಲ್ಲೇ ಇತ್ತು. ರಜದಲ್ಲಿ ಓದಿದೆ. ಎಲ್ಲೋ ಕೆಲವು ಪುಟಗಳು ಅರ್ಥವಾಯಿತು ಅಷ್ಟೇ. ಇಡೀ ಪುಸ್ತಕ ಅರ್ಥವಾಗಲಿಲ್ಲ.

ಆದರೆ ಆ ಪುಸ್ತಕ ಇಟ್ಟುಕೊಳ್ಳಬೇಕು ಎಂದು ಆಸೆಯಾಯಿತು. ಶಾಲೆ ತೆರೆದ ಮೇಲೆ ಮೇಷ್ಟ್ರು ಪುಸ್ತಕ ಕೇಳಿದಾಗ 'ಕಳೆದುಹೋಯಿತು. ನಮ್ಮ ಮನೆಗೆ ಬಂದವರು ಯಾರೋ ಓದಲು ತೆಗೆದುಕೊಂಡು ಹೋದವರು ಕೊಟ್ಟಿಲ್ಲ' ಎಂದು ಹೇಳಿದೆ. ಸುಳ್ಳು

ಎಂದು ಅರ್ಥವಾಯಿತು ಮೇಷ್ಟ್ರಿಗೆ. 'ಸುಳ್ಳು ಹೇಳಬೇಡ. ನಾಳೆ ತಂದುಕೊಡದೆ ಇದ್ದರೆ ಹೆಡ್ಮಾಸ್ಟ್ರಿಗೆ ಹೇಳ್ತಿನಿ, ಶಾಲೆಯಿಂದ ನಿನ್ನನ್ನು ವಜಾ ಮಾಡಿಬಿಡ್ತಾರೆ' ಎಂದರು. ಹೆದರಿಕೊಂಡು ಮಾರನೇ ದಿನ ವಾಪಾಸ್ ಮಾಡಿದೆ.

ಆಮೇಲೆ ಸತ್ಯಶೋಧನ ಪುಸ್ತಕಭಂಡಾರದಲ್ಲಿ ಕೊಳ್ಳಲು ವಿಚಾರಿಸಿದಾಗ ಅದರ ಪ್ರತಿಗಳು ಮುಗಿದು ಹತ್ತಾರು ವರ್ಷಗಳಾದವು ಎಂದ ಅಲ್ಲಿ ಕೆಲಸಕ್ಕಿದ್ದ ಗಫೂರ್. ಅವನಿಗೆ ಸುಮಾರು ಪುಸ್ತಕಗಳ ಹೆಸರುಗಳು ಬಾಯಲ್ಲೇ ಇತ್ತು. ಈ ಪ್ರಸಂಗ ನಡೆದ ಮೇಲೆ ಹಲವಾರು ವರ್ಷಗಳ ನಂತರ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ. ವಿದ್ಯಾರ್ಥಿ ಆಗಿದ್ದಾಗ, ಅಲ್ಲಿ ಸಮಾಜ ಪುಸ್ತಕಾಲಯದಿಂದ ಎರಡನೇ ಮುದ್ರಣ ಒಂದೇ ಸಂಪುಟದಲ್ಲಿ ಮರುಮುದ್ರಣ ಆಗಿ ಮಾರಾಟಕ್ಕೆ ಬಂದಿತ್ತು. ಕೂಡಲೇ ಹೋಗಿ ಕೊಂಡೆ. ಧನ್ಯನಾದೆ. ನಾನು ಅಧ್ಯಾಪಕನಾದಾಗ 'ಪುಸ್ತಕ ಬೇಕೆಂದಾಗ ಕಾಸು ಕೊಟ್ಟರೂ ಸಿಗೋಲ್ಲ. ಪ್ರತಿಗಳು ಮರುಮುದ್ರಣವಾದಾಗ ಕೊಳ್ಳಬೇಕು. ಅಲ್ಲಿವರೆಗೆ ಕಾಯಬೇಕು. ಮರುಮುದ್ರಣವಾಗದೆ ಪುಸ್ತಕ ಸಿಗದೇ ಹೋಗಬಹುದು. ಆದ್ದರಿಂದ ನಿಮಗೆ ಬೇಕೆನಿಸಿದ ಪುಸ್ತಕ ಸಿಕ್ಕಾಗ ಸಾಲ ಮಾಡಿಯಾದರೂ ಕೊಂಡುಕೊಂಡುಬಿಡಿ' ಎಂದು ಜಿ.ಪಿ. ರಾಜರತ್ನಂ ಒಮ್ಮೆ ನನಗೆ ಹೇಳಿದ್ದರು. ಕಾಲೇಜಿನಲ್ಲಿ ಗೀತೆಯ ವಿಷಯ ಮಾತನಾಡಿದಾಗ, ಒಬ್ಬ ವಿದ್ಯಾರ್ಥಿ 'ನಮ್ಮ ಮನೆಯಲ್ಲಿ ಹಳೆಯ ಪ್ರತಿ ೨ ಭಾಗಗಳಿವೆ. ನಿಮಗೆ ಬೇಕಾದರೆ ಕೊಟ್ಟುಬಿಡು ಎಂದು ಹೇಳಿದ್ದಾರೆ' ಎಂದು ತಂದುಕೊಟ್ಟ. ೧೯೧೮ರ ಆ ಪ್ರತಿ ಕಂಡು ಪರಮಾನಂದವಾಯಿತು ನನಗೆ.

❑

೭೧. ಏಕಶ್ಲೋಕ ವ್ಯಾಖ್ಯಾನ - ಮಾವಳ್ಳಿ ರಾಮುವಿನ ಔದಾರ್ಯ

ಗೀತಾ ಪಾರಾಯಣ-ಪ್ರವಚನ-ಗೀತಾಕೃಷ್ಣನ ವೇಷಧಾರಣೆ-ಗೀತಾ ಜಯಂತಿ ದಿನ ಕಂಠಪಾಠ ಸ್ಪರ್ಧೆ-ಗೀತೆ ಗ್ರಂಥ ಉಚಿತ ಹಂಚಿಕೆ ಪ್ರಕಟಣೆ, ಗೀತಾ ಜಯಂತಿ ಆಚರಣೆ-ಗೀತಾಗಾಯನ ಇತ್ಯಾದಿ ಕಾರ್ಯಕ್ರಮಗಳು ಪ್ರತಿವರ್ಷವೂ ನಾಡಿನ ನಾನಾ ಕಡೆ ವ್ಯಕ್ತಿಗಳು, ಕುಟುಂಬದವರು, ಸಂಸ್ಥೆಗಳು, ಮಠಗಳು ಏರ್ಪಡಿಸುತ್ತವೆ.

ಗೀತೆಯನ್ನು ಕುರಿತು ಅದ್ಭುತ ಪ್ರವಚನ ಮಾಡುವವರಲ್ಲಿ ದೇವುಡು ನರಸಿಂಹ ಶಾಸ್ತ್ರಿಗಳು ಒಬ್ಬರು. ಗೀತೆಯನ್ನೇ ಜೀವನಧ್ಯೇಯ ಮಾಡಿಕೊಂಡು ಬಾಳಿದವರಲ್ಲಿ ಅವರು ಗಣ್ಯರು. ಈ ಸಂದರ್ಭದಲ್ಲಿ ನೆನಪಾಗುವುದು ಅವರು ಗೀತೆಯ ಮೇಲೆ ಮಾಡಿದ ಪ್ರವಚನಗಳ ವೈಖರಿ ಕುರಿತು ಅವರ ಮಗ ಗಂಗಾಧರ್ ಪ್ರಸ್ತಾಪಿಸಿದ ವಿಚಾರಗಳು. ಇವು ನಿಜಕ್ಕೂ ಮಹತ್ತ್ವವಾದವು.

ಶಾಸ್ತ್ರಿಗಳು ಗೀತೆಯ ಬಗ್ಗೆ ನಾನಾ ಬಗೆಯಲ್ಲಿ ಮಕ್ಕಳಿಂದ ಹಿಡಿದು ವಿದ್ವಾಂಸರ ಮಟ್ಟದವರೆಗೆ ಮಾತನಾಡುತ್ತಿದ್ದರು. ಅಲ್ಲಲ್ಲಿ ತನಿಶ್ಲೋಕವ್ಯಾಖ್ಯಾನ ಅಥವಾ ಏಕಶ್ಲೋಕವ್ಯಾಖ್ಯಾನದ ಗೀತೋಪನ್ಯಾಸ ಮಾಡುತ್ತಿದ್ದರು. ಎಂದರೆ ಗೀತೆಯ ಯಾವುದಾದರೊಂದು ರಸವತ್ತಾದ ಶ್ಲೋಕವನ್ನು ತೆಗೆದುಕೊಂಡು ಒಂದು ಗಂಟೆಯಿಂದ ಮೂರು ಗಂಟೆಗಳ ಕಾಲ ಉಪನ್ಯಾಸ ಮಾಡುತ್ತಿದ್ದರು. ತಮಿಳುನಾಡಿನಲ್ಲಿ ಆಂಧ್ರದಲ್ಲಿ ಯಾವುದಾದರೂ ಒಂದು ಶಾಸ್ತ್ರದ ಗ್ರಂಥದ ರಸವತ್ತಾದ ಶ್ಲೋಕದ ಮೇಲೆ ಗಂಟೆಗಟ್ಟಲೆ ಪ್ರವಚನ ಮಾಡುತ್ತಾರಂತೆ.

ದೇವುಡು ಗೀತಾ ಭಾಷಣಗಳಿಂದ ಪ್ರೇರಿತನಾದ ನಾನು ಈ ರೀತಿ ಪ್ರಯೋಗ ಮಾಡಬೇಕೆಂಬ ಆಸೆಯಾಗಿ ನಾನು ಗೀತೆಯ ಪತ್ರಂ ಪುಷ್ಪಂ ಫಲಂ ತೋಯಂ ಶ್ಲೋಕದ ಮೇಲೆ, ಚತುರ್ವಿಧ ಭಕ್ತರ ಶ್ಲೋಕದ ಬಗ್ಗೆ ಎರಡು ಉಪನ್ಯಾಸಗಳನ್ನು ಮಾಡಿದೆ, ಜನ ಮೆಚ್ಚಿಕೊಂಡರು. ಮೊದಲು ಉಪನ್ಯಾಸಕ್ಕೆ ಅವಕಾಶ ಮಾಡಿಕೊಟ್ಟವರು ಮಾವಳ್ಳಿ ರಾಮು. ಮಾವಳ್ಳಿಯ ಬಗ್ಗೆ ಸಮಗ್ರ ಇತಿಹಾಸದ ಗ್ರಂಥ ಬರೆದ ಸಾಹಿತ್ಯ ಪ್ರೇಮಿ. ಇನ್ನೊಂದು ಉಪನ್ಯಾಸಕ್ಕೆ ಅವರೇ ವರ್ಲ್ಡ್ ಕಲ್ಚರ್‌ನಲ್ಲಿ ಇಟ್ಟಿರುವ ತಾಯಿತಂದೆಗಳ ದತ್ತಿ ಆಶ್ರಯದಲ್ಲಿ ಅವಕಾಶ ಕೊಟ್ಟರು. ಗೀತೆಯ ಒಂದೇ ಶ್ಲೋಕದ ಬಗ್ಗೆ ಒಂದೂವರೆ ಗಂಟೆ ಭಾಷಣ ಮಾಡಿದೆ.

ಗೀತೆಯ ಬಗ್ಗೆ ಏಕಶ್ಲೋಕ ವ್ಯಾಖ್ಯಾನಗಳು ಪಾಂಡಿತ್ಯಕ್ಕೆ ಸಾಕ್ಷಿ ಆಗಿವೆ. ಗೀತಾ ಪ್ರೇಮಿಗಳಿಗೆ ರಸದೌತಣವಾಗಿರುತ್ತವೆ.

❑

೭೨. ತೊಡೆ ಜಿಗುಟುತ್ತಾ ಗಮಕ ವ್ಯಾಖ್ಯಾನ

ಸಾಮಾನ್ಯವಾಗಿ ಗಮಕ ವಾಚನದ ಜತೆಗೆ ಕಾವ್ಯ ಸಾಮಾನ್ಯರಿಗೆ ತಿಳಿಯದು ಎಂದು ವ್ಯಾಖ್ಯಾನಕಾರರನ್ನಾಗಿ ಮತ್ತೊಬ್ಬರನ್ನು ಕೂಡಿಸುತ್ತಾರೆ. ಗಮಕಿ ವಾಗ್ಮಿಗಳ ಅಪೂರ್ವ ಸಂಗಮ ಕಾರ್ಯಕ್ರಮ ಗಮಕವಾಚನ ಸಭೆ. ಜನಪ್ರಿಯ ಕಾವ್ಯಗಳ ಭಾಗಗಳನ್ನೇ ಸಾಮಾನ್ಯವಾಗಿ ಗಮಕಿಗಳು ಓದುತ್ತಾರೆ. ಕುಮಾರವ್ಯಾಸಭಾರತ, ತೊರವೆ ರಾಮಾಯಣ, ಹರಿಶ್ಚಂದ್ರ ಕಾವ್ಯ, ಜೈಮಿನಿಭಾರತ ಇತ್ಯಾದಿ. ಆದರೆ ಅಪ್ರಸಿದ್ಧ ಕಾವ್ಯಗಳ, ಪಾಂಡಿತ್ಯಪೂರ್ಣ ಹಳಗನ್ನಡ ಕಾವ್ಯಗಳ, ವಾಚನ ವ್ಯಾಖ್ಯಾನ ಕಡಿಮೆ. ಎಲ್ಲೋ ಕೆಲವು ಗಮಕಿಗಳು, ವಿದ್ವಾಂಸರು ಅಂಥ ಕಾರ್ಯಕ್ರಮ ನಡೆಸಿಕೊಡುತ್ತಾರೆ.

ಕೆಲವು ಗಮಕಿಗಳು ವ್ಯಾಖ್ಯಾನಕಾರರನ್ನು ಖಾಯಂ ಆಗಿ ಗೊತ್ತು ಮಾಡಿಕೊಂಡಿರುತ್ತಾರೆ. ಅವರಿಬ್ಬರ ಹೊಂದಾಣಿಕೆಯಲ್ಲಿ ಸಮಸ್ಯೆ ಇರುವುದಿಲ್ಲ. ಗಮಕಿಯ ಆಯ್ಕೆ ಪದ್ಯಗಳು ಯಾವುದು ವಾಚನಕ್ಕೆ ಎಂಬುದು ವ್ಯಾಖ್ಯಾನಕಾರರಿಗೆ ತಿಳಿದಿರುತ್ತೆ. ಕಾರ್ಯಕ್ರಮಕ್ಕೆ ಮುಂಚಿತವಾಗಿ ಆಹ್ವಾನ ಇರುತ್ತದೆ.

ಅನೇಕ ಕಡೆಗಳಲ್ಲಿ ಗಮಕಿ–ವ್ಯಾಖ್ಯಾನಕಾರರ ನಡುವೆ ಪೂರ್ವಾಧ್ಯಯನ ಇರುವುದಿಲ್ಲ. ಜನಪ್ರಿಯ ಕಾವ್ಯಗಳು ಇಬ್ಬರಿಗೂ ಗೊತ್ತಿರುವುದೇ ಇಲ್ಲ. ಇಬ್ಬರೂ ಪೂರ್ವತಯಾರಿಯನ್ನು ಜಂಟಿಯಾಗಿ ನಡೆಸುವುದಿಲ್ಲ. ಪರಿಣಾಮ ಕಾವ್ಯವಾಚನ, ವ್ಯಾಖ್ಯಾನ ಸಂಬಂಧ ಎತ್ತು ಏರಿಗೆ ಎಳೆದರೆ ಕೋಣ ನೀರಿಗೆಳೆಯಿತು ಎಂದಾಗಿರುತ್ತದೆ. ಒಂದು ಗಂಟೆ ಕಾರ್ಯಕ್ರಮದಲ್ಲಿ ಕೆಲವೊಮ್ಮೆ ಗಮಕಿಗಳೇ ಮುಕ್ಕಾಲು ಗಂಟೆ ತೆಗೆದುಕೊಂಡರೆ, ವ್ಯಾಖ್ಯಾನಕಾರರಿಗೆ ಕೆಲವು ನಿಮಿಷಗಳೇ ಗತಿ. ಇನ್ನು ಕೆಲವು ಕಡೆ ಇದು ತಲೆಕೆಳಗು. ವ್ಯಾಖ್ಯಾನಕ್ಕೆ ಮುಕ್ಕಾಲು ಗಂಟೆ, ಗಮಕಿಗೆ ಹತ್ತು ನಿಮಿಷ. ಒಟ್ಟಿನಲ್ಲಿ ಇಬ್ಬರಲ್ಲಿ ಜಂಟಿ ಅಧ್ಯಯನ ಕಾಲ ಹೊಂದಾಣಿಕೆ ಅಪೂರ್ವ.

ಖಾಯಂ ಗಮಕಿ ವ್ಯಾಖ್ಯಾನಕಾರ ಜೋಡಿಯಲ್ಲಿ ಈ ಸಮಸ್ಯೆ ಇರೋಲ್ಲ. ಆದರೆ ಇಬ್ಬರ ಪಾಂಡಿತ್ಯ ಭಿನ್ನ ಪ್ರಮಾಣದಲ್ಲಿರುತ್ತದೆ.

೧೯೭೦ರ ಸುಮಾರು ಎಂದು ಕಾಣುತ್ತೆ, ದಿನಾಂಕ ನೆನಪಿಲ್ಲ. ನನ್ನ ಮಿತ್ರರೊಬ್ಬರ ಜತೆಯಲ್ಲಿ ಹೆಳವನಕಟ್ಟೆಗೆ ಹೋಗಿದ್ದೆ. ಅಲ್ಲಿ ಗಿರಿಯಮ್ಮನ ಆರಾಧನೆ ನಡೆಯುತ್ತಿತ್ತು. ಹೆಳವನಕಟ್ಟೆ ವಂಶಸ್ಥರ ಬಂಧುಗಳು ನನ್ನ ಮಿತ್ರರಾಗಿದ್ದರು. ಅವರ ಜೊತೆ ಹರಿದಾಸಿ ಹೆಳವನಕಟ್ಟೆ ಗಿರಿಯಮ್ಮನ ಸ್ಥಳ ನೋಡಲು ಹೋಗಿದ್ದೆ. ಕಾರ್ಯಕ್ರಮ ಭವ್ಯವಾಗಿ ಸಾಗಿತ್ತು. ಪೂಜೆ, ಹೋಮ, ಭಜನೆ, ಸ್ವಾಮಿಗಳ ಉಪದೇಶ ಎಲ್ಲ ಆಗಿತ್ತು. ಕುಮಾರವ್ಯಾಸ ಭಾರತ ಪಠಣ, ವ್ಯಾಖ್ಯಾನ ಕಾರ್ಯಕ್ರಮ ಖಾಯಂ ಕಾರ್ಯಕ್ರಮ ಆಗಿತ್ತು. ಆ ಸ್ವಾಮಿಗಳಿಗೆ ಕಾವ್ಯವಾಚನ ಅತಿ ಪ್ರಿಯವಾಗಿತ್ತು. ಅಲ್ಲಿಯ ಸಂಪ್ರದಾಯವೂ ಆಗಿತ್ತು.

ನಾನು ನಮ್ಮ ಸ್ನೇಹಿತರ ಜತೆ ಹೋದಾಗ ಸುಮಾರು ೨ ಗಂಟೆ. ಎಲ್ಲ ಕಾರ್ಯಕ್ರಮ ಮುಗಿದು ಊಟಕ್ಕೆ ಜನ ಕಾಯುತ್ತಿದ್ದರು. ಗಮಕವಾಚನ ವ್ಯಾಖ್ಯಾನ ಬಾಕಿ

ಇತ್ತು. ವ್ಯಾಖ್ಯಾನಕಾರರನ್ನು ಹುಡುಕುತ್ತಿದ್ದರು, ಸಭಿಕರಲ್ಲಿ ಯಾರಾದರೂ ಇದ್ದಾರೆಯೇ ಎಂದು. ಗೊತ್ತಾದವರು ಬಂದಿರಲಿಲ್ಲ. ನನ್ನ ಗೆಳೆಯ ಸ್ವಾಮಿಗಳ ಆಪ್ತಬಂಧುವರ್ಗದ ವ್ಯಕ್ತಿ, ಸ್ವಾಮಿಗಳಿಗೆ ಹತ್ತಿರದವನು. ಅವರನ್ನು ಕಂಡೊಡನೆ ಇವರಾರು ಎಂದು ಕೇಳಿದರು. ಸಾಹಿತ್ಯಾಭ್ಯಾಸಿಗಳು ಎಂದೊಡನೆ, 'ಒಳ್ಳೆಯದಾಯಿತು. ಗಮಕವಾಚನಕ್ಕೆ ವ್ಯಾಖ್ಯಾನ ಮಾಡಲಿ. ವೇಳೆ ಆಗಿದೆ. ಕೆಲವು ಪದ್ಯಗಳನ್ನು ಗಮಕಿ ವಾಚಿಸುತ್ತಾರೆ. ಅಷ್ಟಕ್ಕೆ ಅರ್ಥ ಹೇಳಲಿ' ಎಂದು ನನ್ನ ಕಡೆಗೆ ತಿರುಗಿ, 'ಕುಮಾರವ್ಯಾಸ ಓದಿದ್ದೀರಿ ಅಲ್ಲವೇ?' ಎಂದರು. ಹೌದು ಎಂದೆ. ಸರಿ ಎಂದು ವ್ಯಾಖ್ಯಾನಕ್ಕೆ ಕೂಡಿಸಿದರು. ಉದ್ಯೋಗಪರ್ವದ ಭಾಗವಾಚನ. ಆದರೆ ಗಮಕಿಯ ಪರಿಚಯವಿಲ್ಲ. ಯಾವ ಪದ್ಯಗಳನ್ನು ಓದುತ್ತಾರೆ ತಿಳಿದಿಲ್ಲ. ಪತ್ಯ ನನ್ನಲ್ಲಿ ಇಲ್ಲ. ಕೇವಲ ಒಮ್ಮೆ ಭಾರತವನ್ನು ಸಮಗ್ರವಾಗಿ ಓದಿದ್ದೆ ಅಷ್ಟೆ. ಅಲ್ಲಲ್ಲೇ ಕೆಲವು ಪದ್ಯ ಅವರು ಓದಲಿದ್ದರು. ಅವು ಯಾವುದೂ ನನಗೆ ತಿಳಿದಿರಲಿಲ್ಲ. ವ್ಯಾಖ್ಯಾನವನ್ನು ಹೊಂದಿಸಲು ಅವರು ಓದುವ ಮುಂದಿನ ಪದ್ಯ ತಿಳಿದಿರುತ್ತಿರಲಿಲ್ಲ. ಒಂದೇ ಪದ್ಯ ಓದಿದರೆ ತಕ್ಷಣ ಅದರ ಹಿಂದೂ ಮುಂದೂ ಹೊಳೆಯುತ್ತಿರಲಿಲ್ಲ. ಏನು ಮಾಡುವುದು, ಅವರು ಓದುವ ಪದ್ಯಗಳಾವುವು ಎಂದು ಕೇಳಲು ಪತ್ಯ ನೋಡಲು ಸಮಯವೇ ಇಲ್ಲ. ಆಗ ನನ್ನಂತೆ ಯುವಕರಾಗಿದ್ದ ಆ ಗಮಕಿಗಳಿಗೆ 'ಒಂದೇ ಪದ್ಯ ಓದಿ ನಿಲ್ಲಿಸಬೇಡಿ. ಪದ್ಯಗಳನ್ನು ಉದ್ದಕ್ಕೂ ಹಾಡುತ್ತಾ ಹೋಗಿ. ಹಲವಾರು ಪದ್ಯಗಳಾದ ಮೇಲೆ ನಿಮ್ಮ ತೊಡೆ ಜಿವುಟುತ್ತೇನೆ, ಆಗ ನಿಲ್ಲಿಸಿ' ಎಂದು ಹೇಳಿ, ಓದಿದ ಪದ್ಯಗಳ ಸಾರಾಂಶವನ್ನೇ ಹೇಳಿ ವ್ಯಾಖ್ಯಾನ ಕಾರ್ಯಕ್ರಮ ಮುಗಿಸಿದೆ. ಕಾರ್ಯಕ್ರಮ ಬೇಗ ಮುಗಿಯಿತು ಎಂದು ಊಟಕ್ಕೆ ಕಾದಿದ್ದವರಿಗೆಲ್ಲಾ ಬಲು ಸಂತೋಷವಾಯಿತು. ನಾನು ಗಂಡಾಂತರದಿಂದ ಪಾರಾದೆ. 'ಇದ್ದಕ್ಕಿದ್ದಂತೆ ಅಪರಿಚಿತ ಗಮಕಿಯ ಜತೆಗೆ ವ್ಯಾಖ್ಯಾನ ಮಾಡಲು ಕಷ್ಟವಾಗಲಿಲ್ಲವೇ?' ಎಂದು ನನ್ನ ಗೆಳೆಯ ಕೇಳಿದ. ನಾನು ತೊಡೆ ಜಿಗುಟುತ್ತಿದ್ದ ತಂತ್ರ ಹೇಳಿದೆ. ಇಬ್ಬರೂ ಗಟ್ಟಿಯಾಗಿ ನಕ್ಕೆವು.

❑

೭೫. ಭಾಷಣಕಾರರನ್ನು ಹೀಗೆ ನಿಯಂತ್ರಿಸುತ್ತಿದ್ದರು

ಪ್ರತಿಯೊಬ್ಬ ಭಾಷಣಕಾರರಿಗೂ ವೇಳೆ ಗೊತ್ತು ಮಾಡಿದ ಕಾರ್ಯಕ್ರಮಗಳು ಕೆಲವೊಮ್ಮೆ ನಡೆಯುತ್ತವೆ. ಆದರೆ ಭಾಷಣಕಾರರು ಕರಾರುವಾಕ್ಕಾಗಿ ಕಾಲ ಪರಿಪಾಲನೆ ಮಾಡುವುದು, ಅವಧಿಗೆ ಮುಂಚೆ ಭಾಷಣ ಮುಗಿಸುವುದು ಅಪರೂಪದ ಸಂಗತಿ.

ವ್ಯವಸ್ಥಾಪಕರು ಭಾಷಣಕಾರರ ಕಾಲನಿಯಂತ್ರಣ ವ್ಯವಸ್ಥೆಯನ್ನು ಹಲವಾರು ರೀತಿ ಮಾಡಿದ್ದು ನನ್ನ ಅನುಭವಕ್ಕೆ ಬಂದಿದೆ. ಕೆಲವು ನೆನಪುಗಳು ಹೀಗಿವೆ.

ಒಬ್ಬ ಸಾಹಿತ್ಯ ಪೋಷಕರ ಮನೆಯಲ್ಲಿ ವಾರಕ್ಕೆ ಒಂದು ಗಂಟೆ ಭಾಷಣ ಮಾಡಲು ಅವಕಾಶ ನೀಡಿದ್ದರು. ಆ ಅವಧಿಯಲ್ಲಿ ಹಲವು ವರ್ಷಗಳ ಕಾಲ ರಾಮಾಯಣ ದರ್ಶನ, ಜೈಮಿನಿಭಾರತ, ಹರಿಶ್ಚಂದ್ರಕಾವ್ಯ, ಪಂಪಭಾರತ, ಆದಿಪುರಾಣಗಳನ್ನು ಧಾರಾವಾಹಿಯಾಗಿ ಉಪನ್ಯಾಸಗಳನ್ನು ನೀಡಿದೆ. ಅವರು ಶಿಸ್ತಿನ ಸಿಪಾಯಿಗಳು. ಕಟ್ಟುನಿಟ್ಟಾದ ಸಮಯ ಪರಿಪಾಲನೆಗೆ ಹೆಸರಾದ ಅವರ ಮನೆಯಲ್ಲಿ ಕಾರ್ಯಕ್ರಮ. ಅವರ ಆಪ್ತಮಿತ್ರರು ಕೆಲವರು ಮತ್ತು ಕುಟುಂಬದವರು ಒಟ್ಟು ೧೦ ರಿಂದ ೧೫ ಜನ ಅಷ್ಟೇ. ಎಲ್ಲರೂ ಬಂದು ಕುಳಿತಿದ್ದರೂ ೬ ಗಂಟೆಗೆ ಮೂರು ನಿಮಿಷ ಇದ್ದರೂ ಭಾಷಣ ಪ್ರಾರಂಭಿಸುವಂತಿಲ್ಲ. ೬ಕ್ಕೆ ಸರಿಯಾಗಿ ಭಾಷಣ ಶುರು ಮಾಡಿ ಎನ್ನುತ್ತಿದ್ದರು. ಒಂದು ಗಂಟೆ ಆದ ಕೂಡಲೇ ಒಂದೆರಡು ನಿಮಿಷಗಳಲ್ಲಿ ಹೇಳುತ್ತಿದ್ದ ವಿಷಯದ ವಾಕ್ಯಗಳನ್ನು ಹೇಳಿ ಮುಗಿಸಬೇಕು. ಆಮೇಲೆ ಎಲ್ಲರೂ ಎದ್ದು ಆಚೆ ಬರಬೇಕು. ೫ ನಿಮಿಷ ಆದ ಕೂಡಲೇ ಸಭಾಂಗಣದ ದೀಪ ಆರಿಸಿಬಿಡುತ್ತಿದ್ದರು. ಎಲ್ಲರೂ ಹಾಲಿನ ಆಚೆ ಬರಲೇಬೇಕಿತ್ತು. ಆಚೆ ವರಾಂಡದಲ್ಲಿ ಎಷ್ಟು ಬೇಕಾದರೂ ಮಾತಾಡಿಕೊಳ್ಳಿ ಎನ್ನುತ್ತಿದ್ದರು. ಧಾರಾಳವಾಗಿ ಸಂಭಾವನೆಯನ್ನು, ಸೊಗಸಾದ ರುಚಿಕರವಾದ ಹಣ್ಣು ಹಂಪಲುಗಳ ಬುಟ್ಟಿಯನ್ನು ಕೊಡುತ್ತಿದ್ದರು. ಭಾಷಣಕಾರರಿಗೆ. ಸಭೆಯಲ್ಲಿದ್ದವರಿಗೆ ಕಾಫಿ, ಬಾದಾಮಿ ಹಾಲು, ಪಾನಕ ಇತ್ಯಾದಿ ಯಾವುದಾದರೂ ಪಾನೀಯ ಕೊಡುತ್ತಿದ್ದರು.

ಯಾವ ಕಾವ್ಯದ ಬಗ್ಗೆ ಭಾಷಣ ಏರ್ಪಡಿಸಿದರೂ ಇಡೀ ಕಾವ್ಯವನ್ನು ಹತ್ತಾರು ವಾರಗಳ ಕಾಲ ಪರಿಚಯ ಮಾಡಿಸಿಕೊಡಬೇಕಾಗಿತ್ತು. ಭಾಷಣ ಕೇಳಲು ಬಂದವರಿಗೆಲ್ಲಾ ಭಾಷಣದ ಕಾವ್ಯದ ಪ್ರತಿಯನ್ನು ಕೊಂಡು ಒಂದೊಂದು ಪ್ರತಿ ನೀಡುತ್ತಿದ್ದರು. 'ಮುಂದಿನ ಭಾಷಣದ ಭಾಗವನ್ನು ಓದಿಕೊಂಡು ಬನ್ನಿ. ತಿಳಿಯದ್ದನ್ನು ಕೇಳಿ' ಎನ್ನುತ್ತಿದ್ದರು. ಆ ಕಾರ್ಯಕ್ರಮ ವ್ಯಾಸಂಗ ಗೋಷ್ಠಿ ಆಗಿರುತ್ತಿತ್ತು. ಕೆಲವರು ಬಲವಾದ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅಧ್ಯಯನ ಮಾಡದೆ ಬರುತ್ತಿದ್ದ ಭಾಷಣಕಾರರು ದೊಡ್ಡ ವಿದ್ವಾಂಸರೇ ಆಗಿದ್ದರೂ ಒಂದೆರಡು ಭಾಷಣ ಕೇಳಿದ ಮೇಲೆ ಅವರನ್ನು ಕರೆಯುತ್ತಿರಲಿಲ್ಲ.

ನಾನು ವಿದ್ಯಾರ್ಥಿಯಂತೆ ಅಧ್ಯಯನ ಮಾಡಿ ಭಾಷಣ ಮಾಡುತ್ತಿದ್ದೆ ಹಲವಾರು ವರ್ಷ ಅವಕಾಶ ನನಗೆ ಸಿಕ್ಕಿತು. ಹಾಗೆ ಅವಕಾಶ ಪಡೆದವರು ಅಲ್ಲಿ ಅ.ರಾ.ಮಿತ್ರ

(ಕುಮಾರವ್ಯಾಸ ಭಾರತ), ಭಾರತೀರಮಣಾಚಾರ್ಯ (ತುಳಸೀದಾಸ ರಾಮಾಯಣ) ನನಗೆ ನೆನಪಿಗೆ ಬಂದವರು. ಉಳಿದ ಪ್ರಸಿದ್ಧ ವಾಗ್ಮಿಗಳು ಒಂದೆರಡು ಭಾಷಣಗಳ ನಂತರ ತಿರಸ್ಕೃತರಾಗಿದ್ದರು. ಇಂಥ ಸಾಹಿತ್ಯ ಪೋಷಕರನ್ನು ನಾನು ಮತ್ತೆ ಕಂಡಿಲ್ಲ.

❑

೭೪. ಶಿಷ್ಯರಿಗೆ ಕಾಲ ದಾನ ಮಾಡಿದ ಗುರು

ಶ್ರೀರಾಮ ಮಂದಿರದ ಉದ್ಘಾಟನೆ ಸಮಾರಂಭಕ್ಕೆ ಆಹ್ವಾನಿತರಾಗಿರುವ ಮಂತ್ರಿಗಳು, ಮಠಾಧಿಪತಿಗಳು, ಪ್ರಧಾನಿಗಳು ಯಾರೇ ಆಗಲಿ ತಮ್ಮ ಶಿಷ್ಯರನ್ನು, ಕುಟುಂಬದವರನ್ನು, ಅಂಗರಕ್ಷಕರನ್ನು ಮಿತ್ರರನ್ನು ಯಾರನ್ನೂ ಜತೆಗೆ ಕರೆತರುವಂತಿಲ್ಲ. ಆಹ್ವಾನಿತರಾದವರೊಬ್ಬರಿಗೆ ಮಾತ್ರ ಪ್ರವೇಶ. ೨೨-೧-೨೦೨೨ರಂದು ಹೀಗೊಂದು ಪ್ರಕಟನೆಯೊಂದು ಟಿವಿಯಲ್ಲಿ ಬಿತ್ತರವಾಯಿತು.

ಇದನ್ನು ಕೇಳಿದಾಗ ನನ್ನೆರಡು ಸಂಗತಿಗಳು ನೆನಪಾದವು. ನಾನು ನಮ್ಮಾಕೆ ಅಮೆರಿಕೆಯಲ್ಲಿದ್ದಾಗ ಬಾಲ್ಟಿಮೋರ್ ಅಕ್ಕ ಸಮ್ಮೇಳನ ಸಿದ್ಧತೆಗೊಳಗಾಗುತ್ತಿದ್ದ ಕಾಲ ಅದು. ಆಗ ಫಿಲಿಡೆಲ್ಫಿಯಾದ ಕನ್ನಡ ಸಂಘವೊಂದರಿಂದ ಕನ್ನಡ ಸಾಹಿತ್ಯದ ಬಗ್ಗೆ ಭಾಷಣ ಮಾಡಲು ಕರೆಬಂತು. 'ವಿಮಾನವೆಚ್ಚ ನಿಮಗೊಬ್ಬರಿಗೆ ಮಾತ್ರ ಕೊಡುತ್ತೇವೆ, ನಿಮ್ಮ ಪತ್ನಿಗಾಗಲಿ, ಮಗಳಿಗಾಗಲಿ ಯಾರಿಗೂ ಕೊಡಲಾಗುವುದಿಲ್ಲ' ಎಂದರು. ಒಂಟಿಯಾಗಿ ಬರಬೇಕೆಂಬ ಆಹ್ವಾನವನ್ನು ತಿರಸ್ಕರಿಸಿದೆ.

೧೯೫೬ ಇಸವಿ ಇರಬಹುದು. ಬೆಂಗಳೂರಿನಲ್ಲಿ ಜಯದೇವ ವಿದ್ಯಾರ್ಥಿ ನಿಲಯದಲ್ಲಿ ವೀರಶೈವ ಮಹಾಸ್ವಾಮಿಗಳೊಬ್ಬರು ಬಂದಿದ್ದರು. ಒಂದು ವಾರ ಶರಣ ಸಾಹಿತ್ಯೋತ್ಸವ ಭರ್ಜರಿಯಾಗಿ ನಡೆಯುತ್ತಿತ್ತು. ಬೆಂಗಳೂರಿನ ಪ್ರಸಿದ್ಧ ಸಾಹಿತಿಗಳನ್ನು ಆಹ್ವಾನಿಸಿದ್ದರು. ಎಲ್ಲರಿಗೂ ಹತ್ತು ನಿಮಿಷ ಮಾತ್ರ ಕಾಲಾವಕಾಶ ಗೊತ್ತು ಮಾಡಿದ್ದರು.

ವೇದಿಕೆಯಲ್ಲಿ ಬಲಬದಿಯಲ್ಲಿ ಸ್ವಾಮಿಗಳು, ಎಡಬದಿಯಲ್ಲಿ ಪರಿಷತ್ತಿನ ಅಧ್ಯಕ್ಷರು (ಸ್ವಾಮಿಗಳ ಪರಮಾಪ್ತರು, ಅವರೂ ಪ್ರಸಿದ್ಧರೇ) ತಮ್ಮ ಶಿಷ್ಯರೊಡನೆ ಕುಳಿತಿದ್ದರು. ೪ ನಿಮಿಷ ಆದೊಡನೆ ಶಿಷ್ಯರೊಂದಿಗೆ ಭಾರಿ ಚಪ್ಪಾಳೆ ಹೊಡೆಯುತ್ತಿದ್ದರು. ಭಾಷಣ ನಿಲ್ಲಿಸಲು ಸೂಚಿಸಲಾಗುತ್ತಿತ್ತು. ಒಬ್ಬ ಭಾಷಣಕಾರರು ೫ ನಿಮಿಷ ಮಾತಾಡಿ ಬರಿದೇ ಸ್ವಾಮಿಗಳ ಅಭಿವಂದನಾ ನುಡಿಗಳನ್ನಾಡುತ್ತಿದ್ದರು. ವಿಷಯದ ಬಗ್ಗೆ ವಿವರವಾಗಿ ಮಾತನಾಡಲಿಲ್ಲ. ೧೦ ನಿಮಿಷದಲ್ಲಿ ನನ್ನ ಶಿಷ್ಯನಿಗೆ ೫ ನಿಮಿಷ ಕೊಟ್ಟಿದ್ದೇನೆ. ಅವನು ವಿಷಯದ ಕುರಿತು ಮಾತನಾಡುತ್ತಾನೆ ಎಂದು ತಮ್ಮ ಮಾತು ನಿಲ್ಲಿಸಿದರು. ಚಪ್ಪಾಳೆ ತಟ್ಟುತ್ತಿದ್ದ ವೃಂದ ಕಣ್ಣುಕಣ್ಣು ಬಿಟ್ಟಿತು. ಜನ ಜೋರಾಗಿ ಚಪ್ಪಾಳೆ ತಟ್ಟಿದರು.

ಅಲ್ಪಾವಧಿಯಲ್ಲೇ ಶಿಷ್ಯನಿಗೆ ಭಾಷಣಕ್ಕೆ ಅವಕಾಶ ಕೊಟ್ಟಿದ್ದನ್ನು ನಾನು ನೋಡಿದ್ದು ಅದೊಂದೇ ಸಲ.

❑

೭೫. ವಿನಯಮೂರ್ತಿ ವಿದ್ವತ್‌ಸ್ಫೂರ್ತಿ ಮಹಾನುಭಾವರು

ನಮ್ಮಲ್ಲಿ ಅಪ್ರತಿಮ ಪಾಂಡಿತ್ಯದ ವಿದ್ವಾಂಸರು ಅನೇಕರಿದ್ದಾರೆ. ಅವರು ವಿದ್ವನ್ಮಣಿಗಳ ನಡುವೆ ವಿರಾಜಮಾನರಾಗಿ ಕನ್ನಡಕ್ಕೆ ಕಲಾರಂಗಕ್ಕೆ ಸೇವೆ ಸಲ್ಲಿಸುತ್ತಿರುವ ಮಹನೀಯರು ಹಲವರು ಈಗಲೂ ಅಲ್ಲಲ್ಲಿ ಇದ್ದಾರೆ. ಮೊದಲಿನ ಕಾಲದ ಹಾಗೆ ಅಧಿಕ ಸಂಖ್ಯೆಯಲ್ಲಿಲ್ಲ.

ರಾಳ್ಳಪಲ್ಲಿ ಅನಂತಕೃಷ್ಣಶರ್ಮರು ಅಪೂರ್ವ ಸದ್ಗೃಹಸ್ಥ ವಿದ್ವನ್ಮಣಿ ವಿದ್ಯಾಗಣಿ. ಸಹೃದಯರ ಹೃನ್ಮಣಿ. ಅವರನ್ನು ಹಲವಾರು ಬಾರಿ ಗೋಖಲೆ ಸಾರ್ವಜನಿಕ ಸಭೆಯಲ್ಲಿ ಕಂಡಿದ್ದೆ. ಉಪನ್ಯಾಸಗಳನ್ನು ಕೇಳಿದ್ದೆ. ಅವರ ಗಾನಕಲೆ ಗ್ರಂಥವನ್ನು ಓದಿದ್ದೆ. ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತೆಲುಗು ವಿದ್ವಾಂಸರಾಗಿ, ತಿರುಪತಿಯ ಆಸ್ಥಾನ ವಿದ್ವಾಂಸರಾಗಿದ್ದರು. ಆದರೆ ಅವರ ಪರಿಚಯ ನನಗಿರಲಿಲ್ಲ. ಅವರ ವಿದ್ವತ್ತಿನ ಪರಿಚಯ ಭಾಷಣ–ದರ್ಶನಗಳಿಂದ ಅಷ್ಟೇ ಆಗಿತ್ತು.

ಒಮ್ಮೆ ಅವರನ್ನು ಬನಶಂಕರಿಯ ಬಳಿಯ ಮನೆಯಲ್ಲಿದ್ದಾಗ ಕಾಣುವ ಸಂದರ್ಭ ಬಂದಿತ್ತು. ನನ್ನ ಬದುಕಿನಲ್ಲೇ ಮರೆಯಲಾಗದ ಸಂಗತಿ ಅದು.

ನಾನು ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ಜೈಮಿನಿಭಾರತದ ಚಂದ್ರಹಾಸನ ಬಗ್ಗೆ ಪಾಠ ಮಾಡುತ್ತಿದ್ದೆ. ಆಗ 'ಚಂದ್ರಹಾಸನ ಕುಂತಳ ನಗರಕ್ಕೆ ನಾರದರು ಹಗಲು ಆಗಮಿಸಿದರು' ಎಂದೆ. ಒಬ್ಬ ವಿದ್ಯಾರ್ಥಿ 'ಹಗಲಲ್ಲ, ರಾತ್ರಿ' ಎಂದ. 'ನಿಮ್ಮಲ್ಲಿ ಯಾರು ನೋಡಿದ್ದೀರಿ?' ಎಂದು ಒಬ್ಬ ವಿದ್ಯಾರ್ಥಿ ತಮಾಷೆ ಮಾಡಿದ. 'ನಾನು ನೋಡಿರಬಹುದು ಪೂರ್ವಜನ್ಮಜನ್ಮಾಂತರದಲ್ಲಿ ನೆನಪಿಲ್ಲ' ಎಂದೆ ವಿನೋದವಾಗಿ. 'ಅದೇನೇ ಇರಲಿ. ಅವನು ಹಗಲು ಆಗಮಿಸಿದ ಎಂದು ನನ್ನ ಭಾವನೆ' ಎಂದೆ. ಅದಕ್ಕೆ ವಿದ್ಯಾರ್ಥಿ 'ಇಲ್ಲ ಸಾರ್. ರಾತ್ರಿ ಅವನು ಆಗಮಿಸಿದ್ದು. ನಮ್ಮ ತಂದೆ ಹೇಳಿದ್ದಾರೆ. ನಮ್ಮ ತಂದೆ ಘನ ವಿದ್ವಾಂಸರು ಸಾರ್' ಎಂದ. ಸಂಜೆಕಾಲೇಜಿನಲ್ಲಿ ಹೊಸದಾಗಿ ನಾನು ಅಧ್ಯಾಪಕನಾಗಿ ಆಗ ತಾನೇ ಪಾಠ ಪ್ರವಚನಕ್ಕೆ ತೊಡಗಿದ್ದೆ. ವಿದ್ಯಾರ್ಥಿಗಳು ಕೇವಲ ಹುಡುಗರಾಗಿರಲಿಲ್ಲ, ಹಿರಿಯರೂ, ಗೃಹಸ್ಥರೂ ಆಗಿದ್ದರು. ಓದಿನಲ್ಲಿ, ಅನುಭವದಲ್ಲಿ ಅನೇಕ ವಿಚಾರಗಳಲ್ಲಿ ನನಗಿಂತ ನಿಷ್ಣಾತ ವಿದ್ಯಾರ್ಥಿಗಳಾಗಿದ್ದರು. ಉದ್ಯೋಗದಲ್ಲಿ ಮೇಲ್ದರ್ಜೆಗೇರಲು, ಕೆಲಸಕ್ಕೆ ಸೇರಲು, ತಮ್ಮ ಮಕ್ಕಳಂತೆ ತಾವೂ ಹೆಚ್ಚು ವಿದ್ಯಾವಂತರಾಗಲು, ತಾವು ಸಾಂಸಾರಿಕ ತಾಪತ್ರಯಗಳಿಂದ ಓದು ಮುಂದುವರಿಸಲಾಗದೆ ಈಗ ಉದ್ಯೋಗಿಗಳು ಗೃಹಸ್ಥರೂ ಆದಮೇಲೆ ಅನುಕೂಲವಾದ್ದರಿಂದ ಓದು ಮುಂದುವರೆಸಲು ಸಂಜೆಕಾಲೇಜಿಗೆ ಸೇರಿ ವಿದ್ಯಾರ್ಥಿಗಳಾಗಿದ್ದರು. ಅವರಲ್ಲಿ ಕಲಾವಿದರಿದ್ದರು. ಉನ್ನತ ಹುದ್ದೆಯಲ್ಲಿದ್ದವರು ಇದ್ದರು. ಕುವೆಂಪು ವಿದ್ಯಾರ್ಥಿ ಇದ್ದರು. ನಾಟಕ ಕಲಾವಿದರಿದ್ದರು. ನಾನಾ ಕ್ಷೇತ್ರಗಳಲ್ಲಿ ನಿಪುಣರಾದವರಾಗಿದ್ದರು. ಡಿಗ್ರಿ ಪಡೆಯುವ ಆಸೆಯಿಂದ ಕಾಲೇಜಿಗೆ ವಿದ್ಯಾರ್ಥಿಗಳಾಗಿ ಸೇರಿದ್ದರು. ನಾನು ಶೈಕ್ಷಣಿಕ ಅರ್ಹತೆಯಿಂದ ಅಧ್ಯಾಪಕನಾಗಿದ್ದರೂ ಉಳಿದೆಲ್ಲ ವಿಷಯಗಳಲ್ಲಿ ಅವರೆದುರು ಬಚ್ಚಾ ಆಗಿದ್ದೆ. ಒಂದರ್ಥದಲ್ಲಿ ಅವರೇ ಗುರುಗಳು, ನಾನೇ ಅವರ ಶಿಷ್ಯ ಎನ್ನಬಹುದು.

ಹೀಗಿದ್ದಾಗ ವಿದ್ಯಾರ್ಥಿಯ ನಾರದರು ಕುಂತಳ ನಗರಕ್ಕೆ ರಾತ್ರಿ ಬಂದರು ಎಂಬ ಮಾತನ್ನು ನಿರಾಕರಿಸಲು ನನ್ನಲ್ಲಿ ಆಧಾರವಿರಲಿಲ್ಲ. ಆದರೆ ನನ್ನ ಮನಸ್ಸಿಗೆ ರಾತ್ರಿ ನಾರದರು ಬಂದರು ಎಂಬ ಮಾತು ಒಪ್ಪಿಗೆಯಾಗಲಿಲ್ಲ. ಆಗ ರಾಳ್ಳಪಲ್ಲಿ ಅವರ ನೆನಪಾಗಿ ಬನಶಂಕರಿಯಲ್ಲಿ ಅವರ ಮನೆ ಇದ್ದಿದ್ದು ನೆನಪಾಯಿತು. ಮಾರನೇ ದಿನ ಅವರಲ್ಲಿಗೆ ನಾನು ನನ್ನ ಗೆಳೆಯ ಜತೆಯಾಗಿ ಹೋದೆವು. ಉರಿಬಿಸಿಲು. ಮಧ್ಯಾಹ್ನ ಸುಮಾರು ೧೨ ಗಂಟೆ ಇರಬಹುದು. ಬಾಗಿಲನ್ನು ತಟ್ಟಿದಾಗ ತೇಜಃಪುಂಜವಾದ ನೀಳಕಾಯದ ತಲೆಯಲ್ಲಿ ಶಿಖೆ, ಹಣೆಯಲ್ಲಿ ನಾಮ ಧರಿಸಿದ ವ್ಯಕ್ತಿ ರಾಳ್ಳಪಲ್ಲಿ ಬಾಗಿಲು ತೆರೆದರು. ನಮಗೆ ಅವರ ಪರಿಚಯ ಇದ್ದರೂ ಅವರಿಗೆ ನಮ್ಮ ಪರಿಚಯ ಇರಲಿಲ್ಲ. ಆದರೂ ಸಹ ನಮಗಾಗಿಯೇ ಕಾದಿದ್ದವರ ಹಾಗೆ, 'ಬನ್ನಿಯಪ್ಪಾ, ಬನ್ನಿ, ಬನ್ನಿ ಒಳಕ್ಕೆ' ಎಂದು ಪ್ರೀತಿಯಿಂದ ಕರೆದು 'ಪಡಸಾಲೆಯಲ್ಲಿ ಕೂತ್ಕೊಳ್ಳಿ ದಯವಿಟ್ಟು' ಎಂದು ಹೇಳಿದರು.

ಕುಳಿತ ಮೇಲೆ, ನೀವು ಯಾರು, ಏಕೆ ಬಂದಿದ್ದೀರಿ ಎಂದೇನೂ ಕೇಳಲಿಲ್ಲ. 'ಉರಿಬಿಸಿಲಲ್ಲಿ ಬಂದಿದ್ದೀರಿ. ಏನು ತೊಗೊಳ್ತೀರಿ? ಕಷಾಯ, ಹಾಲು, ಎಳನೀರು, ಪಾನಕ, ನೀರುಮಜ್ಜಿಗೆ ಏನನ್ನು ಕೊಡಲಿ?' ಎಂದರು. ನಾವು 'ಏನೂ ಬೇಡಿ ಪರವಾಗಿಲ್ಲ' ಎಂದೆವು. 'ಹಾಗೆ ಹೇಳ್ಬೇಡಿ ನನಗೆ ಬೇಸರವಾಗುತ್ತದೆ. ಉರಿಬಿಸಿಲಲ್ಲಿ ಬಂದಿದ್ದೀರಿ. ಏನನ್ನಾದರೂ ತೆಗೆದುಕೊಳ್ಳಲೇಬೇಕು ಇದು ನನ್ನ ಪ್ರಾರ್ಥನೆ' ಎಂದು ಕೈ ಜೋಡಿಸಿದರು. ನಾವು ಅವರಿಗೆ ಬೇಸರ ಮಾಡಬಾರದೆಂಬು ಮಜ್ಜಿಗೆ ಕೊಡಿ ಸಾಕು ಎಂದೆವು. ಒಳಕ್ಕೆ ಹೋಗಿ ತಂಪಾದ ನೀರು ಮಜ್ಜಿಗೆ ತಂದು ಕೊಟ್ಟರು. ಕುಡಿದ ಮೇಲೆ ಅಷ್ಟು ದೊಡ್ಡ ವಿದ್ವಾಂಸರು ಕೈಕಟ್ಟಿಕೊಂಡು ತಲೆಬಾಗಿ 'ನನ್ನಿಂದ ತಮಗೆ ಏನು ಸೇವೆ ಆಗಬೇಕಿತ್ತು ದಯವಿಟ್ಟು ತಿಳಿಸಿ' ಎಂದರು. ಅವರಂಥ ಪಾಂಡಿತ್ಯದ ವ್ಯಕ್ತಿ ತೋರಿದ ವಿನಯದಿಂದ ನಾನು ಕಕ್ಕಾಬಿಕ್ಕಿಯಾದೆ. ಇಷ್ಟು ದೊಡ್ಡವರಿಗೆ ಎಂಥಾ ವಿನಯವಿದೆ.

ನಾವು ಹುಡುಗರು, ಅಪರಿಚಿತರು. ಅಂಥದರಲ್ಲಿ ನಮ್ಮ ಮುಂದೆ ನಡುಬಾಗಿ ವರ್ತಿಸುತ್ತಿದ್ದಾರೆ! ಆಗ ನಾನು 'ಚಂದ್ರಹಾಸನ ಕಥೆಯಲ್ಲಿ ನಾರದ ಕುಂತಳ ನಗರಕ್ಕೆ ಹಗಲಲ್ಲಿ ಬಂದರೇ, ರಾತ್ರಿ ಬಂದರೇ ಎಂಬುದು ನಮಗೆ ತಿಳಿಯದಾಗಿದೆ' ಎಂದೆ. ಅದಕ್ಕವರು 'ನನ್ನ ಅಭಿಪ್ರಾಯದಲ್ಲಿ ಹಗಲು ನಾರದು ಆಗಮಿಸಿದರು. ಏಕೆಂದರೆ ನಮ್ಮಲ್ಲಿ ನಿಶಾಚರರು ರಾತ್ರಿ ಸಂಚರಿಸುತ್ತಾರೆ. ದಿವ್ಯಜೀವಿಗಳು ಹಗಲು ಸಂಚರಿಸುತ್ತಾರೆ. ಬೆಳಗಿನ ಜಾವ ಎದ್ದು ಸಂಚಾರ ಪ್ರಾರಂಭಿಸುವುದು ಯೋಗಿಗಳ, ಸಾಧುಗಳ ಪದ್ಧತಿ. ನಾರದರು ಬೆಳಿಗ್ಗೆ ಹೊರಟು ಕುಂತಳ ನಗರಕ್ಕೆ ಬಂದಿದ್ದಾರೆ' ಎಂದರು. ಗುರುವಿಗೆ ಶಿಷ್ಯ ಪಾಠ ಒಪ್ಪಿಸಿದಂತೆ ಭಯಭಕ್ತಿಯಿಂದ ಅವರು ಹೇಳಿದ ರೀತಿ ನನಗೆ ಅಚ್ಚರಿ ಉಂಟಾಯಿತು.

ಗೋಖಲೆಯಲ್ಲಿ ಅವರ ಉಪನ್ಯಾಸಗಳನ್ನು ಕೇಳಿದ್ದೆ. ಅವರ ಗಾನಕಲೆ ಗ್ರಂಥ ಓದಿದ್ದೆ. ಅವರು ಅಣ್ಣಮಾಚಾರ್ಯರ ಕೀರ್ತನೆಗಳನ್ನು ಅದ್ಭುತವಾಗಿ ಸಂಪಾದನೆ ಮಾಡಿದ ಮಹಾಪಂಡಿತರು ಎಂದು ತಿಳಿದಿತ್ತು. ಅಂಥವರು ಬಚ್ಚಾ ವಿದ್ಯಾರ್ಥಿಗಳು ಬಂದು ಸಾಮಾನ್ಯ ಪ್ರಶ್ನೆ ಕೇಳಿದರೂ ಎಷ್ಟು ಸೌಜನ್ಯ, ವಿನಯದಿಂದ ವರ್ತಿಸಿದರು ಎಂಬದುನ್ನು ನೆನೆದಾಗ ನಿಜವಾದ ವಿದ್ವಾಂಸ ಮಾತ್ರ ಹಾಗಿರಲು ಶಕ್ಯ ಅನ್ನಿಸಿತು.

೭೬. ಸದ್ಗೃಹಸ್ಥರಿಂದ ವಿದ್ವತ್‌ಪೂಜೆ

ಗಮಕಿ ಶಂಕರನಾರಾಯಣ್ ಅವರು ಕವಿಗಳೂ ಗಮಕಿಗಳೂ ಆಗಿದ್ದರು. ನಮ್ಮಲ್ಲಿ ಕವಿಗಳೂ ಗಮಕಿಗಳೂ ಆದವರು ಅನೇಕರಿದ್ದಾರೆ. ಗಮಕಿ ರಾಘವೇಂದ್ರರಾಯರು, ಹು.ಮ. ರಾಮಾರಾಧ್ಯರು ಮೊದಲ್ಗೊಂಡು ಅನೇಕ ಕವಿ-ಗಮಕಿಗಳು ನಮ್ಮಲ್ಲಿ ಆಗಿಹೋಗಿದ್ದಾರೆ. ಶಾಕುಂತಳ ನಾಟಕ ಖ್ಯಾತಿಯ ಬಸವಪ್ಪಶಾಸ್ತ್ರಿಗಳು ಇತಿಹಾಸ ಪ್ರಸಿದ್ಧ ಕವಿ ಗಮಕಿಗಳಾಗಿದ್ದಾರೆ. ಗಮಕ ಭಗೀರಥರು ಗ್ರಂಥದಲ್ಲಿ ಇಂಥ ಅತಿರಥ ಮಹಾರಥ ಕವಿ ಗಮಕಿಗಳನ್ನು ಕಾಣಬಹುದು. ಆ ಸಾಲಿನಲ್ಲಿ ಬರತಕ್ಕವರು ಕವಿ-ಗಮಕಿ ಶಂಕರನಾರಾಯಣ ಅವರೂ ಒಬ್ಬರು. ಹತ್ತಾರು ವರುಷಗಳಿಂದ ಪರಿಚಯವಿದ್ದ ಅವರು ಕಾವ್ಯಗಾಯನ ಕಲಾಮಂದಿರವೆಂಬ ಸಂಸ್ಥೆಯನ್ನು ಹುಟ್ಟು ಹಾಕಿ ಗಮಕಿಗಳಿಗೆ ಪ್ರೋತ್ಸಾಹವಿತ್ತು ಗಮಕ ಕಲೆಯ ವೃದ್ಧಿಗೆ ಶ್ರಮಿಸಿದರು.

ದೈವಭಕ್ತರಾದ ಶಂಕರನಾರಾಯಣರಾಯರ ವ್ಯಕ್ತಿತ್ವದ ವಿಶೇಷವೆಂದರೆ ಅವರು ನಡೆಸುತ್ತಿದ್ದ ವಿಶಿಷ್ಟ ವಿದ್ವತ್‌ಪೂಜೆ.

ನಮ್ಮಲ್ಲಿ ಕಲಾವಿದರನ್ನು, ಸಾಹಿತಿಗಳನ್ನು, ವಿದ್ವಾಂಸರನ್ನು ಸಾರ್ವಜನಿಕ ಸೇವಾಸಂಸ್ಥೆಗಳು ಸಮಾರಂಭಗಳನ್ನು ಏರ್ಪಡಿಸಿ ಸತ್ಕರಿಸಿ ಗೌರವಿಸಿ ಸನ್ಮಾನಿಸುವುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಇಂದಿಗೂ ನಡೆದು ಬರುತ್ತಿರುವ ಪರಂಪರೆ ಆಗಿದೆ. ಆದರೆ ವೈಯಕ್ತಿಕವಾಗಿ ಶ್ರೀಮಂತ ವ್ಯಕ್ತಿಗಳು ತಾವೊಬ್ಬರೇ ತಾವು ಮೆಚ್ಚಿದ ಕಲಾವಿದರನ್ನು ವ್ಯಕ್ತಿಗಳನ್ನು ಮನೆಗೆ ಕರೆಯಿಸಿ ಗೌರವಿಸಿ ಸನ್ಮಾನಿಸುತ್ತಾರೆ. ಆದರೆ ಅದರಲ್ಲಿ ವಿಶೇಷವೇನಿಲ್ಲ

ಆದರೆ ಮಧ್ಯಮವರ್ಗದ ಕುಟುಂಬಿ, ಕಲಾವಿದ, ವೈಯಕ್ತಿಕವಾಗಿ ಕವಿ, ಗಮಕಿ, ವಿದ್ವಾಂಸ, ಕಲಾವಿದರನ್ನು ವರುಷಕ್ಕೊಮ್ಮೆ ಮನೆಗೆ ಆಹ್ವಾನಿಸಿ ಭೂರಿ ಭೋಜನ, ಭೂರಿ ದಕ್ಷಿಣೆ ನೀಡಿ ಸತ್ಕರಿಸುವುದನ್ನು ಕಂಡಿದ್ದು ಗಮಕಿ ಶಂಕರನಾರಾಯಣರವರಲ್ಲಿ ಮಾತ್ರ. ವಿದ್ವಾಂಸರನ್ನು ಆದರದಿಂದ ಆಹ್ವಾನಿಸಿ, ಪ್ರೀತಿಯಿಂದ ಮಾತನಾಡಿಸಿ, ಸೊಗಸಾದ ಭೋಜನ ಹಾಕಿ ನೂರರಗಟ್ಟಲೆ ದಕ್ಷಿಣೆ ನೀಡಿ ಅವರಿಗೆ ಸಾಷ್ಟಾಂಗ ಹಾಕಿ ಆಶೀರ್ವಾದ ಬೇಡಿ ಧನ್ಯರಾಗುವುದನ್ನು ಕಂಡಾಗ ಎಂಥವರೂ ಪುಳಕಿತರಾಗುತ್ತಾರೆ, ಧನ್ಯರಾಗುತ್ತಾರೆ.

'ನೀವೆಲ್ಲಾ ಸತ್ಪುರುಷರು, ವಿದ್ವಾಂಸರು, ಕಲಾವಿದರು. ಸಾಹಿತ್ಯ ಕಲಾ ಪ್ರಪಂಚಕ್ಕೆ ಅನರ್ಘ್ಯ ಕೊಡುಗೆ ನೀಡಿದ ಮಹನೀಯರು. ಇಂದು ಈ ಬಡವನ ಮನೆಗೆ ಆಗಮಿಸಿ ವಿದುರಾತಿಥ್ಯ ಸ್ವೀಕರಿಸಿ ನಮ್ಮನ್ನೆಲ್ಲಾ ಧನ್ಯರಾಗಿಸಿದ್ದೀರಿ' ಎಂದು ಹೇಳುತ್ತಾ ಎಲ್ಲಾ ಆಹ್ವಾನಿತ ವಿದ್ವಾಂಸರನ್ನು ಸಾಲಾಗಿ ಕೂರಿಸಿ ಸಂಭಾವನೆ ತಾಂಬೂಲ ಅರ್ಪಿಸಿ ಇಡೀ ಕುಟುಂಬದವರು ಎಲ್ಲರಿಗೂ ನಮಸ್ಕರಿಸುವ ಆ ದೃಶ್ಯ ಇಂದೂ ನನ್ನ ಕಣ್ಣ ಮುಂದೆ ಇದೆ.

ಕೇವಲ ಸಾಹಿತ್ಯದ ಸತತ ಓದುಗನಾದ ನನ್ನನ್ನೂ ಇಂಥಾ ವಿದ್ವತ್‌ಪೂಜೆ ಸಮಾರಂಭಕ್ಕೆ ಒಮ್ಮೆ ಆಹ್ವಾನಿಸಿದ್ದರು. ಆ ಸಮಾರಂಭಕ್ಕೆ ವಿದ್ವಾನ್ ರಂಗನಾಥ ಶರ್ಮರು, ಟಿ.ಕೇಶವಭಟ್ಟರು, ಇನ್ನೂ ಐದಾರು ಜನ ವಿದ್ವಾಂಸರು ಆಗಮಿಸಿದ್ದರು.

ಇಂಥ ವಿದ್ವತ್ ಪೂಜಾ ಪರಂಪರೆಯನ್ನು ಇಂದೆಲ್ಲಿ ಕಾಣೋಣ. ಆತ್ಮತೃಪ್ತಿಗೆ ವಿದ್ವಾಂಸರನ್ನು ಗೌರವಿಸಿ ಸತ್ಕರಿಸುವುದು ತನ್ನ ಜೀವನದ ಸಾರ್ಥಕ ಕಾರ್ಯಕ್ರಮವೆಂದು ಏರ್ಪಡಿಸುತ್ತಿದ್ದ ಗಮಕ ಶಂಕರನಾರಾಯಣರು ಇಂದಿಲ್ಲ. ಆದರೆ ಆ ಮಧುರಸ್ಮೃತಿ ಸತ್ಕಾರ ಸಮಾರಂಭಗಳನ್ನು ಕಂಡಾಗಲೆಲ್ಲ ನೆನಪಾಗುತ್ತವೆ.

❑

೭೭. ಪಂಡಿತರು ಸದಾ ಪಂಡಿತರೇ

ಟಿ.ವಿ.ವೆಂ. ಅವರು ಸದಾ ಜ್ಞಾನಾರಾಧಕರು. ಲೋಪದೋಷಗಳನ್ನು ಬರಹದಲ್ಲಿ ಯಾರೇ ಮಾಡಲಿ, ಅದನ್ನು ಅವರ ಗಮನಕ್ಕೆ ತರುವುದು ಅವರ ಅಭ್ಯಾಸ. ಇಂದು ೧೬-೧೧-೨೦೨೩ ಗುರುವಾರ ಮಧ್ಯಾಹ್ನ ಅವರಿಂದ ಇದ್ದಕ್ಕಿದ್ದಂತೆ ದೂರವಾಣಿ ಕರೆ ಬಂದಿತು.

'ಏನ್ ಸಮಾಚಾರ ಶಾಸ್ತ್ರಿಗಳೇ?' ಎಂದೆ. ಆಗ ಅವರು ಹೇಳಿದ ಮಾತುಗಳಿವು; 'ನಿಮ್ಮ ರಘುಕುಲ ಚರಿತಂ (ದೊಡ್ಡಬೆಲೆ ನಾರಾಯಣ ಶಾಸ್ತ್ರಿ) ಸಂಪಾದನೆ: ಪ್ರೊ. ಜಿ.ಅಶ್ವತ್ಥನಾರಾಯಣ – ಕುವೆಂಪು ಭಾಷಾಭಾರತಿ ಪ್ರಕಟಣೆ (೨೦೨೨) ನೋಡುತ್ತಿದ್ದೆ. ಅದರಲ್ಲಿ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ ಜೀವನ ಚರಿತ್ರೆಯಲ್ಲಿ ಪುಟ ೨೬ರಲ್ಲಿ ಎರಡನೇ ಪ್ಯಾರಾದಲ್ಲಿ ಅದ್ವೈತ ಸಿದ್ಧಾಂತದ ಗ್ರಂಥರಚನೆಯ ವಿಚಾರದಲ್ಲಿ ಹೊಸಕೆರೆ ಚಿದಂಬರಯ್ಯ, ದೇವುಡು ನರಸಿಂಹಶಾಸ್ತ್ರಿಗಳು ಗುರುಭಕ್ತಿಯಲ್ಲಿ ಅಸೀಮರಾಗಿದ್ದರು ಎಂದು ಬರೆದಿದ್ದೀರಿ. ಇದರಲ್ಲಿ ಹೊಸಕೆರೆ ಅವರಿಗಿಂತ ದೊಡ್ಡಬೆಲೆ ಅವರು ದೊಡ್ಡವರು. ಅವರ ಹೆಸರು ಮೊದಲು ಬಂದು ಆಮೇಲೆ ದೇವುಡು ಹೆಸರು ಬರಬೇಕು' ಎಂದರು. ತಕ್ಷಣ ಪುಸ್ತಕದಲ್ಲಿ ತಿದ್ದಿಕೊಂಡೆ.

ಅನಂತರ ಮುಂದಿನ ಪುಟದಲ್ಲಿ ಮತ್ತೊಂದು ಉದ್ಧೃತ ವಾಕ್ಯದ ದೋಷವನ್ನು ಕುರಿತು ಹೇಳಿದರು. '೨೭ನೇ ಪುಟದಲ್ಲಿ ಮೊದಲನೇ ಪ್ಯಾರಾದಲ್ಲಿ ದೊಡ್ಡಬಳ್ಳಾಪುರದ ವಾಸುದೇವಶಾಸ್ತ್ರಿಗಳು ಎನ್ನುವುದಕ್ಕೆ ಬದಲಾಗಿ ದೊಡ್ಡಬೆಲೆ ಎಂದು ತಪ್ಪಾಗಿ ಅಚ್ಚುಮಾಡಿದ್ದನ್ನು ಗಮನಿಸಿ' ಎಂದರು.

ಅನಂತರ ಇದೇ ಪುಟದಲ್ಲಿ ಇದ್ದ ಭಾಮಿನೀ ಷಟ್ಪದಿ ಪದ್ಯದಲ್ಲಿ ಮೂರನೇ ಸಾಲಿನಲ್ಲಿ 'ಬೊಗರಿ ಗಜ್ಜುಗ ಗೋಲಿಚೆಂಡುಗಳನಾಡುತಲಿ' ಎಂಬಲ್ಲಿ 'ಗೋಲಿ ಚೆಂಡುಗಳಾಡುತಲಿ' ಎಂದಿರಬೇಕು ಅಲ್ಲವೇ? ಎಂದರು. ಹೀಗೆ ದೋಷಗಳನ್ನು ತೋರಿಸಿ ಟಿ.ವೆ.ವೆಂ. ತಿದ್ದಿದರು. ಪಂಡಿತರು ಸದಾ ಪಂಡಿತರೇ ಅಲ್ಲವೇ?

❑

೭೮. ಪ್ರಸಿದ್ಧ ನಟ ಶ್ರೀನಾಥ ಸಹಪಾಠಿ ಆಗಿದ್ದರ ಫಲ

ಡಾ.ವಿಜಯಾ ಅವರು ಪತ್ರಕರ್ತೆ, ಲೇಖಕಿ, ಸಮಾಜಕಾರ್ಯಕರ್ತೆ. ಸ್ವತಂತ್ರ ನಿಲುವಿನ ದಿಟ್ಟ ಮಹಿಳೆ. ಆಕೆ ಪರಿಚಯ ಆದದ್ದು ಎರಡು ಸಂದರ್ಭದಲ್ಲಿ. ಆಕೆ ಎ.ಪಿ.ಎಸ್. ಸಂಜೆ ಕಾಲೇಜಿನಲ್ಲಿ ವಿದ್ಯಾರ್ಥಿನಿ ಆಗಿದ್ದಾಗ 'ಮಂಕುತಿಮ್ಮನ ಕಗ್ಗ'ದ ಬಗ್ಗೆ ನಾನು ಮಾಡಿದ ಭಾಷಣವನ್ನು ಮೆಚ್ಚಿಕೊಂಡು ಪರಿಚಯವಾದರು. ಅನಂತರ ನಾನು ಹಾಸನದ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ಬೆಂಗಳೂರಿನ ಜಯನಗರದಲ್ಲಿ ಸಿನಿಮಾನಟ ಶ್ರೀನಾಥ್ (ನಾರಾಯಣಸ್ವಾಮಿ) ಅವನೊಡನೆ ಸಂದರ್ಶನ ಮಾಡಿದ ಲೇಖನ ರೂಪತಾರಾ ಪತ್ರಿಕೆಯಲ್ಲಿ ಪ್ರಕಟ ಮಾಡಿದರು. ಈ ಲೇಖನ ಪ್ರಕಟವಾದ ದಿನ ಮಾರ್ಚ್ ೩೧, ಅದು ಹಾಸನದ ಟ್ರಜರಿಯಲ್ಲಿ ನನ್ನ ಮನೆಸಾಲದ ಅರ್ಜಿ ಅಂಗೀಕಾರಕ್ಕೆ ಕೊನೆ ದಿನವಾಗಿತ್ತು. ಆಗ ೩೧ರಂದು ಅರ್ಜಿ ಅಂಗೀಕಾರವಾಗದಿದ್ದರೆ ಅರ್ಜಿ ವಜಾ ಆಗುತ್ತಿತ್ತು. ರೂಪತಾರಾದಲ್ಲಿ ಶ್ರೀನಾಥ್ ಜತೆ ನಾನು ಸಂದರ್ಶನ ಮಾಡುತ್ತಿದ್ದ ಲೇಖನ ಪ್ರಕಟವಾದುದ್ದನ್ನು ಟ್ರೆಷರಿ ಸಿಬ್ಬಂದಿಯಲ್ಲಿ ಒಬ್ಬ ವ್ಯಕ್ತಿ ನೋಡಿದ. ಆತನಿಗೆ ಸಿನಿಮಾದಲ್ಲಿ ನಟನಾಗುವ ಹಂಬಲ ಅತಿಯಾಗಿತ್ತು. ನಾನು ಅರ್ಜಿ ಬಗ್ಗೆ ಕಚೇರಿಗೆ ಹೋದಾಗ, 'ಸಾರ್ ನಿಮ್ಮದೇ ಅಲ್ವೇ ರೂಪತಾರಾ ಸಂದರ್ಶನ ಲೇಖನ ಫೋಟೋ?' ಎಂದು ಕೇಳಿದ. ಹೌದು ಎಂದೆ. 'ನೀವು ಶ್ರೀನಾಥ್ ಬಾಲ್ಯಮಿತ್ರರು ಅಂತ ಓದಿದೆ' ಎಂದನು. ನಾನು ಶ್ರೀನಾಥ್ ಎಸ್.ಜೆ.ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೊಮೋ ಶಿಕ್ಷಣದಲ್ಲಿ ವಿದ್ಯಾರ್ಥಿಗಳಾಗಿದ್ದೆವು. ಅವನು ಸಿನಿಮಾಟೋಗ್ರಫಿ ವಿಭಾಗದಲ್ಲಿ, ನಾನು ಮೆಕ್ಯಾನಿಕಲ್ ಇಂಜಿನಿಯರಿಂಗ್ ಇನ್‌ಸ್ಟ್ರುಮೆಂಟ್ ಟೆಕ್ನಾಲಜಿಯಲ್ಲಿ ಓದುತ್ತಿದ್ದೆವು. ವಾರ್ಷಿಕೋತ್ಸವದಲ್ಲಿ ನಾಟಕ ಆಡುವಾಗ ಶಾಸ್ತ್ರಿಗಳ ಪಾರ್ಟು ಮಾಡಲು ಪ್ರಿನ್ಸಿಪಾಲ್ ಕಪನೀಪತಿಭಟ್ಟ ಅವರಿಂದಲೇ 'ನನ್ನ ಶಾಸ್ತ್ರಿ ಪಾತ್ರಕ್ಕೆ ನಿಮ್ಮ ಶಾಲು ಬೇಕು' ಎಂದು ಕೇಳಿ ಪಡೆದಿದ್ದ. ಮೊದಲಿಂದ ನಾಟಕದ ಹುಚ್ಚು ಅವನಿಗೆ. ನನ್ನ ಮೇಷ್ಟ್ರು ಸೀತಾಪತಿ ಸಿನಿಮಾದಲ್ಲಿ ಸಂಗೀತ ನಿರ್ದೇಶಕರಾದ ಜಿ.ಕೆ.ವೆಂಕಟೇಶ್ ಅವರ ಅಣ್ಣ. ಸುಬೇದಾರ್ ಛತ್ರಂನ ಚಿದಾನಂದಾಶ್ರಮದಲ್ಲಿದ್ದ ಸೀತಾಪತಿ ಅವರ ಮಗನಿಗೆ ನಾನು ಕನ್ನಡ ಹೇಳಿಕೊಡುತ್ತಿದ್ದೆ. ಜಿ.ಕೆ.ವೆಂಕಟೇಶ್ ಭೇಟಿಗಾಗಿ ಶ್ರೀನಾಥ್ ನನ್ನ ಜತೆ ಬರುತ್ತಿದ್ದ. ರೂಪತಾರಾ ಲೇಖನ ನೋಡಿ ಟ್ರೆಷರಿ ಸಿಬ್ಬಂದಿ ಅಧಿಕಾರಿ 'ಸಾರ್ ನಿಮಗೆ ಶ್ರೀನಾಥ್ ಬಹಳ ಪರಿಚಯವಿದೆ. ನನಗೆ ಸಿನಿಮಾದಲ್ಲಿ ಒಂದು ಛಾನ್ಸ್ ಕೊಡಿಸಿ' ಎಂದ. ಆಗ ನಾನು ಸಮಯಸ್ಫೂರ್ತಿಯಿಂದ 'ಅದೇನು ದೊಡ್ಡ ವಿಷಯ! ನಾಳಿದ್ದು ಭಾನುವಾರ ಬೆಂಗಳೂರಿಗೆ ಹೋಗುತ್ತೇನೆ. (ಆಗ ವಾರ ವಾರ ಹಾಸನದಿಂದ ಬೆಂಗಳೂರಿಗೆ ಬರುತ್ತಿದ್ದೆ.) ಜಯನಗರದಲ್ಲಿ ಕಾಂಪ್ಲೆಕ್ಸ್ ಬಳಿ ನಮ್ಮಿಬ್ಬರ ಮನೆ ಇದೆ. ಈ ಭಾನುವಾರವೇ ಮಾತಾಡಿ ನಿನಗೆ ಛಾನ್ಸಿಗೆ ಏರ್ಪಾಟು ಮಾಡುತ್ತೇನೆ' ಎಂದೆ. ಅವನಿಗೆ ಖುಷಿಯಾಗಿ ಮನೆ ಸಾಲದ ಅರ್ಜಿ ಅಂಗೀಕಾರಕ್ಕೆ ಕೊನೇ ದಿನವಾಗಿದ್ದ ಅಂದು ಕೂಡಲೇ ನನ್ನ ಅರ್ಜಿ ಅಂಗೀಕಾರ ಮಾಡಿಸಿದನು. ದಾಸರು ಹಾಡಿದ ಕೀರ್ತನೆ ನೆನಪಾಯಿತು. ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕು. ಶ್ರೀನಾಥನ ನಾಮದ ಬಲ ನನ್ನ ಸಾಲದ ಅರ್ಜಿಗೆ ನೆರವಾಯಿತು. ಹೀಗೂ ಉಂಟೇ?! ಹೌದು ಹೀಗೂ ಉಂಟು!

೭೯. ಬೇಕಾದ ತರಂಗ ಸಂಚಿಕೆ ಸಿಕ್ಕಿದ್ದು ಹೇಗೆ?

೧-೧೨-೨೦೨೨, ಗುರುವಾರ ಅಚ್ಚರಿಯ ಘಟನೆ ನಡೆಯಿತು. ನಮ್ಮ ಅಳಿಯ ಜಯರಾಂ ಅಮೆರಿಕೆಯಿಂದ ಅವರ ಮನೆ ಕಟ್ಟಿಸುವ ವಿಚಾರವಾಗಿ ಬೆಂಗಳೂರಿಗೆ ಬಂದಿದ್ದರು. ನಮ್ಮ ಮನೆಗೆ ಬಂದಾಗ 'ಅಕ್ಕ ಸಮ್ಮೇಳನ ನಡೆಸಿದ ಕಾವೇರಿ ಸಂಘ ೫೦ನೇ ಹಬ್ಬ ಮಾಡಿದ ಬಗ್ಗೆ ತರಂಗದಲ್ಲಿ ಲೇಖನ ಬಂದಿದೆ ಅದು ಬೇಕಲ್ಲಾ' ಎಂದರು. ಯಾವ ಸಂಚಿಕೆಯಲ್ಲಿ ಎಂದು ಕೇಳಿದೆ. ಸಪ್ಟೆಂಬರ್, ಅಕ್ಟೋಬರ್ ೨೨ ಇರಬಹುದು ಎಂದರು.

ನನ್ನಿಂದ ಓದಲು ಪುಸ್ತಕಗಳನ್ನು ಪಡೆಯುತ್ತಿದ್ದ ಗಿರಿಜಮ್ಮನವರ ಮನೆಗೆ ತರಂಗ ಬರುತ್ತಿತ್ತು. ಮಾರನೇ ದಿನ ಅವರಲ್ಲಿ ಸಂಚಿಕೆಯ ಬಗ್ಗೆ ಕೇಳಿದೆ. ಅವರು 'ಹಳೆಯ ಸಂಚಿಕೆಗಳನ್ನೆಲ್ಲಾ ಓದಲು ನನ್ನ ಸ್ನೇಹಿತರಿಗೆ ಕೊಟ್ಟಿದ್ದೇನೆ ಮತ್ತೆ ಅವು ಸಿಗುವಂತಿಲ್ಲ' ಎಂದರು. ಮತ್ತೆಲ್ಲಪ್ಪಾ, ಹುಡುಕುವುದು? ಇನ್ನು ೩ ದಿನಕ್ಕೆ ಅಮೆರಿಕಾಕ್ಕೆ ಹಿಂದಿರುಗುತ್ತಾರೆ. ಹತ್ತಾರು ಪತ್ರಿಕೆ ತರಿಸುವ, ಓದುವ ನಾನು ಒಂದು ಸಂಚಿಕೆ ದೊರಕಿಸಲಾರದೇ ಹೋದೆನಲ್ಲಾ ಎಂದು ಚಿಂತೆಯಾಯಿತು.

ಗುರುವಾರ ತರಕಾರಿ ತರಲು ಅಂಗಡಿಗೆ ಹೋಗಿ ಬರುವಾಗ ದಾರಿಯಲ್ಲಿ ನಮ್ಮ ಮನೆಯ ಬಳಿ ಹಳೇ ಪೇಪರ್ ಗಾಡಿ ಮುರುಗನ್ ಸಿಕ್ಕಿದ. 'ಹಳೇ ಪೇಪರ್ ತುಂಬಿದೆ. ತೆಗೆದುಕೊಂಡು ಹೋಗು' ಎಂದೆ. ಈಗಲೇ ಬರುತ್ತೀನಿ ಎಂದು ಬಂದ. ಅವನಿಗೆ ಪೇಪರನ್ನು ತೂಕಕ್ಕೆ ಹಾಕುವಾಗ ಹಳೇ ಪುಸ್ತಕ ಯಾವುದೂ ಇಲ್ಲವೇ ಎಂದು ಕೇಳುವ ಪದ್ಧತಿ. ಹಾಗೆಯೇ ಕಣ್ಣಾಡಿಸುವಾಗ ಬೇರೆಯವರು ಪೇಪರನ್ನು ತೂಕಕ್ಕೆ ಹಾಕಿದಾಗ ಮೂರು-ನಾಲ್ಕು ತರಂಗಗಳನ್ನು ತೂಕಕ್ಕೆ ಹಾಕಿದ್ದು ಕಣ್ಣಿಗೆ ಬಿತ್ತು. ಅದರ ಮೇಲೆ ಕಣ್ಣಾಡಿಸಿದೆ. ನನಗೆ ಬೇಕಾದ ಸಂಚಿಕೆ ಆಗಿರಲಿಲ್ಲ. ಅದರಲ್ಲೊಂದು ಸಂಚಿಕೆಯ ಮೇಲೆ ಕದಂಬರ ಶಾಸನದ ಲೇಖನವೊಂದು ಕಣ್ಣಿಗೆ ಬಿತ್ತು. ಅದನ್ನು ಕದಂಬರ ಬಗ್ಗೆ ಕನ್ನಡದಲ್ಲೇ ಅಪೂರ್ವ ಗ್ರಂಥ ಬರೆದಿದ್ದ ಮಿತ್ರ ಗುರುಮೂರ್ತಿಗೆ ಕೊಡೋಣವೆಂದು ಆ ಸಂಚಿಕೆಯನ್ನು ತೆಗೆದುಕೊಂಡೆ. ಮುರುಗನ್ ಹೋದ ಮೇಲೆ ಆ ಪತ್ರಿಕೆಯ ಕದಂಬ ಲೇಖನ ಓದಲು ತೊಡಗಿದೆ. ಅರೆ ಏನಾಶ್ಚರ್ಯ! ಆದರೊಂದಿಗೆ ನಾನು ಹುಡುಕುತ್ತಿದ್ದ ಕಾವೇರಿ ಸಂಘದ ಸುವರ್ಣ ಮಹೋತ್ಸವ ವರದಿಯೂ ಇತ್ತು. ಆರ್ಕಿಮಿಡೀಸ್‌ಗೆ ಆದ ಹಾಗೆ ಯುರೇಕಾ! ಯುರೇಕಾ! ಎಂದು ಕೂಗುವಂತಾಯಿತು.

ಬಳ್ಳಿ ಕಾಲಿಗೆ ತೊಡರಿದಂತೆ ಎಂದು ಗಾದೆಯಿದೆ. ವೈದ್ಯನೊಬ್ಬ ಕಾಡೆಲ್ಲಾ ಸುತ್ತಾಡಿ ತಾನು ಬಯಸಿದ್ದ ಗಿಡಮೂಲಿಕೆಯ ಬಳ್ಳಿ ಸಿಗದೆ ಹಿಂದಿರುಗುತ್ತಿದ್ದಾಗ, ಬಳ್ಳಿಯೊಂದನ್ನು ಎಡವಿದ. ನೋಡಿದರೆ ಅವನು ಹುಡುಕುತ್ತಿದ್ದ ಬಳ್ಳಿ ಅದೇ ಆಗಿತ್ತು. ಹಾಗಾಯಿತು ನನ್ನ ಸ್ಥಿತಿ. ಖುಷಿಯೇ ಖುಷಿ ಆಯಿತು! ಇದಲ್ಲವೇ ಬಯಸಿದ ಭಾಗ್ಯ ಮನೆ ಬಾಗಿಲಿಗೆ!

ಮುರುಗನ್ ಆವತ್ತೇ ಸಿಕ್ಕಿ ಅವನಿಗೆ ಹಾಕಿದ ಮೂರು ನಾಲ್ಕು ಸಂಚಿಕೆಯಲ್ಲಿ ನನಗೆ ಬೇಕಾದ ಸಂಚಿಕೆ ಇತ್ತಲ್ಲಾ! ಇದು ದೈವಲೀಲೆಯೇ, ಆಕಸ್ಮಿಕವೇ ಅದೃಷ್ಟವೇ?!

ಸಂಪುಟ ೪೦; ಸಂಚಿಕೆ ೪೪; ೩ ನವೆಂಬರ್ ೨೦೨೨;

ತರಂಗದ ಲೇಖನ: ಕಡಲಾಚೆಯ ಕನ್ನಡ ರಾಯಭಾರಿ ಚಿನ್ನದ ಹಬ್ಬ ಆಚರಿಸಿದ ಕಾವೇರಿ ಪು.೨೨-೨೬

ನಮ್ಮ ಮಿತ್ರ ಜಯರಾಂ ಮತ್ತು ಅವನ ಮಿತ್ರರು ರಥ ನಿರ್ಮಾಣ ನಿಪುಣರ ಮಾರ್ಗದರ್ಶನದಲ್ಲಿ ಹಂಪಿಯ ಕಲ್ಲಿನ ರಥವನ್ನು ತದ್ರೂಪಿಯಾಗಿ ನಿರ್ಮಿಸಿದ್ದರು. ಪ್ರದರ್ಶನ ನಂತರ ಅದನ್ನು ಯಾರ ಮನೆಯಲ್ಲೂ, ಯಾವ ಪ್ರದರ್ಶನಾಲಯದಲ್ಲೂ ಇಡಲಾಗಲಿಲ್ಲ. ಯಾರೂ ಇಟ್ಟುಕೊಳ್ಳಲು ಸಿದ್ಧರಿರಲಿಲ್ಲ. ತಾವು ನಿರ್ಮಾಣ ಮಾಡಿದ ನೆನಪಿಗೆ ಅದರ ಒಂದೊಂದು ಭಾಗವನ್ನು ತಂತಮ್ಮ ಮನೆಗೆ ತೆಗೆದುಕೊಂಡು ಹೋದರು. ಆ ಕಲ್ಲಿನ ಮಾದರಿ ರಥದ ಒಂದು ಚಕ್ರ ಈಗಲೂ ನಮ್ಮ ಮಗಳ ಮನೆಯಲ್ಲಿದೆ. ಮರದ ಕೆಲಸವನ್ನು ಹವ್ಯಾಸವಾಗಿಟ್ಟುಕೊಂಡ ನಮ್ಮ ಅಳಿಯ ಆ ರಥ ನಿರ್ಮಾಣ ತಂಡದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಅಮೇರಿಕಾದಲ್ಲಿ ತಮ್ಮ ಮನೆಯಲ್ಲಿ ಮರದಲ್ಲಿ ಅವರೊಬ್ಬರೇ ನೆಲಮಾಳಿಗೆ ಮನೆಯನ್ನು, ಮನೆಯ ಮಹಡಿಯ ಮೇಲೆ ಬಿಸಿಲಟ್ಟಣಿಗೆಯನ್ನು ನಿರ್ಮಿಸಿದ್ದಾರೆ. ಮರಗೆಲಸದಲ್ಲಿ ಅವರ ಆಸಕ್ತಿ ಅವರನ್ನು ವೃತ್ತಿಪರರಂತೆ ಮಾಡಿದೆ.

❑

೮೦. ಬುದ್ಧ ಮಹಾಚರಿತೆ ಮಹಾಕಾವ್ಯಕ್ಕೆ ಸ್ಫೂರ್ತಿ

ಕಾವ್ಯಸ್ಫೂರ್ತಿ ಎಲ್ಲಿ ಅಡಗಿರುತ್ತದೆ, ಕವಿಗಳಿಗೆ ಯಾವಾಗ ಬರುತ್ತೋ ಹೇಳಲಾಗದು. ಬೇಂದ್ರೆ ಮನಸ್ಸಿಗೆ ಹೊಳೆದ ತಕ್ಷಣ ಕಾವ್ಯದ ಸಾಲುಗಳನ್ನು ಕೈಗೆ ಸಿಕ್ಕ ಕಾಗದ ಅಚ್ಚಿನ ಹಾಳೆಗಳ ಖಾಲಿ ಜಾಗ, ಪುಸ್ತಕದ ಅಂಚುಗಳಲ್ಲಿ ಬರೆಯುತ್ತಿದ್ದರಂತೆ. ಪುರುಷೋತ್ತಮದಾಸರೆಂಬ ಹರಿದಾಸರು ಅಂಚೆಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿ ಸಿಕ್ಕಿದ ಕಾಗದಗಳ ಮೇಲೆ ಕೀರ್ತನೆ ಬರೆಯುತ್ತಿದ್ದರು. 'ಯಾವ ಮೋಹನ ಮುರಳಿ' ಅಡಿಗರ ಪ್ರಸಿದ್ಧ ಕವನ. ತುಮಕೂರಿನ ಪುಸ್ತಕ ಭಂಡಾರದಿಂದ ಹೊರಗೆ ಬಂದು ಕಾಂಪೌಂಡಿನ ಮೂಲೆಯಲ್ಲಿದ್ದ ಮಾವಿನಮರದ ಕೆಳಗೆ ಸಿಗರೇಟು ಸೇದಿದಾಗ ಹೊಳೆದಿದ್ದುದು. ಅದನ್ನು ಅಲ್ಲೇ ಬಿದ್ದಿದ್ದ ಕಾಗದದ ಮೇಲೆ ಬರೆದೆ ಎಂದು ಅವರು ನನಗೊಮ್ಮೆ ಹೇಳಿದ್ದರು.

ನಿಸಾರ್ ಅಹಮದ್ 'ನಿತ್ಯೋತ್ಸವ' ಜಯನಗರದ ನಮ್ಮ ಮನೆ(೪ನೇ ಬ್ಲಾಕ್, ೧೬ನೇ ಮೈನ್)ಯ ಪಕ್ಕದ ಕ್ರಾಸ್‌ನಲ್ಲಿ ನಿಸಾರ್ ಮತ್ತು ನನ್ನ ಆಪ್ತಮಿತ್ರ ಗೋಪಿನಾಥ್ ಜತೆ ಹರಟುತ್ತಿದ್ದಾಗ ಕೂಡಲೇ ಸ್ಫೂರ್ತಿ ಬಂದು ರಚಿಸಿದ ಕವನ. ಆಗ ಅವರು ನಮ್ಮ ಬಡಾವಣೆಯ ಪಕ್ಕದ ರಸ್ತೆ ೧೬ನೇ ಎ, ಪಕ್ಕದ ರಸ್ತೆಯಲ್ಲೇ ವಾಸವಿದ್ದರು. ಅವರ ತಂದೆ ನಮ್ಮ ಮನೆಯ ಪಕ್ಕದ ಹಾಲಿನಂಗಡಿಗೆ ಬಂದು ಹಾಲು ಕೊಳ್ಳುತ್ತಿದ್ದರು. ಮನೆಯ ಮುಂದೆ ಹಾಕಿದ ಶಾಮಿಯಾನದಲ್ಲಿ ನಿಸಾರ್ ಮದುವೆ ಆದಾಗ ನಾನು, ಗೋಪಿನಾಥ್ ಹಾಜರಿದ್ದೆವು. ಲಾಲ್‌ಬಾಗಿನಲ್ಲಿ ರಜದ ದಿನ ನಾವು ರಾಮಾಯಣದರ್ಶನ ಓದಿದ ನೆನಪಿದೆ.

ಕಾಶಿವಿಶ್ವನಾಥ ಶೆಟ್ಟರಿಗೆ ಗಾಂಧಿನಗರದ ಬೌದ್ಧಾರಾಮದ ರಸ್ತೆಯಲ್ಲಿ 'ಬುದ್ಧ ಮಹಾಕಾವ್ಯ' ರಚನೆಗೆ ಪ್ರೇರಣೆ ದೊರೆತಿದ್ದು ಇಂದೂ ನನಗೆ ವಿಸ್ಮಯ ಸಂಗತಿ ಆಗಿದೆ.

ಕಾಶಿವಿಶ್ವನಾಥ ಶೆಟ್ಟಿ ಅವರು ನಾನು ಹಾಸನದ ಕಾಲೇಜಿನಲ್ಲಿದ್ದಾಗ ಸಹೋದ್ಯೋಗಿಯಾಗಿದ್ದರು. ಚಿಕ್ಕಮಗಳೂರಿನವರು. ವೈಶ್ಯಜನಾಂಗದಲ್ಲಿ ಸಾಹಿತಿಯೆಂದು ಪ್ರಸಿದ್ಧರಾದವರು. ಕುವೆಂಪು ಶಿಷ್ಯರು.'ಬುದ್ಧ ಮಹಾಚರಿತ'ವೆಂಬ ಮಹಾಕಾವ್ಯವನ್ನು ಕನ್ನಡದಲ್ಲಿ ರಚಿಸಿದವರು. ಅನೇಕ ಕಾದಂಬರಿ, ಕಥೆ, ನಾಟಕ, ಕವನ, ಸ್ತೋತ್ರ ಗ್ರಂಥಗಳನ್ನು ರಚಿಸಿದ ಗಣ್ಯಸಾಹಿತಿಗಳು.

ಹಾಸನದಲ್ಲಿದ್ದಾಗ ಅಲ್ಲಿಯ ವಾಸವಿ ಹಾಸ್ಟೆಲಿನ ವಾರ್ಡನ್ ಆಗಿದ್ದರು. ಊಟ ವಸತಿಯ ಸಮಸ್ಯೆ ಅವರಿಗಿರಲಿಲ್ಲ. ವಾರಕ್ಕೊಮ್ಮೆ ಊರಿಗೆ (ಚಿಕ್ಕಮಗಳೂರಿಗೆ) ಹೋಗಿ ಬರುತ್ತಿದ್ದರು. ಸಂಜೆ ಹೊತ್ತು ಆಗಾಗ ಹಾಸನದ ಪಾರ್ಕಿನಲ್ಲಿ ನಾಲ್ಕಾರು ಅಧ್ಯಾಪಕರು ನಾವೆಲ್ಲ ಸೇರಿ ಹಾಸನದ ಸೌತೆಕಾಯಿ (ಚೋಟುದ್ದ ಇರುವುದು ಬಲು ರುಚಿ)

ತಿನ್ನುತ್ತಾ ಹರಟುತ್ತಿದ್ದೆವು. ಸಾಹಿತಿ ಜ್ವಾಲನಯ್ಯನವರು 'ನಮ್ಮೂರಿನ ಕಾಯಿ ಸೌತೆಕಾಯಿ, ನಿಮ್ಮೂರಿನ ಕಾಯಿ ಸೌದೆಕಾಯಿ' ಎನ್ನುತ್ತಿದ್ದರು.

ಹಾಸನ ಬಿಟ್ಟ ಮೇಲೆ ಅವರು ತಮ್ಮ 'ಬುದ್ಧ ಮಹಾಚರಿತ' ಬರೆದ ಮೇಲೆ ಬೆಂಗಳೂರಿಗೆ ಬಂದಾಗ ಸಿಕ್ಕಿದ್ದರು.'ನೀವು ಈ ಮಹಾಕಾವ್ಯದ ಬಗ್ಗೆ ಮಾತಾಡಬೇಕು. ಸಚಿವಾಲಯದ ಕ್ಲಬ್ಬಿನವರು ಮುಂದಿನವಾರ ಏರ್ಪಾಟು ಮಾಡಿ ತಿಳಿಸುತ್ತಾರೆ. ಆಗ ನಾನೂ ಬರುತ್ತೇನೆ' ಎಂದರು. ಆದರೆ ಕೆಲವೇ ದಿನಗಳಲ್ಲಿ ವಿಧಿವಶರಾದರು.

ಅವರು ಮಹಾಕಾವ್ಯ ಬರೆದ ಹಿನ್ನಲೆ ಕೇಳಿದಾಗ ಅವರು ಹೇಳಿದರು. 'ಗಾಂಧಿ ನಗರದ ಬೌದ್ಧಾರಾಮದ ರಸ್ತೆಯಲ್ಲಿ ಸೆಂಟ್ರಲ್ ಜೈಲ್ ಪಕ್ಕ ಬೆಳಿಗ್ಗೆ ಬರುತ್ತಿದ್ದಾಗ ಸಾಲು ಸಾಲಾಗಿದ್ದ ಹಳದಿ ಹೂವಿನ ಮರಗಳಿಂದ ಹೂದಾರಿ ರಸ್ತೆ ಪೂರಾ ಹೂವಿನ ಹಾಸಿಗೆ ಹಾಸಿದಂತೆ ಇತ್ತು. ತಂಗಾಳಿ ಬೀಸುತ್ತಿತ್ತು. ಹೂಗಳ ಸುಗಂಧ ಪಸರಿಸಿತ್ತು ಬುದ್ಧನ ನೆನಪಾಗಿ ಇಂಥ ಹೂರಸ್ತೆಯಲ್ಲಿ ಬುದ್ಧ ಸಂಚರಿಸಿರಬಹುದೇ ಎನಿಸಿತು. ಹಾಗೆಯೇ ಬುದ್ಧನ ಬಗ್ಗೆ ವಿಚಾರ ಲಹರಿ ಬೆಳೆಯಿತು. ಕ್ರಮೇಣ ಹಲವು ವರ್ಷಗಳಲ್ಲಿ ಬುದ್ಧ ಮಹಾಚರಿತ ಕಾವ್ಯರಚನೆ ಆಯಿತು' ಎಂದರು.

❑

೮೧. ನನ್ನ ಸಂಬಳವನ್ನು ಎಣಿಸಿಕೊಳ್ಳುವುದೇ ಇಲ್ಲ

ಕಾಶೀ ವಿಶ್ವನಾಥಶೆಟ್ಟರು ಸಹೃದಯರು ಸಾಹಿತ್ಯಾಸಕ್ತರು. ಸೊಗಸಾಗಿ ಮಾತನಾಡುತ್ತಿದ್ದರು. ಅಧ್ಯಾಪಕರೊಂದಿಗೆ ಇತರರೊಂದಿಗೆ ಸರಸವಾಗಿ ಮಾತಾಡುತ್ತಿದ್ದರು. ಹಾಸನದ ಸರ್ಕಾರಿ ಕಾಲೇಜಿನಲ್ಲಿ ನಾವಿಬ್ಬರೂ ಸಹೋದ್ಯೋಗಿಗಳಾಗಿದ್ದೆವು.

ಒಮ್ಮೆ ಅಧ್ಯಾಪಕರ ಕೊಠಡಿಯಲ್ಲಿ ಮಾತನಾಡುತ್ತಿದ್ದಾಗ ಸಂಬಳದ ವಿಚಾರ ಬಂದಾಗ, 'ನಾನು ಸಂಬಳವನ್ನು ಎಣಿಸಿಕೊಳ್ಳುವುದೇ ಇಲ್ಲ. ನಮ್ಮ ಸೂಪರಿಡೆಟೆಂಟ್ ಸುಬ್ಬಣ್ಣ ಕೊಟ್ಟದ್ದನ್ನು ಜೇಬಿಗೆ ಹಾಕಿಕೊಳ್ಳುತ್ತೇನೆ. ನನಗೆ ಅವರಲ್ಲಿ ತುಂಬ ನಂಬಿಕೆ' ಎಂದರು. ನಾವೆಲ್ಲ ಮುಖ ಮುಖ ನೋಡಿಕೊಂಡೆವು. ನಮ್ಮಲ್ಲಿ ಒಬ್ಬ ಅಧ್ಯಾಪಕರು ಈ ವಿಷಯವನ್ನು ಸುಬ್ಬಣ್ಣನಿಗೆ ಹೇಳಿ ಒಂದೆರಡು ರೂಪಾಯಿ ಕಡಿಮೆ ಸಂಬಳ ಕೊಡಲು ಸೂಚಿಸಿದರು ಗುಟ್ಟಾಗಿ. ನಾವು ಮಾತಾಡಿದ್ದು ಸಂಬಳದ ದಿನಕ್ಕೆ ನಾಲ್ಕು ದಿನದ ಮುಂಚೆ. ಕ್ಲಾರ್ಕ್ ಸಂಬಳ ದಿನ ಶೆಟ್ಟರಿಗೆ ೧೦ ರೂ. ಕಡಿಮೆ ಸಂಬಳ ಕೊಟ್ಟ. ಶೆಟ್ಟರು ತೆಗೆದುಕೊಂಡು ಆಚೆ ಎಣಿಸಿಕೊಂಡು ಬಂದು, '೧೦ ರೂ. ಕಡಿಮೆ ಇದೆ ರಂಗಣ್ಣಾ' ಎಂದಾಗ, 'ಹೌದಾ ಸಾರ್?' ಎಂದು ೧೦ ರೂ. ಕೊಟ್ಟ. ಅಲ್ಲೇ ಇದ್ದ ನಾವೆಲ್ಲ ನಕ್ಕು, 'ಶೆಟ್ಟರೇ, ರಂಗಣ್ಣನ ಮೇಲೆ ಅಷ್ಟು ನಂಬಿಕೆ ಇಟ್ಟು ಸಂಬಳವನ್ನು ಎಣಿಸಿಕೊಳ್ಳದೆ ಇರುವ ನಿಮಗೆ ೧೦ ರೂ. ಕಡಿಮೆ ಇಟ್ಟದ್ದು ಹೇಗೆ ಗೊತ್ತಾಯಿತು?' ಎಂದು ಕೇಳಿದಾಗ, 'ನಾನು ಮೊನ್ನೆ ಹೇಳಿದ್ದು ತಮಾಷೆಗೆ' ಎಂದರು!

❑

೮೨. ಸ್ವಾಮಿಗಳು ಎಳನೀರು ಕುಡಿಯಲಿಲ್ಲ

೧೯೮೦ರ ಸಂದರ್ಭದಲ್ಲಿ ಮಹಾರಾಣಿ ಕಲಾ ಕಾಲೇಜಿನಲ್ಲಿ ಅಧ್ಯಾಪಕನಾದಾಗ, ಮಂಗಳಾ ಎಂಬ ಸಹೋದ್ಯೋಗಿನಿ ಅಧ್ಯಾಪಕಿ ವಿಜಯನಗರದ ಬಾಲಗಂಗಾಧರ ಆಶ್ರಮದಲ್ಲಿ 'ಚಿಕಾಗೋ ದಿನ' ಕಾರ್ಯಕ್ರಮ ಏರ್ಪಡಿಸಿದ್ದರು. ಆ ಸಂದರ್ಭದಲ್ಲಿ ಆ ಬಗ್ಗೆ ನನ್ನ ಉಪನ್ಯಾಸಕ್ಕೆ ಕರೆದಿದ್ದರು. ಆವತ್ತಿನ ಸಭೆಯ ಅಧ್ಯಕ್ಷತೆಯನ್ನು ಸ್ವಾಮಿ ಪುರುಷೋತ್ತಮನಂದಜೀ (ರಾಮಕೃಷ್ಣಾಶ್ರಮ ಬೆಂಗಳೂರು) ಅವರು ವಹಿಸಿದ್ದರು. ಉಪನ್ಯಾಸ ಮಾಡುತ್ತಿದ್ದಾಗ ಸ್ವಾಮಿ ಪುರುಷೋತ್ತಮಾನಂದರಿಗೆ ಶಿಷ್ಯರು ಎಳನೀರು ತಂದು ಕೊಟ್ಟರು. ಆಗ ಮಧ್ಯಾಹ್ನ ಒಂದು ಗಂಟೆ. ಬಿಸಿಲಿನ ಝಳ ಹೆಚ್ಚಿತ್ತು. ಅವರು ಅದನ್ನು ತಾವು ಕುಡಿಯದೆ ಭಾಷಣ ಮುಗಿದ ಮೇಲೆ ನನಗೆ ಕೊಟ್ಟರು. 'ಸ್ವಾಮೀಜಿ, ನಿಮಗೆ ತಂದಿದ್ದು. ನೀವೇ ಸ್ವೀಕರಿಸಬೇಕು' ಎಂದೆ. ಅದಕ್ಕೆ ಅವರು, 'ಅವರು ತರಬೇಕಾದದ್ದು ನಿಮಗೆ. ನಮಗಲ್ಲ. ಪಾಪ, ತಿಳಿಯದೆ ನನಗವರು ಕೊಟ್ಟಿದ್ದಾರೆ. ದಯವಿಟ್ಟು ತೆಗೆದುಕೊಳ್ಳಬೇಕು' ಎಂದರು. ಇಬ್ಬರೂ ಹಂಚಿಕೊಳ್ಳೋಣ ಎಂದೆ. ಆಗ ಶಿಷ್ಯರು ಸ್ವಾಮೀಜಿಗೆ ಬೇರೆ ತಂದುಕೊಡುತ್ತೇವೆ ಎಂದರು. 'ನಾನು ಬಾಯಾರಿಲ್ಲ, ಭಾಷಣ ಮಾಡಿಲ್ಲ ನನಗೆ ಬೇಡ' ಎಂದು ಹೇಳಿ ನೀವು ಕುಡಿಯಿರಿ ಎಂದ ಪುರುಷೋತ್ತಮಾನಂದಜೀ, 'ಇಷ್ಟು ದಿನ ಆದರೂ ನಿಮ್ಮ ಪರಿಚಯ ಆಗಲೇ ಇಲ್ಲ. ಆಶ್ರಮಕ್ಕೆ ಬನ್ನಿ' ಎಂದರು. ನಂತರ ಕೊಡಗಿನ ಆಶ್ರಮಕ್ಕೆ ವರ್ಗವಾದರು. ಅಂದಿನ ನನ್ನ ಭಾಷಣ ಕೇಳಿದ ಅಲಮೇಲಮ್ಮ ಎಂಬುವರ ಮಗಳು (ಮಹಾರಾಣಿ ಕಾಲೇಜಿನಲ್ಲಿ ೧೯೮೮ರಲ್ಲಿ ವಿದ್ಯಾರ್ಥಿನಿ) ಇಂದು ೩-೧೨-೨೦೨೩ರಲ್ಲಿ ಕಾರ್ಯಕ್ರಮವೊಂದರಲ್ಲಿ ಸಿಕ್ಕಿ ಭಾಷಣವನ್ನು, ಪುರುಷೋತ್ತಮಾನಂದರ ಪ್ರಸಂಗವನ್ನು ನೆನಪಿಸಿಕೊಂಡಳು.

❑

೮೩. ಸದಾ ಜನತಾ ಪ್ರೇಮಿ ನನ್ನ ಆಪ್ತಮಿತ್ರ

ನನ್ನ ಆಪ್ತಮಿತ್ರರು, ಅಮೆರಿಕಾದಲ್ಲಿ ನೆಲೆಸಿದವರೂ, ನಮ್ಮ ಪಕ್ಕದ ರಸ್ತೆಯ ಮನೆಯವರೂ ಆದ ಬಿ.ವಿ.ಕೆ. ಕಳೆದ ಬಾರಿ ಬೆಂಗಳೂರಿಗೆ ಬಂದಾಗ ತಿಂಗಳಾದರೂ ರಾಜರಾಜೇಶ್ವರಿ ನಗರದಲ್ಲಿರುವ ತಮ್ಮ ಮಗಳ (ಇಂದಿರಾ) ಮನೆಗೆ ಹೋಗಿರಲಿಲ್ಲ. ತಿಂಗಳಾದ ಮೇಲೆ ಒಂದು ದಿನ ಫೋನ್ ಮಾಡಿ ಹೇಳಿದರು. 'ನಾಳೆ ಬೆಳಿಗ್ಗೆ ೧೧ಕ್ಕೆ ರಾಜರಾಜೇಶ್ವರಿ ನಗರಕ್ಕೆ- ನನ್ನ ಹಳೆಯ ಮಿತ್ರರೊಬ್ಬರನ್ನು ನೋಡಲು ಬರುತ್ತೇನೆ. ಆಗ ದಾರಿಯಲ್ಲಿ ಸ್ವಲ್ಪ ಹೊತ್ತು ನಿನ್ನ ಮನೆಗೆ ಬರುತ್ತೇನೆ' ಎಂದು. ಕಂಡವರ (ಮಿತ್ರರ) ಮನೆಗೆ ಗಂಟೆಗಟ್ಟಲೆ ಭೇಟಿ ಕೊಡುವ, ಅದಕ್ಕಾಗಿ ಊರೂರಿಗೆ ಪಯಣಿಸುತ್ತಿದ್ದ ಇವರ ಮಗಳ ಮನೆಗೆ ತಿಂಗಳಾದ ಮೇಲೆ ಸ್ವಲ್ಪ ಹೊತ್ತಿನ ಭೇಟಿ ಕಾರ್ಯಕ್ರಮ. 'ಆಮೇಲೆ ಮಧ್ಯಾಹ್ನ ಸಂಜೆ ನಾಲ್ಕಾರು ಜನರನ್ನು ನೋಡುವ ಕಾರ್ಯಕ್ರಮ ಇದೆ. ಅದಕ್ಕಾಗಿ ಮಗಳೊಂದಿಗೆ ಸ್ವಲ್ಪ ಹೊತ್ತಿನ ಭೇಟಿ' ಎಂದರು.

ಮಗಳಿಗೆ ರೇಗಿಹೋಯಿತು. ಅಮೇರಿಕೆಯಿಂದ ಬಂದ ಮೇಲೆ ತಿಂಗಳಾದ ಮೇಲೆ ಬರುತ್ತಿರುವುದು ಮನೆಗೆ. ಒಂದು ದಿನ ಇರುವುದಕ್ಕಲ್ಲ. ಬೇರೆ ಸ್ನೇಹಿತರನ್ನು ಕೆಲವು ಸಮಯ ನೋಡುವಂತೆ ಭೇಟಿ. ಮಗಳು 'ಅಪ್ಪಾ, ನೀನು ಸ್ವಲ್ಪ ಹೊತ್ತಿನ ಭೇಟಿಗೆ, ಮುಖದರ್ಶನಕ್ಕೆ ಬರಬೇಡ. ಅದೇ ವೇಳೆಯನ್ನು ನಿನ್ನ ಇನ್ನೊಬ್ಬ ಸ್ನೇಹಿತರನ್ನು ನೋಡಲು ಸದ್ವಿನಿಯೋಗ ಮಾಡಿಕೋ' ಎಂದಳು. ಈ ವಿಷಯ ತಿಳಿದ ನಾನು 'ತೆಪ್ಪಗೆ ನಿಮ್ಮ ಮಿತ್ರರ ಭೇಟಿ ವಿಳಾಸಪಟ್ಟಿಯನ್ನು ಮನೆಯಲ್ಲಿಟ್ಟು ಒಂದೆರಡು ದಿನವಾದರೂ ಮಗಳ ಮನೆಯಲ್ಲಿದ್ದು ಪಾಪಕಾರ್ಯದಿಂದ ಮುಕ್ತರಾಗಿ' ಎಂದೆ. ನಕ್ಕು ಆಯಿತು, ಹಾಗೇ ಮಾಡ್ತೀನಿ. ನೀವು ಹೇಳುವುದೂ ಸರಿ ಎಂದರು.

❑

೮೪. ನೀವು ಕೊಟ್ಟ ಬಿಡಿಮುತ್ತು ಚೆನ್ನಾಗಿತ್ತು

ಸರ್ಕಾರಿ ಮಹಿಳಾ ಕಾಲೇಜೊಂದರಲ್ಲಿ ತೀನಂಶ್ರೀ ಅವರ 'ಭಾರತೀಯ ಕಾವ್ಯ ಮೀಮಾಂಸೆ' ಪಾಠವನ್ನು ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದೆ. ಸಂಸ್ಕೃತದ ಶೃಂಗಾರದ ಸುಭಾಷಿತಗಳನ್ನು ಕಾವ್ಯ ಮೀಮಾಂಸೆಯಲ್ಲಿ ತೀನಂಶ್ರೀ, ಸಂಸ್ಕೃತ ಪದ್ಯಗಳ ಜತೆಗೆ ಅದರ ಕನ್ನಡಾನುವಾದ ಕೊಟ್ಟಿರುವುದನ್ನು ತಿಳಿಸಿ ಅದರ ಕನ್ನಡಾನುವಾದದ ಸೊಗಸನ್ನು ವಿವರಿಸಿದ್ದೆ. ಆಗ ಒಬ್ಬ ವಿದ್ಯಾರ್ಥಿನಿ 'ಇಂಥ ಬೇರೆ ಪದ್ಯಗಳನ್ನು ಅನುವಾದಿಸಿದ್ದಾರಾ?' ಎಂದು ಕೇಳಿದಳು. 'ಹೌದು, 'ಬಿಡಿಮುತ್ತು' ಎಂಬ ಸಂಗ್ರಹದಲ್ಲಿ ಇಂಥ ನೂರಾರು ಶೃಂಗಾರದ ಸುಭಾಷಿತಗಳನ್ನು ಕನ್ನಡ ಪದ್ಯಗಳಾಗಿ ಸೊಗಸಾಗಿ ಅನುವಾದಿಸಿದ್ದಾರೆ' ಎಂದೆ. 'ಆ ಪುಸ್ತಕ ಇದ್ದರೆ ಕೊಡಿ, ಓದಿಕೊಡ್ತೇನೆ' ಎಂದಳು. 'ಆಗಲಿ' ಎಂದು ಮಾರನೇ ದಿನ ತಂದುಕೊಟ್ಟೆ.

ಒಂದು ವಾರ ಆದ ಮೇಲೆ ಮಹಿಳಾ ಕಾಲೇಜಿನ ಉಳಿದ ಮೇಡಂಗಳ ನಡುವೆ ಅಧ್ಯಾಪಕರ ಕೊಠಡಿಯಲ್ಲಿ ಕುಳಿತಿದ್ದಾಗ ಆ ವಿದ್ಯಾರ್ಥಿನಿ ಬಂದಳು. ಎಲ್ಲರ ಎದುರಿಗೆ ಹೇಳಿದಳು–

'ಸಾರ್, ಹೋದ ವಾರ ನೀವು ನನಗೆ ಕೊಟ್ಟ 'ಬಿಡಿಮುತ್ತು' ತುಂಬಾ ಚೆನ್ನಾಗಿತ್ತು. ನಮ್ಮಕ್ಕಾನೂ ತುಂಬಾ ಮೆಚ್ಚಿಕೊಂಡಳು. ನಾಳೆ ನಿಮಗೆ ಕೊಡ್ತೇನೆ. ಆಗಬಹುದೇ?'

ಆಗ ಎಲ್ಲರೂ ಆ ಸುಂದರಿ ವಿದ್ಯಾರ್ಥಿನಿ ಹೇಳಿದ್ದನ್ನು ಕೇಳಿ ನನ್ನತ್ತ ಅಚ್ಚರಿಯಿಂದ ನೋಡಿದರು. ಆಗ ನಾನು ಸುಧಾರಿಸಿಕೊಂಡು, 'ಅದೇ ತೀ.ನಂ.ಶ್ರೀಕಂಠಯ್ಯನವರ 'ಬಿಡಿಮುತ್ತು' ಸುಭಾಷಿತಗಳ ಪುಸ್ತಕ ಕೊಟ್ಟಿದ್ದೆನಲ್ಲ.... ಅದನ್ನು ತಾನೇ ನೀನು ತಂದುಕೊಡ್ತಾ ಇರೋದು...? ಪರವಾಗಿಲ್ಲ, ನಾಳೆ ನನಗೆ ಕೊಡು' ಅಂದೆ. ಎಲ್ಲರೂ ಬೆಪ್ಪಾದರು.

❑

೮೫. ಅಕ್ಷರಗಳಲ್ಲಿ ಸಾಹಿತ್ಯವಿಚಾರ ಗೊತ್ತು

ಡಿ.ವಿ.ಶೇಷಗಿರಿರಾವ್ ಎಂಬುವರು ಫೋರ್ಟ್ ಹೈಸ್ಕೂಲಿನಲ್ಲಿ ಗಣಿತದ ಅಧ್ಯಾಪಕರಾಗಿದ್ದರು. ಅವರು ಚಿತ್ರದುರ್ಗದಿಂದ ವರ್ಗವಾಗಿ ಬಂದಿದ್ದರು. ಲೀಲಾಜಾಲವಾಗಿ ಬಾಯಲ್ಲೇ ಲೆಕ್ಕಗಳನ್ನು ಹೇಳುತ್ತಾ ಬೋರ್ಡಿನಲ್ಲಿ ಬರೆಯುತ್ತಾ ಬೋಧಿಸುತ್ತಿದ್ದರು. ನಮಗೆ ಗಣಿತ ಕಷ್ಟ ಎಂದು ಎನಿಸಲೇ ಇಲ್ಲ. ಅವರ ಮಗಳು ವಾಣೀವಿಲಾಸದಲ್ಲಿ ಓದುತ್ತಿದ್ದು ಚರ್ಚಾಕೂಟಗಳಲ್ಲಿ ನಮ್ಮೊಂದಿಗೆ ಭಾಗವಹಿಸುತ್ತಿದ್ದಳು. ಅವರ ಅಳಿಯ ದಾಸ ಸಾಹಿತಿ ಶ್ರೀನಿವಾಸಮೂರ್ತಿ. ಅವರ ತಂದೆಯವರು ಶಾಮರಾಯರು ನನಗೆ ಇಂಗ್ಲಿಷ್ ಅಧ್ಯಾಪಕರಾಗಿದ್ದರು. ಇಬ್ಬರೂ ಚಿರಪರಿಚಿತರಾಗಿದ್ದರು. ಒಮ್ಮೆ ಶೇಷಗಿರಿರಾವ್ ಹೇಳಿದ ಪ್ರಸಂಗ ಇದು.

ತರಾಸು ಅವರು ಅವರ ವಿದ್ಯಾರ್ಥಿ ಆಗಿದ್ದರು. ಚುರುಕಾದ ವಿದ್ಯಾರ್ಥಿ ಆಗಿದ್ದರು. ತರಗತಿಯಲ್ಲಿ ತುಂಟತನದ ವಿದ್ಯಾರ್ಥಿ ಆಗಿದ್ದರು. ಹೈಸ್ಕೂಲಿನಲ್ಲಿದ್ದಾಗಲೇ ಶಾಲಾ ಲೈಬ್ರರಿಯಲ್ಲಿದ್ದ ಕಥೆ ಕಾದಂಬರಿಗಳನ್ನೆಲ್ಲಾ ಓದಿಬಿಟ್ಟಿದ್ದರು. ವಿಪರೀತ ಓದುವ ಹುಡುಗ ಎಂದು ಎಲ್ಲರಿಗೂ ತಿಳಿದಿತ್ತು. ವೆಂಕಟಾಚಾರ್ ಕಾದಂಬರಿಗಳನ್ನು ಓದಿದ್ದ ಅವರು ರಮ್ಯ ಶೈಲಿಯಲ್ಲಿ ಒಂದೊಂದು ವರ್ಣನೆಯನ್ನು ಬರೆದು ಒಂದು ಹೂವಿನೊಡನೆ ಒಬ್ಬೊಬ್ಬ ಹುಡುಗಿಗೆ ಡೆಸ್ಕ್ ಬಳಿ ಇಡುತ್ತಿದ್ದರಂತೆ. ಹುಡುಗೀರು ಅದನ್ನು ಓದಿ ನಕ್ಕು ಹೂ ಮುಡಿದು ಕೊಳ್ಳುತ್ತಿದ್ದರಂತೆ. ಗಣಿತದಲ್ಲಿ ಅಷ್ಟೇನೂ ಚುರುಕಾಗಿಲ್ಲದ ಅವರನ್ನು ಇವರು ಪರೀಕ್ಷೆಯಲ್ಲಿ ಫೇಲಾದಾಗ ಪಾಸು ಮಾಡಿಸಿದರಂತೆ. ಅದನ್ನು ತಿಳಿದಾಗ 'ಮೇಷ್ಟ್ರೆ, ತುಂಬಾ ವಂದನೆಗಳು ಪಾಸು ಮಾಡಿಸಿದ್ದಕ್ಕೆ. ಅಂಕಿಗಳಲ್ಲಿ ಲೆಕ್ಕಾಚಾರ ಬರೋಲ್ಲ. ಅಕ್ಷರಗಳಲ್ಲಿ ಸಾಹಿತ್ಯ ವಿಚಾರ ಗೊತ್ತು' ಎಂದನಂತೆ. 'ಹೌದಯ್ಯ ನೀನು ಸಾಹಿತ್ಯದಲ್ಲಿ ಜಾಣ, ಪ್ರತಿಭಾವಂತ ನಿನ್ನಂಥವನು ಫೇಲಾಗಬಾರದು ಎಂದು ಪಾಸು ಮಾಡಿಸಿದೆ' ಎಂದರಂತೆ. ಇಂಥ ಹಲವಾರು ಸಂಗತಿಗಳನ್ನು ನನ್ನ ಗಣಿತದ ಮೇಷ್ಟ್ರು ಹೇಳಿದ್ದರು ೬೦ ವರ್ಷಗಳ ಹಿಂದೆ. ಈಗ ನೆನಪಿರುವುದು ಇದೊಂದೇ ಸಂಗತಿ.

❑

೮೬. ಮೊದಲು ಒಂದು ದೋಣಿ ತರಿಸು

ನಾಡಿಗೇರ್, ಬೀಚಿ ಇದ್ದಲ್ಲಿ ನಗೆಬುಗ್ಗೆ ಉಕ್ಕುತ್ತಿತ್ತು. ಅನಕೃ ಪರಿವಾರದಲ್ಲಿ ಅವರಿಬ್ಬರೇ ಪ್ರತಿಯೊಂದೂ ಮಾತಿಗೂ ಲೀಲಾಜಾಲವಾಗಿ ಹಾಸ್ಯದ ನುಡಿಗಳನ್ನು ಆಡುತ್ತಿದ್ದರು. ಅವರ ಮಾತನ್ನು ಅನಕೃ ನಗೆಮಲ್ಲಿಗೆಯನ್ನಾಗಿ ಸ್ವೀಕರಿಸಿ ನಗೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಆ ನಗೆನುಡಿಗಳು ಒಂದೇ ಹಂತದವು ಆಗಿರಲಿಲ್ಲ, ವೈವಿಧ್ಯಮಯವಾಗಿರುತ್ತಿದ್ದವು. ನಡುನಡುವೆ ಅನಕೃ ಸಹ ನಗೆ ಚಟಾಕಿ ಹಾರಿಸುತ್ತಿದ್ದರು ಒಮ್ಮೊಮ್ಮೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಕಾರ್ಯಕ್ರಮಕ್ಕೆ ಅನಕೃ, ಬೀಚಿ, ನಾಡಿಗೇರ್, ರಾಮಮೂರ್ತಿ ನಾಲ್ವರ ಕೂಟ ಹಾಜರಾಗಿತ್ತು. ಕಾರ್ಯಕ್ರಮ ಮುಗಿದ ಮೇಲೆ ವ್ಯವಸ್ಥಾಪಕರು ಅನಕೃ ಒಬ್ಬರೇ ಮನೆಗೆ ಹೋಗುತ್ತಾರೋ ಅಥವಾ ಅವರ ಮಿತ್ರರೊಂದಿಗೆ ಬೇರೆಲ್ಲಾದರೂ ಹೋಗುತ್ತಾರೋ ತಿಳಿಯದೆ 'ಸಾರ್, ರಿಕ್ಷಾ ತರಿಸಲೋ ಅಥವಾ ಟ್ಯಾಕ್ಸಿ ತರಿಸಲೋ?' ಎಂದು ಕೇಳಿದರು. ಆಗ ಪರಿಷತ್ತಿನ ಸಭಾಂಗಣದ ವರಾಂಡದ ಮೆಟ್ಟಿಲುಗಳ ಕೆಳಗೆ ಸಿಮೆಂಟ್ ಆಗಿರಲಿಲ್ಲ. ಮಣ್ಣಿನ ನೆಲ ಆಗಿದ್ದು ಹಳ್ಳಕೊಳ್ಳದ ದಾರಿ ಆಗಿತ್ತು. ಜೋರುಮಳೆ ಬಂದು ಆಗತಾನೆ ನಿಂತಿದ್ದು ಮೆಟ್ಟಿಲ ಕೆಳಗೆ ಸಾಕಷ್ಟು ನೀರು ನಿಂತಿತ್ತು. ಜಂಪ್ ಮಾಡಿ ದಾಟುವಷ್ಟು ಇತ್ತು. ಅಲ್ಲಿ ಅಷ್ಟರ ಮಟ್ಟಿಗೆ ಹಳ್ಳ ಬಿದ್ದಿತ್ತು ನೆಲ. ಆಗ ವ್ಯವಸ್ಥಾಪಕನಿಗೆ ಅನಕೃ 'ಆಟೋ ತರಿಸೋ ಮೊದಲು ಒಂದು ನಾಡ ದೋಣಿ ತರಿಸು. ನಾವು ಈ ಹಳ್ಳ ದಾಟಬೇಕಾಗಿದೆ' ಎಂದರು. ಎಲ್ಲರೂ ನಕ್ಕರು. ನಾಡಿಗೇರ್‌ರು 'ನನಗೇನು ದೋಣಿ ಬೇಡ, ನನಗೆ ಈಜು ಬರುತ್ತೆ' ಎಂದರು. ಮತ್ತೆ ಎಲ್ಲರೂ ನಕ್ಕರು.

ಆಮೇಲೆ ಜಿ. ನಾರಾಯಣರ ಕಾಲದಲ್ಲಿ ದಾರಿ ಪೂರ್ತಿ ಸಿಮೆಂಟ್ ದಾರಿ ಆಗಿದೆ.

❑

೮೭. ಬಿಳಿಕುರಿಗಳ ನಡುವೆ ಕರಿಕುರಿಗಳು

ಸುಮಾರು ಅರ್ಧಶತಮಾನದ ಕಾಲ ಕನ್ನಡದ ಅನೇಕ ಸಾಹಿತಿ ವಿದ್ವಾಂಸರನ್ನು ಭೇಟಿ ಮಾಡಿದ್ದೇನೆ. ಕೆಲವರದು ಲಘು ಪರಿಚಯವಾದರೆ ಕೆಲವರದು ಆತ್ಮೀಯ ಪರಿಚಯ. ಕೆಲವರು ಪರಿಚಯ ಆದ ಮೇಲೆ ನನ್ನ ಜೀವನದ ಅವಿಭಾಜ್ಯ ಅಂಗವೇ ಆಗಿದ್ದಾರೆ. ಹೀಗೆ ಪರಿಚಯ ಆದವರಲ್ಲಿ ವಿನಯದಿಂದ ಸೌಜನ್ಯದಿಂದ ಮಾತನಾಡುವವರು ಕೆಲವರಾದರೆ ಕಟುವಾಗಿ ಮಾತನಾಡುವವರು ಕೆಲವರು. ಸದಾ ವಕ್ರವಾಗಿ ಮಾತಾಡುವವರು ಕೆಲವರು. ಇನ್ನು ಕೆಲವರು ಸತ್ಯವನ್ನು ಮರೆಮಾಚಿ ದಿಟ್ಟತನದಿಂದ ಮಾತಾಡದೆ ಬೆಣ್ಣೆಮಸಾಲೆ ಮಾತನ್ನು ಆಡುವವರಿದ್ದಾರೆ. ಆದರೆ ಸತ್ಯನಿಷ್ಠರಾಗಿ, ಪ್ರಾಮಾಣಿಕ ಅಭಿಪ್ರಾಯವನ್ನು ಖಡಕ್ ಆಗಿ ಯಾವ ಮುಲಾಜೂ ಇಲ್ಲದೆ ಗಂಭೀರವಾಗಿ ಸೌಮ್ಯವಾಗಿ ನೇರೋಕ್ತಿಗಳಲ್ಲಿ ಮಾತನಾಡುವ ಸಾಹಿತಿ ವಿದ್ವಾಂಸ ಜಿ.ಎಸ್.ಸಿದ್ಧಲಿಂಗಯ್ಯನವರು.

ಅವರ ಪರಿಚಯ ಅವರ ಕೃತಿಗಳ ಮೂಲಕ ಮೊದಲೇ ಆಗಿದ್ದರೂ ವ್ಯಕ್ತಿಯಾಗಿ ಪರಿಚಯ ಆಗಿದ್ದು ಬೆಂಗಳೂರಿನ ಕಲಾ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿದ್ದಾಗ. ನಿಕಟ ಪರಿಚಯವಾಗಿದ್ದುದು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗಿನಿಂದ. ಅವರು ಸೇವೆ ಸಲ್ಲಿಸಿದ ಕಾಲೇಜುಗಳಲ್ಲಿ ಅವರಿದ್ದಾಗ ನಾನಿರುವ ಅವಕಾಶ ಸಿಗದಿದ್ದರಿಂದ, ಅವರು ಪ್ರಿನ್ಸಿಪಾಲರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಹೇಗೆ ಸಹೋದ್ಯೋಗಿಗಳೊಡನೆ ವರ್ತಿಸಿದರು ಎಂಬುದರ ಪರಿಚಯ ನನಗಿಲ್ಲ. ಆದರೆ ಅವರು ಕಾಲೇಜು ಶಿಕ್ಷಣಾಲಯದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ ರೀತಿಯನ್ನು ನಾ ಬಲ್ಲೆ ಎನ್ನಬಹುದು. ಹೆಚ್ಚಾಗಿ ಅವರೊಡನೆ ಸಭೆ ಸಮಾರಂಭಗಳಲ್ಲಿ ಭಾಗವಹಿಸಿದಾಗ ಅವರ ವ್ಯಕ್ತಿತ್ವದ ಪರಿಚಯ ಆಗಿದೆ. ಸ್ಪಷ್ಟವಾಗಿ, ಖಚಿತವಾಗಿ ಅಭಿಪ್ರಾಯಗಳನ್ನು ಪೂರ್ವಗ್ರಹ ಪೀಡಿತರಾಗದೆ ಸ್ವಮತಾಭಿಮಾನದಿಂದ ಸತ್ಯವನ್ನು ಮರೆಮಾಚದೆ ಮಾತನಾಡುವ ಭಾಷಣಕಾರರಾಗಿ ಅವರನ್ನು ಕಂಡು ಬೆರಗಾಗಿದ್ದೇನೆ.

ಕೇವಲ ವೇದಿಕೆಯ ಉಪನ್ಯಾಸಗಳಲ್ಲಿ, ಗ್ರಂಥಬರಹ ಲೇಖನಗಳಲ್ಲಿ ಅಷ್ಟೆ ಅಲ್ಲದೆ ಉಳಿದ ಸಂದರ್ಭಗಳಲ್ಲೂ ಅವರ ಮಾತುಕತೆ ಫಟಾಫಟ್. ನನಗೆ ಒಂದೆರಡು ಪ್ರಸಂಗಗಳು ತಕ್ಷಣಕ್ಕೆ ನೆನಪಾಗುತ್ತಿವೆ.

ಜನ್ನನ ಯಶೋಧರ ಚರಿತೆಯ ಬಗ್ಗೆ ವಿಮರ್ಶಾ ಗ್ರಂಥ ಬರೆಯುವಾಗ ವಾದಿರಾಜರ ಯಶೋಧರ ಚರಿತೆ (ಸಂಸ್ಕೃತ) ಗ್ರಂಥ ಅವರಿಗೆ ಬೇಕಾಗಿತ್ತು. ನನ್ನಲ್ಲಿ ವಿಚಾರಿಸಿದರು. ಇತ್ತು. ಕೊಟ್ಟೆ. ಆಗ ಅವರು ಹೇಳಿದ ಮಾತು. 'ನಿಮ್ಮ ಪುಸ್ತಕವನ್ನು ಜೋಪಾನವಾಗಿ ಹಿಂದಿರುಗಿಸುತ್ತೇನೆ. ನನ್ನ ಕೆಲಸ ಆದ ಮೇಲೆ ಪುಸ್ತಕವನ್ನು ಒಂದು ದಿನವೂ ಇಟ್ಟುಕೊಳ್ಳೋಲ್ಲ. ಇದುವರೆಗೆ ನಾನು ಇತರರಿಂದ ತೆಗೆದುಕೊಂಡ ಪುಸ್ತಕಗಳನ್ನು ತಪ್ಪದೆ ಹಿಂದಿರುಗಿಸಿದ್ದೇನೆ' ಎಂದು. ಈ ಮಾತು ಎಷ್ಟು ಮಹತ್ವವಾದುದು ಎಂದರೆ ಕನ್ನಡದ ಅನೇಕ ಘನ ವಿದ್ವಾಂಸರು ಸಿದ್ಧಲಿಂಗಯ್ಯನವರು ಹೇಳಿದಂತೆಯೇ ಹೇಳಿ

ಹಿಂದಿರುಗಿಸಿದರು. ಆದರೆ ಎಷ್ಟೋ ಜನ ಪ್ರಖ್ಯಾತ ಸಾಹಿತಿಗಳು ಇಂದಿಗೂ ತೆಗೆದುಕೊಂಡ ಅಮೂಲ್ಯ ಗ್ರಂಥಗಳನ್ನು ಹಿಂದಿರುಗಿಸಲಿಲ್ಲ. ಸಿಕ್ಕಿದಾಗಲೆಲ್ಲ ಕೇಳಿದಾಗಲೆಲ್ಲ 'ಎಲ್ಲೋ ಇಟ್ಟಿದ್ದೇನೆ', 'ಬಿಡುವಾಗಿಲ್ಲ ಹುಡುಕಲು', 'ಮುಂದಿನ ವಾರ ಕೊಡುತ್ತೀನಿ' ಇತ್ಯಾದಿ ಸಬೂಬು ಹೇಳುತ್ತಲೇ ಇದ್ದರು. ಕೆಲವು ಘನ ವಿದ್ವಾಂಸರು ನಿಧನರಾದರು. ಅವರ ಮನೆಯವರು 'ನಮಗೆ ಪುಸ್ತಕಗಳ ವಿಚಾರ ಏನೂ ಗೊತ್ತಿಲ್ಲ' ಎಂದರು. ಕಂಡವರಿಗೆ ಪಾಠ ಹೇಳಿ ಪ್ರಸಿದ್ಧರಾಗಿದ್ದ ವಿದ್ವಾಂಸರ ಕಥೆ ಇದು.

ಇನ್ನೊಂದು ಪ್ರಸಂಗವಿದು. ನಿಜಗುಣ ಅಂಥ ಹೆಸರು ಇರಬೇಕು. ಒಂದು ಗೌರವ ಗ್ರಂಥವನ್ನು ಮಠವೊಂದರಲ್ಲಿ ಬಿಡುಗಡೆ ಮಾಡಲು ಸಿದ್ಧಲಿಂಗಯ್ಯನವರು ಹೋಗಿದ್ದರು. ನಾನೂ ಹೋಗಿದ್ದೆ. ಪುಸ್ತಕ ಬಿಡುಗಡೆ ಆದ ಮೇಲೆ ಭೋಜನ ವ್ಯವಸ್ಥೆ ಇತ್ತು. ಸಮಾರಂಭಕ್ಕೆ ನೂರಾರು ಜನ ಬಂದಿದ್ದರು. ಊಟ ಮಾಡಿದ ಮೇಲೆ ಸಿದ್ಧಲಿಂಗಯ್ಯನವರು ಕೈ ತೊಳೆಯಲು ಕೈಯಲ್ಲಿದ್ದ ಪುಸ್ತಕವನ್ನು ಪಕ್ಕದಲ್ಲಿದ್ದ ಕಟ್ಟೆಯ ಮೇಲಿಟ್ಟು ಸ್ವಲ್ಪ ದೂರದ ನೀರಿನ ತೊಟ್ಟಿಯಲ್ಲಿ ಕೈ ತೊಳೆದು ಬರುವಷ್ಟರಲ್ಲಿ ಯಾರೋ ಆ ಬೃಹದ್ಗ್ರಂಥವನ್ನು ತೆಗದುಕೊಂಡು ಬಿಟ್ಟಿದ್ದರು. ನಿಮಿಷಾರ್ಧದಲ್ಲಿ ಗ್ರಂಥಹರಣವಾಗಿತ್ತು. ಅವರ ಜತೆಯಲ್ಲೇ ನಾನು ಕೈ ತೊಳೆಯುತ್ತಿದ್ದೆ. ನನ್ನ ಬಗಲ ಚೀಲ ಇದ್ದುದರಿಂದ ಅದರಲ್ಲಿ ನನ್ನ ಪುಸ್ತಕ ಹಾಕಿಕೊಂಡಿದ್ದೆ. ಕೈ ತೊಳೆದುಕೊಂಡು ಬಂದಮೇಲೆ ಪುಸ್ತಕ ತೆಗೆದುಕೊಳ್ಳಲು ಕಟ್ಟೆಯ ಬಳಿ ಬಂದರೆ ಗ್ರಂಥ ಇರಲಿಲ್ಲ. ಎಲ್ಲ ಸಾಹಿತ್ಯಪ್ರೇಮಿಗಳು, ಸಾಹಿತಿಗಳೇ ಇದ್ದ ಆ ಸಮಾರಂಭದಲ್ಲಿ ಇವರ ಗ್ರಂಥ ಕಳುವಾದುದನ್ನು ಕಂಡು ಸಿದ್ಧಲಿಂಗಯ್ಯನವರು ಹೇಳಿದ ಮಾತಿದು. 'ಬಿಳಿ ಕುರಿಗಳ ನಡುವೆ ಕರಿ ಕುರಿಗಳಿರುತ್ತವೆ. ನಮ್ಮಂಥವರ ಕಣ್ಣಿಗೆ ಕಾಣಿಸೋಲ್ಲ. ಏನು ಮಾಡೋದು!'

❑

೮೮. ಒಳಗಿನಿಂದ ಬಂದೋರು ಹೊರಗಿನಿಂದ ಬಂದೋರು ಇಬ್ಬರೂ ವಿದ್ವಾಂಸರೇ

ಸಭೆ ಸಮಾರಂಭಗಳಲ್ಲಿ ಹೊರಗಿನ ಮತ್ತು ಸ್ಥಳೀಯ ಸಾಹಿತಿಗಳನ್ನು ನಡೆಸಿಕೊಳ್ಳುವುದರಲ್ಲಿ ತಾರತಮ್ಯ ಕಂಡುಬರುವುದು ಅಪರೂಪವೇನಲ್ಲ. ಇಂತಹದೇ ಒಂದು ಪ್ರಸಂಗವನ್ನು ಸಿದ್ಧಲಿಂಗಯ್ಯನವರು ಗಮನಿಸಿದಾಗ ಕುಪಿತರಾದ ಅವರು, 'ಸ್ಥಳೀಯರಾದರೇನು, ಪರಸ್ಥಳೀಯರಾದರೇನು, ವಿದ್ವಾಂಸರು ವಿದ್ವಾಂಸರೇ ಅಲ್ಲವೇ! ಪರಸ್ಥಳೀಯರು ಮಾತ್ರವೇ ವಿದ್ವಾಂಸರೇ? ನಾವಲ್ಲವೇ? ನಮಗೂ ಸಂಭಾವನೆ ಕೊಡಬೇಕು. ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ನೀತಿ ಮಾಡೋದಕ್ಕೆ ನಿನಗಾರು ಹೇಳಿದ್ರಪ್ಪಾ?' ಎಂದು ಕೇಳಿದಾಗ ಅವನಿಗೆ ಉತ್ತರಿಸಲಾಗಲಿಲ್ಲ. ಒಳಗೆ ಹೋಗಿ ಸಂಭಾವನೆ ತಂದುಕೊಟ್ಟ. ಆಗ ಸಿದ್ಧಲಿಂಗಯ್ಯನವರು ಅವನಿಗೆ ಹೇಳಿದರು. 'ನಮಗಿಬ್ಬರಿಗೆ ಸಂಭಾವನೆ ಕೇಳಲಿಲ್ಲ. ವಿದ್ವಾಂಸರಿಗೆಲ್ಲ ಸಮಾನ ಗೌರವ, ಮನ್ನಣೆ ಸಿಗಬೇಕು. ನಾಳೆ ಬರುವ ವಿದ್ವಾಂಸರು ಹೊರಗಿನಿಂದ ಬರಲಿ, ಒಳಗಿನಿಂದ ಬರಲಿ ಎಲ್ಲರಿಗೂ ಸಮಾನವಾಗಿ ಕೊಡಬೇಕು ತಿಳೀತೇ?' ಎಂದರು. 'ಸರಿ ಸಾರ್, ತಪ್ಪಾಯಿತು ಸಾರ್' ಎಂದ ಆ ವ್ಯವಸ್ಥಾಪಕ.

ಆಮೇಲೆ ನನ್ನ ಹತ್ತಿರ ಸಿದ್ಧಲಿಂಗಯ್ಯನವರು ಹೇಳಿದರು. 'ಅನ್ಯಾಯ ಮಾಡಿದಾಗ ಸುಮ್ಮನಿರದೆ ಎಚ್ಚರಿಸಬೇಕು ಇಂತಹ ಜನರನ್ನು' ಎಂದರು. ಹೀಗೆ ಹತ್ತಾರು ಸಂದರ್ಭಗಳಲ್ಲಿ ಖಡಕ್ ಆಗಿ ಮಾತನಾಡುವ ಸಾಹಿತಿಗಳು ನಮ್ಮಲ್ಲಿ ಅಪರೂಪ.

ಸಿದ್ಧಲಿಂಗಯ್ಯನವರು ಪರಿಷತ್ತಿನ ಚುನಾವಣೆಗೆ ನಿಂತಾಗ ಮಿತ್ರರು, ಶಿಷ್ಯರು ನೆರವಾದರು. ಆಗ ಅವರು ಒಂದು ಮಾತು ಹೇಳಿದರು. 'ನಿಮ್ಮ ಸಹಾಯ ನನಗೆ ಅಗತ್ಯವಿದೆ. ಆದರೆ ನೀವು ಮನಸ್ಸಂತೋಷದಿಂದ ನೆರವು ನೀಡಿದರೆ ಸಂತೋಷ. ಆದರೆ ಖಂಡಿತವಾಗಿ ಮುಲಾಜಿಗೆ, ಹಂಗಿಗೆ, ನನ್ನ ಮೇಲಿನ ಅಧಿಕಾರಿ ಅಥವಾ ಯಾವುದೋ ಋಣ ತೀರಿಸಲು ಅಂತ ನೆರವಿಗೆ ಬರಬೇಡಿ. ನಿಮಗೆ ನಾನು ಇವರಿಗೆ ಸಹಾಯ ಮಾಡಬೇಕು; ಇದರಲ್ಲಿ ನನಗೆ ಖುಷಿ ಇದೆ; ಇವರು ಕೇಳಬೇಕಾಗಿಲ್ಲ; ಇವರು ಕನ್ನಡ ಸೇವೆ ಮಾಡಲು ಅಧ್ಯಕ್ಷರಾಗಬೇಕು ಅಂತ ಬಂದಿದ್ದರೆ ನೆರವು ನೀಡಿ' ಎಂದರು.

ಇಂಥ ಅಪೂರ್ವ, ಆತ್ಮೀಯ ವ್ಯಕ್ತಿಗೆ ಅಭಿಮಾನದಿಂದ ನಡೆಯುತ್ತಿರುವ ಸನ್ಮಾನ ಸಮಾರಂಭವೊಂದರಲ್ಲಿ ಅವರ ನೆನಪಾಯಿತು.

❑

೮೯. ಹುರಿಗಾಳು ಪ್ರವೀಣೆ ವಾಸಂತಿ ಮೇಡಂ

ಕಾಲೇಜಿನಲ್ಲಿ ನಾನು ಓದುವ ದಿನಗಳಲ್ಲಿ ತರಹೇವಾರಿ ಮೇಡಂಗಳಿದ್ದರು. ಪಾಠದ ಮೇಡಂ (ಚೆನ್ನಾಗಿ ಪಾಠ ಮಾಡುವವರು), ನೋಟದ ಮೇಡಂ (ನೋಡಲು ಅಂದವಾಗಿ ಅಲಂಕರಿಸಿಕೊಂಡು ಬರುವವರು), ಕಾಟದ ಮೇಡಂ (ಪಾಠ ಮಾಡೋಕೆ ಬಾರದವರು), ಓದಿನ ಮೇಡಂ (ಯಾವುದೋ ನೋಟ್ಸ್ ತಂದು ಓದುವವರು), ಹಳೆಯ ನೋಟ್ಸ್ ಅನ್ನು ಡಿಕ್ಟೇಟ್ ಮಾಡುವ ಉಕ್ತಲೇಖನದ ಮೇಡಂ, ಇತ್ಯಾದಿ. ಈಗ ನಾನು ಹೇಳುತ್ತಿರುವುದು ಒಬ್ಬ ನೋಟದ ಮೇಡಂ ಕಥೆ.

ಈ ಮೇಡಂ ರಾಜ್ಯಶಾಸ್ತ್ರದ ಪಾಠ ಹೇಳುತ್ತಿದ್ದರು. ಅವರು ವಿದ್ಯಾರ್ಥಿನಿ ಆದಾಗ ಬರೆದುಕೊಂಡಿದ್ದ ನೋಟ್ಸನ್ನೇ ಬರೆಸುತ್ತಿದ್ದರು. ಆದರೆ ನೋಡಲು ತೆಳ್ಳಗೆ ಬೆಳ್ಳಗೆ ಇದ್ದ ಆ ಮೇಡಂ ಅಲಂಕಾರಪ್ರಿಯೆ ಆಗಿದ್ದರು. ದಿನಕ್ಕೊಂದು ಹೊಸ ಸೀರೆ ಉಡುತ್ತಿದ್ದರು. ಮನೆಯಿಂದ ಪಾರ್ಕಿನ ಮಧ್ಯೆ ಹಾದು ಕಾಲೇಜಿಗೆ ಬರುತ್ತಿದ್ದ ಆಕೆ ಬೇಲಿ ಗಿಡದ ಹೂಗಳನ್ನೆಲ್ಲ ಗಮನಿಸಿ ಸೀರೆಗೆ ಮ್ಯಾಚ್ ಆಗುವ ಕಲರ್ ಹೂವನ್ನು ಮುಡಿದುಕೊಂಡು ಬರುತ್ತಿದ್ದರು. ಆ ಕಲರ್ ಹೂ ಸಿಗದಿದ್ದರೆ ಅದೇ ಸೀರೆಯ ಬಣ್ಣದ ಪ್ಲಾಸ್ಟಿಕ್ ಹೂ ಮುಡಿದುಕೊಂಡು ಬರುತ್ತಿದ್ದರು. ಇನ್ನು ಬಳೆ, ಕುಪ್ಪಸ, ಲಿಪ್‌ಸ್ಟಿಕ್ ಎಲ್ಲ ಮ್ಯಾಚಿಂಗ್ ನೋಡಿದವರಿಗೆ ಕ್ಯಾಚಿಂಗ್ ಅಲಂಕಾರಿಣಿ. ಈಕೆಗೆ ಕುಶಲಕಲೆಗಳ ಆಸಕ್ತಿ ಅಪಾರವಾಗಿತ್ತು. ಚಿತ್ರಕಲೆ, ಮನೆ ಅಲಂಕಾರ ಮೊದಲಾದವುಗಳಲ್ಲಿ ಆಸಕ್ತಿ ಬಹಳ.

ಈಕೆಯ ಪ್ರತಿಭೆಗೆ ಒಂದು ನಿದರ್ಶನ ಹುರಿಗಾಳು ಪ್ರಸಂಗ. ಬೆಂಗಳೂರು ನ್ಯಾಷನಲ್ ಕಾಲೇಜಿನ ವಾಣಿವಿಲಾಸ ರಸ್ತೆಯ ಕಡೆಯ ಬಾಗಿಲ ಬಳಿ ಮರದ ಕೆಳಗೆ ಸಂಜೆ ಆದರೆ ಆರು ಗಂಟೆಯ ಮೇಲೆ ಏಳು–ಎಂಟು ಗಂಟೆಯವರೆಗೆ ಸೈಕಲ್ ಮೇಲೆ ಡಬ್ಬವೊಂದರ ತುಂಬ ಹುರಿಗಾಳು ತುಂಬಿಕೊಂಡು ಒಬ್ಬ ವ್ಯಕ್ತಿ ಮಾರುತ್ತಿದ್ದ ಅವನು ಮಾರುತ್ತಿದ್ದ ಹುರಿಗಾಳು ಎಷ್ಟು ರುಚಿಯಾಗಿರುತ್ತಿತ್ತು ಎಂದರೆ ವಿ.ಸೀತಾರಾಮಯ್ಯ, ಕೆ.ಎಸ್.ನರಸಿಂಹಸ್ವಾಮಿ, ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಯರು ಲಾಲ್‌ಬಾಗಿಗೆ ಸಂಜೆ ವಾಕಿಂಗ್ ಹೊರಟಾಗ ಅವನ ಬಳಿ ಹುರಿಗಾಳು ಕೊಳ್ಳುತ್ತಿದ್ದರು. ನ್ಯಾಷನಲ್ ಕಾಲೇಜಿನ ಮೂಲೆಯಲ್ಲಿದ್ದ ದೀಪದ ಕಂಬದ ಬೆಳಕು ಮರದ ಕೆಳಕ್ಕೆ ಮಸುಕು ಮಸುಕಾಗಿ ಬೀಳುತ್ತಿತ್ತು. ಆ ಮಂಕುಬೆಳಕಿನಲ್ಲಿ ಹುರಿಗಾಳು ವ್ಯಾಪಾರ ಸಾಗುತ್ತಿತ್ತು. ಎಷ್ಟು ವ್ಯಾಪಾರ ಆಗುತ್ತಿತ್ತು ಅಂದರೆ ಎಷ್ಟೋ ದಿನ ಇಡೀ ಡಬ್ಬ ಹುರಿಗಾಳು ಖಾಲಿ ಆಗಿಬಿಡುತ್ತಿತ್ತು. ಚೀನಾ ಭಾರತ ಸಮರಕಾಲದಲ್ಲಿ ೧೦,೦೦೦ ರೂ. ದೇಣಿಗೆ ಕೊಟ್ಟ ದೇಶಭಕ್ತ ಆತ.

ಅಲಂಕಾರಪ್ರಿಯೆ ವಾಸಂತಿ ಮೇಡಂ ನ್ಯಾಷನಲ್ ಕಾಲೇಜ್ ಬಳಿ ಉತ್ತರಾದಿ ಮಠದ ರಸ್ತೆಯ ಮನೆಯೊಂದರಲ್ಲಿ ವಾಸಿಸುತ್ತಿದ್ದರು. ಒಂದು ಸಂಜೆ ಈ ಹುರಿಗಾಳಿನವನು ಅವರ ಕಣ್ಣಿಗೆ ಬಿದ್ದ. ಹುರಿಗಾಳು ಕೊಂಡು ತಿಂದಾಗ ರುಚಿ ತುಂಬಾ ಹಿಡಿಸಿತು.

ಮಾರನೇ ದಿನ ಅವನ ಬಳಿ ಬಂದು 'ಹೇಗಯ್ಯಾ ಮಾಡುತ್ತೀಯಾ? ಅಥವಾ ಎಲ್ಲಿಂದ ತರುತ್ತೀಯಾ?' ಎಂದು ಕೇಳಿದರು. 'ಅದೆಲ್ಲಾ ಟ್ರೇಡ್ ಸೀಕ್ರೆಟ್ (ವ್ಯಾಪಾರದ ಗುಟ್ಟು) ಹೇಳೋಕಾಗಲ್ಲ. ಅಷ್ಟೇ ಅಲ್ಲ, ಹುರಿಗಾಳನ್ನು ಮಾಡುವವರು ಬೇಕಾದಷ್ಟು ಜನ ಇದ್ದಾರೆ. ಈ ರೀತಿ ಹುರಿಗಾಳು ತಯಾರಿಕೆ ಯಾರಿಗೂ ಸಾಧ್ಯವಿಲ್ಲ' ಎಂದು ಸವಾಲೆಸೆದ. 'ಅದೆಲ್ಲಾ ಹೇಳಬೇಡ. ಏನೇನು ಪದಾರ್ಥ ಅದಕ್ಕೆ ಹಾಕುತ್ತಾರೆ ಎಂದು ತಿಳಿದರೆ ಯಾರು ಬೇಕಾದರೂ ಇಂಥ ಹುರಿಗಾಳನ್ನು ತಯಾರಿಸಹುದು' ಎಂದು ಮೇಡಂ ಉತ್ತರಿಸಿದರು.

'ಏನೇನು ಹಾಕುತ್ತಾರೆ ಎಂಬುದು ಮುಖ್ಯವಲ್ಲ. ಹೇಗೆ ತಯಾರು ಮಾಡುತ್ತಾರೆ ಎಂಬುದು ಮುಖ್ಯ. ಅದೆಲ್ಲಾ ನಿಮಗೆ ತಿಳಿಯೋಲ್ಲ' ಎಂದ. 'ಸರಿಯಪ್ಪ, ಯಾರಾದರೂ ಇದೇ ರೀತಿ ಹುರಿಗಾಳು ತಂದರೆ ಕೊಳ್ಳುತ್ತೀಯಾ?' ಎಂದರು. 'ಒಂದಕ್ಕೆರಡು ಬೆಲೆ ಕೊಟ್ಟು ಕೊಳ್ಳುತ್ತೀನಿ. ಈ ರೀತಿ ರುಚಿ ಇರುವ ಹುರಿಗಾಳನ್ನು ಯಾವ ಅಜ್ಜಿ ಸಹ ಮಾಡೋಕಾಗಲ್ಲ' ಎಂದ. 'ಸರಿ ಹಾಗಾದರೆ, ಕೊಡು ೧ ಕೆ.ಜಿ.' ಅಂತ ಹುರಿಗಾಳು ಕೊಂಡು ಮೇಡಂ ಮನೆಗೆ ಹೋದರು.

ಹುರಿಗಾಳು ಮಾಡುವ ವಿಧಾನದ ಪುಸ್ತಕ ಓದಿದರು. ಅವರಿವರನ್ನೆಲ್ಲಾ ಕೇಳಿದರು. ಈತನ ಹುರಿಗಾಳಿನಲ್ಲಿ ಏನೇನು ಅಂಶಗಳಿವೆ ಗಮನಿಸಿ ನಾನಾ ರೀತಿಯಲ್ಲಿ ತಯಾರಿಸತೊಡಗಿದರು. ರುಚಿ ನೋಡುವುದು ಮತ್ತೆ ಪರಿಕರ ಮತ್ತು ಪ್ರಮಾಣ ಬದಲಿಸುವುದು, ಮತ್ತೆ ಮಾಡುವುದು. ಹೀಗೆ ಮಾಡಿ ಮಾಡಿ ಮರಳಿ ಯತ್ನವ ಮಾಡು ಮರಳಿ ಯತ್ನವ ಮಾಡು ಎಂದು ಶಾಲಾ ಪದ್ಯದ ಹಾಗೆ ಪ್ರಯತ್ನಿಸಿ, ಕೊನೆಗೊಂದು ದಿನ ಜಯಶಾಲಿ ಆದರು. ಹುರಿಗಾಳಿನ ಡಬ್ಬದ ಹುರಿಗಾಳು ರುಚಿ ಇರುವಂಥದ್ದನ್ನೇ ತಯಾರು ಮಾಡಿಬಿಟ್ಟರು.

ಒಂದು ಸಂಜೆ ಹುರಿಗಾಳಿನವನ ಬಳಿ ಹೋಗಿ, ಹುರಿಗಾಳು ಸ್ವಲ್ಪ ಕೊಂಡು 'ಈ ಹುರಿಗಾಳು ಆ ಅಂಗಡಿಯ ಹುರಿಗಾಳಿನ ಹಾಗೇ ಇದೆ' ಎಂದರು. ವ್ಯಾಪಾರಿಯ ಕಿವಿ ನೆಟ್ಟಗಾಗಿ, 'ಯಾವ ಅಂಗಡಿಯದು? ಎಲ್ಲಿದೆ? ಇದರ ಹಾಗೆ ಇರಲು ಸಾಧ್ಯವೇ ಇಲ್ಲ' ಎಂದ.

'ಬೇಕಾದರೆ ತಿಂದು ನೋಡಪ್ಪಾ. ನಾನ್ಯಾಕೆ ಸುಳ್ಳು ಹೇಳ್ತೀನಿ?' ಎಂದು ಮೇಡಂ ತಾನು ಮಾಡಿದ್ದ ಹುರಿಗಾಳನ್ನು ಸ್ವಲ್ಪ ಡಬ್ಬಿಯಿಂದ ತೆಗೆದುಕೊಟ್ಟರು. ವ್ಯಾಪಾರಿ ತಿಂದು ನೋಡಿದ. ಏನೂ ವ್ಯತ್ಯಾಸ ಇರಲಿಲ್ಲ. ತನ್ನ ಹುರಿಗಾಳಿನಂತೆಯೇ ರುಚಿ ಇದೆ. ಸ್ವಲ್ಪ ಬಣ್ಣ ವ್ಯತ್ಯಾಸ ಅಷ್ಟೇ. 'ಯಾವ ಅಂಗಡೀಲಿ ಮಾರ್‍ತಾರೆ ಹೇಳಿ' ಎಂದ. 'ಎಷ್ಟು ಬೆಲೆ?' ಎಂದ. 'ನಿನಗಿಂತ ಕಡಿಮೆ ಬೆಲೆ' ಎಂದರು. 'ಮೇಡಂ, ಎಲ್ಲಿ ಅಂಗಡಿ ಹೇಳಿ, ಹೇಳಿ' ಎಂದು ಬಲವಂತ ಮಾಡತೊಡಗಿದ. ಆಗ ಮೇಡಂ ಹೇಳಿದರು, 'ಅಂಗಡೀನೂ ಇಲ್ಲ, ಪಂಗಡೀನೂ ಇಲ್ಲ. ನಾನೇ ಮಾಡಿದ್ದು. ಕೆಲವು ತಿಂಗಳುಗಳ ಕೆಳಗೆ ಮೇಡಂ ಒಬ್ಬರಿಗೆ ಸವಾಲು ಹಾಕಿದ್ದೀಯಲ್ಲಾ ಈ ರೀತಿ ರುಚಿಯ ಹುರಿಗಾಳು ತಯಾರಿಸಲು ಯಾರಿಗೂ ಶಕ್ಯವಿಲ್ಲ ಅಂತ. ಅದಕ್ಕೇ ನಾನೇ ತಯಾರಿಸಿ ತಂದಿದ್ದೇನೆ' ಎಂದರು.

ವ್ಯಾಪಾರಿ ಕೈ ಮುಗಿದು 'ತಪ್ಪಾಯ್ತು ಹೇಳಿದ್ದು. ಯಾರಿಗೂ ಈ ಗುಟ್ಟನ್ನು ಹೇಳಬೇಡಿ' ಎಂದು ಗೋಗರೆದ. ಮೇಡಂ ನಕ್ಕು, 'ನಾನ್ಯಾಕೆ ನಿನ್ನ ಹೊಟ್ಟೆಯ ಮೇಲೆ ಹೊಡೀಲಿ. ನಿನ್ನ ಸವಾಲಿಗೆ ಉತ್ತರ ಕೊಟ್ಟೆ ಅಷ್ಟೇ' ಎಂದರು.

ಆ ಮೇಡಂ ತಯಾರಿಸಿದ ಹುರಿಗಾಳು ರುಚಿಯನ್ನೂ ಆ ಡಬ್ಬಾ ವ್ಯಾಪಾರಿಯ ಹುರಿಗಾಳನ್ನೂ ನಾನು ಸವಿದಿದ್ದೇನೆ. ಬಹುಶಃ ಇಬ್ಬರೂ ತಯಾರಿಸಿದ ಒಂದೇ ರುಚಿಯ ಹುರಿಗಾಳನ್ನು ತಿಂದವನು ನಾನೊಬ್ಬನೇ ಎಂದು ಕಾಣುತ್ತದೆ.

ಆ ಅಂಗಡಿಯವನ ಬಳಿ ಹುರಿಗಾಳು ತೆಗೆದುಕೊಂಡು ಹೋಗುವ ಹಿಂದಿನ ದಿನ ಯಾವುದೋ ವಿಚಾರಕ್ಕಾಗಿ ಮೇಡಂ ಮನೆಗೆ ಹೋಗಿದ್ದೆ, ಬರಹೇಳಿದ್ದರು. ಆಗ ಎರಡು ಬಟ್ಟಲಲ್ಲಿ ಈ ಎರಡು ಬಗೆಯ ಹುರಿಗಾಳನ್ನು ಮುಂದಿಟ್ಟು 'ಇವೆರಡರ ರುಚಿ ವ್ಯತ್ಯಾಸವನ್ನು ಮುಚ್ಚುಮರೆಯಿಲ್ಲದೆ ಹೇಳಬೇಕು. ಆಮೇಲೆ ಕಾಫಿ ಕೊಡ್ತೀನಿ' ಎಂದರು. ನಾನು ಎರಡನ್ನೂ ತಿಂದು 'ಒಂದೇ ತರಹದ ಹುರಿಗಾಳನ್ನು ಎರಡು ಬಟ್ಟಲಿಗೆ ಹಾಕಿ ಕೊಟ್ಟಿದ್ದೀರಿ. ಎರಡೂ ಒಂದೇ ರುಚಿ' ಎಂದಿದ್ದೆ.

❑

೯೦. ಸರ್ವಜ್ಞಮೂರ್ತಿ ಹೇಗಿದ್ದ ಗೊತ್ತೆ?

ದೇವುಡು ಅವರು ಉತ್ತಂಗಿ ಚೆನ್ನಪ್ಪನವರನ್ನು ಸತ್ಕರಿಸಿದ ರೀತಿ ತಿಳಿಸುವ ಸಂದರ್ಭದಲ್ಲಿ ಮೋಹನ್‌ದೇವ ಆಳ್ವ ಅವರು ಹೇಳಿದ ಸಂಗತಿಯೊಂದು ನೆನಪಾಗುತ್ತದೆ. (ಹೇಳಿದ್ದು ೨೬-೧೨-೨೦೨೨ರಲ್ಲಿ ಮಕ್ಕಳಕೂಟದಲ್ಲಿ) ಆಳ್ವಾ ಅವರಿಗೆ ಚೆನ್ನಪ್ಪನವರು ಚೆನ್ನಾಗಿ ಪರಿಚಯ ಇತ್ತು. ಆಳ್ವಾ ಅವರು ಚೆನ್ನಪ್ಪನವರನ್ನು ಕೇಳಿದ ಪ್ರಶ್ನೆ ಹೀಗಿತ್ತು: 'ನೀವು ಸರ್ವಜ್ಞನನ್ನು ಚೆನ್ನಾಗಿ ಓದಿಕೊಂಡವರು. ನಿಮ್ಮ ದೃಷ್ಟಿಯಲ್ಲಿ ಹೇಗಿದ್ದ?'

ಅದಕ್ಕೆ ಚೆನ್ನಪ್ಪನವರು 'ಒಂದು ವಾರ ಬಿಟ್ಟು ಬಾ ಹೇಳ್ತೀನಿ' ಎಂದರು. ಒಂದು ವಾರದ ನಂತರ ಆಳ್ವಾ ಚೆನ್ನಪ್ಪನವರನ್ನು ಕಂಡರು. ಬೋಳಿಸಿದ ಮಂಡೆ, ಕೌಪೀನ, ಕೈಯಲ್ಲಿ ಕಪ್ಪರ ಹಿಡಿದು ಮರಗಾಲು ಚಪ್ಪಲು ಮೆಟ್ಟಿ ನಿಂತಿದ್ದರು. 'ಸರ್ವಜ್ಞ ಹೀಗಿದ್ದ' ಎಂದರು. 'ನಿಮಗೆ ಹೇಗೆ ತಿಳಿಯಿತು?' ಎಂದು ಕೇಳಿದರು. ಅದಕ್ಕೆ ಉತ್ತಂಗಿ, 'ಅವನ ವಚನಗಳನ್ನು ನೆನೆದು ಹೇಗಿರಬೇಕೆಂದು ಧ್ಯಾನ ಮಾಡಿದಾಗ ಹೊಳೆದ ಮೂರ್ತಿಯಾಕಾರ ಇದು' ಎಂದರು. ಆ ವೇಷವನ್ನು ಆಧರಿಸಿಯೇ ನೆ.ಲ.ನರೇಂದ್ರಬಾಬು 'ಸರ್ವಜ್ಞ' ಚಿತ್ರದಲ್ಲಿ ಸರ್ವಜ್ಞನನ್ನು ರೂಪಿಸಿದರು.

❑

೬೧. ನಂಗೊತ್ತಿಲ್ಲವೇ ಅನಕೃ ಅವರ ಮನೆ?

ಸಾಮಾನ್ಯ ಗೃಹಿಣಿ, ಸರ್ಕಾರಿ ನೌಕರ, ಖಾಸಗಿ ಉದ್ಯೋಗಿ, ಅಂಗಡಿಯ ಸೇವಕ, ವಿದ್ಯಾರ್ಥಿಗಳು, ಅಧಿಕಾರಿ ಯುವಕರು ನಾನಾ ಕ್ಷೇತ್ರದ ಮಧ್ಯಮ ವರ್ಗದವರಲ್ಲಿ ಅನಕೃ ಅತ್ಯಂತ ಜನಪ್ರಿಯ ಸಾಹಿತಿ ಆಗಿದ್ದರು.

ಕನ್ನಡ ಕಾದಂಬರಿ ಇತಿಹಾಸದಲ್ಲಿ ಅತಿ ಹೆಚ್ಚಿನ ಓದುಗರನ್ನು, ಸಾವಿರಾರು ಮಂದಿ ಓದುಗರನ್ನು ಮೊದಲ ಬಾರಿ ಗಳಿಸಿದವರು ಗಳಗನಾಥರು ಅನಂತರ ಅನಕೃ ಅವರೇ. ಈಗ ಎಸ್.ಎಲ್. ಭೈರಪ್ಪನವರು ಜನಪ್ರಿಯ ಕಾದಂಬರಿಕಾರರು. ಸಾವಿರ ಮೀರಿ ಲಕ್ಷದಷ್ಟು ಓದುಗರನ್ನು ಗಳಿಸಿದ್ದಾರೆ. ಅನಕೃ ಮೊದಲ ಬಾರಿಗೆ ಕಾದಂಬರಿ ಸಾರ್ವಭೌಮ ಎನಿಸಿದವರು. ಜನಸಾಮಾನ್ಯರಲ್ಲಿ ಅವರ ಜನಪ್ರಿಯತೆ ಎಷ್ಟರಮಟ್ಟಿಗೆ ಎಂದರೆ ನನ್ನದೇ ಆದ ಎರಡು ನಿದರ್ಶನಗಳನ್ನು ಹೇಳುತ್ತಿರುವೆ.

ನಾನು ದಯಾನಂದ ಕಾಲೇಜಿನಲ್ಲಿ ಅಧ್ಯಾಪಕನಾದಾಗ ಸಂಜೆ ಕಾಲೇಜಿನ ವಿದ್ಯಾರ್ಥಿನಿ ಒಬ್ಬಳು, ಅನಕೃ ವಿಚಾರದ ಬಗ್ಗೆ ಕ್ಲಾಸಿನಲ್ಲಿ ನಾನು ಪ್ರಸ್ತಾಪ ಮಾಡಿದಾಗ, ಆಕೆ ಕ್ಲಾಸಿನಾಚೆ ಬಂದಾಗ ಹೇಳಿದಳು. 'ನಮ್ಮಮ್ಮನಿಗೆ ಅನಕೃ ಕಾದಂಬರಿಗಳೆಂದರೆ ಪಂಚ ಪ್ರಾಣ. ಅವರದು ಹೊಸ ಕಾದಂಬರಿ ಬಂದ ಕೂಡಲೇ ಕೊಂಡು ತಂದು ಒಂದೇ ಗುಕ್ಕಿಗೆ ಓದಿಬಿಡುತ್ತಾರೆ. ಅಷ್ಟೇ ಅಲ್ಲ, ಆ ಕಾದಂಬರಿಯಲ್ಲಿ ಯಾವುದಾದರೂ ತಿಂಡಿಯ ಹೆಸರು ಬಂದಿದ್ದರೆ (ಕೋಡುಬಳೆ, ಚಕ್ಕುಲಿ, ನಿಪ್ಪಟ್ಟುಗಳನ್ನು) ಅಂದು ಮನೇಲಿ ಮಾಡಿ ಹಂಚುತ್ತಾರೆ' ಎಂದಳು ಆ ವಿದ್ಯಾರ್ಥಿನಿ.

ಅನಕೃ ಅವರ ಪ್ರಸಿದ್ಧ ಕಾದಂಬರಿಯನ್ನು ನಟಸಾರ್ವಭೌಮ, ಕನ್ನಡ ಸಂಸ್ಕೃತಿ ಇಲಾಖೆ ಮರು ಮುದ್ರಣ ಮಾಡಿತು. ಗೌರವ ಪ್ರತಿಗಳನ್ನು ತೆಗೆದುಕೊಂಡು ಹೋಗಲು ಅನಕೃ ಪುತ್ರ ಗೌತಮ್ ಅವರಿಗೆ ಪತ್ರ ಬರೆಯಿತು. ಪ್ರತಿಗಳನ್ನು ತರಲು ಕನ್ನಡ ಸಂಸ್ಕೃತಿ ಇಲಾಖೆ ಕಚೇರಿಗೆ ನಾನು, ಗೌತಮ್, ಕೆ.ಟಿ. ಚಂದ್ರಶೇಖರ್ ಮೂವರೂ ರಿಕ್ಷಾದಲ್ಲಿ ಹೋದೆವು.

ಗೌರವ ಪ್ರತಿಗಳ ಬಂಡಲ್ ತೆಗೆದುಕೊಂಡು ರಿಕ್ಷಾ ಮಾಡಿದೆವು. ಆಗ ಕನ್ನಡ ಸಂಸ್ಕೃತಿ ಇಲಾಖೆ, ನೃಪತುಂಗ ರಸ್ತೆಯಲ್ಲಿ ಸರ್ಕಾರಿ ವಿಜ್ಞಾನ ಕಾಲೇಜಿನ ಪಕ್ಕದ ಕಟ್ಟಡದಲ್ಲಿತ್ತು. ಅಲ್ಲಿ ರಸ್ತೆಗೆ ಬಂದು ರಿಕ್ಷಾ ಹಿಡಿದು ಪ್ರತಿಗಳನ್ನಿಟ್ಟುಕೊಂಡು ನಾವು ಮೂವರೂ ರಿಕ್ಷಾದಲ್ಲಿ ಕುಳಿತೆವು. ಕೆ.ಟಿ. ಡ್ರೈವರ್‌ಗೆ 'ಮಿನರ್ವ ಸರ್ಕಲ್ ಬಳಿ ಅನಕೃ ಅವರ ಮನೆಗೆ ಹೋಗಬೇಕು. ನೀನು ಸರ್ಕಲ್ಲಿಗೆ ಹೋಗು ಅಲ್ಲಿ ಮನೆಗೆ ದಾರಿ ತೋರಿಸ್ತೇವೆ' ಎಂದರು. ಆಗ ಆ ಡ್ರೈವರ್ 'ಅಲ್ಲಾ ಸ್ವಾಮಿ ಅನಕೃ ಮನೆ ಎಲ್ಲಿ ಅಂತ ನನಗೆ ನೀವು ಹೇಳಬೇಕಾ? ಬಿಡಿ ನಾನು ಕರ್‍ಕೊಂಡು ಹೋಗ್ತಿನಿ ನೀವ್ ಸುಮ್ಮನೆ ಕುಳಿತುಕೊಳ್ಳಿ' ಎಂದನು. ನಾವು ಮೂರೂ ಜನ ಮುಖಮುಖ ನೋಡಿಕೊಂಡು ಮುಗುಳ್ನಗೆ ನಕ್ಕೆವು. ಸರಿಯಾಗಿ ಅನಕೃ ಅವರ ಮನೆಯ (ಈಗಿಲ್ಲ ಆ ಮನೆ,

ಕಣ್ಮರೆಯಾಗಿದೆ) ಬಾಗಿಲಿಗೆ ಸರಿಯಾಗಿ ತಂದು ನಿಲ್ಲಿಸಿದ. ನಾನು ಬೆಕ್ಕಸಬೆರಗಾಗಿ 'ನಿನಗೆ ಹೇಗಪ್ಪಾ ಗೊತ್ತು ಇವರ ಮನೆ?' ಎಂದಾಗ 'ಯಾಕೆ ಸಾರ್? ನೀವು ಅನಕೃ ಕಾದಂಬರಿಗಳನ್ನು ಓದಿಲ್ಲವೇ?' ಎಂದ ನಾನು ತೆಪ್ಪಗಾದೆ. ಆಮೇಲೆ ರಿಕ್ಷಾ ಹಣ ಕೊಡಲು ಹೋದಾಗ 'ಬೇಡಿ ಬೇಡಿ, ನನಗೆ ಆ ಕಾದಂಬರಿಯ ಪ್ರತಿಯೊಂದನ್ನು ಕೊಡಿ ದಯವಿಟ್ಟು' ಎಂದ. ಗೌತಮರು ನಟಸಾರ್ವಭೌಮ ಕಾದಂಬರಿಯ ೩ ಭಾಗಗಳ ಒಂದೊಂದು ಪ್ರತಿಯನ್ನು ಕೊಟ್ಟರು. ನಾನು, 'ಇವರು ಅನಕೃ ಅವರ ಮಗ ಗೌತಮ್' ಎಂದ ತಕ್ಷಣ 'ಈವತ್ತು ನಿಮ್ಮನ್ನು ನೋಡಿದ್ದು ನಿಮ್ಮ ತಂದೆಯ ಪುಸ್ತಕವನ್ನು ನಿಮ್ಮ ಕೈಯಿಂದ ಪಡೆಯುತ್ತಿರುವುದೇ ನನ್ನ ಜೀವನದಲ್ಲೇ ಪರಮ ಸೌಭಾಗ್ಯದ ದಿನ' ಎಂದು ಹೇಳಿ ಹೊರಟುಹೋದೆ.

"ಏನಪ್ಪಾ ರಾಯರ ಜನಪ್ರಿಯತೆ! ಇನ್ನೂ ಎಲ್ಲೆಲ್ಲಿ ಹೇಗೆ ಹೇಗೆ ಇದೆಯೋ!' ಎಂದ ಕೆ.ಟಿ. ಅವರಿಗೆ ಬಲು ಖುಷಿಯಾಗಿತ್ತು. ಇತ್ತೀಚೆಗೆ ಕಡಲೆಪುರಿ ವ್ಯಾಪಾರಿಯಿಂದ ಉದ್ಯಮಿಯ ವರೆಗೆ ಎಲ್ಲರೂ ತಂತಮ್ಮ ಅನುಭವಗಳನ್ನು ಭೈರಪ್ಪನವರ ಕೃತಿಗಳು ತಮ್ಮ ಮೇಲೆ ಬೀರಿದ ಪ್ರಭಾವವನ್ನು ಕುರಿತು ಹಂಚಿಕೊಂಡಿರುವುದನ್ನು ವಿಜಯಾ ಹರನ್ (ಆಕಾಶವಾಣಿ ನಿವೃತ್ತ ನಿರ್ದೇಶಕಿ) ಸಂಪಾದಿಸಿದ 'ನಂಭೈರಪ್ಪನವರು' ಪುಸ್ತಕ ಕಂಡಾಗ 'ನಮ್ಮ ಅನಕೃ ಬಗ್ಗೆ ಈ ರೀತಿ ಪುಸ್ತಕ ಯಾರಾದರೂ ತರಬಾರದೇ!' ಅನ್ನಿಸಿದೆ ನನಗೆ.

❑

೯೨. ನಾನೇ ವಿದ್ವಾಂಸನಲ್ಲ, ನೀನೆಂಥ ವಿದ್ವಾಂಸ?

ಧಾರವಾಡದಲ್ಲಿ ೧೯೬೪-೬೫ರ ಸುಮಾರಿನಲ್ಲಿ ನಾನು ಎರಡನೇ ವರ್ಷ ಎಂ.ಎ.ನಲ್ಲಿದ್ದಾಗ. ಹುಬ್ಬಳ್ಳಿ ಮೆಡಿಕಲ್ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವಕ್ಕೆ ಅನಕೃ ಅತಿಥಿಗಳಾಗಿ ಬಂದಿದ್ದರು. ನಾನು ಆ ವೇಳೆಗೆ ಹಲವಾರು ಅಂತರಕಾಲೇಜು ಕನ್ನಡ ಚರ್ಚಾಕೂಟಗಳಲ್ಲಿ ಭಾಗವಹಿಸಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಕ್ಕೆ ಪರ್ಯಾಯ ಪಾರಿತೋಷಕ ಬಹುಮಾನಗಳನ್ನು ತಂದಿದ್ದೆ. ಶಿರಸಿಯ ಹೆಗಡೆ ಎಂಬ ಗಣಿತಶಾಸ್ತ್ರದ ವಿದ್ಯಾರ್ಥಿ ನನ್ನೊಂದಿಗೆ ಕನ್ನಡ ಚರ್ಚಾಕೂಟದಲ್ಲಿ ಭಾಗವಹಿಸುತ್ತಿದ್ದ. ಹುಬ್ಬಳ್ಳಿಯ ಮೆಡಿಕಲ್ ಕಾಲೇಜಿನ ಅಂತರಕಾಲೇಜು ಕನ್ನಡ ಚರ್ಚಾಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದೆ. ಬಹುಮಾನ ಪಡೆಯಲು ವೇದಿಕೆಯ ಪಕ್ಕದ ಬಾಗಿಲ ಬಳಿ ನಿಂತಿದ್ದೆ. ವೇದಿಕೆಯಲ್ಲಿ ಉಪಕುಲಪತಿ ಪಾವಟೆ, ಆ ಕಾಲೇಜಿನ ಪ್ರಿನ್ಸಿಪಾಲರೂ, ನನ್ನ ಕನ್ನಡ ವಿಭಾಗದ ಹಿರಿಯರೂ ಆದ ಆರ್.ಸಿ. ಹಿರೇಮಠರು, ಅನಕೃ ಮತ್ತಿತರರು ಕುಳಿತಿದ್ದರು. ಬಾಗಿಲ ಬಳಿ ಬಹುಮಾನ ಸ್ವೀಕರಿಸಲು ವಿದ್ಯಾರ್ಥಿಯಾಗಿ ನಿಂತಿದ್ದ ನನ್ನನ್ನು ನೋಡಿ, 'ಬನ್ನಿ ಬನ್ನಿ' ಎಂದು ವೇದಿಕೆಗೆ ಸಂಜ್ಞೆ ಮಾಡಿ ಕರೆದು ಅಲ್ಲಿ ಖಾಲಿ ಇದ್ದ ಕುರ್ಚಿಯಲ್ಲಿ ಕೂಡಿಸಿದರು. 'ಹೇಗಿದ್ದೀರಿ?' ಎಂದರು. ಚೆನ್ನಾಗಿದ್ದೀನಿ ಎಂದೆ. ಬಹುಮಾನ ಕೊಟ್ಟವರು ಅನಕೃ ಅವರೇ. ಅವರಿಂದ ವೇದಿಕೆಯಿಂದಲೇ ಎದ್ದು ಬಂದು ಬಹುಮಾನ ಸ್ವೀಕರಿಸಿದೆ. ವೇದಿಕೆಯ ಮೇಲಿದ್ದಾಗ ಪಕ್ಕದಲ್ಲಿದ್ದ ಆರ್.ಸಿ. ಹಿರೇಮಠರಿಗೆ 'ಇವರು ನನ್ನ ಮಿತ್ರರು. ಕನ್ನಡವನ್ನು ಚೆನ್ನಾಗಿ ಓದಿಕೊಂಡಿದ್ದಾರೆ. ಕನ್ನಡಾಭಿಮಾನಿ, ಕಿರಿಯ ವಿದ್ವಾಂಸರು' ಎಂದು ಪರಿಚಯಿಸಿದರು. ನನಗೆ ಆಕಾಶ-ಪಾತಾಳ ಒಂದಾಯಿತು. ಆರ್.ಸಿ. ಹಿರೇಮಠರು 'ಹೌದಾ?' ಎಂದು ನನ್ನತ್ತ ನೋಡಿದರು. ಸಮಾರಂಭ ಮುಗಿದ ಮೇಲೆ ಅನಕೃ ಜತೆಯಲ್ಲಿ ಮಾತನಾಡುತ್ತಾ, 'ನಾನು ಆರ್.ಸಿ. ಹಿರೇಮಠರ ವಿದ್ಯಾರ್ಥಿ, ನನ್ನನ್ನು ವಿದ್ವಾಂಸ ಎಂದೆಲ್ಲಾ ಪರಿಚಯಿಸಿದಿರಿ, ಇವನು ವಿದ್ವಾಂಸನಾ? ಎಂದು ನನ್ನ ಫೇಲು ಮಾಡಿದರೆ ಏನು ಗತಿ! ನಿಮ್ಮಿಂದ ಸೀಟು ಸಿಕ್ಕಿತು. ಆದರೆ ಈಗ ನಿಮ್ಮ ಮಾತಿನಿಂದ ಹೀಗಾದರೆ ಹೇಗೆ!' ಎಂದು ಆತಂಕ ವ್ಯಕ್ತಪಡಿಸಿದೆ. ಅವರು, 'ನಾನೇ ವಿದ್ವಾಂಸನಲ್ಲ, ನೀವೆಂಥ ವಿದ್ವಾಂಸರು ಅದು ನನಗೆ ಗೊತ್ತು. ಆದರೆ ಹಿರೇಮಠರಿಗೆ ನಿಮ್ಮ ಬಗ್ಗೆ ಗೌರವ ಬರಲಿ, ಈತ ಸಾಮಾನ್ಯ ವಿದ್ಯಾರ್ಥಿಯಲ್ಲ ಅಂತ ತಿಳಿಯಲಿ, ನಿಮಗೆ ಅನುಕೂಲವಾದೀತು ಎಂದು ಹೇಳಿದೆ ಅಷ್ಟೆ' ಎಂದರು. ಸಭೆಯಲ್ಲಿದ್ದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೆಲ್ಲ ನನ್ನನ್ನು ಅಚ್ಚರಿಯಿಂದ ನೋಡಿದ್ದರು. ವಿಶ್ವವಿದ್ಯಾಲಯದಲ್ಲಿ ನಾನು ಕಣ್ಮಣಿಯಾದೆ. ಜಿ. ಅಶ್ವತ್ಥನಾರಾಯಣ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಎಂದು ನನ್ನ ಆಪ್ತಮಿತ್ರ ಬರೆದ ಕಾಗದ ನನ್ನ ಕೈ ಸೇರಿತ್ತು ಅಷ್ಟು ಜನಪ್ರಿಯನಾದೆ. ಅನಕೃ ಪ್ರಭಾವಕ್ಕೆ ಇದೊಂದು ನಿದರ್ಶನ ಅಷ್ಟೆ.

ಅನಕೃ ಜತೆ ನಾನು, ಎಂ.ವಿ. ಸುಬ್ಬರಾವ್ ಕಳೆದ ಕಾಲದ ಅನೇಕ ಪ್ರಸಂಗಗಳು ಈಗ ಸ್ಮೃತಿಪಟಲದಿಂದ ಮರೆಯಾಗಿವೆ.

೯೩. ಮದುವೆಯ ವರ ಅವನಲ್ಲ

ಎಷ್ಟೋ ಸಲ ಅಚಾತುರ್ಯಗಳು ಹಾಸ್ಯವನ್ನು ಸೃಷ್ಟಿಸುತ್ತವೆ. ಒಮ್ಮೆ ಅನಕೃ ಅವರ ಮನೆಯಲ್ಲಿ ನಾನು, ಎಂವಿ ಸುಬ್ಬರಾವ್ ನಾಡಿಗೇರ್, ಎಂ. ರಾಮಮೂರ್ತಿ ಮೊದಲಾದವರೊಂದಿಗೆ ಕುಳಿತಿದ್ದೆವು. ಆಗ ಸಂಜೆ ೬ ಗಂಟೆಯ ಸಮಯ. ಅನಕೃ ಅವರು ನನ್ನ ಅಪ್ತ ಗೆಳೆಯನ ಮಗನ ಮದುವೆ ಇದೆ ಸಜ್ಜನರಾವ್ ಸರ್ಕಲ್‌ನಲ್ಲಿ, ತಪ್ಪಿಸಿಕೊಳ್ಳುವಂತಿಲ್ಲ ಎಂದಿದ್ದಾನೆ 'ಬನ್ನಿ ಹೋಗೋಣ' ಎಂದರು. ನಾನು 'ನಾವೆಲ್ಲ ಏಕೆ, ನೀವು ಹೋಗಿಬನ್ನಿ' ಎಂದೆ. 'ನಮಗೆ ಅವರ ಪರಿಚಯವೂ ಇಲ್ಲ. ಆಹ್ವಾನವೂ ಇಲ್ಲ' ಎಂದೆ. ಅದಕ್ಕೆ ಅಲ್ಲೇ ಇದ್ದ ನಾಡಿಗೇರ್ ಕೂಡಲೆ 'ಯಾರ್ರೀ ನಿಮಗೆ ಹೇಳಿದವರು ಹಾಗಂತ? ಮದುವೆಯ ಆಹ್ವಾನ ಪತ್ರಿಕೇಲಿ ಏನಿರುತ್ತೆ ಓದಿಲ್ಲವೇ? ಸಕುಟುಂಬ ಸಪರಿವಾರವಾಗಿ ದಯಮಾಡಿಸಬೇಕು ಎಂದು. ಸಕುಟುಂಬದ ವಿಚಾರ ರಾಯರಿಗೆ ಬಿಟ್ಟ ವಿಚಾರ. ಸಪರಿವಾರ ಯಾರು, ನಾವಲ್ಲವೇ? ನಮ್ಮನ್ನು ಬಿಟ್ಟು ಅವರು ಹೇಗೆ ಹೋಗ್ತಾರೆ? ಅವರ ಮಿತ್ರರು ಪರಿವಾರ ಎಂದು ನಮ್ಮನ್ನೆಲ್ಲಾ ಆಹ್ವಾನಿಸಿಲ್ಲವೇ?' ಎಂದರು. ಎಲ್ಲರೂ ನಕ್ಕು 'ಸರಿ ನಡೆಯಿರಿ' ಎಂದು ಹೊರಟೆವು. ಅನಕೃ ಅವರ ಗೃಹಲಕ್ಷ್ಮಿ ಕೈ ಹೊತ್ತಿಗೆ ಕಾದಂಬರಿಯಿಂದ ಪ್ರಾರಂಭವಾದ ಕಾದಂಬರಿ ವಾಚನಗಳ ಕಾಲ ಅದು. ಜನಪ್ರಿಯತೆಯಲ್ಲಿ ಸರ್ಕ್ಯುಲೇಟಿಂಗ್ ಲೈಬ್ರರಿಗಳಲ್ಲಿ ಅನಕೃ ಕಾದಂಬರಿಗಳ ಓದುಗರ ಸಂಖ್ಯೆ ಉತ್ತುಂಗಕ್ಕೇರಿತ್ತು.

ಸಜ್ಜನರಾವ್ ಕಲ್ಯಾಣ ಮಂಟಪಕ್ಕೆ ನಾವೆಲ್ಲ ಕಾಲಿಟ್ಟಾಗ ಅನಕೃ ಅವರನ್ನು ಕಂಡ ಕೂಡಲೆ ಅಲ್ಲಿದ್ದವರೆಲ್ಲ ಅದ್ಧೂರಿಯಾಗಿ ಸಡಗರ ಸಂಭ್ರಮಗಳಿಂದ ಸ್ವಾಗತಿಸಿದರು. ಹೂವಿನೊಡನೆ ನಾರು ಸ್ವರ್ಗಕ್ಕೆ ಎಂಬಂತೆ ನಮಗೆಲ್ಲ ಸ್ವಾಗತ ಸಿಕ್ಕಿತು. ಊಟಕ್ಕೇಳಿಸಿದರು. ಬೇಡವೆಂದರೂ ಬಿಡಲಿಲ್ಲ. ಎಲ್ಲರೂ ಉಂಡು, ಈಚೆಗೆ ಬಂದೆವು. ಅನಕೃ ವೇದಿಕೆಯ ಮೇಲೆ ವಿರಾಜಮಾನರಾದ ನವದಂಪತಿಗಳ ಬಳಿ ಹೋಗಿ ವರನ ಕೈಗೆ ತಾವು ತಂದಿದ್ದ ಕಾದಂಬರಿಯೊಂದನ್ನು ಉಡುಗೊರೆಯಾಗಿ ಇತ್ತರು. ಎಲ್ಲರೊಡನೆ ಗ್ರೂಪ್ ಫೋಟೋ ಆಯಿತು. ಹೊರ ಬಂದೆವು. ಅನಕೃ ಸ್ವಲ್ಪ ಪೆಚ್ಚಾಗಿದ್ದರು. 'ಯಾಕೆ ರಾಯರೇ, ಸಪ್ಪಗಿದ್ದೀರಿ? ಮದುವೆ ಮನೆ ಊಟ ಸರಿಯಿಲ್ಲವೇ?' ಎಂದು ಗೇಲಿ ಮಾಡಿದರು. ಆಗ ಅನಕೃ, 'ಅಚಾತುರ್ಯ ಆಗಿಹೋಯಿತು. ನಾನು ಹೋಗಬೇಕಾಗಿದ್ದ ಮದುವೆ ಇದಲ್ಲ. ಮದುವೆಯ ಹುಡುಗನ್ನ ನೋಡಿದ ಮೇಲೆ ತಿಳಿಯಿತು. ನನ್ನ ಸ್ನೇಹಿತರ ಮಗನಲ್ಲ ಅಂತ' ಎಂದರು. ಆಗ ನಾನು 'ಸಾರ್, ಎದುರುಗಡೆ ವೆಂಕಟರಮಣಸ್ವಾಮಿ ದೇವಸ್ಥಾನದ ಕಲ್ಯಾಣ ಮಂಟಪ ಇದೆ, ಅದಿರಬೇಕು' ಎಂದೆ. 'ನಡೆಯಿರಿ ನೋಡೋಣ. ಅವನ ಮಗನ ಮದುವೇನ ತಪ್ಪಿಸಿಕೊಳ್ಳುವಹಾಗಿಲ್ಲ. ಸಜ್ಜನರಾವ್ ಸರ್ಕಲ್ ಚೌಲ್ಟ್ರೀಲಿ ಮದುವೆ ಅಂತ ಹೇಳಿದ್ದು ಚೆನ್ನಾಗಿ ನೆನಪಿದೆ" ಎಂದರು. ನಾಡಿಗೇರ್ 'ಅಲ್ಲ ರಾಯರೇ, ಅದೇ ರಸ್ತೆ, ಅದೇ ಮನೆ ಅಂತ ಗೆಳೆಯರ ಮನೆಗೆ ಹೋಗೋ ಬದಲು ಗೆಳೆಯನ ಪಕ್ಕದ್ಮನೆಗೆ ಊಟಕ್ಕೆ ಹೋದಂತಾಯ್ತು' ಎಂದರು.

ಆ ಛತ್ರಕ್ಕೆ ಹೋದಾಗ ಅನಕೃ ಅವರ ಮಿತ್ರರೇ ಎದುರುಗೊಂಡು ಆತ್ಮೀಯ ಸ್ವಾಗತ ನೀಡಿದರು. ಎಲ್ಲರನ್ನು ಊಟಕ್ಕೇಳಿಸಿದರು. 'ಈ ಮುಂಚೆ ಒಂದು ಮದುವೆ ಮುಗಿಸಿಕೊಂಡು ಉಂಡು ಬಂದಿದ್ದೇವೆ' ಎಂದಾಗ ಎಲ್ಲರೂ ಮುಖ ಮುಖ ನೋಡಿಕೊಂಡೆವು. ಆ ಮಿತ್ರರು ಬಿಡಲಿಲ್ಲ. 'ಸೇರಿದಷ್ಟು ಊಟ ಮಾಡಿ, ಊಟ ಮಾಡಿಕೊಂಡೇ ಹೋಗಬೇಕು' ಎಂದು ಬಲಾತ್ಕರಿಸಿದರು. 'ನೀವೆಲ್ಲಾ ಹಾಗೆಯೇ ಹೋಗುವ ಹಾಗಿಲ್ಲ' ಎಂದು ಒತ್ತಾಯಿಸಿದರು. 'ನಮ್ಮೆಲ್ಲರ ಪರ ಇವರನ್ನು ಊಟಕ್ಕೆ ಕರೆದುಕೊಂಡು ಹೋಗಿ' ಎಂದು ರಾಮಮೂರ್ತಿಯ ಕಡೆ ನಾಡಿಗೇರ್ ಕೈತೋರಿಸಿದರು. ಅದಕ್ಕೆ ಅವರು ನಾಡಿಗೇರ್ ಕಡೆ ಕೈ ತೋರಿಸಿ 'ಇವರನ್ನು ಕರೆದುಕೊಂಡು ಹೋಗಿ ಬೇಗ ಊಟ ಮುಗಿಸುತ್ತಾರೆ' ಎಂದರು. ಎಲ್ಲರೂ ಘೊಳ್ಳೆಂದು ನಕ್ಕೆವು.

❑

೯೪. ಅನಕೃ ನನ್ನ ಕೈಗೆ ಕಟ್ಟಿದ ಗಡಿಯಾರ 'ಎನಿಕಾರ್'

ನಾನು ದಯಾನಂದ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ಸಂಜೆ ಕಾಲೇಜಿನಲ್ಲೂ ಬೆಳಗಿನ ಕಾಲೇಜಿನಲ್ಲೂ ಎರಡೂ ಕಡೆ ಅಧ್ಯಾಪಕನಾಗಿದ್ದೆ. ಒಂದು ಕಡೆ ಪೂರ್ಣೋದ್ಯೋಗಿ (ಪುಲ್ ಟೈಂ), ಅರೆ ಉದ್ಯೋಗಿ (ಪಾರ್ಟ್ ಟೈಂ) ಇನ್ನೊಂದು ಕಡೆ. ಲೆಕ್ಕಕ್ಕೆ ಮಾತ್ರ ಸಂಬಳ ಎಲ್ಲಾ ಸೇರಿ ಒಂದೇ ಅದು ಗೊತ್ತಾದ ಮೊತ್ತ, ಪ್ರಿನ್ಸಿಪಾಲರಿಗೂ ಒಂದೇ, ನನಗೂ ಒಂದೇ. ಅವರೂ ನನ್ನೊಂದಿಗೆ ಅರ್ಥಶಾಸ್ತ್ರ ಎಂ.ಎ. ಓದಿದವರು ಸೆಂಟ್ರಲ್ ಕಾಲೇಜಿನಲ್ಲಿ. ಇಲ್ಲಿ ನಾನು ಕನ್ನಡ ಪ್ರಾಧ್ಯಾಪಕ, ಅವರು ಪ್ರಾಂಶುಪಾಲರು. ಈಗ ಅವರು ವಿಶ್ವವಿದ್ಯಾನಿಲಯವೊಂದರ ವೈಸ್ ಚಾನ್ಸಲರ್.

ಕಾಲೇಜಿನಲ್ಲಿ ವರ್ಷದ ಕೊನೆಯ ಸಮಾರಂಭಕ್ಕೆ ಅನಕೃ ಅವರನ್ನು ಕರೆಸಬೇಕು ಎಂದು ಸಂಜೆಕಾಲೇಜಿನ ವಿದ್ಯಾರ್ಥಿಗಳು ಅಪೇಕ್ಷೆ ಪಟ್ಟರು. 'ನಿಮಗೆ ಪರಿಚಯವಿದೆಯಲ್ಲ ಕರೆಯಿರಿ ಸಾರ್' ಎಂದರು. 'ಅದಕ್ಕೇನಂತೆ ಅಗತ್ಯವಾಗಿ ಆಗಲಿ' ಎಂದು ಹೇಳಿ, 'ನಮ್ಮ ಸಂಜೆ ಕಾಲೇಜಿಗೆ ಬರಬೇಕು ಸೋಮವಾರದ ದಿನ' ಎಂದು ಹೇಳಿದೆ. 'ಖಂಡಿತ ಬರುತ್ತೇನೆ ನಿಮ್ಮ ಪಾಠ ಕೇಳಲು' ಎಂದರು. 'ನೀವು ಬರುವ ದಿನ ನನ್ನ ಪಾಠವಿಲ್ಲ, ನಿಮ್ಮ ಪಾಠ ನಮಗೆಲ್ಲ' ಎಂದೆ. ಸಮಾರಂಭದ ದಿನ ಬಂದರು.

ಆಗ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೆನೆಟ್ ಸದಸ್ಯರೊಬ್ಬರು ಗಲಾಟೆ ಮಾಡಿದ ಬಗ್ಗೆ ಅನಕೃ ಪ್ರಸ್ತಾಪಿಸಿ, 'ಶಿಕ್ಷಣರಂಗದಲ್ಲಿ ಮೌಲ್ಯಗಳು ಕುಸಿಯುತ್ತಿರುವಾಗ ನೀವು ಗುರುಭಕ್ತಿ, ಸಾಹಿತ್ಯಾರಾಧನೆಯಿಂದ ಸಮಾರಂಭ ನಡೆಸುತ್ತಿರುವುದು ಸಂತೋಷದ ಸಂಗತಿ' ಎಂದು ಹೇಳಿ ಹತ್ತಾರು ಸಂಗತಿಗಳ ಸ್ಫೂರ್ತಿಯುತ ಭಾಷಣ ಮಾಡಿದರು. ವಿದ್ಯಾರ್ಥಿಗಳಿಗೆಲ್ಲ ಭಾರಿ ಸಂತೋಷವಾಯಿತು, ಅವರ ವಾಗ್ಝರಿ–ವಿಚಾರಧಾರೆ ಕೇಳಿ ಆನಂದಿಸಿದರು.

ಅನಂತರ ಗುರುಕಾಣಿಕೆ ಎಂದು ವಿದ್ಯಾರ್ಥಿಗಳು ಒಂದು ಎನಿಕಾರ್ ವಾಚ್ ನನಗೆ ತಿಳಿಯದಂತೆ ತಂದಿದ್ದರು. ಉಳಿದ ಅಧ್ಯಾಪಕರಿಗೆ ಹಲವಾರು ಉಡುಗೊರೆಗಳನ್ನು ತಂದಿದ್ದರು. ಅನಕೃ ಅವರ ಕೈಲಿ ಆ ಕೈ ಗಡಿಯಾರವನ್ನು ಕಂಕಣದಂತೆ ನನಗೆ ತೊಡಿಸಿದರು. 'ನಮ್ಮ ಮೇಷ್ಟ್ರ ಕೈಲಿ ಗಡಿಯಾರ ಇರಲಿಲ್ಲ. ನಾವು ಗಮನಿಸಿದ್ದೆವು. ಆದರೆ ವೇಳೆಗೆ ಸರಿಯಾಗಿ ಚಳಿಯಾಗಲಿ, ಮಳೆಯಾಗಲಿ ತರಗತಿಗೆ ಸಕಾಲಕ್ಕೆ ಹಾಜರಾಗುತ್ತಿದ್ದರು. ಕೈಗಡಿಯಾರವಿದ್ದ ನಾವು ಲೇಟಾಗಿ ಬರುತ್ತಿದ್ದೆವು' ಎಂದು ವಿದ್ಯಾರ್ಥಿಗಳು ಹೇಳಿದಾಗ, ಅನಕೃ 'ಗಡಿಯಾರ ಬಂದರೂ ಅವರು ಸಕಾಲಕ್ಕೆ ತರಗತಿಗೆ ಬರುತ್ತಾರೆ ಹೆದರಬೇಡಿ' ಎಂದರು. ಎಲ್ಲೇ ಆಗಲಿ ಸಕಾಲಕ್ಕೆ ಹಾಜರಾಗಬೇಕು ಎಂಬುದನ್ನು ನೆನಪಿಸುವ ಎಚ್ಚರಿಕೆಯ ಗಂಟೆ. ಈ ಕೈಗಡಿಯಾರ ಅನಕೃ ಆಶೀರ್ವಾದದ ಕುರುಹು ಎಂದೆ. ಇಂದೂ ಎನಿಕಾರ್ ನನ್ನ ಬಳಿ ಇದೆ. ಈ ಗಡಿಯಾರ ಅನಕೃ ನೀಡಿದಮೇಲೆ ಇಂದಿನವರೆಗೂ ಯಾವ ಸಮಾರಂಭಕ್ಕೂ ತಡವಾಗಿ ಹೋಗಿಲ್ಲ.

೯೫. ಜಿ.ಪಿ.ರಾಜರತ್ನಂಗೆ ವಿದ್ಯಾರ್ಥಿಗಳು ಮಸಾಲೆ ದೋಸೆ ಕೊಡಿಸಿದ್ದು

ಜಿ.ಪಿ.ರಾಜರತ್ನಂ ನನಗೆ ಮಾಧ್ಯಮಿಕ ಶಾಲೆಯಲ್ಲಿ ನಾನು ಓದುತ್ತಿದ್ದ ಕಾಲದಿಂದಲೂ ಪರಿಚಯ. ಅವರ 'ಬಣ್ಣದ ತಗಡಿನ ತುತ್ತೂರಿ', 'ಕಡಲೆಪುರಿ' ಪದ್ಯಗಳನ್ನು ಓದಿ ಬೆಳೆದ ತಲೆಮಾರಿಗೆ ಸೇರಿದವನು ನಾನು. ಹೈಸ್ಕೂಲಿನಲ್ಲಿದ್ದಾಗ ಚಿಲ್ಲರೆ ಹಣ, ಅಜ್ಜಿ ತಿಂಡಿ ತರದಿದ್ದಾಗ ಪೆಪ್ಪರ್‌ಮಿಂಟ್ ತಗೋ ಅಂತ ಕೊಟ್ಟ ಕಾಸು, ಮದುವೆ ಮನೇಲಿ ಚೆಲ್ಲಾಡಿದ ತೂತು ಮೂರು ಕಾಸುಗಳು ಸಿಕ್ಕಾಗಲೆಲ್ಲ ಮೆಜೆಸ್ಟಿಕ್ ಬಳಿ ಪುಟ್‌ಪಾತ್ ಮೇಲೆ ಇಟ್ಟುಕೊಂಡಿದ್ದ ಹಳೇ ಪುಸ್ತಕಗಳಲ್ಲಿ ಮಕ್ಕಳ ಪುಸ್ತಕಗಳನ್ನು ಕೊಳ್ಳಲು ಹೋಗುತ್ತಿದ್ದೆ. ಆಗ ಅರು ಕಾಸು, ಮೂರು ಕಾಸು, ಒಂದಾಣೆ, ಎರಡಾಣೆ, ನಾಲ್ಕಾಣೆಗಳಿಗೂ ಹಳೇ ಪುಸ್ತಕಗಳು ಸಿಗುತ್ತಿದ್ದವು. ಈವತ್ತಿಗೂ ೧೯೫೩ರಲ್ಲಿ ೨೫ ಪೈಸೆಗೆ ಕೊಂಡ ಪುಸ್ತಕ ಇದೆ ನನ್ನ ಬಳಿ. ಆಗ ರಾಜರತ್ನಂ ಅವರು ಹಳೇ ಪುಸ್ತಕಗಳನ್ನು ಕೊಳ್ಳಲು ಮೆಜೆಸ್ಟಿಕ್ ಬಳೇಪೇಟೆಗಳಿಗೆ ಬರುತ್ತಿದ್ದರು. ಒಮ್ಮೆ ಎರಡಾಣೆ ಪುಸ್ತಕಕ್ಕೆ ನನ್ನ ಬಳಿ ಒಂದಾಣೆ ಇತ್ತು. 'ಒಂದಾಣೆ ಇಟ್ಟುಕೋ, ನಾಳೆ ಪುಸ್ತಕ ಕೊಡು ತೆಗೆದುಕೊಳ್ಳುತ್ತೇನೆ' ಎಂದೆ. ಆಗ ಜತೆಯಲ್ಲಿದ್ದ ರಾಜರತ್ನಂ 'ಸಿನಿಮಾ ನೋಡೋ ಹುಡುಗ ಪುಸ್ತಕ ಕೊಳ್ಳಲು ಬಂದಿದ್ದೀಯಾ. ಪುಸ್ತಕ ಬಿಟ್ಟರೆ ಮತ್ತೆ ಸಿಗೋಲ್ಲ. ಇನ್ನೊಬ್ಬ ಮೂರು ಆಣೆ ಕೊಟ್ಟರೆ ಕೊಟ್ಟುಬಿಡ್ತಾನೆ. ನಾನು ಒಂದು ಆಣೆ ಕೊಡ್ತೀನಿ, ನನಗೆ ಆಮೇಲೆ ಕೊಡುವಿಯಂತೆ, ಪುಸ್ತಕ ತಗೋ' ಅಂದ್ರು. ಹೀಗೆ ಪ್ರಾರಂಭವಾದುದು ನನ್ನ ರಾಜರತ್ನಂ ಪರಿಚಯ.

ಅನಂತರ ಸೆಂಟ್ರಲ್ ಕಾಲೇಜಿನಲ್ಲಿ ಸಮಾಜಶಾಸ್ತ್ರ ಎಂ.ಎ. ಮಾಡುತ್ತಿದ್ದಾಗ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗೌರವ ಕಾರ್ಯದರ್ಶಿ ಆದಾಗ, ಸಾಯಿಬಾಬಾ ಭಕ್ತರ ಮನೆಗಳಲ್ಲಿ ಬಾಬಾ ಬಗ್ಗೆ ಉಪನ್ಯಾಸ ಮಾಡುತ್ತಿದ್ದಾಗ ಜಿ.ಪಿ.ರಾಜರತ್ನಂ ಅವರ ಪರಿಚಯ ನಿಕಟವಾಯಿತು. ರಾಜರತ್ನಂ ಅವರ ಹವ್ಯಾಸ ಸ್ವಭಾವ, ಪಾಠವೈಖರಿ, ಭಾಷಣಸಿದ್ಧತಾ ರೀತಿ, ಸಮಯೋಚಿತ ಮಾತುಕಥೆ, ಶಿಸ್ತು ಮೊದಲಾದ ವಿಚಾರಗಳ ಬಗ್ಗೆ ಮೊಕ್ತಾ ಅನೇಕ ಸಂಗತಿಗಳು ತಿಳಿದುಬಂದವು.

ಅವರ ಅನೇಕ ಹವ್ಯಾಸಗಳ ಬಗ್ಗೆ ದೋಸೆ ತಿನ್ನುವುದು ಒಂದು. ಅದರಲ್ಲೂ ಮಸಾಲೆದೋಸೆ ಅವರಿಗೆ ಪ್ರಿಯವಾದ ಭಕ್ಷ್ಯವಾಗಿತ್ತು. ೧೮ನೇ ಕ್ರಾಸ್ ಬಳಿ ಇದ್ದ ಕನ್ನಡ ಸಾಹಿತಿ ಸೂರ್ಯನಾರಾಯಣ ಚಡಗರ ದೇವಿಭವನ್ ದೋಸೆ, ಬಳೇಪೇಟೆಯ ಮಲಬಾರ್ ಲಾಡ್ಜ್, ವಿದ್ಯಾರ್ಥಿಭವನ, ಕೆಂಪೇಗೌಡ ಟಾಕೀಸ್ (ಈಗಿಲ್ಲ) ಬಳಿಯ ಎನ್.ಎಮ್.ಸಿ. ಹೋಟೆಲ್ ಅವರ ಪ್ರಿಯ ದೋಸೆತಾಣಗಳಾಗಿದ್ದವು. ಈ ಹೋಟೆಲುಗಳ ಮುಂದೆ ಹಾದು ಹೋಗುವಾಗಲೆಲ್ಲ ಒಳಗೆ ಇಣುಕು ಹಾಕಿ ಮಸಾಲೆ ದೋಸೆ ಸ್ವಾಹಾ ಮಾಡುವುದು ರೂಢಿ.

ಆಗ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಆನರ್ಸ್ ತರಗತಿಗಳು ನಡೆಯುತ್ತಿದ್ದವು. ಆಗ ದೋಸೆಗೆ ಹೆಸರಾದ ಎನ್.ಎಮ್.ಸಿ.ಗೆ (ನಿಯೋ ಮೈಸೂರು ಕೆಫೆ) ವಿದ್ಯಾರ್ಥಿಗಳು ಲಗ್ಗೆ ಇಡುತ್ತಿದ್ದರು.

ಒಮ್ಮೆ ನಾನು ನನ್ನ ಮಿತ್ರರೊಡನೆ ಕಾಫಿ ಕುಡಿಯಲು ಹೋಟೆಲಿನ ಬಲಭಾಗದ ಕೊಠಡಿಯಲ್ಲಿ ಕುಳಿತಿದ್ದೆವು. ಆ ಕಡೆ ಮೂಲೆಯಲ್ಲಿ ೩–೪ ವಿದ್ಯಾರ್ಥಿಗಳು ಕುಳಿತಿದ್ದರು. ರಾಜರತ್ನಂ ಆ ಮೂಲೆಯಲ್ಲೇ ಕುಳಿತು ದೋಸೆ ತಿನ್ನುವ ಪದ್ಧತಿ. ಅಲ್ಲಿಗೆ ಬಂದ ಜಿ.ಪಿ.ರಾಜರತ್ನಂಗೆ ಅವರ ತರಗತಿಯ ಆ ವಿದ್ಯಾರ್ಥಿಗಳು, 'ಬನ್ನಿ ಸಾರ್! ದೋಸೆ ಕೊಡಿಸ್ತೀವಿ ಈವತ್ತು ನಾವು' ಎಂದರು. 'ಆಗಲಪ್ಪ, ಸಂತೋಷ' ಎಂದು ಮಾಣಿಯನ್ನು ಕರೆದು 'ಇವರಿಗೆಷ್ಟು ಬೇಕೋ ಕೊಡು. ನನಗೆರಡು ಸ್ಪೆಷಲ್ ಮಸಾಲೆ ತಾ' ಅಂದರು. ಆರು ದೋಸೆ ಬಂದಿತು. ಅವರು ನಾಲ್ವರಿಗೆ ನಾಲ್ಕು, ಇವರಿಗೆರಡು. ದೋಸೆ ತಿನ್ನುತ್ತಾ ತಿನ್ನುತ್ತಾ ವಿದ್ಯಾರ್ಥಿಗಳು ಮುಖ ಮುಖ ನೋಡುತ್ತಿದ್ದರು. ಅವರಲ್ಲಿ ಅಷ್ಟು ಹಣ ಇರಲಿಲ್ಲ. ಇಬ್ಬರು ದೋಸೆ ತಿನ್ನಲು ಇಬ್ಬರು ಕಾಫಿ ಕುಡಿಯಲು ಬಂದಿದ್ದರು. ದೋಸೆ ಆಯಿತು, ಕಾಫಿ ಆಯಿತು. ಮಾಣಿ ಬಿಲ್ ತಂದಿಟ್ಟ. ಹುಡುಗರ ಮುಖ ಬಿಳಿಚಿಕೊಂಡಿತು ಬಿಲ್ ಮೊತ್ತ ನೋಡಿ. ಆಗ ರಾಜರತ್ನಂ 'ಆ ಬಿಲ್ಲನ್ನು ಇಲ್ಲಿ ತಾ. ಅಲ್ಲಿ ಕೊಡಬೇಡ' ಎಂದರು. ವಿದ್ಯಾರ್ಥಿಗಳಿಗೆ ಜೀವ ಬಂದಂತಾಯಿತು. ಜಿ.ಪಿ.ರಾಜರತ್ನಂ ಆ ವಿದ್ಯಾರ್ಥಿಗಳಿಗೆ 'ನಿಮ್ಮಲ್ಲಿ ಮೇಷ್ಟ್ರಿಗೆ ದೋಸೆ ಕೊಡಿಸೋ ಅಷ್ಟು ಹಣ ಜೇಬಲ್ಲಿ ಇಲ್ಲ ಅಂತ ನಂಗೊತ್ತು. ಯೋಚಿಸಬೇಡಿ. ನಾನು ನಿಮ್ಮ ಮೇಷ್ಟ್ರು. ವಿದ್ಯಾರ್ಥಿಗಳ ಬಂಡವಾಳ ತಿಳಿದ ಮೇಷ್ಟ್ರು. ತಿಳೀತೇ!' ಎಂದರು ನಗುನಗುತ್ತಾ. 'ಬನ್ನಿ ಕ್ಲಾಸಿಗೆ ಹೋಗೋಣ' ಎಂದರು.

ಎದುರಿಗೆ ಕುಳಿತ ಕಾಫಿ ಕುಡೀತಾ ಕುಳಿತಿದ್ದ ನನಗೂ ನನ್ನ ಮಿತ್ರರಿಗೂ ನಗು ಬಂತು. ನಮ್ಮ ಮಿತ್ರರೊಬ್ಬರು 'ರಾಜರತ್ನಂ ಪಾಠ ಹೇಳೋದರಲ್ಲಿ, ದೋಸೆ ತಿನ್ನೋದರಲ್ಲಿ ಗಟ್ಟಿಗರು ಅಂತ ತಿಳಿದಿದ್ದೆ. ವಿದ್ಯಾರ್ಥಿಗಳ ಯೋಗ್ಯತೆ ಅಳೆಯೋದರಲ್ಲೂ ಗಟ್ಟಿಗರಪ್ಪಾ' ಎಂದರು. 'ಇನ್ನೂ ಅವರ ಬಗ್ಗೆ ತಿಳಿದುಕೊಳ್ಳೋದು ಬೇಕಾದಷ್ಟಿದೆ' ಎಂದೆ ನಾನು.

ನಾನು ಮರೆಯಲಾಗದ ಜಿ.ಪಿ.ರಾಜರತ್ನಂ ಪ್ರಸಂಗಗಳಲ್ಲಿ ಇದೂ ಒಂದು. ಇಂದು ಜಿ.ಪಿ.ರಾಜರತ್ನಂ ಇಲ್ಲ. ಆ ವಿದ್ಯಾರ್ಥಿಗಳು ಎಲ್ಲಿದ್ದಾರೋ ತಿಳಿದಿಲ್ಲ. ಎನ್.ಎಮ್.ಸಿ. ಇಲ್ಲ. ಅಲ್ಲಿ ಬೇರೆ ಕಟ್ಟಡ ಹೋಟೆಲ್ ಬಂದಿದೆ. ಹಿಂದಿನ ತಲೆಮಾರಿನ ಕಥೆಗಳಾಗಲೀ, ಅಲ್ಲಿದ್ದ ಕೆಂಪೇಗೌಡ ಟಾಕೀಸೂ ಅಲ್ಲಿಲ್ಲ. ಕಾಲಾಯ ತಸ್ಮೈ ನಮಃ!

❑

೯೬. ನೀನು ಬರೆದಿದ್ದು ಕಥೆಯೋ, ಪ್ರಬಂಧವೋ?

ಹೊ.ರಾ.ಸತ್ಯನಾರಾಯಣರು ಕನ್ನಡ ಜನರಿಗೆ ಕನ್ನಡಕ್ಕೆ ಕನ್ನಡ ಸಾಹಿತಿಗಳಿಗೆ ಸದ್ದಿಲ್ಲದೆ ಹಲವಾರು ಬಗೆಯಲ್ಲಿ ಸೇವೆ ಸಲ್ಲಿಸಿದ ನಿಸ್ವಾರ್ಥ ಸಾಹಿತ್ಯ ಪರಿಚಾರಕರು, ನನ್ನ ಹಲವಾರು ದಶಕದ ಆಪ್ತಮಿತ್ರರು. ಇತ್ತೀಚೆಗೆ ಹೋದ ತಿಂಗಳು ವಿಧಿವಶರಾದರು. ನಿಸಾರ್ ಅಹಮದ್‌ರ ಮೊದಲ ಕವನವಾಚನಕ್ಕೆ ಅವಕಾಶ ನೀಡಿ ಪ್ರೋತ್ಸಾಹಿಸಿದವರು, ಸುಮತೀಂದ್ರ ನಾಡಿಗ್, ನಾಗಲಕ್ಷ್ಮಿ-ಹರಿಹರೇಶ್ವರನ್ ಮೊದಲಾದ ಸಾಹಿತಿಗಳನ್ನು ಪ್ರೋತ್ಸಾಹಿಸಿದವರು ಹೊರಾಸ. ವಿಚಾರವಾಹಿನಿ ಎಂಬ ಸಂಸ್ಥೆಯನ್ನು ಕಟ್ಟಿ ಪ್ರತಿ ಭಾನುವಾರ ತಮ್ಮ ಮನೆಯ ಪುಟ್ಟ ಕೊಠಡಿಯಲ್ಲಿ (ಚಾಮರಾಜಪೇಟೆ ೩ನೇ ರಸ್ತೆಯಲ್ಲಿ) ಸಾಹಿತ್ಯ ಗೋಷ್ಠಿ ನಡೆಸಿ ಕಿರಿಯರು ಬರಹಗಳನ್ನು ಓದಲು ಅವಕಾಶ ಕೊಟ್ಟು ಪ್ರೋತ್ಸಾಹ ಕೊಟ್ಟ ವ್ಯಕ್ತಿ ಹೊರಾಸ ಅವರು. ಬೇಂದ್ರೆ, ಕೆಎಸ್‌ನ, ವಿಸೀ ಮೊದಲಾದವರನ್ನು ಕರೆಸಿ ಆ ಪುಟ್ಟ ಕೊಠಡಿಯಲ್ಲೇ ಉಪನ್ಯಾಸ ಏರ್ಪಡಿಸುತ್ತಿದ್ದವರು. ಹೊರಾಸ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವಿಚಾರವಾಹಿನಿಯ ವಾರ್ಷಿಕ ಸಮಾರಂಭದ ಅಂಗವಾಗಿ ಸಾಹಿತ್ಯ ಗೋಷ್ಠಿಯನ್ನು ಏರ್ಪಡಿಸಿದ್ದರು. ಅನಕೃ ಅವರನ್ನು ಆ ಸಮಾರಂಭಕ್ಕೆ ಅಧ್ಯಕ್ಷತೆಗೆ ಕರೆಸಿದ್ದರು. ಆ ಸಭೆಯಲ್ಲಿ ನಿಸಾರ್ ಅಹಮದ್ ತಮ್ಮ ಮೊದಲ ಕವನ ಓದಿದರು. ನಾನು ಒಂದು ಪ್ರಬಂಧ ಓದಿದೆ. ಇತರ ಹಲವಾರು ಮಂದಿ ಪ್ರಬಂಧ, ಕವನಗಳನ್ನು ವಾಚಿಸಿದರು.

ನನ್ನ ಪ್ರಬಂಧವನ್ನು ಕುರಿತು ಅನಕೃ ಅವರು 'ಇವರು ಕತೆ ಬರೆಯಲು ಅಥವಾ ಪ್ರಬಂಧ ಬರೆಯಲು ಹೊರಟಿದ್ದಾರೋ ತಿಳಿಯದು' ಎಂದರು. ನಿಸಾರ್ ಅಹಮದ್‌ರ ಕವನ ವಾಚನ ಕೇಳಿ, 'ಪ್ರತಿಭಾವಂತ ಈತ ಎಂದು ಈ ಕವಿತೆಯಿಂದ ತಿಳಿಯುತ್ತೆ' ಎಂದು ಬೆನ್ನು ತಟ್ಟಿದರು. ಅವರ ಪಕ್ಕದಲ್ಲಿ ಕುಳಿತಿದ್ದ ನನಗೆ ಪರಿಷತ್ತಿನ ವೇದಿಕೆಯಲ್ಲಿ ಅನಕೃ ಪ್ರಥಮ ಪರಿಚಯ ಆಗಿದ್ದು. ಇದಕ್ಕೆ ಹೊರಾಸ ಕಾರಣಕರ್ತರು.

ಅನಂತರ ಅನಕೃ ಅವರ ಗೃಹಲಕ್ಷ್ಮಿ ಕಾದಂಬರಿಯಿಂದ ಅಗ್ಗದ ಕೈಹೊತ್ತಿಗೆ ಯುಗ ಆರಂಭವಾದಾಗ ಬಂದ ಕಾದಂಬರಿಗಳ ಆಕರ್ಷಣೆಯಿಂದ ವಿದ್ಯಾಗಣಪತಿ ಪುಸ್ತಕಭಂಡಾರ ಎಂಬ ಸರ್ಕ್ಯುಲೇಟಿಂಗ್ ಲೈಬ್ರರಿಯನ್ನು ಬಾಲಕೃಷ್ಣ ಮತ್ತು ಇತರ ಮಿತ್ರರ ಸಹಾಯದಿಂದ ಪ್ರಾರಂಭಿಸಿ ೨೦೦೦ಕ್ಕೂ ಹೆಚ್ಚು ಕಾದಂಬರಿಗಳನ್ನು ಓದುಗರಿಗೆ ಒದಗಿಸಿದೆವು. ಅದಕ್ಕಿಂತ ನಾವೇ ಅದನ್ನು ಬಿಡದೇ ಓದಿದೆವು. ನಮ್ಮ ಪುಸ್ತಕ ಭಂಡಾರದಲ್ಲಿ ಅನಕೃ ಪುಸ್ತಕಗಳಿಗೆ ಹೆಚ್ಚು ಬೇಡಿಕೆ ಇತ್ತು. ಅವೆನ್ಯೂ ರಸ್ತೆಯ ಸ್ಟ್ಯಾಂಡರ್ಡ್ ಬುಕ್ ಬಳಿ ಕ್ಯೂ ನಿಂತು ಅನಕೃ ಕಾದಂಬರಿಗಳನ್ನು ಲೈಬ್ರರಿಗೆ ಕೊಂಡು ತರುತ್ತಿದ್ದೆವು. ರಾತ್ರೋ ರಾತ್ರಿ ಓದಿಬಿಡುತ್ತಿದ್ದೆವು. ಹೀಗಾಗಿ ನಾನು ಅನಕೃ ಪರಮಭಕ್ತನಾದೆ. ಅವರ ಸಾಹಿತ್ಯ ಪ್ರೇಮಿಯಾದೆ.

❑

೯೭. ಚುನಾವಣೆಗಳು ಅಚ್ಚ ಸಾಹಿತಿಗಳಿಗಲ್ಲ

ಅನಕೃ ಕೃತಿಗಳಿಗೆ ಆಕರ್ಷಿತನಾಗಿ, ಅವರ ಭಾಷಣಗಳಿಗೆ ವಿವಶನಾಗಿ ಅವರ ಆರಾಧಕನಾಗಿದ್ದಾಗ ಕನ್ನಡ ಸಾಹಿತ್ಯ ಕುಟೀರದ ಕನ್ನಡದ ಹಿರಿಯ ಸಾಹಿತಿಗಳನ್ನು ಆಲೂರರಿಂದ ಹಿಡಿದು ಹುಯಿಲಗೋಳ ನಾರಾಯಣರಾಯರವರೆಗೆ ಸನ್ಮಾನಿಸಿರುವ ಕನ್ನಡ ಚಳುವಳಿಯ ಬೆನ್ನೆಲುಬಾಗಿ ದುಡಿದ ಎಂ.ವಿ.ಸುಬ್ಬರಾವ್ ಮತ್ತು ನಾವು, ಶಿವಮೂರ್ತಿಶಾಸ್ತ್ರಿಗಳು. ಪರಿಷತ್ತಿನ ಅಧ್ಯಕ್ಷರಾದಾಗ ಸಾಹಿತ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಜಂಟಿಯಾಗಿ ಭಾಗವಹಿಸಿದೆವು. ಎಂ.ವಿ.ಸುಬ್ಬರಾವ್‌ಗೆ ಎಂ.ರಾಮಮೂರ್ತಿ–ಅನಕೃ ನಿಕಟ ಬಾಂಧವ್ಯವಿತ್ತು. ಅನಕೃ ಅವರನ್ನು ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಶಿವಮೂರ್ತಿಶಾಸ್ತ್ರಿಗಳ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿದವರೇ ನಾನು ಮತ್ತು ಸುಬ್ಬರಾವ್ ಎಂದರೆ ತಪ್ಪಾಗದು. ಚುನಾವಣೆಯಲ್ಲಿ ಅನಕೃ ಸೋತರು. ಕಾರಣ ಸ್ವಾಭಿಮಾನಿ ಅನಕೃ ಯಾರನ್ನೂ ಓಟು ಕೊಡಿ ಎಂದು ಕೇಳಲಿಲ್ಲ. 'ಅವರು ಒಂದು ಮಾತು ಹೇಳಲಿ, ನಾವಷ್ಟೇ ಅಲ್ಲ, ಉಳಿದವರ ಓಟುಗಳನ್ನೆಲ್ಲ ಹಾಕಿಸುತ್ತೇವೆ' ಎಂದರು ಅಭಿಮಾನಿ ಸದಸ್ಯರು. ಹೀಗಾಗಿ ಅನಕೃ ಕೆಲವೇ ಓಟುಗಳಿಂದ ಸೋತರು. ದೇವುಡು ಸಹ ಸ್ವಾಭಿಮಾನಿಗಳು. ಅವರು ಸಾರ್ವಜನಿಕ ಚುನಾವಣೆಗೆ ನಿಂತವರು ಓಟು ಕೊಡಿ ಎಂದು ಬೇಡಲಿಲ್ಲ. ಪರಿಣಾಮ ಸೋತರು. ಸ್ವಾಭಿಮಾನ, ಆತ್ಮಗೌರವ, ನೈತಿಕ ಸ್ಥೈರ್ಯ, ನಿರ್ಭೀತ ವಾಕ್‌ಮನ ಇರುವ ಸಾಹಿತಿಗಳಿಗೆ ಪ್ರಜಾಪ್ರಭುತ್ವದ ಚುನಾವಣೆಗಳು ಹೇಳಿ ಮಾಡಿಸಿದ್ದಲ್ಲ. ದೇವುಡು ಸ್ಥಳೀಯ ಚುನಾವಣೆಯಲ್ಲಿ ಸೋತಿದ್ದು, ಅಡಿಗರು ಚುನಾವಣೆಯಲ್ಲಿ ಸೋತಿದ್ದು ಎಲ್ಲರಿಗೂ ತಿಳಿದ ವಿಷಯ.

❑

೯೮. ವೀರ ಕನ್ನಡಿಗನ ಕನ್ನಡಾಭಿಮಾನ

ಅನಕೃ ಚಳುವಳಿಯಲ್ಲಿ ಪಾಲ್ಗೊಳ್ಳಲು ಶಾಂತವೇರಿ ಗೋಪಾಲಗೌಡರ ಶಿಷ್ಯರಾದ ಕೋಣಂದೂರು ಲಿಂಗಪ್ಪನವರು ಮೂಲ ಕಾರಣ ಎಂದು ನನ್ನ ಅನಿಸಿಕೆ. ಏಕೆಂದರೆ ಸಮಾಜವಾದಿ ಪಕ್ಷದ ಗೋಪಾಲಗೌಡರಿಗೆ ಬೆಂಬಲವಾಗಿ ಯುವಜನ ಪಕ್ಷವೊಂದನ್ನು ಕಟ್ಟಲು ಕೋಣಂದೂರು ಲಿಂಗಪ್ಪನವರು ಶ್ರಮಿಸುತ್ತಿದ್ದರು. ಈ ಸಂದರ್ಭದಲ್ಲಿ ಕನ್ನಡದ ಏಳಿಗೆಗಾಗಿ, ಕನ್ನಡದ ಸಮಸ್ಯೆಗಳ ಪರಿಹಾರ ಮಾರ್ಗಗಳಿಗಾಗಿ, ಕನ್ನಡ ಸಂಘ ಸಂಸ್ಥೆಗಳ ಸಮಾವೇಶವೊಂದನ್ನು ಸಮಾಜವಾದಿ ಪಕ್ಷದ ಆಶ್ರಯದಲ್ಲಿ ಪ್ರಭಾತ್ ಟಾಕೀಸ್(ಈಗಿಲ್ಲ) ಬಳಿಯಿದ್ದ ಚೇಂಬರ್ ಆಫ್ ಕಾಮರ್ಸ್ ಕಟ್ಟಡದಲ್ಲಿ ಕರೆಯಲಾಯಿತು. ಅದಕ್ಕೆ ಅನಕೃ ಅಧ್ಯಕ್ಷರಾದರು. ಚರ್ಚೆಗಳಾದ ಮೇಲೆ ಎಲ್ಲ ಕನ್ನಡ ಸಂಸ್ಥೆಗಳ ಒಕ್ಕೂಟ ಸ್ಥಾಪನೆ ಆಗಬೇಕು ಎಂದಾಗ ಅನಕೃ ಅವರೇ ಅದಕ್ಕೆ ನಾಯಕರಾಗಬೇಕೆಂದು ಸಭೆ ಒಕ್ಕೊರಲಿಂದ ಘೋಷಿಸಿತು. ಆಮೇಲೆ ರಾಮಮೂರ್ತಿ, ಎಂ.ವಿ.ಸುಬ್ಬರಾವ್ ಮತ್ತೆ ಇತರರೊಡನೆ ಕನ್ನಡ ಚಳುವಳಿಗೆ ಅನಕೃ ನೇತಾರರು, ಅಧ್ಯಕ್ಷರಾದುದು ಈಗ ಇತಿಹಾಸವಾಗಿದೆ.

ಕೋಣಂದೂರು ಲಿಂಗಪ್ಪನವರ ಕನ್ನಡಾಭಿಮಾನ ಅನುಕರಣೀಯವಾದುದು. ಅವರು ಶಾಸಕರಾದಾಗ ಅವರ ಬಳಿ ಕೆಲಸಕಾರ್ಯಗಳಿಗಾಗಿ ಅರ್ಜಿಗಳನ್ನು ತಂದಾಗ, ಅದು ಇಂಗ್ಲಿಷ್‌ನಲ್ಲಿದ್ದರೆ 'ಮೊದಲು ಕನ್ನಡದಲ್ಲಿ ಅರ್ಜಿ ಕೊಡು, ಆಮೇಲೆ ಉಳಿದ ವಿಚಾರ' ಎನ್ನುತ್ತಿದ್ದರು. 'ಕನ್ನಡದಲ್ಲಿ ಬರೆದುಕೊಡುವವರು ಇಲ್ಲ' ಎಂದಾಗ 'ಅಲ್ಲಿಯೇ ಮರದಡಿಯ ಬಳಿ ಕುಳಿತಿದ್ದಾರಲ್ಲ, ಅವರ ಕೈಲಿ ಬರೆಸಿಕೊಂಡು ಬಾ' ಎನ್ನುತ್ತಿದ್ದರು. ತಾವು ಶಾಸಕರ ಭವನದಲ್ಲಿ ಇದ್ದಾಗಲೆಲ್ಲ ಇಂಗ್ಲಿಷಿನಲ್ಲಿರುವ ಅರ್ಜಿಗಳನ್ನು ಕನ್ನಡದಲ್ಲಿ ಉಚಿತವಾಗಿ ಬರೆದು ಕೊಡಲು ಒಬ್ಬ ಇಂಗ್ಲಿಷ್-ಕನ್ನಡ ಚೆನ್ನಾಗಿ ಬಲ್ಲ ನಿರುದ್ಯೋಗಿ ಎಂ.ಎ. ಮಾಡಿದ ಕನ್ನಡಿಗನೊಬ್ಬನನ್ನು ಸಂಬಳ ಕೊಟ್ಟು ನೇಮಿಸಿಕೊಂಡಿದ್ದರು. ಇಂಥ ಶಾಸಕರು ಎಷ್ಟು ಮಂದಿ ಇದ್ದಾರೆ?!

❑

೯೯. ಯಾವ ಅಕ್ಕಿಕಾಳ ಮೇಲೆ ಯಾರ ಹೆಸರು ಬರೆದಿರುತ್ತೋ ಗೊತ್ತಿಲ್ಲ!

ಅನ್ನದ ಋಣ, ನೀರಿನ ಋಣ, ಸ್ಥಳದ ಋಣ ನಮ್ಮ ಹಣೆಯಲ್ಲಿ ಬರೆದಷ್ಟೇ. ಅದನ್ನು ಯಾರೂ ತಪ್ಪಿಸಲಾರರು ಎಂದು ನನ್ನ ಮೆಚ್ಚಿನ ಮೇಷ್ಟ್ರು ಪಂಡಿತ ಪದ್ಮನಾಭಶರ್ಮರು ಹೇಳುತ್ತಿದ್ದರು. ಆ ಮಾತು ಅನುಭವಕ್ಕೆ ಬಂದ ಒಂದು ಪ್ರಸಂಗ ಇದು.

ನಾನು ಹಾಸನದ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ಸಾವಿರಾರು ಸಂಪ್ರದಾಯ ಹಾಡುಗಳ ಸರದಾರಣಿ ಆಗಿದ್ದ ವಾಗೀಶ್ವರಿ ಶಾಸ್ತ್ರಿ ಅವರ ಮಗ ನಾಗರಾಜ ನನ್ನ ಸಹೋದ್ಯೋಗಿಯಾಗಿದ್ದ. ಅವನ ತಂಗಿಯರು ಕಾಲೇಜಿನಲ್ಲಿ ನನ್ನ ಕನ್ನಡ ವಿದ್ಯಾರ್ಥಿನಿಯರು ಆಗಿದ್ದರು. ಅವರ ಮನೆಯ ಸಾಲಿನ ತುದಿಯಲ್ಲಿ ನಾನು ರೂಮು ಮಾಡಿಕೊಂಡು, ಹೋಟೆಲಿನಲ್ಲಿ ಊಟ ಮಾಡುತ್ತಿದ್ದೆ. ವಾರಕ್ಕೊಮ್ಮೆ ಬೆಂಗಳೂರಿಗೆ ಹೋಗಿಬರುತ್ತಿದ್ದೆ. ಒಮ್ಮೊಮ್ಮೆ ಕಾಲೇಜಿನಲ್ಲಿ ಶನಿವಾರ ಸಂಜೆಯ ವರೆಗೆ ಮೀಟಿಂಗ್ ಇದ್ದರೆ ಊರಿಗೆ ಹೋಗಲಾಗುತ್ತಿರಲಿಲ್ಲ. ಆಗ ವಾಗೀಶ್ವರಿ ಅವರು ಮನೆಗೆ ಊಟಕ್ಕೆ ಕರೆಯುತ್ತಿದ್ದರು. ಹಬ್ಬದ ದಿನಗಳಲ್ಲಿ ಅವರ ಮನೆಯ ಊಟ ತಪ್ಪುತ್ತಿರಲಿಲ್ಲ.

ಒಮ್ಮೆ ಒಂದು ಹಬ್ಬದ ದಿನ 'ಈ ದಿನ ನಮ್ಮಲ್ಲಿ ಎಲ್ಲರೂ ಒಟ್ಟಿಗೆ ಊಟ ಮಾಡಲು ನೀವು ಅತಿಥಿಯಾಗಿ ಆಗಮಿಸಬೇಕು' ಎಂದು ಆಹ್ವಾನಿಸಿದರು. 'ಇಂದು ನನ್ನ ಹುಟ್ಟುಹಬ್ಬ' ಎಂದ ನನ್ನ ಸಹೋದ್ಯೋಗಿ ನಾಗರಾಜ. ಸರಿ ಎಂದು ಒಪ್ಪಿಕೊಂಡೆ. ಆತ ಕಾಲೇಜಿಗೆ ರಜ ಹಾಕಿದ್ದ. ನಾನು ಮಧ್ಯಾಹ್ನದ ತರಗತಿಯನ್ನು ಬೆಳಿಗ್ಗೆ ತೆಗೆದುಕೊಂಡು, ಊಟಕ್ಕೆ ಹಾಜರಾದೆ.

ಅವರ ಮನೆ ರಸ್ತೆಯ ಮೂಲೆಯ ವಠಾರದಲ್ಲಿತ್ತು. ಆ ವಠಾರಕ್ಕೆ ಆ ಕಡೆಯ ರಸ್ತೆಯಿಂದ, ಈ ಕಡೆಯ ರಸ್ತೆಯಿಂದ ಪ್ರವೇಶ ದ್ವಾರಗಳಿದ್ದವು. ನಾನು ಅಲ್ಲಿಗೆ ತಲುಪುವ ವೇಳೆಗೆ ಎಲ್ಲರೂ ಎಲೆಯ ಮುಂದೆ ಕುಳಿತು ನನಗಾಗಿ ಕಾಯುತ್ತಿದ್ದರು. ಒಂದೆಲೆ ನನಗಾಗಿ ಖಾಲಿ ಇತ್ತು. ನಾನು ಬಂದವನೇ ವಠಾರದ ಆ ರಸ್ತೆಯ ಮೂಲೆಯಲ್ಲಿದ್ದ ನಲ್ಲಿಯಲ್ಲಿ ಕಾಲು ತೊಳೆದುಕೊಳ್ಳಲು ಹೋದೆ. ಅದೇ ಸಮಯದಲ್ಲಿ ಅವರ ಚಿಕ್ಕಪ್ಪ ಊರಿನಿಂದ ಈ ಕಡೆಯ ರಸ್ತೆಯ ಪ್ರವೇಶದ್ವಾರದಿಂದ ಮನೆಗೆ ಬಂದರು. ಕೂಡಲೆ ನಾಗರಾಜನ ತಂದೆ, 'ಒಳ್ಳೆಯ ಸಮಯಕ್ಕೆ ಬಂದೆ. ಸಂತೋಷ. ಊಟಕ್ಕೇಳು' ಎಂದು ಖಾಲಿ ಇದ್ದ ಎಲೆಗೆ ಕೂಡಿಸಿದರು. ಇವೆಲ್ಲಾ ಕೆಲವೇ ನಿಮಿಷಗಳಲ್ಲಿ ನಡೆದ ಘಟನೆ.

ನಾನು ಒಳಕ್ಕೆ ಬಂದಾಗ ಅವರ ಚಿಕ್ಕಪ್ಪ ಎಲೆಯ ಮುಂದೆ ಕುಳಿತಿದ್ದುದನ್ನು ನೋಡಿದೆ. ಅಲ್ಲಿ ಇನ್ನೊಂದು ಎಲೆ ಹಾಕಿ ಬಡಿಸಲು ಜಾಗ ಇರಲಿಲ್ಲ.

ಕೂಡಲೆ ನಾನು, 'ನನ್ನ ಸ್ನೇಹಿತ ಊರಿಂದ ಬಂದಿದ್ದಾನೆ. ನಾನು ಆಮೇಲೆ ಬರುತ್ತೇನೆ' ಎಂದು ಹೇಳಿ ತಕ್ಷಣ ಜಾಗ ಖಾಲಿ ಮಾಡಿದೆ. ಆಮೇಲೆ ಹೋಗಿ ಅವರ

ತಾಯಿಯ ಜೊತೆ ಊಟಕ್ಕೆ ಕುಳಿತೆ. ಮನೆಯವರೆಲ್ಲರ ಜೊತೆ ಊಟಕ್ಕೆ ಕೂಡುವ ಭಾಗ್ಯ ನನಗಿರಲಿಲ್ಲ, ಅವರ ಚಿಕ್ಕಪ್ಪನಿಗಿತ್ತು.

ಯಾವ ಅಕ್ಕಿಕಾಳಿನ ಮೇಲೆ ಯಾರ ಹೆಸರು ಬರೆದಿರುತ್ತೋ ಯಾರು ಬಲ್ಲರು! ಆಗ ನಮ್ಮ ಮೇಷ್ಟ್ರು ಪದ್ಮನಾಭಶರ್ಮರು ಹೈಸ್ಕೂಲಿನಲ್ಲಿ ಹೇಳಿದ ಹತ್ತಾರು ವರ್ಷಗಳ ಹಿಂದಿನ ಮಾತಾದ 'ಅನ್ನದ ಋಣ, ನೀರಿನ ಋಣ, ಸ್ಥಳದ ಋಣ ನಮ್ಮ ಹಣೆಯಲ್ಲಿ ಬರೆದಿದ್ದಷ್ಟೇ ಲಭ್ಯ' ಎಂಬ ಮಾತು ನೆನಪಾಯಿತು.

❑

೧೦೦. ನನ್ನ ಆ ಊರಿನ ಭಾಷಣವನ್ನೇ ಇಲ್ಲಿ ಮಾಡಿ

ಅನಕೃ ಕಿರಿಯರಿಗೆ ಕೊಡುತ್ತಿದ್ದ ಪ್ರೋತ್ಸಾಹದ ರೀತಿ ಬೇರೆಯದು. ನಾನು ಕಾಲೇಜು ವಿದ್ಯಾರ್ಥಿ ಆಗಿ ಚರ್ಚಾಕೂಟಗಳಲ್ಲಿ ಭಾಗವಹಿಸಿ, ಬಹುಮಾನಗಳನ್ನು ಪಡೆದಿದ್ದರೂ ಅನಕೃ ಸಭೆಗಳಲ್ಲಿ, ಕನ್ನಡ ಚಳುವಳಿ ಸಭೆಗಳಲ್ಲಿ ಮಾತನಾಡುವ ಧೈರ್ಯವಿರಲಿಲ್ಲ. ಆಸೆ ಇದ್ದರೂ, ಬೇರೆ ಬೇರೆ ಕಡೆ ಅವರೊಡನೆ ಸಮಾರಂಭಗಳಿಗೆ ಕನ್ನಡ ಚಳುವಳಿ ಸಭೆಗಳಿಗೆ ಹೋದಾಗ 'ನಿಮ್ಮ ಅಭಿಪ್ರಾಯ ತಿಳಿಸಿ' ಎಂದು ಉಳಿದ ಯುವಕರರಿಗೆ ಮಾತನಾಡಲು ಅವಕಾಶ ಕೊಡುತ್ತಿದ್ದರು. ವಿಜಯಪುರಕ್ಕೆ ಒಮ್ಮೆ ನಾನು, ಅನಕೃ, ರಾಮದೇವ್ (ಶಾಸಕ ಮಲ್ಲೇಶ್ವರಂ), ಎಂ.ರಾಮಮೂರ್ತಿ, ನಾಡಿಗೇರ್ ಹೋಗಿದ್ದೆವು. ಭಾರಿ ಹಾರವನ್ನು ಅನಕೃಗೆ ಹಾಕಲು ಬಂದಾಗ 'ಹಾರದ ಸೈಜಿಗೆ ತಕ್ಕಂತೆ ಆಸಾಮಿಯ ಸೈಜ್ ನೋಡಿ ಹಾಕಿ' ಎಂದು ರಾಮಮೂರ್ತಿಯ ಕಡೆ ಕೈ ತೋರಿಸಿದರು. ಆಗ ನಾಡಿಗೇರ್ 'ನೀವು ಸ್ವಾಮಿಗಳು ಇದ್ದ ಹಾಗೆ, ಮುಟ್ಟಿಬಿಡಿ. ಅವರಲ್ಲಿ ಯಾರಿಗಾದರೂ ಹಾಕಲಿ, ಅವರ ಕತ್ತು ಮುರಿಯಲಿ' ಎಂದರು. ಹಾರ ಭಾರಿಯಾಗಿತ್ತು. ಆಗ ರಾಮಮೂರ್ತಿ 'ಕತ್ತು ಮುರಿಯೋದು ನಿಮಗೆ, ನನಗಲ್ಲ' ಎಂದಾಗ 'ನನಗೆ ಕತ್ತು ಉಳುಕಿದೆ. ಹಾರ ಹಾಕಿದರೆ ಕತ್ತು ಸರಿ ಹೋಗುತ್ತೆ' ಎಂದರು. ಆಮೇಲೆ ಸಭೆಗೆ ಬಂದೆವು. ವೇದಿಕೆಯ ಮೇಲೆ ಮಾತಾಡಲು ಹೆಸರು ಹೇಳಿ ನನ್ನನ್ನು ತಕ್ಷಣ ಕರೆದಾಗ ನಾನೇನು ಮಾತಾಡಲಿ ಎಂದು ಗಲಿಬಿಲಿ ಆಯಿತು. ಆಗ ಪಕ್ಕದಲ್ಲಿ ಅನಕೃ ಕೂತಿದ್ದರು. 'ಯೋಚಿಸಬೇಡಿ, ನಾನು ಹಿಂದಿನ ಸಭೇಲಿ (ಬೆಂಗಳೂರಿನಲ್ಲಿ) ಮಾತಾಡಿದ್ದನ್ನು ಮಾತಾಡಿ. ಇಲ್ಲಿನವರಾರೂ ನನ್ನ ಮಾತು ಕೇಳಿಲ್ಲ' ಎಂದರು. ಹಾಗೆ ಮಾಡಿದೆ. ಧೈರ್ಯ ಬಂತು. ಆಮೇಲೆ ಸಭೆಗಳಿಗೆ ಹೋದಾಗ ತಯಾರಿ ಮಾಡಿಕೊಂಡು ಹೋಗುತ್ತಿದ್ದೆ. ಅನಕೃ ಯುವಕರನ್ನು ಪ್ರೋತ್ಸಾಹಿಸುತ್ತಿದ್ದ ರೀತಿಗೆ ಇದೊಂದು ನಿದರ್ಶನ ಅಷ್ಟೆ. ಹೀಗೆ ಅನಕೃ ಅವರಿಂದ ಹೆಜ್ಜೆ ಹೆಜ್ಜೆಗೂ ಕಲಿತ ಪಾಠಗಳೆಷ್ಟೋ!

❑

೧೦೧. ಹಾವಿಗೆ ಎರಡು ನಾಲಿಗೆ; ಮನುಷ್ಯನಿಗಲ್ಲ

ಅನಕೃ ಸತ್ಯಪ್ರಿಯರು. ಪ್ರಾಮಾಣಿಕರು. ಸರಿ ಇರಲಿ ಬಿಡಲಿ, ಸುಳ್ಳು ಹೇಳಬಾರದು. ಅದನ್ನು ಅವರು ಸಹಿಸುತ್ತಿರಲಿಲ್ಲ. ಇದು ಅವರ ಸ್ವಭಾವ. ಅವರು ಸತ್ಯವನ್ನು ಮರೆಮಾಚುತ್ತಿರಲಿಲ್ಲ. ಉಳಿದವರು ಸತ್ಯವನ್ನು ಮರೆಮಾಚಿದರೆ ಸಹಿಸುತ್ತಿರಲಿಲ್ಲ, ಉಗ್ರರಾಗುತ್ತಿದ್ದರು.

ಅಂಥ ಒಂದು ಪ್ರಸಂಗ ಒಮ್ಮೆ ನಡೆಯಿತು. ಅದಕ್ಕೆ ನಾನೇ ಸಾಕ್ಷಿ. ಪರಿಷತ್ತಿನ ಚುನಾವಣೆಯ ಕಾಲದಲ್ಲಿ ಕೃಷ್ಣಮೂರ್ತಿ ಪುರಾಣಿಕರು ಕಾರ್ಯಕಾರಿ ಸಮಿತಿಗೆ ಆಯ್ಕೆಯಾದರು. ಬೆಂಗಳೂರಿಗೆ ಮದುವೆ ಒಂದಕ್ಕೆ ಬಂದಿದ್ದ ಪುರಾಣಿಕರ ಕೈಲಿ ಕಾರ್ಯಕಾರಿ ಸಮಿತಿಗೆ ಅರ್ಜಿ ಹಾಕಿಸಿ ನಿಲ್ಲಿಸಿದ್ದೆವು. ಅದಕ್ಕಾಗಿ ನಾನು ಮತ್ತು ಸುಬ್ಬರಾವ್, ರಾಮಕೃಷ್ಣ ಇನ್ನೂ ಹಲವರು ಸೇರಿ ಓಡಾಡಿ ಗೆಲ್ಲಿಸಿದೆವು. ಆಯ್ಕೆ ಆದ ಪುರಾಣಿಕರು ಕಾರ್ಯಕಾರಿ ಸಮಿತಿ ಸಭೆಗೆ ಬಂದಾಗ ನಮ್ಮಗಳ ಪ್ರಯತ್ನ ಅವರಿಗೆ ಗೊತ್ತಿತ್ತು. ನನ್ನನ್ನು ಕಂಡು, 'ನೀವೆಲ್ಲಾ ಯುವಕರು, ಉದ್ಯೋಗಿಗಳಲ್ಲ ಎಂದು ನನಗೆ ಗೊತ್ತು. ನನ್ನ ಮೇಲಿನ ಅಭಿಮಾನದಿಂದ ನನ್ನನ್ನು ಗೆಲ್ಲಿಸಿದ್ದೀರಿ. ನಿಮ್ಮ ಅಭಿಮಾನಕ್ಕೆ ಏನು ಕೊಟ್ಟರೂ ಸಾಲದು. ಆದರೂ ಪ್ರಚಾರದ ಚೀಟಿಗಳ ಮುದ್ರಣಕ್ಕೆ, ಮತದಾರರನ್ನು ಭೇಟಿ ಮಾಡಲು ಸಾಕಷ್ಟು ಪ್ರಯಾಣ ವೆಚ್ಚ ಖರ್ಚು ಮಾಡಿರುತ್ತೀರಿ. ನಾನು ಸ್ವಲ್ಪ ಖರ್ಚಿನ ಹಣ ಕೊಡುತ್ತೇನೆ. ನನ್ನ ಸಮಾಧಾನಕ್ಕಾಗಿ ನೀವು ತೆಗೆದುಕೊಳ್ಳಲೇಬೇಕು. ಈಗ ನನ್ನಲ್ಲಿ ಹಣ ಇಲ್ಲ. ಊರಿಗೆ ಹೋಗಿ ಕಳಿಸುತ್ತೇನೆ' ಎಂದರು. ಸರಿ ಎಂದೆವು. ಅಧ್ಯಕ್ಷರನ್ನು, ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಗೆಲ್ಲಿಸಿದಂತೆ ಅವರನ್ನೂ ಗೆಲ್ಲಿಸಲು ನೆರವಾದದ್ದು ಅವರಿಗೆ ತಿಳಿದಿತ್ತು. ಅಧ್ಯಕ್ಷರ ಹೆಸರಿಗೆ, 'ನಿಮ್ಮ ಕಾರ್ಯಕರ್ತರಿಗೆ ಈ ಚೆಕ್ಕಿನ ಹಣ ತಲುಪಿಸಿ' ಎಂದು ಒಂದು ಚೆಕ್ಕನ್ನು (ಹಣದ ಮೊತ್ತ ನೆನಪಿಲ್ಲ) ಕಳಿಸಿಕೊಟ್ಟರು. ಅಧ್ಯಕ್ಷರು ನಮ್ಮ ಬಳಿ ಆ ಸುದ್ದಿಯನ್ನೇ ಎತ್ತಲಿಲ್ಲ. ಮುಂದಿನ ಸಲದ ಕಾರ್ಯಕಾರಿ ಸಮಿತಿ ಸಭೆಗೆ ಪುರಾಣಿಕರು ಬಂದಾಗ, 'ಸಾರ್ ನಾವೇನೂ ನಿಮ್ಮಲ್ಲಿ ಹಣ ಕೇಳಲಿಲ್ಲ. ಆದರೂ ನಮ್ಮ ಮೇಲಿನ ಅಭಿಮಾನದಿಂದ ನೀವಾಗಿ ಹಣ ಕೊಡುತ್ತೇನೆ ಎಂದಿರಿ. ನಮಗೆ ತಲುಪೇ ಇಲ್ಲ. ಏಕೆ ಹೀಗೆ ಮಾಡಿದಿರಿ?' ಎಂದು ಕೇಳಿದೆ. ಅದಕ್ಕೆ 'ನಾನೇಕೆ ಹಾಗೆ ಮಾಡುತ್ತೇನೆ. ನೋಡಿ ನಾನು ಹಣ ಕಳಿಸಿದ ಚೆಕ್ಕಿನ ಓಚರ್' ಎಂದು ತೋರಿಸಿದರು. ತಪ್ಪಿಗಾಗಿ ಕ್ಷಮಿಸಿ ಎಂದೆವು.

ಆಮೇಲೆ ಅಧ್ಯಕ್ಷರನ್ನು ಕೇಳಿದಾಗ 'ಇಲ್ಲವಲ್ಲಾ. ಪುರಾಣಿಕರು ಯಾವುದೇ ಹಣ ಕಳಿಸಿಲ್ಲವಲ್ಲಾ. ಇದ್ದರೆ ಕೊಡುತ್ತಿರಲಿಲ್ಲವೇ ನಾನು?' ಎಂದುಬಿಟ್ಟರು. ನಮಗೆ ಅವರು ಸುಳ್ಳು ಹೇಳುತ್ತಿದ್ದಾರೆ ಎಂದು ತಿಳಿಯಿತು. ಪುರಾಣಿಕರು ಚಲನ್ ಭಾಗ ತೋರಿಸಿದ್ದರು.

ನಾನು ಅನಕೃ ಬಳಿ ಈ ಸಂಗತಿ ಹೇಳಿ 'ಅಧ್ಯಕ್ಷರು ಸುಳ್ಳು ಹೇಳಿದರು. ಪುರಾಣಿಕರನ್ನು ತಪ್ಪಾಗಿ ತಿಳಿದು ಪ್ರಶ್ನಿಸುವಂತಾಯಿತು. ಪ್ರಾಮಾಣಿಕವಾಗಿ ಹೇಳಿದ

ಮಾತಿನಂತೆ ಅವರು ಹಣ ಕಳಿಸಿದ್ದಾರೆ.' ಎಂದೆ. ಅಧ್ಯಕ್ಷರು ಸುಳ್ಳು ಹೇಳಿದ್ದು ಖಚಿತವಾಯಿತು ಅನಕೃ ಅವರಿಗೆ. ಪುರಾಣಿಕರು ಅನಕೃ ಅವರಿಗೆ ಚಿರಪರಿಚಿತರಿದ್ದರು. ಅವರ ಮುತ್ತೈದೆ ಕಾದಂಬರಿಯನ್ನು (ಅವರ ಚೊಚ್ಚಲ ಕಾದಂಬರಿ) ತಿದ್ದಿ ಪ್ರಕಾಶಕರನ್ನು ಹುಡುಕಿ ಪ್ರಕಟಿಸಲು ನೆರವಾದವರು ಅನಕೃ. ಹೊಸಬರ ಮೊದಲ ಕಾದಂಬರಿಯನ್ನು ಪ್ರಕಟಿಸಲು ಪ್ರಕಾಶಕರು ಹಿಂದೇಟು ಹಾಕಿದಾಗ 'ನಿಮಗೆ ಅವರ ಕಾದಂಬರಿ ಪ್ರಕಟನೆಯಿಂದ ನಷ್ಟವಾದರೆ ನನ್ನದೊಂದು ಕಾದಂಬರಿಯನ್ನು ಉಚಿತವಾಗಿ ಬರೆದುಕೊಡುತ್ತೇನೆ' ಎಂದಿದ್ದರು. ಹೀಗಾಗಿ ಪ್ರಾರಂಭದಲ್ಲಿ ಕೃಷ್ಣಮೂರ್ತಿ ಪುರಾಣಿಕರನ್ನು ಪ್ರೋತ್ಸಾಹಿಸಿದವರು. ಅವರನ್ನಷ್ಟೇ ಅಲ್ಲ, ಎಷ್ಟೋ ಯುವ ಸಾಹಿತಿಗಳನ್ನು ಅನಕೃ ಪ್ರೋತ್ಸಾಹಿಸಿದ್ದಾರೆ, ಬೆಳಕಿಗೆ ತಂದಿದ್ದಾರೆ.

ಅನಂತರ ಪರಿಷತ್ತಿಗೆ ಅನಕೃ ಬಂದಾಗ ಅಧ್ಯಕ್ಷರನ್ನು ಭೇಟಿ ಆದಾಗ, 'ಅಧ್ಯಕ್ಷರೇ ನೀವು ಮಾಡಿದ್ದು ಸರಿಯಲ್ಲ. ಆ ಹುಡುಗರಿಗೆ ಸುಳ್ಳು ಹೇಳಬಾರದಿತ್ತು. ಹುಡುಗರಿಗೆ ಪುರಾಣಿಕರ ಹಣ ಕೊಡಬೇಕಿತ್ತು' ಎಂದರು. ಅದಕ್ಕೆ ಅಧ್ಯಕ್ಷರು 'ನಾನೇಕೆ ಹಾಗೆ ಮಾಡುತ್ತೇನೆ? ನನ್ನನ್ನು ಗೆಲ್ಲಿಸಲು ಸಹಾಯ ಮಾಡಿದರು. ಅವರಿಗೆ ನಾನು ಸುಳ್ಳು ಹೇಳುತ್ತೇನೆಯೇ?' ಎಂದರು. ಅನಕೃ ಅವರಿಗೆ ಅವರು ಸುಳ್ಳು ಹೇಳುತ್ತಿರುವುದು ಖಾತ್ರಿಯಾಗಿ 'ಹಾವಿಗೆ ಎರಡು ನಾಲಗೆ, ಮನುಷ್ಯರಿಗೆ ಇರಬಾರದು' ಎಂದರು ಖಾರವಾಗಿ. ಅನಕೃ ಖಾರವಾಗಿ ಹೇಳಿದ ಮಾತು ಈಗಲೂ ನನ್ನ ಕಿವಿಯಲ್ಲಿ ಗುಂಯ್‌ಗುಟ್ಟುತ್ತಿದೆ. ಆತ್ಮಸಾಕ್ಷಿ ದಾಖಲೆ ಆಗುವ ಪ್ರಸಂಗದಲ್ಲಿ ಬಾಹ್ಯ ಸಾಕ್ಷ್ಯಗಳನ್ನು ಒದಗಿಸಲು ಸಾಧ್ಯವಿಲ್ಲ.

❑

೧೦೨. ಭೂಮಿಗಿಳಿದು ಬಂದ ಭಗವಂತ ಕಾದಂಬರಿ ರಚನೆ

ಅನಕೃ ಬರಹ ಎಂದರೆ ಸುಂದರಲಿಪಿ, ಅಚ್ಚುಕಟ್ಟಾದ ಬರಹ, ಲೇಖನ ಚಿಹ್ನೆಗಳ ಸೂಕ್ತ ಬಳಕೆ, ಸಾಲುಗಳ ವಾಕ್ಯಬೃಂದಗಳ ಅರ್ಥವತ್ತಾದ ವಿಂಗಡಣೆ ಕಣ್ಣಿಗೊತ್ತಿಕೊಳ್ಳಬೇಕಾದ ಕನ್ನಡ ಬರಹ. ಕನ್ನಡ ಎಂಥ ಸುಂದರ ಭಾಷೆ, ಕನ್ನಡ ಲಿಪಿ ಎಷ್ಟು ಸುಂದರ ಎಂಬುದಕ್ಕೆ ಅನಕೃ ಬರಹ ಆದರ್ಶ ನಿದರ್ಶನ.

ನಮ್ಮಲ್ಲಿ ಅನೇಕ ಲೇಖಕರ ಬರಹಗಳು ಬ್ರಹ್ಮಲಿಪಿ, ಡಾಕ್ಟರ್‌ಲಿಪಿ, ಕೋಳಿಕಾಲಿಗೆ ಪೆನ್ನು ಕಟ್ಟಿ ಓಡಾಡಿಸಿದರೆ ಕಾಣುವಂಥ ಗೋಜಲು ಲಿಪಿ. ಹಸ್ತಪ್ರತಿ ಓದುವವರಿಗೆ, ಕರಡು ತಿದ್ದುವವರಿಗೆ ಪ್ರಸಿದ್ಧ ಲೇಖಕರ ಹಲವು ಬರಹ ಏನು ಕಾಟ ಕೊಡುತ್ತದೆ ಎಂಬುದನ್ನು ಬಲ್ಲವರೇ ಬಲ್ಲರು ಆ ಲಿಪಿ ಕಷ್ಟವ. ಆದರೆ ಅನಕೃ ಬರಹ ಮುತ್ತಿನಂತಹ ಬರಹ. ಅವರ ವ್ಯಕ್ತಿತ್ವದಷ್ಟೇ ಆಕರ್ಷಕ.

ಬರೆಯಲು ಕುಳಿತರೆ ಬರೆದುದನು ಅಳಿಸದೊಂದು ಅಗ್ಗಳಿಕೆಯ ಆಧುನಿಕ ಕುವರವ್ಯಾಸ! ಇದು ನಾನು ಕಣ್ಣಾರೆ ಕಂಡ ಸಂಗತಿ. ನನ್ನಂತೆ ನೂರಾರು ಜನ ಈ ಮಾತಿನ ಸತ್ಯ ಬಲ್ಲರು.

ಸಾಮಾನ್ಯವಾಗಿ ಕನ್ನಡ ಚಳುವಳಿಯ ಕಾಲದಲ್ಲಿ ಬೆಳಿಗ್ಗೆ ೧೧-೧೨ರ ಸುಮಾರಿನಲ್ಲಿ ಅವರ ಮನೆಯಲ್ಲಿರುತ್ತಿದ್ದೆ. ಪ್ರತಿ ಬುಧವಾರವೋ ಗುರುವಾರವೋ ನೆನಪಿಲ್ಲ. ಬೆಳಿಗ್ಗೆ ೧೨ರ ಅಷ್ಟು ಹೊತ್ತಿಗೆ ಚಡ್ಡಿವಾಲಾ ಧಡೂತಿ ಅಸಾಮಿ ಟೋಪಿವಾಲಾ ಒಬ್ಬರು ಬರುತ್ತಿದ್ದರು. ಅವರ ಹೆಸರು ಈಗ ನೆನಪಿಲ್ಲ, ಹತ್ತಾರು ವರ್ಷ ಆಯಿತು. ಅವರು ಬಂದಾಗ ಜನಪ್ರಗತಿಯ ಹಿಂದಿನ ಸಂಚಿಕೆಯಲ್ಲಿ ಬಂದ ಅನಕೃ ಅವರ ಕಾದಂಬರಿಯ ಭಾಗವನ್ನು ತಂದುಕೊಡುತ್ತಿದ್ದ. ಕೂತ್ಕೋ ಬಂದೆ ಅಂತ ಅವನನ್ನು ಕೂರಿಸಿ ವರಾಂಡದಲ್ಲಿ ರೂಮಿನ ಒಳಗೇ ಮೇಜಿನ ಮುಂದೆ ಕುಳಿತು ಉದ್ದಕ್ಕೆ ೪ ಪುಟ ಬರೆದು ತಂದು ಅವನ ಕೈಗೆ ಕೊಡುತ್ತಿದ್ದರು. ಹೀಗೆ ಪ್ರತಿ ವಾರ ನಡೆಯುತ್ತಿತ್ತು. ಅನೇಕ ವೇಳೆ ನಾನಲ್ಲಿ ಇರುತ್ತಿದ್ದೆ. ಒಮ್ಮೊಮ್ಮೆ 'ಕೊಟ್ಟುಬಿಡಿ ಆತನಿಗೆ' ಎಂದು ನನ್ನ ಕೈಲಿ ಕೊಡುತ್ತಿದ್ದರು. ಈ ರೀತಿ ಹಿಂದಿನ ಭಾಗ ನೋಡಿ ಮುಂದಿನ ಭಾಗ ಬರೆಯುತ್ತಿದ್ದ ಆ ಕಾದಂಬರಿ ಧಾರಾವಾಹಿಯಾಗಿ ಸಿದ್ಧವಾಗಿ ಆಮೇಲೆ ಪುಸ್ತಕವಾಯಿತು. ಅದೇ 'ಭೂಮಿಗಿಳಿದು ಬಂದ ಭಗವಂತ' ಕಾದಂಬರಿ. ಕಾದಂಬರಿ ರಚನೆಯಲ್ಲಿ ಸಿದ್ಧಹಸ್ತರಾದವರು ಅನಕೃ. ಅವರಂಥ ಹಲವಾರು ಕಾದಂಬರಿಕಾರರ ಬರಹ-ಪರಿಚಯ ನನಗಿದೆ. ಅವರಾರೂ ಹೀಗೆ ಬರೆಯುವವರಲ್ಲ. ವಂಕಿಗೆರೆಯಂತೆ ಗ್ರಾಫಿನಂತೆ ಕೊರೆಯುವ ಕಾದಂಬರಿಕಾರರು, ಪುಟಕ್ಕೆ ೪ ಸಾಲು ಬರೆಯುವ ಕಾದಂಬರಿಕಾರರು, ಬ್ರಹ್ಮಲಿಪಿಯ ಕಾದಂಬರಿಕಾರರು ಇಂಥವರನ್ನೆಲ್ಲ ಕಂಡಿದ್ದೇನೆ. ಹತ್ತಾರು ಸಾಹಿತಿಗಳ ನಡುವೆ ಮುತ್ತಿನಂಥ ಬರಹದ ಲೇಖಕರು ಕೆಲವರೇ ನಮ್ಮಲ್ಲಿ. ಅವರ ಪೈಕಿ ಅನಕೃ ಅಗ್ರಗಣ್ಯರು.

❑

೧೦೩. ಬೆಳಗಿನಿಂದ ಸಂಜೆವರೆಗೆ ವಿಧಾನಸೌಧದಲ್ಲಿ ಅನಕೃ

ಹತ್ತಾರು ವರ್ಷಗಳ ಹಿಂದಿನ ಮಾತು. ಅನಕೃ, ರಾಮಮೂರ್ತಿ ಮಿಥಿಕ್ ಸೊಸೈಟಿಯ ವಾರ್ಷಿಕ ಸಭೆಯೊಂದರಲ್ಲಿ ಭಾಗವಹಿಸಿದ್ದರು. ಮಿಥಿಕ್ ಸೊಸೈಟಿಯಂಥ ಜಗತ್ಪ್ರಸಿದ್ಧ ಕರ್ನಾಟಕದ ಹೆಮ್ಮೆಯ ಸಂಶೋಧನಾ ಸಂಸ್ಥೆಗೆ ಸರಕಾರವು ಕೊಡುವ ಅನುದಾನವನ್ನು ಹಲವು ವರ್ಷಗಳಿಂದ ಕೊಟ್ಟಿರಲಿಲ್ಲ. 'ಸಿಬ್ಬಂದಿ ವರ್ಗಕ್ಕೆ ಸಂಬಳ ಕೊಡಲೂ ಕಷ್ಟವಾಗಿದೆ' ಎಂದು ಕಾರ್ಯದರ್ಶಿಗಳು, ಅಧ್ಯಕ್ಷರು ಕೊರಗಿದರು. ಕೂಡಲೇ ಸಭೆಯಲ್ಲಿದ್ದ ರಾಮಮೂರ್ತಿ ಎದ್ದು ನಿಂತು 'ಹೀಗೆಲ್ಲಾ ಕೊರಗಿಕೊಂಡು ಇಲ್ಲಿ ಸಭೆ ನಡೆಸಿದರೇನು ಬಂತು? ಸರ್ಕಾರದ ಅನುದಾನ ಸಿಗುವುದು ವಿಧಾನಸೌಧದಲ್ಲಿ. ಅಲ್ಲಿ ಪ್ರಯತ್ನಿಸುವುದು ಬಿಟ್ಟು ಇಲ್ಲಿ ಸಭೆ ನಡೆಸಿ ಕೊರಗಿದರೇನು ಬಂತು? ಮನೇಲಿ ಕಳೆದುಕೊಂಡ ಬಟ್ಟೆಸೂಜಿಯನ್ನು ಬೀದಿ ದೀಪದ ಕಂಬದ ಕೆಳಗೆ ಹುಡುಕಿದಂತೆ. ನಿಲ್ಲಿಸಿ ಸಭೆಯನ್ನು. ನಾಳೆ ರಾಯರ ಜೊತೆ ವಿಧಾನಸೌಧಕ್ಕೆ ಹೋಗೋಣ, ಸಚಿವರನ್ನು ಕೇಳೋಣ. ಇಂಥ ಸಂಸ್ಥೆಗೆ ಕೊಡುವ ಪುಡಿಕಾಸನ್ನು ನಿಲ್ಲಿಸುವ ನೀವು ಎಂಥ ಸಂಸ್ಕೃತಿ ಶಿಕ್ಷಣ ಸಚಿವರು ಎಂದು ಕೇಳೋಣ' ಎಂದು ಸಭೆಯನ್ನು ಬರಖಾಸ್ತ್ ಮಾಡಿಬಿಟ್ಟರು.

ಮಾರನೇ ದಿನ ಅನಕೃ ಮಿಥಿಕ್ ಸೊಸೈಟಿಯಲ್ಲಿದ್ದ ಪುಸ್ತಕ ಭಂಡಾರಿ ಹರಿರಾಯರನ್ನು ಕರೆದುಕೊಂಡು ಆಗ ಸಚಿವರಾಗಿದ್ದ ಎಸ್.ಆರ್.ಕಂಠಿ ಅವರ ಬಳಿ ಹೋದರು. ಆಗ ಜೊತೆಗೆ ನಾನೂ ಹೋಗಿದ್ದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಸಾಹಿತಿ–ವಿದ್ವಾಂಸರು ಆಗಿರಬೇಕು, ಸಚಿವರಲ್ಲ ಎಂಬ ಕೂಗೆದ್ದು, ಅನಕೃ ಅಧ್ಯಕ್ಷರಾಗಿದ್ದರು. ಕಂಠಿ ಅವರ ಪರಿಚಯ ಅನಕೃಗೆ ಚೆನ್ನಾಗಿತ್ತು, ಆತ್ಮೀಯ ಸ್ನೇಹವಿತ್ತು. ವಿಧಾನಸೌಧದಲ್ಲಿ ಅನಕೃ ಕಂಠಿ ಅವರನ್ನು ಅವರ ಕೊಠಡಿಯಲ್ಲಿ ಭೇಟಿ ಆದರು. ಮಿಥಿಕ್ ಸೊಸೈಟಿಯ ಕತೆ ಹೇಳಿ 'ಹರಿರಾವ್ ಅಂಥ ವಿದ್ವಾಂಸ ಲೈಬ್ರರಿಯನ್‌ಗೆ ಸಂಬಳವಿಲ್ಲದ ದುಃಸ್ಥಿತಿ ಎಂಥ ಬಂದಿದೆ ಗೊತ್ತೇ ಕಂಠಿಯವರೇ. ಹರಿರಾಯರೇ, ಬಿಚ್ಚಿ ಷರಟನ್ನು' ಅಂದರು. ಕಂಠಿ ಅವರು 'ಏಕೆ ಏಕೆ' ಎಂದು ಕೇಳಿದರು. 'ಒಳಗೆ ಹರಿದ ನೆಟ್ ಬನಿಯನ್ ಅನ್ನು ನಿಮಗೆ ತೋರಿಸೋಣ ಅಂತ' ಅಂದ್ರು. ಕೂಡಲೇ ಕಂಠಿ ಅವರು 'ಬೇಡ ಬೇಡ ರಾಯರೇ, ಅರ್ಥವಾಯಿತು ಪರಿಸ್ಥಿತಿ' ಎಂದು ಕೂಡಲೇ ಸಂಬಂಧ ಪಟ್ಟವರನ್ನು ಕರೆಸಿ ಅಲ್ಲೇ ಬಾಕಿಯಿದ್ದ ಅನುದಾನವನ್ನು ಮಂಜೂರು ಮಾಡಿ ಕೂಡಲೇ ನೀಡಲು ಆದೇಶವಿತ್ತರು.

ಆ ಆದೇಶಪತ್ರ ತೆಗೆದುಕೊಂಡು ಅನಕೃ ಜತೇಲಿ ನಾನು, ಹರಿರಾವ್ ಹಲವಾರು ಕೊಠಡಿಗಳಿಗೆ ಹೋಗಿ, ಆ ಆದೇಶ ಪತ್ರದ ಮೇಲೆ ಟಿಪ್ಪಣಿಗಳನ್ನು ಹಾಕಿಸಿ, ಸಂಜೆಯ ವೇಳೆಗೆ ಚೆಕ್ಕನ್ನು ಪಡೆದರು. ಅನಕೃ ಚೆಕ್ಕನ್ನು ಹರಿರಾಯರ ಕೈಗೆ ಕೊಟ್ಟು, 'ನಿಮ್ಮ ಅಧ್ಯಕ್ಷರಿಗೆ ನಾಳೆ ತಲುಪಿಸಿ' ಎಂದು ಹೇಳಿ, ಹರಿರಾವ್ ಕೈಗೆ ನೂರು ರೂ. ಕೊಟ್ಟು 'ಮನೆಗೆ ಹೋಗಿ ಹೊಟ್ಟೆ ತುಂಬ ಊಟ ಮಾಡಿ, ಕಣ್ತುಂಬ ನಿದ್ದೆ ಮಾಡಿ' ಎಂದರು.

ಅನಕೃ ಒಂದೊಂದು ಕೊಠಡಿಗೆ ಆ ಆದೇಶಪತ್ರ ಹಿಡಿದು ಹೊರಟಾಗ ಪ್ರತಿ ವಿಭಾಗದಲ್ಲಿ ಅನಕೃ ಅವರನ್ನು ಕಂಡೊಡನೆ ಅಲ್ಲಿದ್ದವರು ಎದ್ದು ಸಂಭ್ರಮದಿಂದ ಕುರ್ಚಿ ಹಾಕಿ ಕೂಡಿಸಿ, 'ಏನ್ಸಾರ್ ನೀವೇ ಬಂದುಬಿಟ್ಟಿದ್ದೀರಿ?' ಎಂದು ಅಚ್ಚರಿಯಿಂದ ಕೇಳಿ, ಪತ್ರಕ್ಕೆ ಬೇಕಾದ ಟಿಪ್ಪಣಿ ಬರೆಯಿಸಿ ಸಹಿ ಹಾಕಿಸಿ ತಂದುಕೊಟ್ಟು ಮುಂದಿನ ಕೊಠಡಿಗೆ ಕರೆದೊಯ್ಯುತ್ತಿದ್ದರು. ಅಲ್ಲಿಯೂ ಅತಿಥಿ ಸತ್ಕಾರ. ಹೀಗೆ ಅತಿಥಿ ಸತ್ಕಾರದ ಮೆರವಣಿಗೆ ನಡೆದುದನ್ನು ಕಣ್ಣಾರೆ ಕಂಡ ನನಗೆ ಅನಕೃ ಜನಪ್ರಿಯತೆ ಎಷ್ಟೆಂದು ತಿಳಿಯಿತು.

ಒಬ್ಬ ಸಾಹಿತಿಗೆ ಮರ್ಯಾದೆ, ಸನ್ಮಾನ, ಗೌರವ, ಜನಪ್ರೀತಿ ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಯಲ್ಲಿ ಸಿಗುವುದು ಅಚ್ಚರಿಯಿಲ್ಲ. ಆದರೆ ವಿಧಾನಸೌಧದಲ್ಲಿ ಒಬ್ಬ ಸಾಹಿತಿಗೆ ಹೆಜ್ಜೆ ಹೆಜ್ಜೆಗೆ ರಾಜೋಪಚಾರ ಸಿಕ್ಕಿದ್ದು ಕಣ್ಣಾರೆ ಕಂಡ ದೃಶ್ಯ ಇಂದೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

❑

೧೦೪. ಕಾರ್ಯಕ್ರಮಗಳಲ್ಲಿ ಶಿಸ್ತು ರೂಪಿಸಿದ ಅನಕೃ

ಕರ್ನಾಟಕದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದಾಗ ಅನಕೃ ಕಾರ್ಯಕ್ರಮಗಳ ವ್ಯವಸ್ಥೆಯಲ್ಲಿ ಶಿಸ್ತನ್ನು ತಂದರು. ಸಕಾಲಕ್ಕೆ ಕಾರ್ಯಕ್ರಮ ಪ್ರಾರಂಭಿಸುವುದು, ಯಾವದೇ ರಾಜಕಾರಣಿಗೆ ಅಥವಾ ಗಣ್ಯವ್ಯಕ್ತಿಗೆ ಕಾಯದೆ ಕಾರ್ಯಕ್ರಮಕ್ಕೆ ಬಂದ ಅತಿಥಿಗಳೊಂದಿಗೆ ಕಾರ್ಯಕ್ರಮ ಪ್ರಾರಂಭಿಸುವುದು ಅವರು ಹಾಕಿಕೊಟ್ಟ ದಾರಿ. ನಾಡಿನ ಮೂಲೆ ಮೂಲೆಗಳಲ್ಲಿದ್ದ ಕಲೆಗಾರರ, ಸಾಹಿತಿಗಳ ಪರಿಚಯ ಅನಕೃ ಅವರಿಗಿತ್ತು. ಹಾಗಾಗಿ ಅಕಾಡೆಮಿಯ ಪ್ರಶಸ್ತಿ ನಿರ್ಣಯಗಳ ಸಭೆಯಲ್ಲಿ ನಿಜವಾಗಿ ಹಿರಿಯ ಸೇವಾನಿರತ ವ್ಯಕ್ತಿಗಳಿಗೆ ಪ್ರಶಸ್ತಿ ದೊರಕುತ್ತಿತ್ತು. ವಶೀಲಿ, ಶಿಫಾರಸುಗಳಿಗೆ ಅವಕಾಶವಿರಲಿಲ್ಲ.

ಒಮ್ಮೆ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯಕ್ರಮವೊಂದನ್ನು ಅನಕೃ ನಿಯೋಜಿಸಿದ್ದರು. ಎಸ್.ಆರ್.ಕಂಠಿ ಅವರನ್ನು ಆಹ್ವಾನಿಸಲಾಗಿತ್ತು. ಅವರು ಬರುವುದು ಕೆಲವು ನಿಮಿಷಗಳು ತಡವಾಯಿತು. ಅನಕೃ ಕಂಠಿ ಅವರಿಗೆ ಕಾಯದೆ ಅವರ ಕುರ್ಚಿಯಲ್ಲಿ ಒಂದು ಪುಸ್ತಕವನ್ನಿಟ್ಟು ಅವರ ಪ್ರತಿನಿಧಿಯೆಂದು ಭಾವಿಸಿ ಅವರು ಸಭೆಗೆ ಬರುವವರೆಗೆ ಕಾಯದೆ ಕಾರ್ಯಕ್ರಮವನ್ನು ಸಕಾಲಕ್ಕೆ ಪ್ರಾರಂಭಿಸಿದರು. ಕೆಲವು ನಿಮಿಷಗಳ ನಂತರ ಬಂದ ಕಂಠಿಯವರು ಅನಕೃ ಅವರನ್ನು ಕೇಳಿದರು. 'ನಮಗಿರುವ ಕಾರ್ಯಕ್ರಮ ಬಾಹುಳ್ಯ ನಿಮಗೆ ಗೊತ್ತು. ಅಂಥದ್ದರಲ್ಲಿ ಕೇವಲ ಕೆಲವೇ ನಿಮಿಷಗಳು ತಡವಾಗಿದ್ದಕ್ಕೆ ಕಾರ್ಯಕ್ರಮ ಪ್ರಾರಂಭಿಸಿಬಿಟ್ಟಿರಲ್ಲ' ಎಂದು ಒಂದು ರೀತಿ ಅಸಮಾಧಾನದ ದನಿಯಲ್ಲಿ ಕೇಳಿದರು. ಆಗ ಅನಕೃ ಹೇಳಿದರು, 'ವಿಶ್ವೇಶ್ವರಯ್ಯನವರು ನಮಗೆ ಮಾದರಿ. ಸಕಾಲವೆಂದರೆ ಸಕಾಲ. ಅದರಲ್ಲೂ ಸಾಹಿತಿಗಳ ಕಾರ್ಯಕ್ರಮ ಯಾವುದೇ ರಾಜಕಾರಣಿಗಳಿಂದ ತಡವಾಗಬಾರದು. ಸಾಹಿತಿಗಳಿಗಿಂತ ರಾಜಕಾರಣಿಗಳು ದೊಡ್ಡವರಲ್ಲ ಮತ್ತು ನೀವು ಸಚಿವರು ಎಂಬುದನ್ನು ಮರೆತಿಲ್ಲ. ನಿಮಗೆ ಗೌರವ ಪ್ರಾಶಸ್ತ್ಯ ನೀಡಿ ನಿಮ್ಮ ಸ್ಥಾನದಲ್ಲಿ ಶಾರದೆಯನ್ನು ಇರಿಸಿ ಕಾರ್ಯಕ್ರಮ ಪ್ರಾರಂಭಿಸಿದ್ದೇವೆ'.

ಅನಕೃ ಕಾಲದಲ್ಲಿ ಎಷ್ಟೇ ಅಭಿಪ್ರಾಯ ಭೇದವಿರಲಿ, ಪರಸ್ಪರ ಪ್ರೀತಿ, ವಿಶ್ವಾಸ, ವ್ಯಕ್ತಿಗೌರವಕ್ಕೆ ಧಕ್ಕೆ ಬರುತ್ತಿರಲಿಲ್ಲ. ಅನಕೃ-ಕಂಠಿ ಅವರು ಪರಸ್ಪರ ಆತ್ಮೀಯರಾಗಿದ್ದರು.

❑

೧೦೫. ವಿದ್ಯಾರ್ಥಿಗೆ ಆಪತ್ಕಾಲದ ನೆರವು

ವಿದ್ಯಾರ್ಥಿಗಳಿಗೆ ಓದಿಗೆ ನೆರವಾಗಲು ಹಿರಿಯರಿಗೆ ಸಾವಿರ ದಾರಿಗಳಿವೆ. ಇಂದಿನ ಯುವ ಜನತೆಗೆ ಅವು ಆದರ್ಶ. ಟಿ.ಎಸ್.ವೆಂಕಣ್ಣಯ್ಯನಂಥವರು ಅನೇಕ ವಿದ್ಯಾರ್ಥಿಗಳಿಗೆ ವಾರಾನ್ನ, ಕ್ಯಾಂಟೀನ್‌ನಲ್ಲಿ ಊಟದ ವ್ಯವಸ್ಥೆ ಮಾಡಿ, ಫೀಸು ಕೊಟ್ಟು, ಫೀಸಿನ ರಿಯಾಯಿತಿ ಕೊಡಿಸಿ, ಅಷ್ಟೇಕೆ, ಮನೆಯಲ್ಲಿಟ್ಟುಕೊಂಡು ಸಾಕುಮಕ್ಕಳಂತೆ ಸಾಕಿದ್ದಾರೆ. ಹೀಗೆ ನಾನಾ ಶಾಲಾ ಕಾಲೇಜು ಅಧ್ಯಾಪಕರು, ಸದ್ಗೃಹಸ್ಥರು ಮಾಡಿದ ವಿದ್ಯಾದಾನದ ಸಹಾಯಗಳು ಎಲ್ಲರಿಗೂ ಗೊತ್ತು. ಹಾಗೆಯೇ ಸಾಹಿತಿಗಳ ಪೈಕಿ ಆ ರೀತಿ ಸಾಹಿತಿಗಳಿಗೆ ಬರಹ ತಿದ್ದಿ ಪ್ರೋತ್ಸಾಹಿಸಿ, ಆರ್ಥಿಕ ನೆರವನ್ನು ಕೊಡಿಸಿ, ಆಶ್ರಯವಿಲ್ಲದ ಸಾಹಿತಿಗಳಿಗೆ ಆಶ್ರಯ ನೀಡಿ ಅವರು ಒಂದು ನೆಲೆಯಲ್ಲಿ ನಿಲ್ಲುವಂತೆ ಮಾಡಿದ ಅಗ್ರಗಣ್ಯ ಸಾಹಿತಿಗಳಲ್ಲಿ ಅನಕೃ ಅವರೂ ಒಬ್ಬರು. ಮಾಸ್ಟರ್ ಹಿರಣ್ಣಯ್ಯ, ಜಿ.ಪಿ.ರಾಜರತ್ನಂ, ಕುಮಾರ ವೆಂಕಣ್ಣ ಮುಂತಾದ ಸಾಹಿತಿಗಳಿಗೆ ಅನಕೃ ನೀಡಿದ ನೆರವು, ಆಶ್ರಯ ಎಲ್ಲರಿಗೂ ತಿಳಿದ ಸಂಗತಿ ಆಗಿದೆ.

ಹಾಗೆಯೇ ವಿದ್ಯಾರ್ಥಿಗಳಿಗೆ ಅವರು ನೀಡಿದ ನೆರವು ಅಸಂಖ್ಯಾತ. ನನ್ನದೇ ಒಂದು ನಿದರ್ಶನ ಕೊಡುತ್ತಿದ್ದೇನೆ. ಕನ್ನಡ ಚಳುವಳಿಯ ಪ್ರಾರಂಭದಲ್ಲಿ ಭಾಗವಹಿಸಿದ ನನಗೆ ಅನಕೃ ಪರಿಚಯ ಸಾಕಷ್ಟಿತ್ತು. ಅವರು ನನ್ನನ್ನು ಗುರುತಿಸುವಷ್ಟರ ಮಟ್ಟಿಗೆ ಇತ್ತು. ನಾನು ಸಮಾಜಶಾಸ್ತ್ರ ಎಂ.ಎ. ಮಾಡಿದ ಮೇಲೆ ಕನ್ನಡ ಎಂ.ಎ. ಮಾಡಲು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅರ್ಜಿ ಹಾಕಿದ್ದೆ. ಕನ್ನಡವನ್ನು ದ್ವಿತೀಯ ಭಾಷೆಯಾಗಿ ಅಥವಾ ಐಚ್ಛಿಕ ಕನ್ನಡವನ್ನಾಗಿ ಓದದ ನನಗೆ ಕನ್ನಡ ಎಂ.ಎ.ಗೆ ಸೀಟು ಕೊಡಲು ಶಕ್ಯವಿಲ್ಲ ಎಂದು ಮೈಸೂರು ವಿಶ್ವವಿದ್ಯಾಲಯ ತಾತನ ಕಾಲದ ನಿಯಮವನ್ನು ಮುಂದಿಟ್ಟು ನಿರಾಕರಿಸಿತ್ತು. ಆದರೆ ಯಾವುದೇ ಎಂ.ಎ. ಮಾಡಿದ್ದರೂ ಇನ್ನೊಂದು ಎಂ.ಎ. ಮಾಡಲು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವಕಾಶವಿತ್ತು. ಅದಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಎಂ.ಎ. ಮಾಡಿ ಕನ್ನಡ ಎಂ.ಎ.ಗೆ ಅರ್ಜಿ ಸಲ್ಲಿಸಿದ್ದೆ. ಆಗ ಎಂ.ಎ. ಕನ್ನಡ ಓದಲು ಧಾರವಾಡಕ್ಕೆ ಹೋಗಬೇಕಾಗಿತ್ತು. ಏಕೆಂದರೆ ಖಾಸಗಿಯಾಗಿ ಎಂ.ಎ. ಕನ್ನಡಕ್ಕೆ ಕೂಡಲು ಅವಕಾಶವಿತ್ತಾದರೂ ಹೊರಗಿನ ವಿದ್ಯಾರ್ಥಿಗಳಿಗೆ ಬಹುಮಟ್ಟಿಗೆ ೩ನೇ ದರ್ಜೆ ಫಲಿತಾಂಶ ನೀಡುತ್ತಿದ್ದ ಧೋರಣೆ ಅಲ್ಲಿ ಇತ್ತು.

ಹೀಗಾಗಿ ಧಾರವಾಡದಲ್ಲಿಯೇ ಇದ್ದು ಎಂ.ಎ. ಮಾಡಲು ನಿರ್ಧರಿಸಿದೆ. ಆದರೆ ನಾನು ಆಗ ಧಾರವಾಡವನ್ನೇ ನೋಡಿರಲಿಲ್ಲ. ಅಲ್ಲಿ ಯಾರ ಪರಿಚಯವೂ ಇರಲಿಲ್ಲ. ಧಾರವಾಡದ ಸಾಹಿತಿಗಳ ಬಗ್ಗೆ ಪುಸ್ತಕಗಳಲ್ಲಿ ಓದಿದ್ದೆ ಅಷ್ಟೆ. ಕೂಡಲೇ ಅನಕೃ ಬಳಿ ಬಂದು, 'ಸಾರ್, ನಾನು ಧಾರವಾಡದಲ್ಲಿ ಕನ್ನಡ ಎಂ.ಎ. ಓದಲು ಹೋಗುತ್ತಿದ್ದೇನೆ. ನನಗೆ ಧಾರವಾಡದಲ್ಲಿ ಯಾರ ಪರಿಚಯವೂ ಇಲ್ಲ. ಇಷ್ಟಕ್ಕೂ ನಾನು ಧಾರವಾಡವನ್ನು ನೋಡೇ ಇಲ್ಲ' ಎಂದೆ. ಅವರು ಕೂಡಲೇ 'ಯೋಚಿಸಬೇಡಿ. ನನ್ನ ಮಿತ್ರರೊಬ್ಬರಿಗೆ

ಕಾಗದ ಕೊಡ್ತೀನಿ. ಅವರು ನಿಮಗೆ ಸಹಾಯ ಮಾಡುತ್ತಾರೆ' ಎಂದು ಹೇಳಿ ಒಂದು ಪತ್ರ ಕೊಟ್ಟರು. ಆ ಪತ್ರವನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಎಸ್.ಎಸ್.ಒಡೆಯರ್ ರಿಜಿಸ್ಟ್ರಾರ್ ಅವರಿಗೆ ಕೊಡಿರೆಂದು ಒಂದು ಪತ್ರ ಕೊಟ್ಟರು. ನಾನು ಎಂ.ಎ. ಸೇರಲು ಸಂದರ್ಶನಕ್ಕೆ ಅವರನ್ನೇ ಭೇಟಿಯಾಗಬೇಕಿತ್ತು. ಆ ಕಾಗದದಲ್ಲಿ ಅನಕೃ ಬರೆದಿದ್ದು ಒಂದೇ ಸಾಲು. 'ಈ ಪತ್ರವನ್ನು ತರುತ್ತಿರುವವರು ನನ್ನ ಆಪ್ತ ಗೆಳೆಯರು. ಇವರಿಗೆ ನೀವು ಏನು ಸಹಾಯ ಮಾಡಿದರೂ ನನಗೆ ಮಾಡಿದಂತೆ. ಅ.ನ. ಕೃಷ್ಣರಾಯ' ಎಂದಿತ್ತು. ಆ ಪತ್ರವನ್ನು ತೆಗೆದುಕೊಂಡು ಧಾರವಾಡಕ್ಕೆ ಹೋಗಿ ಒಡೆಯರ್ ಅವರಿಗೆ ಕೊಟ್ಟೆ. ಕೂಡಲೇ ಆ ಪತ್ರವನ್ನು ಓದಿದ ಅವರು, 'ಕುಂದ್ರಿ, ಕುಂದ್ರಿ' ಎಂದು ಕೂತುಕೊಳ್ಳಲು ಹೇಳಿ ಜವಾನನಿಗೆ ಚಾ ತರಲು ಹೇಳಿದರು. 'ನಾನು ಕನ್ನಡ ಚಳುವಳಿಯಲ್ಲಿ ಸದಾ ಬೆಳಗಿನಿಂದ ಸಂಜೆವರೆಗೆ ಜತೆಯಲ್ಲಿದ್ದೇನೆ. ಸದಾ ನಮಗೆ ಅವರು ಮಾರ್ಗದರ್ಶಕರು. ಸ್ಫೂರ್ತಿಚೈತನ್ಯರು. ನಾನೊಬ್ಬ ಕನ್ನಡ ಸೇವಕ ವಿದ್ಯಾರ್ಥಿ ಅಷ್ಟೇ' ಎಂದೆ. 'ಆಹಾ! ಎಂಥ ಭಾಗ್ಯವಂತರು ನೀವು. ಅವರ ಸಾನ್ನಿಧ್ಯ, ಮಾರ್ಗದರ್ಶನದಲ್ಲಿ ಕನ್ನಡ ಸೇವೆಯಲ್ಲಿ ನಿರತರಾಗಿದ್ದೀರಿ' ಎಂದು ಒಂದೆರಡು ವಿಚಾರವಾಗಿ ಮಾತಾಡಿದರು. ನನ್ನ ಎಂ.ಎ. ಅರ್ಜಿಯನ್ನು ತೆಗೆದುಕೊಂಡು ಚಾ ತಂದ ಆಳಿನ ಕೈಲಿ ಅವರೇ ಫೀಸನ್ನು ಕಟ್ಟಿಸಿ ನನಗೆ ಪ್ರವೇಶ ನೀಡಿದರು. ಇದು ಅನಕೃ ಪ್ರಭಾವಕ್ಕೆ ಸಾಕ್ಷಿ ನನ್ನ ಸ್ವಂತ ಅನುಭವ. ಅನಾಯಾಸವಾಗಿ ಕನ್ನಡ ಎಂ.ಎ.ಗೆ ಸೀಟು ದೊರೆತಿದ್ದು ಅವರು ಬರೆದುಕೊಟ್ಟ ಒಂದು ಸಾಲಿನ ಪತ್ರ. ಅವರು ನನ್ನ ಕನ್ನಡ ಸೇವೆಯ ಬಾಗಿಲನ್ನು ತೆರೆದವರು.

❑

೧೦೬. ಗದಗಿನ ರೈಲು ನಿಲ್ದಾಣದಲ್ಲಿ ಜಾಗರಣೆ

ಮಣಿಪಾಲ ಕನ್ನಡ ಸಾಹಿತ್ಯ ಸಮ್ಮೇಳನ ಮುಗಿಸಿಕೊಂಡು ಗದಗವನ್ನು ನೋಡಿಕೊಂಡು ಹಂಪೆಗೆ ಭೇಟಿ ಕೊಟ್ಟು ಬರಬೇಕೆಂದು ನಿಶ್ಚಯಿಸಿದೆ. ಕೊರಟಿ ಶ್ರೀನಿವಾಸರಾಯರು 'ನಾನು ನನ್ನ ಗದಗಿನ ಮಿತ್ರರ ಜೊತೆ ಹೊರಟಿದ್ದೇನೆ. ಗದಗಿನವರೇ ಅವರು. ಅಲ್ಲಿ ಅವರ ಸ್ವಂತ ಮನೆಯಿದೆ. ನೀವೂ ಬನ್ನಿ ಅಲ್ಲಿಗೆ. ಗದಗಿನ ಅನಕೃ ಭಾಷಣಕ್ಕೆ ನಾನೂ ಬರುತ್ತಿದ್ದೇನೆ' ಎಂದರು. 'ಗದಗಿಗೆ ಬಂದು ರೈಲ್ವೆ ನಿಲ್ದಾಣದಲ್ಲಿ ಟಿಕೆಟ್ ಕೌಂಟರ್‌ನಲ್ಲಿ ನನ್ನ ಹೆಸರು ಹೇಳಿ ಕೇಳಿದರೆ ಒಂದು ಚೀಟಿ ಕೊಡುತ್ತಾರೆ. ನಿಮ್ಮ ಹೆಸರಿಗೆ ಕಾಗದ ಬರೆದು ಅದರಲ್ಲಿ ನಮ್ಮ ಮಿತ್ರರ ಮನೆಯ ವಿಳಾಸ ಕೊಟ್ಟಿರುತ್ತೇನೆ' ಎಂದು ಹೇಳಿದರು.

ಮಣಿಪಾಲದಿಂದ ಧಾರವಾಡಕ್ಕೆ ಬಂದು ಧಾರವಾಡದಿಂದ ಗದಗಿನ ರೈಲು ನಿಲ್ದಾಣಕ್ಕೆ ಬಂದೆ. ರಾತ್ರಿ ಸುಮಾರು ೧೧ ಗಂಟೆ ಆಗಿತ್ತು. ರೈಲು ತಡವಾಗಿ ಬಂದಿತ್ತು. ಟಿಕೆಟ್ ಕೌಂಟರಿನಲ್ಲಿ 'ಕೊರಟಿ ಶ್ರೀನಿವಾಸರಾಯರು ಎಂಬುವರು ನಿಮ್ಮಲ್ಲಿ ಪತ್ರವೊಂದು ಕೊಟ್ಟಿರುತ್ತೇನೆ. ಜಿ.ಅಶ್ವತ್ಥನಾರಾಯಣ ಎಂಬುವರು ಕೇಳುತ್ತಾರೆ ಕೊಟ್ಟುಬಿಡಿ ಎಂದಿದ್ದಾರೆ' ಎಂದು ಹೇಳಿದೆ. 'ನನಗಾರೂ ಚೀಟಿ ಕೊಟ್ಟಿಲ್ಲ' ಎಂದುಬಿಟ್ಟರು. ಆಕಾಶವೇ ಮೇಲೆ ಬಿದ್ದಂತಾಯಿತು. ಇನ್ನೇನು ಮಾಡುವುದು, ಬೆಳಿಗ್ಗೆ ಎದ್ದು ಊರೊಳಕ್ಕೆ ಹೋಗಿ ವಿಚಾರಿಸಿದರೆ ಆಯಿತು. ಅವರ ಮಿತ್ರರ ಹೆಸರು ಹೇಳಿದ್ದರು. ಮಾಧವಾಚಾರ್ಯ ಅಂತಲೋ ಮಾಧವ ಕಟ್ಟಿ ಅಂತಲೋ ಹೇಳಿದ್ದರು. ರಾತ್ರಿ ಅಲ್ಲೇ ಒಂದು ಕಡೆ ಗೋಡೆಗೆ ಒರಗಿ ಕುಳಿತೆ. ಜತೆಯಲ್ಲಿ ಬಗಲು ಚೀಲ ಇತ್ತು ಅಷ್ಟೇ. ಜತೆಗೆ ಒಂದು ಹೊಲ್ಡಾಲ್ ಬಟ್ಟೆ – ಪುಸ್ತಕದ್ದು. ಇಡೀ ನಿಲ್ದಾಣದಲ್ಲಿ ನಾನಿದ್ದ ಕಡೆ ಯಾರೂ ಇರಲಿಲ್ಲ. ಸ್ವಲ್ಪ ಹೊತ್ತಿಗೆ ಒಬ್ಬರು ವಯಸ್ಸಾದ ಅಜ್ಜ ೬೦ರ ಮೇಲಿರಬೇಕು ವಯಸ್ಸು, ಸಣ್ಣ ಗಂಟಿನೊಂದಿಗೆ ಬಂದು ನನ್ನ ಬಳಿ ಕುಳಿತರು. ಬಿಳಿ ಪೇಟಾ, ಬಿಳಿ ಷರಟು, ಪಂಚೆ ಧರಿಸಿದ್ದರು. ಉದ್ದಗೆ ಆಳು, ಕೋಲು ಮುಖ. ತೇಜಸ್ವಿ ಅಜ್ಜ. ನನ್ನ ಬಳಿ ಕುಳಿತು 'ನಿಮ್ಮೂರು ಯಾವುದು, ಒಬ್ಬರೇ ಕುಳಿತಿದ್ದೀರಿ, ಯಾರಾದರೂ ಬರುವರೇ ಕರೆದುಕೊಂಡು ಹೋಗಲು ಅಥವಾ ಮುಂದಿನ ರೈಲಿಗೆ ಕಾದಿದ್ದೀರಾ?' ಎಂದು ಕೇಳಿದರು. 'ನೀವು ನನ್ನ ಹಾಗೇನಾ?' ಎಂದು ಕೇಳಿದೆ. 'ಹೌದು, ಕರೆದುಕೊಂಡು ಹೋಗಲು ನಮ್ಮ ಮಠದವರು ಬರ್ತೀನಿ ಅಂದಿದ್ದಾರೆ. ನಾನು ಅದಕ್ಕೆ ಕಾಯ್ತಾ ಇದೀನಿ' ಎಂದರು. ಹಾಗೆಯೇ ಮಾತಾಡಲು ಪ್ರಾರಂಭಿಸಿದೆವು. ಪರಸ್ಪರ ನೀವು ಯಾರು, ಎಲ್ಲಿಯವರು ಎಂದು ಉಭಯಕುಶಲೋಪರಿ ಪ್ರಾರಂಭವಾಯಿತು. ಮಾತು ಸಾಹಿತ್ಯದತ್ತ ಹೊರಳಿತು. ಅವರು ವೀರಶೈವ ಸಾಹಿತ್ಯದ ಉದ್ದಾಮ ಪಂಡಿತರು. ಅನೇಕ ವೀರಶೈವ ಮಠಾಧಿಪತಿಗಳು ಅವರ ಶಿಷ್ಯರೆಂದು ತಿಳಿದಿತ್ತು. ವೀರಶೈವ ಧರ್ಮ ಹಾಗೂ ಬಸವಣ್ಣನವರ ಬಗ್ಗೆ ಅವರು ಬರೆದ ಗ್ರಂಥವೊಂದನ್ನು ಓದಿದ್ದೆ. ವಚನಸಾಹಿತ್ಯದ ಅಲ್ಪಪರಿಚಯ ನನಗೆ ಇತ್ತು. ಹೀಗಾಗಿ ಇಡೀ ರಾತ್ರಿ ರೈಲ್ವೆ ನಿಲ್ದಾಣದಲ್ಲಿ ಇಬ್ಬರಿಗೂ ನಿದ್ರೆ ಬಾರದೆ ಇದ್ದುದರಿಂದಲೂ ಬೆಳಕು

ಹರಿಯುವವರೆಗೆ ಸುಮಾರು ೬ ಗಂಟೆವರೆಗೆ ಅನೇಕ ವಿಷಯಗಳನ್ನು ಚರ್ಚಿಸುತ್ತಾ ಕಾಲ ಕಳೆದೆವು. ಬೆಳಗಾದ ಮೇಲೆ ಅವರ ಶಿಷ್ಯರು ಬಂದು ಅವರನ್ನು ಕರೆದೊಯ್ದರು. ನಾನು ನನ್ನ ದಾರಿ ಹಿಡಿದೆ, ಗದಗ ರೆಸ್ಟೋರೆಂಟಿನತ್ತ.

ಇದಾದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಾನು ಕಾರ್ಯದರ್ಶಿ ಆಗಿದ್ದಾಗ ಒಂದು ದಿನ ಮಧ್ಯಾಹ್ನ ಶಾಸ್ತ್ರಿಗಳು ಪರಿಷತ್ತಿಗೆ ೧೨ ಗಂಟೆಗೆ ಬಂದರು. ಆಗ ಪರಿಷತ್ತಿನ ಕಚೇರಿ ವೇಳೆ ಬೆಳಿಗ್ಗೆ ೯ ರಿಂದ ೧೨. ಸಂಜೆ ೪ ರಿಂದ ೭ ಇತ್ತು. ೧೨ಕ್ಕೆ ಬಾಗಿಲು ಹಾಕುವ ವೇಳೆಗೆ ಶಾಸ್ತ್ರಿಗಳು ಪರಿಷತ್ತಿನ ಬಾಗಿಲಿಗೆ ಹೊಸ ಕಟ್ಟಡಕ್ಕೆ (ಪರಿಷತ್ತಿನ ಮುದ್ರಣಾಲಯ ಈಗಿದೆ. ಆಗ ಪರಿಷತ್ತಿನ ಕಚೇರಿ ಇತ್ತು) ಬಂದರು. ಬಾಗಿಲ ಬಳಿ ಇದ್ದ ಸಿಬ್ಬಂದಿ ಶಿವರಾಮಯ್ಯ ಗುಮಾಸ್ತೆ ಯಾರು ಬೇಕಿತ್ತು ಎಂದು ಕೇಳಿದಾಗ 'ಪರಿಷತ್ತಿನ ವಾರ್ಷಿಕ ಸದಸ್ಯತ್ವದ ಹಣ ಕಟ್ಟಬೇಕಿತ್ತು' ಎಂದರು ಶಾಸ್ತ್ರಿಗಳು. 'ಈಗ ವೇಳೆ ಆಯಿತು. ಸಂಜೆ ೪ಕ್ಕೆ ಕಚೇರಿ ತೆರೆಯುತ್ತದೆ, ಆಗ ಬನ್ನಿ' ಎಂದರು. ಆ ವೇಳೆಗೆ ಬಾಗಿಲಿಗೆ ನಾನು ಬಂದೆ. ಶಾಸ್ತ್ರಿಗಳನ್ನು ಕಂಡು, 'ಬನ್ನಿ ಬನ್ನಿ ಶಾಸ್ತ್ರಿಗಳೇ' ಎಂದು ಒಳಕ್ಕೆ ಕರೆದೆ. 'ನೆನಪಿದೆಯಾ ಗದುಗಿನ ರೈಲ್ವೆ ನಿಲ್ದಾಣದಲ್ಲಿ ಶಿವರಾತ್ರಿ ಜಾಗರಣೆ ಆಚರಿಸಿದ್ದು?" ಎಂದೆ. ನಗುತ್ತಾ ನೆನಪಿದೆ ಎಂದರು. ಗುಮಾಸ್ತೆ 'ಅವರು ಸದಸ್ಯತ್ವ ಕೊಡಲು ಬಂದಿದ್ದಾರೆ. ಸಂಜೆ ೪ಕ್ಕೆ ಬರಲು ಹೇಳಿದ್ದೇನೆ' ಎಂದ. ನಾನು ಕೂಡಲೇ 'ಅವರನ್ನು ಯಾರೆಂದು ತಿಳಿದಿದ್ದೀಯಾ? ಬಾಗಿಲು ತೆಗೆ, ಕೂಡಿಸಿ, ರಸೀದಿ ಹಾಕು. ಅರ್ಧ ದಿನ ಕೆಲಸ ಮಾಡು' ಎಂದೆ. ಶಾಸ್ತ್ರಿಗಳನ್ನು ನನ್ನ ಕೊಠಡಿಗೆ ಕರೆಸಿ, ಮಾತನಾಡಿಸಿ ಎಳನೀರು ತರಿಸಿ ಕೊಟ್ಟೆ. ಆಗ ನಾನು ತ್ಯಾಗರಾಜನಗರದಲ್ಲಿ ಮನೆ ಮಾಡಿದ್ದೆ. ಶಾಸ್ತ್ರಿಗಳು ಅವರ ಶಿಷ್ಯರಿದ್ದ ನಿಜಗುಣಮಠಕ್ಕೆ (ಗವಿಪುರಕ್ಕೆ) ಹೋಗಬೇಕಿತ್ತು. ರಿಕ್ಷಾದಲ್ಲಿ ಕರೆದುಕೊಂಡು ಹೋಗಿ ಮಠಕ್ಕೆ ಬಿಟ್ಟು ಬಂದೆ.

'ಶಾಸ್ತ್ರಿಗಳೇ ನೀವು ಸಮ್ಮೇಳನಾಧ್ಯಕ್ಷರಾದವರು. ಪರಿಷತ್ತಿಗೆ ೬ ರೂ. ಸದಸ್ಯತ್ವ ಕೊಡಲು ಪ್ರತಿ ವರ್ಷ ಬಳ್ಳಾರಿಯಿಂದ ಏಕೆ ಬರುತ್ತೀರಿ?' ಎಂದು ಕೇಳಿದೆ. 'ಹಾಗೆ ಸದಸ್ಯತ್ವ ಕೊಡಲೇಬೇಕು ಅಂತ ಇದ್ದರೆ ೧೦೦ ರೂ. ಕೊಟ್ಟು ಆಜೀವ ಸದಸ್ಯರಾಗಿಬಿಡಿ' ಅಂದೆ. ಅದಕ್ಕೆ ಅವರು ಕೊಟ್ಟ ಉತ್ತರ ನನ್ನ ತಲೆಯನ್ನು ತಗ್ಗಿಸಿತು. 'ಈ ಸಂಸ್ಥೆಯನ್ನು ಪ್ರಾರಂಭವಾಗಿದ್ದಾಗಿಂದ ನಾನು ಬಲ್ಲೆ. ಹಿಂದಿನಿಂದಲೂ ಸದಸ್ಯನಾದವನು. ಇದು ಕನ್ನಡಮಾತೆಯ ಮಂದಿರ.. ಇಲ್ಲಿ ಸರಸ್ವತಿ ಭಕ್ತರ ದರ್ಶನವಾಗುತ್ತದೆ. ಆ ಪುಣ್ಯಕಾರ್ಯದ ಭಾಗ್ಯ ತಪ್ಪಿಸಿಕೊಳ್ಳಲು ಇಷ್ಟವಿಲ್ಲ. ಅದಕ್ಕಾಗಿ ತೀರ್ಥಯಾತ್ರೆ ಮಾಡಿದ ಹಾಗೆ ಈ ಸಂಸ್ಥೆಗೆ ಸದಸ್ಯತ್ವ ಕೊಡುವ ನೆಪದಲ್ಲಿ ಪ್ರತಿ ವರ್ಷ ಬರುತ್ತೇನೆ' ಎಂದರು. 'ಕರಿಯಣ್ಣ, ಹನುಮಯ್ಯ ಹೇಗಿದ್ದಾರೆ?' ಎಂದು ಕೇಳಿದರು. ನನಗೆ ಆಶ್ಚರ್ಯವಾಯಿತು. ಪರಿಷತ್ತಿನ ಪ್ರಸಿದ್ಧ ವಿದ್ವಾಂಸರನ್ನೋ ಸಾಹಿತಿಗಳನ್ನೋ ಕೇಳದೆ ಈ ಜವಾನರನ್ನು ವಿಚಾರಿಸಿ ಕೊಳ್ಳುತ್ತಿದ್ದಾರಲ್ಲಾ ಎಂದು ಅಚ್ಚರಿಯಾಗಿ 'ಅದೇನು ಶಾಸ್ತ್ರಿಗಳೇ, ಅವರ ಬಗ್ಗೆ ಕೇಳುತ್ತಿದ್ದೀರಿ' ಎಂದೆ. ಅದಕ್ಕೆ ಅವರು, 'ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾದಾಗ ಮತ್ತು ಬೇರೆ ಸಾಹಿತ್ಯ ಸಮ್ಮೇಳನಗಳಲ್ಲಿ ಅವರು ಸಮ್ಮೇಳನಾಧ್ಯಕ್ಷರ ಗಂಟುಮೂಟೆ ಹೊತ್ತು ಸೇವೆ ಮಾಡುವುದರ ಜೊತೆಗೆ ಅವರ ಮಕ್ಕಳ ಅಂಡು ತೊಳೆದಿದ್ದಾರೆ. ಅವರ ಮನೆಯವರ ಕಾಯಿಲೆ

ಕಸಾಲೆಗಳಿಗೆ ಔಷಧ ತಂದುಕೊಟ್ಟಿದ್ದಾರೆ. ಅವರಂಥ ಸರಸ್ವತೀ ಸೇವಕರನ್ನು ನಾನೆಲ್ಲೂ ನೋಡಿಲ್ಲ' ಎಂದರು. 'ಇಂಥಾ ಸಾಹಿತ್ಯ ಸಮ್ಮೇಳನಾಧ್ಯಕ್ಷರೂ ಇದ್ದಾರೆಯೇ!' ಎಂದು ಬೆರಗಾದೆ. ಪರಿಷತ್ತಿನಲ್ಲಿ ಆಗ ನಾನು ಒಂದು ನಿಯಮ ಮಾಡಿದ್ದೆ. ಪರಿಷತ್ತಿನಲ್ಲಿ ೯-೧೨, ೪-೭ ಕಾರ್ಯದ ವೇಳೆ ಆಗಿದ್ದರೂ, ಸಿಬ್ಬಂದಿಯವರು ೧೨-೪, ೭-೯ ರಾತ್ರಿ ಎಷ್ಟೋ ದಿನಗಳೂ ದುಡಿಯಬೇಕಿತ್ತು. ಸಂಜೆ ಕಾರ್ಯಕ್ರಮಗಳು ಇದ್ದಾಗ ೭-೯ ಕೆಲಸ ಮಾಡಬೇಕಿತ್ತು. ಮಧ್ಯಾಹ್ಯ ೧೨-೪ ಕೆಲಸ ಮಾಡಬೇಕಿತ್ತು ತಿಂಗಳಿಗೆ ಒಂದೆರಡು ವಾರಗಳು. ಅವರು ಬಿಟ್ಟಿಯಾಗಿ ಅಧಿಕ ಕೆಲಸ ಏಕೆ ಮಾಡಬೇಕು? ಅದಕ್ಕೆ ಪ್ರತಿಫಲ ಬೇಡವೇ? ಎಂದು ಚಿಂತಿಸಿ, ಪದಾಧಿಕಾರಿಗಳ ಸಭೆಯಲ್ಲಿ ಹಂಪನಾ, ಡಿ.ಲಿಂಗಯ್ಯ, ದೇವರಾಜ್, ನಾನು ಒಂದು ನಿರ್ಣಯ ಮಾಡಿದ್ದೆವು. ಕಾರ್ಯ ನಿಮಿತ್ತ ಮಧ್ಯಾಹ್ನ ಅಥವಾ ರಾತ್ರಿ ಹೆಚ್ಚು ಕಾಲ ಕೆಲಸ ಮಾಡಿದಾಗ ಅವರಿಗೆ ಅರ್ಧ ದಿನದ ರಜೆ ಅಥವಾ ಅರ್ಧ ದಿನದ ಸಂಬಳ ಅವರ ಲೆಕ್ಕಕ್ಕೆ ಜಮಾ ಮಾಡಬೇಕು. ಹೀಗಾಗಿ ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು ಬಂದಾಗ ೧೨-೪ರವರೆಗೆ ಪರಿಷತ್ತಿನ ಕೆಲಸ ಮಾಡಲು ಶಿವರಾಮಯ್ಯನಿಗೆ ಹೇಳಿದ್ದೆ.

❑

೧೦೭. ಕರಿಯಣ್ಣನ ಪ್ರಶ್ನೆ – ನಮ್ಮವರು ಅತಿಥಿಗಳಲ್ಲವೇ?

ಕರಿಯಣ್ಣ ಬುದ್ಧಿವಂತ, ಚುರುಕಿನ ವ್ಯಕ್ತಿ, ಪರಿಷತ್ತಿಗೆ ನಿಷ್ಠಾವಂತ. ಎಂ.ಆರ್.ಶ್ರೀಗಿಂತ ಮುಂಚಿನಿಂದ ಬಹುಶಃ ಬಿಎಂಶ್ರೀ ಕಾಲದಿಂದ ಪರಿಷತ್ತಿಗೆ ಹುಡುಗನಾಗಿ ಜವಾನನಾಗಿ ಸೇರಿದವನು ಅಂತ ಕಾಣುತ್ತೆ. ಪರಿಷತ್ತಿನ ಎಲ್ಲ ವಿದ್ಯಮಾನಗಳೂ ಅವನಿಗೆ ತಿಳಿದಿತ್ತು. ನಾನು ಕಾರ್ಯದರ್ಶಿ ಆದಾಗ ತುಂಬ ಸಂತೋಷಪಟ್ಟವನು ಅವನು. ಏಕೆಂದರೆ ೧೯೫೦ರಿಂದ ಫೋರ್ಟ್ ಮಿಡಲ್ ಸ್ಕೂಲ್ ವಿದ್ಯಾರ್ಥಿಯಾಗಿ ಪರಿಷತ್ತಿನ ಲೈಬ್ರರಿಯಲ್ಲಿ ಕುಳಿತು ಓದುತ್ತಿದ್ದಾಗಿನಿಂದ ಎಂ.ಆರ್.ಶ್ರೀ ಕಾಲದಿಂದ ನನ್ನನ್ನು ನೋಡಿದವನು.

ನಾನು ಕಾರ್ಯದರ್ಶಿ ಆದಾಗ ಒಮ್ಮೆ ಒಂದು ಪ್ರಶ್ನೆ ಕೇಳಿದ. 'ನಿಮ್ಮ ಬಳಿ ನಿಮ್ಮನ್ನು ನೋಡಲು ಪರಿಷತ್ತಿಗೆ ಬಂದವರಿಗೆಲ್ಲಾ ಕಾಫಿ, ಟೀ, ಹಾಲು, ಎಳನೀರು ತರಿಸುತ್ತೀರಿ. ಕೆಲವೊಮ್ಮೆ ತಿಂಡಿ ಸಹಾ ತರಿಸಿಕೊಡುತ್ತೀರಿ. (ಅವನೇ ತರುತ್ತಿದ್ದವನು) ನಮ್ಮ ಸ್ನೇಹಿತರು ಪರಿಷತ್ತಿಗೆ ಬಂದರೆ ಅವರಿಗೆ ನಾವು ಕಾಫಿ, ಟೀ ಕೊಡಿಸಬಾರದಾ ಪರಿಷತ್ತಿನ ಖರ್ಚಿನಲ್ಲಿ?' ಆಗ ಪರಿಷತ್ತಿನ ಬಡ್ಜೆಟ್ಟಿನಲ್ಲಿ ಪರಿಷತ್ತಿನ ಪ್ರಾರಂಭದಿಂದಲೂ ಅತಿಥಿಸತ್ಕಾರ ವೆಚ್ಚ ಇಂತಿಷ್ಟು ರೂ. ಎಂದು ಮಂಜೂರಾಗಿರುತ್ತಿತ್ತು. ಪರಿಷತ್ತಿನ ಕಚೇರಿ ೧೯೧೮ರಲ್ಲಿ ನಾನಾರಾಯರ ಮನೆಯಲ್ಲಿ ಪ್ರಾರಂಭವಾದಾಗ 'ಕಾಫಿ ಕೊಠಡಿ' ಎಂದು ಒಂದು ಪ್ರತ್ಯೇಕ ಕೊಠಡಿ ಅತಿಥಿ ಸತ್ಕಾರಕ್ಕೆ ಇತ್ತು.

ಕರಿಯಣ್ಣ ಕೇಳಿದ ಪ್ರಶ್ನೆ ಸಮಂಜಸವಿತ್ತು. ಆದರೆ ಸಿಬ್ಬಂದಿ ವರ್ಗದವರು ಅತಿಥಿ ಸತ್ಕಾರದ ಹಣ ಖರ್ಚು ಮಾಡುವ ಹಾಗಿರಲಿಲ್ಲ ಆಗಿನ ಪರಿಸ್ಥಿತಿಯಲ್ಲಿ. ಅದಕ್ಕೆ ನಾನೊಂದು ಉಪಾಯ ಮಾಡಿದೆ. 'ಕರಿಯಣ್ಣ, ನಿನ್ನ ಸ್ನೇಹಿತರು, ಅತಿಥಿಗಳು ಪರಿಷತ್ತಿಗೆ ಬಂದಾಗ ನನ್ನ ಕೊಠಡಿಗೆ ಬಂದು ಬಲಗಡೆ ಟ್ರೇ ಅನ್ನು ಕದಲಿಸಿ ಕರೆದಿರಾ, ಯಾವ ಕಾಗದ ಕೊಡಬೇಕು ಎಂದು ಕೇಳು. ಆಗ ನಾನು ಕಾಫಿ ತರಲು ಕಳಿಸುವೆ. (ಪ್ರಕಾಶ್ ಕೆಫೆಗೆ ಅಥವಾ ವಿಶ್ರಾಂತಿ ಭವನಕ್ಕೆ) ಆಗ ನಿನ್ನ ಸ್ನೇಹಿತರನ್ನು ಕರೆದುಕೊಂಡು ಹೋಗಿ ಕಾಫಿ ಕೊಡಿಸಿ ಆ ಖರ್ಚನ್ನು ಪರಿಷತ್ತಿನ ಬಿಲ್ಲೆಂದು ತಾ' ಎಂದು ವ್ಯವಸ್ಥೆ ಮಾಡಿದ್ದೆ. ಇದು ಯಾರಿಗೂ ತಿಳಿದಿರಲಿಲ್ಲ.

ನನ್ನ ನಂತರ ಬೇರೊಬ್ಬ ಅಧ್ಯಕ್ಷರ ಕಾಲದಲ್ಲಿ ಕಾರ್ಯದರ್ಶಿ ಆದವರು ಈ ರೀತಿ ಬಿಲ್ಲು ಹಾಕಿಸಲು ಆಗಿನ ಅಧ್ಯಕ್ಷರ ಜತೆ ಕಾರ್ಯದರ್ಶಿ ಒಪ್ಪಲಿಲ್ಲ. ಅದಕ್ಕೆ ಅವರು ಬಂದವರಿಗೆ ಕಾಫಿ ತರಿಸಲಾಗದೆ ಹೊಟೇಲಿಗೆ ಅವರ ಜತೆ ಹೋಗುತ್ತಿದ್ದರು. ಹೋಗುವ ಮುಂಚೆ ಪೋಸ್ಟ್ ಮಾಡಲು (ಆಹ್ವಾನಪತ್ರ ಅಥವಾ ಯಾವುದೋ ಪತ್ರಗಳನ್ನು ಕಳಿಸಲು) ಅಂಚೆವೆಚ್ಚ ಅಂತ ಹಾಕಿ ಆ ಹಣವನ್ನು ಅತಿಥಿಗಳ ಕಾಫಿಗೆ ಬಳಸುತ್ತಿದ್ದರು.

ಸಾಹಿತ್ಯ, ಗಮಕ ಪರೀಕ್ಷೆಗಳು ಭಾನುವಾರ ರಜಾ ದಿನ ಪರಿಷತ್ತಿನಲ್ಲಿ ನಡೆದಾಗ ಕಡ್ಡಾಯವಾಗಿ ಕಾರ್ಯ ಮಾಡಬೇಕಾಗಿತ್ತು. ಆಗ ಸಿಬ್ಬಂದಿವರ್ಗಕ್ಕೆ, ಪರೀಕ್ಷಾರ್ಥಿಗಳ

ಕೊಠಡಿ ಮೇಲ್ವಿಚಾರಣೆ ನೀರು ಕೊಡುವ ವ್ಯಕ್ತಿ, ಇತ್ಯಾದಿ ವೆಚ್ಚ ತೋರಿಸಿ ಸಿಬ್ಬಂದಿವರ್ಗಕ್ಕೆ ಒಂದಷ್ಟು ಹಣ ಸಿಗುವಂತೆ ಮಾಡಿದ್ದೆ.

ಸಾಹಿತ್ಯ ಸೇವೆ ಬಿಟ್ಟಿ ಇರಬಹುದು. ದೈಹಿಕ ಶ್ರಮ ಬಿಟ್ಟಿ ಇರಬಾರದು ಎಂಬುದು ನನ್ನ ನಿಲುವಾಗಿತ್ತು.

❑

೧೦೮. ದಶಾಕ್ಷ ಎಂದರೆ... ಹೀಗೂ ಅರ್ಥ!

ಖ್ಯಾತ ಕವಿ ಪು.ತಿ.ನರಸಿಂಹಾಚಾರ್ ಅವರಿಗೂ ಗೊರೂರು ರಾಮಸ್ವಾಮಿ ಐಯ್ಯಂಗಾರ್ ಅವರಿಗೂ ಬಾಲ್ಯದ ಗೆಳೆತನ. ಇಬ್ಬರದ್ದು ಹೋಗಯ್ಯ ಬಾರಯ್ಯ ಸ್ನೇಹ. ಇವರಿಬ್ಬರ ಜೋಡಿ ಚೇಷ್ಟೆಗಳಿಗೆ ಶಾಲೆಗಳಲ್ಲಿ ಉಂಟು ಮಾಡುತ್ತಿದ್ದ ತರಲೆಗಳಿಗೆ ಇಲ್ಲೊಂದು ಸ್ಯಾಂಪಲ್. ಗೊರೂರರ ಸಹಪಾಠಿಯೊಬ್ಬ ಅವರೊಂದಿಗೆ ಅದೇ ಶಾಲೆಯಲ್ಲಿ ಓದುತ್ತಿದ್ದ ಆತನಿಗೆ ಒಂದು ಕಣ್ಣು ಸ್ವಲ್ಪ ಐಬು. ಅವನನ್ನು ಹೇಗಾದರೂ ಮಾಡಿ ಕೀಟಲೆ ಮಾಡಬೇಕು, ಆದರೆ ಅದು ಅವನಿಗೆ ಗೊತ್ತಾಗಬಾರದು ಎಂಬುದು ಈ ಇಬ್ಬರು ಗೆಳೆಯರ ತಂತ್ರ. ನೇರವಾಗಿ ಅವನನ್ನ ಒಕ್ಕಣ್ಣ ಎಂದರೆ ಕೋಪ ಬಂದು ಇನ್ನೇನಾದರೂ ಅನಾಹುತ ಮಾಡಿಯಾನು ಎಂಬ ಭಯ ಬೇರೆ. ಅದಕ್ಕಾಗಿ ಒಂದು ಉಪಾಯವನ್ನು ಈ ಇಬ್ಬರು ಗೆಳೆಯರು ಹೂಡಿದರು. ಅದಕ್ಕಾಗಿ ಹೊಳೆದ ಹೊಸ ಹೆಸರು ದಶಾಕ್ಷ ಎಂಬುದು.

ಈ ಹೆಸರಿನಿಂದ ಕರೆದರೆ ಸಹಪಾಠಿಗೆ ಗೊತ್ತಾಗುವುದೂ ಇಲ್ಲ, ಹಾಗೂ ಅರ್ಥ ಕೇಳಿದರೆ ನೋಡಿಕೊಂಡರಾಯ್ತು ಎಂಬ ನಿರ್ಧಾರಕ್ಕೂ ಬಂದಿದ್ದಾಯ್ತು. ಸಿಕ್ಕಾಗಲೆಲ್ಲ ಆತನನ್ನು ಏನಯ್ಯ ದಶಾಕ್ಷ ಎಂದು ಈ ಗೆಳೆಯರು ಛೇಡಿಸುತ್ತಾ ನಗುತ್ತಿದ್ದರೆ ಆತನದ್ದು ಏನೊಂದೂ ಅರ್ಥವಾಗದ ಕಕಮಕನಾಗುವ ಸ್ಥಿತಿ. ಕಡೆಗೂ ಒಂದು ದಿನ ಅದರ ಅರ್ಥ ಕೇಳಿದಾಗ ಆತನಿಗೆ ಗೊರೂರು ಹೇಳಿದ್ದೇನು ಗೊತ್ತೆ? 'ಶಿವನಿಗೆ ಮೂರು ಕಣ್ಣು, ನಿನಗೆ ಹತ್ತು ಕಣ್ಣು. ದಶಾಕ್ಷ ಎಂದರೆ ಹತ್ತು ಕಣ್ಣು ಹೊಂದಿರುವವನು ಎಂದು ಅರ್ಥ ಅಂದರೆ ನೀನು ಆ ಪರಶಿವನಿಗಿಂತ ಮಿಗಿಲು. ಒಂದು ಕೈ ಜಾಸ್ತಿ' ಎಂದು ಹೇಳಿದರು. 'ಶಿವ ದೇವನಾದರೆ ನೀನು ಮಹಾದೇವ' ಎಂದರು.

'ಓ ಹೀಗೋ' ಎಂದ ತಾನು ಶಿವನಿಗೂ ಮಿಗಿಲು ಎಂದು ಇವರೆಲ್ಲ ಹೇಳುತ್ತಿದ್ದಾರೆ ಎಂದು ಬೀಗಿದ್ದೇ ಬೀಗಿದ್ದು. ಆದರೆ ಗೊರೂರರಿಗೆ ಒಳಗೊಳಗೇ ನಗು. ಇಷ್ಟಕ್ಕೂ ದಶಾಕ್ಷ ಎಂಬುದರ ನಿಜವಾದ ಅರ್ಥ ಇದು. ದಶ ಎಂದರೆ ೧೦(ಹತ್ತು) ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಇಲ್ಲೊಂದು ತುಂಟತನದ ಅರ್ಥವಿದೆ. ಹತ್ತು ಎಂಬುದನ್ನು ಅಂಕೆಯಲ್ಲಿ ಬರೆದಾಗ ಅದು ಒಂದು ಮತ್ತು ಸೊನ್ನೆ (೧೦) ಆಗುತ್ತದೆ. ಸೊನ್ನೆಗೆ ಲೆಕ್ಕಾಚಾರದಲ್ಲಿ ಬೆಲೆ ಇಲ್ಲ. ಒಂದಂಕಿಗೆ ಮಾತ್ರ ಬೆಲೆ. ದಶಾಕ್ಷ ಎಂದರೆ ಒಂದು ಕಣ್ಣುಳ್ಳವನು ಎಂಬುದು ಇದರ ನಿಜವಾದ ಅರ್ಥ.

ಗೊರೂರರ ತುಂಟತನ ಕಡೆಗೂ ಆ ಸಹಪಾಠಿಗೆ ಅರ್ಥವಾಯಿತೋ ಇಲ್ಲವೋ ಗೊತ್ತಿಲ್ಲ. ಆದರೆ ದಶಾಕ್ಷ ಎಂಬುದರ ನಿಜವಾದ ಅರ್ಥ ತಿಳಿದಿದ್ದ ಈ ಮಿತ್ರರು ಮಾತ್ರ ಆತನನ್ನು ಕರೆದಾಗಲೆಲ್ಲಾ ದಿನೇ ದಿನೇ ಮುಸಿ ಮುಸಿ ನಗುತ್ತಿದ್ದುದು ಮಾತ್ರ ಸತ್ಯ.

ಗೊರೂರರೇ ನನಗೆ ಹೇಳಿದ ಕಥೆಯಿದು, ವಿನೋದ ಪ್ರಸಂಗವೊಂದರಲ್ಲಿ.

❑

೧೮೯. ಆಹಾ... ಭಾಗ್ಯವೆಂದರೆ ಇದೇ ಅಲ್ವೇನಯ್ಯಾ

ತಮ್ಮ ಕಾವ್ಯಗಳ ಮೂಲಕ ಜನಪ್ರಿಯರಾದ ಕವಿ ಪು.ತಿ.ನರಸಿಂಹಾಚಾರ್ ಅವರು ಆಚಾರದಲ್ಲಿ ಸಂಪ್ರದಾಯವಾದಿ. ಆದರೇನಂತೆ, ಆತಿಥ್ಯದ ವಿಚಾರಕ್ಕೆ ಬಂದರೆ ಅವರಷ್ಟು ಧಾರಾಳಿ ಇನ್ನೊಬ್ಬರಿಲ್ಲ ಎನ್ನಬಹುದೇನೋ. ಅದಕ್ಕೊಂದು ಸ್ಯಾಂಪಲ್ ಇಲ್ಲಿದೆ.

ಖ್ಯಾತ ಸಾಹಿತಿಗಳಾದ ಡಾ. ಪ್ರಭುಶಂಕರ ಮತ್ತು ಪ್ರೊ. ಸು.ಜ.ನಾ. ಅವರಿಗೆ ಪು.ತಿ.ನ. ಬಗ್ಗೆ ಅಪಾರ ಭಕ್ತಿ ಮತ್ತು ಗೌರವ. ಒಂದು ರೀತಿಯಲ್ಲಿ ಹೇಳಬಹುದಾದರೆ ತಮ್ಮ ಗುರುವಿನ ಬಗ್ಗೆ ಈ ಶಿಷ್ಯರಿಗೆ ಒಂದು ರೀತಿಯಲ್ಲಿ ದೇವರ ಬಗ್ಗೆ ಇರಬಹುದಾದ ಆರಾಧನಾ ಮನೋಭಾವ.

ಒಮ್ಮೆ ಬೆಂಗಳೂರಿನ ಕಲಾಕ್ಷೇತ್ರದಲ್ಲಿ ಯಾವುದೋ ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಕ್ಕೆ ಈ ಇಬ್ಬರು ಮಿತ್ರರೊಡನೆ ಮೈಸೂರಿನಿಂದ ಬಂದಿದ್ದರು. ಅದು ಸಂಜೆ ಇದ್ದ ಕಾರ್ಯಕ್ರಮವಾಗಿದ್ದರಿಂದ ಮುಗಿಯುವುದು ತಡವಾಗಿ ರಾತ್ರಿಯಾಗಿತ್ತು. 'ಹೇಗೂ ಮೈಸೂರಿನಿಂದ ಮಿತ್ರರ ವಾಹನದಲ್ಲಿ ಬಂದಿದ್ದೇವೆ, ಗುರುಗಳಾದ ಪು.ತಿ.ನ. ಅವರನ್ನು ಕಂಡು ಮಾತಾಡಿಸಿ ಹೋಗೋಣ, ಇಷ್ಟು ಬೇಗ ಅವರು ಮಲಗಿರಲಾರರು' ಎಂದವರೆ ಡಾ. ಪ್ರಭುಶಂಕರ ಪು.ತಿ.ನ. ಅವರ ಮನೆಗೆ ಫೋನಾಯಿಸಿದರು. ಆಗೆಲ್ಲ ಮೊಬೈಲ್ ಇರಲಿಲ್ಲ. ಅಲ್ಲೇ ಇದ್ದ ಲ್ಯಾಂಡ್‌ಲೈನ್‌ನಿಂದ ಪು.ತಿ.ನ. ಅವರ ಮನೆಗೆ ಕರೆ ಮಾಡಿ, 'ಸಾರ್, ಬೆಂಗಳೂರಿಗೆ ಬಂದಿದ್ದೇವೆ. ಒಂದು ಕಾರ್ಯಕ್ರಮ ಇತ್ತು. ಮೈಸೂರಿಗೆ ವಾಪಾಸಾಗುವ ಮುನ್ನ ನಿಮ್ಮನ್ನು ಕಂಡು ಮಾತಾಡಿಸಿಕೊಂಡು ಹೋಗೋಣ ಅಂದುಕೊಂಡು ಫೋನ್ ಮಾಡಿದೆ. ತೊಂದರೆ ಆಯ್ತೇನೋ' ಎಂದು ತುಸು ಸಂಕೋಚದಿಂದಲೇ ಕೇಳಿದರು.

ಆ ಮಾತಿಗೆ ಆ ಕಡೆಯಿಂದ ಉತ್ತರಿಸಿದ ಪು.ತಿ.ನ. 'ಅಯ್ಯೋ ಎಲ್ಲಾದರೂ ಉಂಟೇನಪ್ಪಾ...? ಕಲಾಕ್ಷೇತ್ರದಲ್ಲಿ ಕಾರ್ಯಕ್ರಮ ಅಂತಿದ್ದೀರಿ. ಅಲ್ಲಿಯ ವ್ಯವಸ್ಥೆಗಳು ಹೇಗೋ ಏನೋ. ಒಂದ್ಕೆಲ್ಸ ಮಾಡಿ. ಸೀದಾ ಊಟಕ್ಕೆ ಇಲ್ಲಿಗೇ ಬಂದುಬಿಡಿ' ಎಂದರು. ಸರಿರಾತ್ರಿ ಹನ್ನೊಂದು ಗಂಟೆ ದಾಟಿದ್ದರೂ ಮಲಗದೇ ಶಿಷ್ಯರಿಗಾಗಿ ತಮ್ಮ ಜಯನಗರ 'ಟಿ' ಬ್ಲಾಕ್‌ನ ಮನೆಯಲ್ಲಿ ಕಾಯುತ್ತಿದ್ದ ಪು.ತಿ.ನ. ಶಿಷ್ಯರು ಬಂದೊಡನೆಯೇ ಅವರನ್ನು ಸಡಗರದಿಂದ ಸ್ವಾಗತಿಸಿ ಕುಶಲೋಪರಿ ವಿಚಾರಿಸಿ ಊಟಕ್ಕೇಳಿ ಎಂದು ಎಬ್ಬಿಸಿದರು.

ಅವತ್ತು ರಾತ್ರೆ ಮೈಸೂರಿನಿಂದ ಈ ಸಾಹಿತಿಮಿತ್ರರ ಜತೆ ಬಂದಿದ್ದ ಎಲ್ಲರಿಗೂ ಪು.ತಿ.ನ.ರ ಮನೆಯಲ್ಲಿ ಪುಷ್ಕಳವಾದ ಭೋಜನ. ಊಟವಾದ ನಂತರ ಒಂದಷ್ಟು ಹರಟೆ, ಸಾಹಿತ್ಯದ ವಿಚಾರಗಳಿಗೆ ಸಂಬಂಧಿಸಿದಂತೆ ಚರ್ಚೆ. ಹೊತ್ತು ಸರಿದು ಮಧ್ಯರಾತ್ರಿ ದಾಟಿದರೂ ಈ ಹರಟೆ ಮುಗಿಯುವಂತೆಯೇ ಇರಲಿಲ್ಲ. ಪಕ್ಕಾ ಸಂಪ್ರದಾಯಸ್ಥರಾದ ಪು.ತಿ.ನ.ರ ಮನೆಯಲ್ಲಿ ಒಂದು ಅಲಿಖಿತ ನಿಬಂಧನೆಯೆಂದರೆ ಮನೆಗೆ ಬಂದ ಅತಿಥಿಗಳ ಊಟವಾಗುವವರೆಗೆ ಮನೆಯವರಾರೂ ಊಟ ಮಾಡುವಂತಿಲ್ಲ ಎಂಬುದು. ಅತಿಥಿ

ದೇವೋಭವ ಎಂಬುದನ್ನು ಈ ಹಿರಿಯ ಜೀವ ಪಾಲಿಸಿಕೊಂಡು ಬಂದಿದ್ದರು. ಸರಿ, ಊಟ–ಹರಟೆ ಮುಗಿಸಿದ ಅತಿಥಿಗಳು ಮೈಸೂರಿಗೆ ಹೊರಡಲು ಕಾರು ಹತ್ತುವ ವೇಳೆಗೆ ಅಹೋರಾತ್ರಿಯಾಗಿತ್ತು. ಅತಿಥಿಗಳನ್ನು ಕಳಿಸಿ ಮನೆಯವರೆಲ್ಲ ಊಟ ಮಾಡಿ ಮಲಗುವ ಹೊತ್ತಿಗೆ ಅರ್ಧರಾತ್ರಿ ದಾಟಿತ್ತು.

ಮುಂದಿನ ವಿಷಯ ಇನ್ನೂ ಕುತೂಹಲಕರವಾದುದು. ಪು.ತಿ.ನ.ರ ಮನೆ ಇದ್ದ ಜಯನಗರ 'ಟಿ' ಬ್ಲಾಕ್‌ನಲ್ಲೇ ನನ್ನ ಮನೆ. ಆಗೆಲ್ಲ ನಾನು ವಿದ್ಯಾರ್ಥಿ. ಬೆಳಗ್ಗೆ ಎದ್ದು ಅವರ ಮನೆಗೆ ಆಗಾಗ ಹೋಗುವುದು ನಾನು ಬೆಳೆಸಿಕೊಂಡು ಬಂದಿದ್ದ ಅಭ್ಯಾಸ.

ಎಂದಿನಂತೆ ಬೆಳಗ್ಗೆ ಎಂಟು ಗಂಟೆಗೆಲ್ಲ ಅವರ ಮನೆಗೆ ನಾನು ಹಾಜರಾದಾಗ ಮನೆಯ ಹೊರಗಿನ ವರಾಂಡದಲ್ಲಿ ಪೇಪರ್ ಓದುತ್ತಾ ಕುಳಿತಿದ್ದ ಪು.ತಿ.ನ. ನನ್ನನ್ನು ಕಂಡವರೆ, 'ಬಾರಯ್ಯಾ ಬಾ.. ನಿನ್ನೆ ರಾತ್ರಿ ಎಂಥಾ ಅಪರೂಪದ ಅವಕಾಶ ನನಗೆ ಸಿಕ್ಕಿತ್ತು ಅಂದರೆ ಅದು ದೇವರೇ ನನಗಾಗಿ ಸೃಷ್ಟಿಸಿಕೊಟ್ಟ ಅಪೂರ್ವ ಅವಕಾಶ ಕಣಯ್ಯ' ಎಂದು ಹಿಂದಿನ ರಾತ್ರಿ ಮೈಸೂರಿನಿಂದ ಬಂದ ಅತಿಥಿಗಳ ಬಗ್ಗೆ, ಅವರಿಗೆ ತಾವು ಮನೆಯಲ್ಲಿ ನೀಡಿದ ಸತ್ಕಾರದ ಬಗ್ಗೆ ಹೇಳತೊಡಗಿದರು.

ಆವತ್ತು ಪು.ತಿ.ನ. ಅವರು ಎಷ್ಟು ಆನಂದಭರಿತರಾಗಿದ್ದರು ಎಂದರೆ ಅವರ ಮಾತುಗಳಲ್ಲಿ ಪದೇ ಪದೇ 'ಇದು ದೇವರೇ ನನಗಾಗಿ ಸೃಷ್ಟಿಸಿದ್ದ ಅವಕಾಶ ಕಣಯ್ಯ. ಮೈಸೂರಿನ ಅತಿಥಿಗಳು ಫೋನ್ ಮಾಡುವುದು ಒಂದು ನಿಮಿಷ ತಡವಾಗಿದ್ದರೂ ಮನೆಯಲ್ಲಿ ನಮ್ಮದೆಲ್ಲ ಊಟ ಮುಗಿದಿರುತ್ತಿತ್ತು. ಇನ್ನೇನು ತಟ್ಟೆಯಲ್ಲಿದ್ದ ಊಟಕ್ಕೆ ಕೈ ಹಾಕಬೇಕೆನ್ನುವಷ್ಟರಲ್ಲಿ ಮೈಸೂರಿನ ಗೆಳೆಯರಿಂದ ಫೋನ್ ಬಂತು. ಊಟಕ್ಕೆ ಬರುವಂತೆ ಆಹ್ವಾನಿಸಿದೆ' ಎಂದು ನಡೆದ ಸಂಗತಿಯನ್ನೆಲ್ಲ ವಿವರಿಸಿದರು.

ವಾಸ್ತವಾಗಿ ಅಂದು ನಡೆದಿದ್ದೇನೆಂದರೆ ಪು.ತಿ.ನ. ಅವರ ಮನೆಯಲ್ಲಿ ಮನೆ ತುಂಬಾ ಅವತ್ತು ಮಕ್ಕಳು, ಅಳಿಯಂದಿರು, ನೆಂಟರಿಷ್ಟರ ದಂಡೇ ತುಂಬಿತ್ತು. ಸಾಮಾನ್ಯವಾಗಿ ಮನೆಯ ಯಜಮಾನರು ಊಟಕ್ಕೆ ಬಂದು ಕೂರದೇ ತಟ್ಟೆಗೆ ಕೈ ಹಾಕುವ ಸಂಪ್ರದಾಯ ಅವರ ಮನೆಯಲ್ಲಿ ಇರಲಿಲ್ಲ. ಹಿಂದಿನ ರಾತ್ರಿ ಫೋನ್ ಬಂದೊಡನೇ ಊಟಕ್ಕೆ ಕೂತಿದ್ದ ಮಕ್ಕಳು, ಅಳಿಯಂದಿರು ಎಲ್ಲರನ್ನು ಎಬ್ಬಿಸಿ ತಟ್ಟೆಯಲ್ಲಿದ್ದ ಅನ್ನವನ್ನು ಮತ್ತೆ ಪಾತ್ರೆಗೆ ಹಾಕಿಸಿ ಮತ್ತೆ ಇನ್ನಷ್ಟು ಅನ್ನ, ಅಡಿಗೆ ಮಾಡು ಎಂದು ಪತ್ನಿಗೆ ಸೂಚನೆ ನೀಡಿದ್ದಲ್ಲದೇ ವಿಶೇಷ ಅಡುಗೆಯನ್ನೂ ಅತಿಥಿಗಳಿಗಾಗಿ ಮಾಡಿಸಿದ್ದರು.

ಅವರೆಲ್ಲ ಊಟ ಮುಗಿಸಿ ಹೋಗುವ ತನಕ ಮನೆಯಲ್ಲಿದ್ದವರು ಯಾರೂ ಊಟ ಮಾಡದೇ ಅತಿಥಿಗಳ ಸತ್ಕಾರದಲ್ಲೇ ಬೀಗಿದರು. ಹಿಂದಿನ ರಾತ್ರಿಯ ಪ್ರಸಂಗವನ್ನು ವಿವರಿಸುತ್ತಿದ್ದಾಗ ಪು.ತಿ.ನ. 'ಇನ್ನೇನು ತಟ್ಟೆಗೆ ಕೈ ಹಾಕಬೇಕು ಅನ್ನುವಷ್ಟರಲ್ಲಿ ಫೋನ್ ಬಂತು. ನಾನು ಕರೆ ಸ್ವೀಕರಿಸುವುದು ಒಂದು ಸೆಕೆಂಡ್ ತಡವಾಗಿದ್ದರೆ ಮನೆಯವರೆಲ್ಲ ಊಟ ಶುರು ಮಾಡಿಬಿಡುತ್ತಿದ್ದೆವು. ಅತಿಥಿಗಳು ಉಪವಾಸ ಹೋಗಬೇಕಿತ್ತು. ಆದರೆ ಸುದೈವವಶಾತ್ ಹಾಗೆ ಆಗಲಿಲ್ಲ. ದೇವರೇ ಹೀಗಾಗುವುದನ್ನು ತಪ್ಪಿಸಿದ' ಎಂದು ಹೇಳುವಾಗ ಪು.ತಿ.ನ. ಅವರ ಮುಖದಲ್ಲಿ ಅದ್ಯಾವುದೋ ಪುಣ್ಯ ಕಾರ್ಯ ಮಾಡಿ ಧನ್ಯರಾದ ಭಾವ ತುಂಬಿತ್ತು.

೧೧೧. ಮರುಮಾತಿಲ್ಲದೆ ಪುಸ್ತಕ ಹಿಂದಿರುಗಿಸಿದಳು

ದೇಶಪಾಂಡೆ ಅವರು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಚೀಫ್ ಲೈಬ್ರೇರಿಯನ್ ಆದಾಗ ನಡೆದ ಪ್ರಸಂಗ. ದೇಶಪಾಂಡೆ ಅವರು ಹೊರಗಿನ ವಿದ್ವಾಂಸರು ದುಬಾರಿ ಪುಸ್ತಕಗಳನ್ನು ಕೊಳ್ಳಲಾಗದಾಗ ಅವುಗಳನ್ನು ಪುಸ್ತಕ ಭಂಡಾರಕ್ಕೆ ತರಿಸಿ ಅವರಿಗೆ ಓದಲು ಕೊಡುತ್ತಿದ್ದರು. ಶಂಬಾ ಜೋಶಿ ಅವರು ದೇಶಪಾಂಡೆ ಅವರ ಮಿತ್ರರಾಗಿದ್ದರು. ಶಾಲಾಮಾಸ್ತರರಾದ ಶಂಭಾ ಅವರಿಗೆ ನೂರಾರು ಬೆಲೆಯ ವಿದೇಶೀ ಆಕರಗ್ರಂಥಗಳನ್ನು ಅಧ್ಯಯನಕ್ಕಾಗಿ ಕೊಳ್ಳಲು ಆರ್ಥಿಕ ಶಕ್ತಿ ಇರಲಿಲ್ಲ. ಇದನ್ನು ತಿಳಿದ ದೇಶಪಾಂಡೆ ಅವರು ಅವರಿಗೆ ಬೇಕಾದ ಪುಸ್ತಕಗಳನ್ನು ಪುಸ್ತಕ ಭಂಡಾರಕ್ಕೆ ತರಿಸಿ ಓದಲು ಅವರಿಗೆ ಕೊಡುತ್ತಿದ್ದರು. ಕೇವಲ ಕಾಲೇಜು ಪ್ರಾಧ್ಯಾಪಕರಿಗಷ್ಟೇ ಪುಸ್ತಕ ಭಂಡಾರ ಇರುವುದಲ್ಲ. ನಾಡಿನ ವಿದ್ವಾಂಸರ ಅವಶ್ಯಕತೆಗಳನ್ನೂ ಪೂರೈಸಬೇಕು ಎಂಬುದು ಅವರ ಧ್ಯೇಯವಾಗಿತ್ತು. ಒಮ್ಮೆ ಅಲ್ಲಿಯ ಇತಿಹಾಸ ಅಧ್ಯಾಪಕರು ದೇಶಪಾಂಡೆ ಅವರ ಬಳಿ ಇದ್ದಾಗ ಶಂಬಾ ಅವರು ಬಂದರು. ಇತಿಹಾಸದ ವಿಷಯ ಮಾತನಾಡುತ್ತಾ ಶಂಬಾ ಜೋಶಿ ಇತ್ತೀಚೆಗೆ ಬಂದ ಜಗತ್ಪ್ರಸಿದ್ಧ ಲೇಖಕರ ಹಲವು ಪುಸ್ತಕಗಳ ಪ್ರಸ್ತಾಪ ಮಾಡಿದರು. 'ನಾನು ಅವುಗಳನ್ನು ತಿಳಿದೇ ಇಲ್ಲ. ಅವುಗಳನ್ನು ತರಿಸಿ ದೇಶಪಾಂಡೆ ಅವರೇ' ಎಂದರು ಆ ಇತಿಹಾಸ ಅಧ್ಯಾಪಕರು.'ಅವುಗಳನ್ನು ಈಗಾಗಲೇ ತರಿಸಿದ್ದೂ ಆಗಿದೆ, ಶಂಬಾ ಅವರು ಓದಿದ್ದೂ ಆಗಿದೆ' ಎಂದಾಗ ಆ ಪ್ರಾಧ್ಯಾಪಕರು ಪ್ರೈಮರಿ ಶಾಲಾ ಅಧ್ಯಾಪಕರು ವಿಶ್ವವಿದ್ಯಾನಿಲಯದ ಅಧ್ಯಾಪಕರಿಗಿಂತ ಓದಿನಲ್ಲಿ ಮುಂದಿರುವುದನ್ನು ಕಂಡು ಅಚ್ಚರಿಗೊಂಡರು.

ಈ ಪ್ರಸಂಗ ನಡೆದ ಒಂದು ವಾರಕ್ಕೆ ಪುಸ್ತಕ ಭಂಡಾರದಲ್ಲಿ ಎರಡು ಭಾಗಗಳ ಇಂಗ್ಲಿಷ್ ಪುಸ್ತಕವೊಂದು ಆಕರಗ್ರಂಥವಾಗಿದ್ದು ಅದನ್ನು ಪುಸ್ತಕ ಭಂಡಾರದ ಮುಂಭಾಗದಲ್ಲೇ ಪ್ರತ್ಯೇಕವಾಗಿಟ್ಟಿದ್ದರು. ಅದನ್ನು ಅಲ್ಲಿಯೇ ಓದಿಡಬೇಕಿತ್ತು. ಒಬ್ಬ ವಿದ್ಯಾರ್ಥಿನಿ ಆ ಎರಡೂ ಬೃಹತ್ ಇಂಗ್ಲೀಷ್ ಸಾಹಿತ್ಯ ಚರಿತ್ರೆಯ ಗ್ರಂಥಗಳನ್ನು ಕದಿಯಲು ನಿರ್ಧರಿಸಿದಳು. ವಿಶ್ವವಿದ್ಯಾಲಯದ ಪೂರ್ತಿ ವಿದ್ಯುತ್ತಿನ ನಿಯಂತ್ರಣ ಮಾಡುತ್ತಿದ್ದ ಅಧಿಕಾರಿಗೆ ಲಂಚ ಕೊಟ್ಟು ಸಂಜೆ ೭ರಲ್ಲಿ ಕತ್ತಲಾದಾಗ ಹತ್ತು ನಿಮಿಷ ಇಡೀ ವಿಶ್ವವಿದ್ಯಾನಿಲಯದ ದೀಪಗಳನ್ನು ಆರಿಸಲು ತಿಳಿಸಿದಳು. ಮಾರನೇ ದಿನ ಹಾಗೆಯೇ ಮಾಡಿದಾಗ ಬಾಗಿಲಲ್ಲಿ ಕೌಂಟರ್ ಬಳಿ ಇದ್ದ ಆ ಎರಡು ಬೃಹತ್ ಗ್ರಂಥದಲ್ಲಿ ಮೊದಲ ಭಾಗ ತೆಗೆದುಕೊಂಡು ಕತ್ತಲಲ್ಲಿ ಹೊರಗೆ ಹೋದಳು. ಸ್ವಲ್ಪ ಹೊತ್ತಿಗೆ ದೀಪ ಬಂದಿತು. ಏನೋ ವಿದ್ಯುತ್ ಏರುಪೇರಾಗಿದೆ ಎಂದು ಎಲ್ಲರೂ ಸುಮ್ಮನಾಗಿದ್ದರು.

ಪ್ರತಿದಿನ ಎಲ್ಲರೂ ಪರಾಮರ್ಶೆ ಮಾಡುತ್ತಿದ್ದು ಬಾಗಿಲಲ್ಲೇ ಇದ್ದ ಗ್ರಂಥ ಇಲ್ಲದ್ದು ತಿಳಿದು ಗಲಾಟೆ ಆಯಿತು. ಎಲ್ಲೋ ಸ್ಥಾನಪಲ್ಲಟವಾಗಿದೆ, ಯಾರೋ ವಿದ್ಯಾರ್ಥಿ

ಭಂಡಾರದ ಒಳಗೆ ಬೀರುವಿನಲ್ಲಿ ಅಡಗಿಸಿಟ್ಟಿರಬೇಕು, ಹುಡುಕಿಸಿ ಕೊಡುತ್ತೇನೆ ಎಂದು ವಿದ್ಯಾರ್ಥಿಗಳಿಗೆ ದೇಶಪಾಂಡೆ ತಿಳಿಸಿದರು.

ಈ ಘಟನೆ ನಡೆಯುವ ತಿಂಗಳ ಮುಂದೆ ಪುಸ್ತಕ ಭಂಡಾರದಲ್ಲಿ ಸಮಸ್ಯೆಯೊಂದಿತ್ತು. ತರಗತಿಯಲ್ಲಿ ನೀವೆಲ್ಲಾ ಓದಲೇಬೇಕಾದ ಗ್ರಂಥ ಅಂತ ಪ್ರಾಧ್ಯಾಪಕರು ಹೇಳಿದರೆ ಕೆಲವು ವಿದ್ಯಾರ್ಥಿಗಳು ಪಿರಿಯಡ್ ಮುಗಿದ ಕೂಡಲೇ ಲೈಬ್ರರಿಗೆ ಆ ಪುಸ್ತಕವನ್ನು ಹುಡುಕಿ ತೆಗೆದು ಬೇರೆ ವಿಭಾಗದ ಬೀರುವಿನಲ್ಲಿ ಇಡುತ್ತಿದ್ದರು. ಚರಿತ್ರೆಯ ವಿದ್ಯಾರ್ಥಿ ಆ ಗ್ರಂಥವನ್ನು ಫಿಸಿಕ್ಸ್ ಬೀರುವಿನಲ್ಲಿ ಇಡುತ್ತಿದ್ದ. ಬಿಡುವಾದ ಮೇಲೆ ಓದುತ್ತಿದ್ದ. ಪ್ರತಿಯೊಬ್ಬರಿಗೂ ಪ್ರಾಧ್ಯಾಪಕರು ಹೇಳಿದ ಪುಸ್ತಕಗಳು ಲೈಬ್ರರಿಯಲ್ಲಿ ಇದ್ದರೂ ಸಿಗದೆ ಇದ್ದ ದೂರುಗಳು ಬಂದವು. ಆಗ ದೇಶಪಾಂಡೆ ಅವರು ವೈಸ್‌ಚಾನ್ಸಲರ್ ಪಾವಟೆ ಅವರಿಗೆ ಹೇಳಿ ಹತ್ತು ಜನ ಸಹಾಯಕರನ್ನು ನೇಮಕ ಮಾಡಿಕೊಂಡು ಪ್ರತಿ ಬೀರು ಸಾಲಿನ ಬಳಿ ಒಬ್ಬೊಬ್ಬನನ್ನು ಕಾವಲು ಹಾಕಿದರು. ಯಾವ ವಿದ್ಯಾರ್ಥಿಯೇ ಆಗಲಿ, ಪುಸ್ತಕವನ್ನು ಬೀರುವಿನಿಂದ ತೆಗೆದ ಮೇಲೆ ಓದಿ ಟೇಬಲ್ ಮೇಲೆ ಮೇಲಿಡಬೇಕು, ಬೀರುವಿನಲ್ಲಿ ಇಡಬಾರದು. ಸಹಾಯಕರು ಬೀರುವಿನಲ್ಲಿ ಜೋಡಿಸಬೇಕು' ಎಂಬ ನಿಯಮ ಮಾಡಿದರು. ಅಂದಿನಿಂದ ಆ ಸಮಸ್ಯೆ ಪರಿಹಾರವಾಯಿತು.

ಮಾರನೇ ದಿನ ಜವಾನನೊಬ್ಬನನ್ನು ಲೈಬ್ರರಿಯ ಬಾಗಿಲ ಬಳಿ ಕಾವಲು ಹಾಕಿದರು. ದೀಪ ಹೋದರೆ ಕೂಡಲೇ ಬಾಗಿಲು ಮುಚ್ಚುವಂತೆ ತಿಳಿಸಿದರು. ಮೊದಲನೇ ಭಾಗ ಕದ್ದವಳು ಎರಡನೇ ಭಾಗ ಕದಿಯಲು ಬಂದೇ ಬರುತ್ತಾಳೆ ಎಂದು ತಿಳಿದಿದ್ದರು. ಊಹೆ ನಿಜವಾಯಿತು. ಒಂದು ವಾರದ ಬಳಿಕ ಆ ಹುಡುಗಿ ಅದೇ ತಂತ್ರ ಬಳಸಿ ೨ನೇ ಭಾಗ ತೆಗೆದುಕೊಂಡು ಕತ್ತಲಲ್ಲಿ ಬಾಗಿಲ ಬಳಿ ಬಂದಾಗ, ಕೂಡಲೇ ಅಲ್ಲಿದ್ದ ಜವಾನ ದಿಢೀರನೇ ಬಾಗಿಲು ಮುಚ್ಚಿದ. ಪುಸ್ತಕ ಕದ್ದೊಯ್ಯುತ್ತಿದ್ದ ಹುಡುಗಿ ಕತ್ತಲಲ್ಲಿ ಜವಾನನಿಗೆ ಢಿಕ್ಕಿ ಹೊಡೆದು ಸಿಕ್ಕಿಬಿದ್ದಳು.

ದೇಶಪಾಂಡೆಯ ಬಳಿ ವಿದ್ಯಾರ್ಥಿನಿಯನ್ನು ಕರೆದೊಯ್ದ. ಮಾರನೇ ದಿನ ಅವರ ತಂದೆಯನ್ನು ಕರಿಸಿ 'ಮಗಳ ಭವಿಷ್ಯ ಹಾಳಾಗಬಾರದೆಂದು ಈ ವಿಷಯ ತಿಳಿಸಿಲ್ಲ. ನಿಮ್ಮ ಮಗಳಿಗೆ ಬುದ್ಧಿ ಹೇಳಿ' ಎಂದರು. ಮಗಳ ಕಡೆ ತಿರುಗಿ 'ಎರಡು ಪುಸ್ತಕ ತಂದುಕೊಡು, ಮರುಮಾತಾಡಬೇಡ' ಎಂದು ಗದರಿಸಿದರು ಅವಳ ತಂದೆ. ಅವಳನ್ನು ಬೈದು ಪುಸ್ತಕಗಳನ್ನು ಕೂಡಲೇ ವಾಪಾಸ್ ಮಾಡಿದರು. ಆಗ ದೇಶಪಾಂಡೆ 'ಈಗಿನ ಕಾಲೇಜಿನ ಹುಡುಗರಿಗೆ ಇಂಥಾ ಸುದ್ದಿ ತಿಳಿದರೆ ಆ ಹುಡುಗಿಗೆ ಹೆಸರಿಟ್ಟು ಚುಡಾಯಿಸಿ ಹಿಂಸಿಸುತ್ತಾರೆ. ಆಗ ಹುಡುಗಿ ಆತ್ಮಹತ್ಯೆ ಮಾಡಿಕೊಳ್ಳುವ ಸಂಭವವಿರುತ್ತೆ. ಹಾಗಾಗಿ ಈ ಘಟನೆಯನ್ನು ಯಾರಿಗೂ ಹೇಳಿಲ್ಲ, ಯಾರಿಗೂ ತಿಳಿದಿಲ್ಲ' ಎಂದರು.

❑

೧೧೧. ಸ್ವಲ್ಪ ನಿಮ್ಮ ಪೆನ್ನು ಕೊಡ್ತೀರಾ?

ಕಾಲೇಜುಗಳ ಲೈಬ್ರರಿಗಳಿಗೆ ಪುಸ್ತಕಭಂಡಾರಿಗಳಿರುತ್ತಾರೆ. ವಿಶ್ವವಿದ್ಯಾನಿಲಯಗಳಲ್ಲಿ ಸಹಾಯಕ ಪುಸ್ತಕಭಂಡಾರಿಗಳ ಜತೆಗೆ ಪ್ರಧಾನ ಪುಸ್ತಕ ಭಂಡಾರಿಗಳು ಅಥವಾ ಲೈಬ್ರರಿಹೆಡ್ ಒಬ್ಬರಿರುತ್ತಾರೆ. ಇಂಥ ಲೈಬ್ರರಿಹೆಡ್ ಪೈಕಿ ದೇಶಪಾಂಡೆ ಒಬ್ಬರು ನಾ ಮರೆಯಲಾಗದ ವ್ಯಕ್ತಿಗಳಲ್ಲಿ ಒಬ್ಬರು.

ದೇಶಪಾಂಡೆ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಧಾನ ಪುಸ್ತಕಭಂಡಾರಿ ಆದಾಗ ನಾನು ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ವಿದ್ಯಾರ್ಥಿ ಆಗಿದ್ದೆ. ಬೆಂಗಳೂರು ಸೈನ್ಸ್ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ಸೆಂಟ್ರಲ್ ಕಾಲೇಜ್ ಲೈಬ್ರರಿಗೆ ದೇಶಪಾಂಡೆ ಲೈಬ್ರರಿಯನ್ ಆಗಿ ಬಂದರು. ಅವರ ಮತ್ತು ನನ್ನ ಪರಿಚಯ ಸಾಕಷ್ಟಿತ್ತು.

ಮೊದಲ ಬಾರಿಗೆ ಅವರ ಹೆಸರು ಕೇಳಿದ್ದು ತಾತಾ ಇನ್ಸ್ಟಿಟ್ಯೂಟ್‌ನಲ್ಲಿ ನನ್ನ ಗೆಳೆಯ ನಾಣಿ ಸಹಾಯಕ ಲೈಬ್ರರಿಯನ್ ಆಗಿದ್ದಾಗ ಇವರ ಬಗ್ಗೆ, ಇವರ ಗುರುಗಳಾದ ರಂಗನಾಥರ ಬಗ್ಗೆ ಹೇಳಿದ್ದ. ನಾರಾಯಣರಾವ್ (ನಾಣಿ) ಹೇಳಿದ ಪ್ರಸಂಗಗಳು ಈಗ ನೆನಪಾಗುತ್ತಿದೆ.

ಲೈಬ್ರರಿಶಾಸ್ತ್ರ ಪಿತಾಮಹ ರಂಗನಾಥ್ ಅವರು ಜಗತ್ಪ್ರಸಿದ್ಧ ಪುಸ್ತಕ ಭಂಡಾರಿ ಕೋಲನ್ ಪದ್ಧತಿ ಆವಿಷ್ಕಾರಕ ವ್ಯಕ್ತಿ. ಭಾರತದಲ್ಲೇ ಪ್ರಸಿದ್ಧರಾಗಿದ್ದರು. ಅವರು ಮದರಾಸ್ ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರದ ಅಧಿಕಾರಿಗಳಾದಾಗ ಅಲ್ಲಿಯ ಲೈಬ್ರರಿಯಲ್ಲಿ ಸಮಸ್ಯೆಯೊಂದು ಉದ್ಭವಿಸಿತು. ಪುಸ್ತಕ ಭಂಡಾರದಲ್ಲಿ ಕಾನೂನು ವಿಭಾಗದಲ್ಲಿದ್ದ ಹೊಸ ಪುಸ್ತಕಗಳನ್ನೆಲ್ಲಾ ಓದಿ ಯಾರೋ ಗೆರೆ ಎಳೆಯುತ್ತಿದ್ದರು ತಮಗೆ ಮುಖ್ಯಭಾಗ ಎನಿಸಿದ್ದಕ್ಕೆ. ಹೀಗಾಗಿ ಕಾನೂನಿನ ಪುಸ್ತಕಗಳಲ್ಲೆಲ್ಲಾ ಗೆರೆ ಎಳೆದ ಹೊಸ ಪುಸ್ತಕಗಳು ಸಾಕಷ್ಟು ಇದ್ದು ಓದುಗರೊಬ್ಬರು ದೂರು ಕೊಟ್ಟರು. ಈ ಬಗ್ಗೆ ಇವರಿಗೆ ನೂರಾರು ಜನ ಬಳಸುವ ವಿಶ್ವವಿದ್ಯಾಲಯದ ಪುಸ್ತಕ ಭಂಡಾರದಲ್ಲಿ ಗೆರೆ ಎಳೆಯುತ್ತಿದ್ದ ವ್ಯಕ್ತಿಯನ್ನು ಗುರುತಿಸಲಾಗದೆ ರಂಗನಾಥರಿಗೆ ವಿಷಯ ತಿಳಿಸಿದರು. ಆಗ ರಂಗನಾಥರು ಪುಸ್ತಕ ಭಂಡಾರದ ಮೂಲೆಯಲ್ಲಿ ಕುಳಿತು ದಿನವೆಲ್ಲಾ ಓದುಗರನ್ನು ಗಮನಿಸುತ್ತಾ ಒಬ್ಬ ಪ್ರಸಿದ್ಧ ಅಡ್ವೋಕೇಟ್ ಆ ಕೆಲಸವನ್ನು ಮಾಡುತ್ತಿದ್ದುದ್ದನ್ನು ಪತ್ತೆ ಹಚ್ಚಿದರು. 'ನೀವೇಕೆ ಓದುವಾಗ ಗೆರೆ ಎಳೆಯುತ್ತೀರಿ?' ಎಂದು ಕೇಳಿದರು. 'ಅದು ನನಗೆ ಅಭ್ಯಾಸವಾಗಿದೆ. ಗೆರೆ ಎಳೆಯದೆ ಪುಸ್ತಕ ಓದಲಾಗುವುದಿಲ್ಲ' ಎಂದರು. ಅವರು ಭಾರೀ ಓದುಗರಾದ ಪ್ರಸಿದ್ಧ ವಕೀಲರಾಗಿದ್ದರು. ಆಗ ರಂಗನಾಥ್ ಒಂದು ನಿಮಿಷ ಚಿಂತಿಸಿ, 'ದಯಮಾಡಿ ನೀವು ಗೆರೆ ಎಳೆಯುತ್ತಿರುವ ನಿಮ್ಮ ಪೆನ್ ಅನ್ನು ಒಂದು ದಿನದ ಮಟ್ಟಿಗೆ ಕೊಡುತ್ತೀರಾ. ನಾಳೆ ತಂದು ಕೊಡುತ್ತೇನೆ. ನಾನಿಲ್ಲಿ ಪುಸ್ತಕ ಭಂಡಾರದ ಅಧಿಕಾರಿ. ನಿಮ್ಮ ಪೆನ್ ಚೆನ್ನಾಗಿದೆ. ಅಂಥದ್ದೇ ಒಂದು ಕೊಂಡುಕೊಳ್ಳುತ್ತೇನೆ' ಎಂದರು. 'ಅದಕ್ಕೇನಂತೆ, ಆಗಲಿ'

ಎಂದು ಅವರು ಪೆನ್ ಕೊಟ್ಟರು. ತಮ್ಮ ಪೆನ್ನನ್ನು ಬದಲಿಗೆ ತಾತ್ಕಾಲಿಕವಾಗಿ ಅವರಿಗೆ ಕೊಟ್ಟರು.

ಮಾರನೇ ದಿನ ರಂಗನಾಥ್ ಬಂದು ಒಂದೇ ತರದ ಎರಡು ಪೆನ್ನುಗಳನ್ನು ಅವರಿಗೆ ಕೊಟ್ಟರು. ಅದರಲ್ಲಿ ಒಂದು ಪೆನ್ನಿಗೆ ನಿಬ್ ಇಂಕ್ ಇರಲಿಲ್ಲ. ಮರದ ತುದಿ ನಿಬ್‌ನಂತೆಯೇ ಇತ್ತು. ಅದನ್ನು ತೋರಿಸಿ ಹೇಳಿದರು, 'ನೀವು ಈ ಪೆನ್ನಿಂದ ಓದುವಾಗ ಗೆರೆ ಎಳೆಯಿರಿ. ಪುಸ್ತಕ ಹಾಳಾಗದು. ನಿಮ್ಮ ಅಭ್ಯಾಸಕ್ಕೂ ಅಡ್ಡಿಯಿಲ್ಲ' ಎಂದು ಆ ಪೆನ್ನನ್ನು ಉಡುಗೊರೆಯನ್ನಾಗಿ ಆತನಿಗೆ ಕೊಟ್ಟರು. ಆ ವಕೀಲರು 'ಓದುಗರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಅವರ ಸಮಸ್ಯೆಯನ್ನು ಪರಿಹರಿಸುವ ನಿಮ್ಮಂಥ ಲೈಬ್ರರಿಯನ್ ಅನ್ನು ನಾನು ಕಂಡೇ ಇಲ್ಲ' ಎಂದು ಶ್ಲಾಘಿಸಿದರು.

❑

೧೧೨. ಈ ಕ್ಯಾಲೆಂಡರ್ ಕದ್ದಿದ್ದು ಕಾಲೇಜಿನಿಂದ

ಕೊಳ್ಳೆಗಾಲದ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕನಾದಾಗ ನಡೆದ ಸಂಗತಿ ಇದು. ಅಲ್ಲಿ ಕಾಲೇಜಿನಲ್ಲಿ ಸಾವಿರಕ್ಕೂ ಮಿಕ್ಕು ವಿದ್ಯಾರ್ಥಿಗಳಿದ್ದರು. ಹತ್ತಾರು ಮಂದಿ ಅಧ್ಯಾಪಕರಿದ್ದರು. ದ್ವಿತೀಯ ಭಾಷೆ ಕನ್ನಡ ಬಿಟ್ಟು ಬೇರಾವ ಭಾಷೆ ಇರಲಿಲ್ಲ. ಸುಮಾರು ೨೦-೩೦ ಮಂದಿ ಅಧ್ಯಾಪಕರು ಒಂದೇ ಕಡೆ ಕೂಡುತ್ತಿದ್ದೆವು. ಅಧ್ಯಾಪಕರ ಕೊಠಡಿ ಅಲ್ಲ ಅದೊಂದು ಪುಟ್ಟ ಸಭಾಂಗಣ. ದೊಡ್ಡ ತರಗತಿಯ ಕೊಠಡಿ ಎನ್ನಬಹುದು. ಆ ಹಾಲಿನಲ್ಲಿ ಹಾಳೆಗಳ ಕ್ಯಾಲೆಂಡರ್ ಒಂದನ್ನು ಬಸವರಾಜಪ್ಪ ಅನ್ನುವ ಅಧ್ಯಾಪಕರು ಪ್ರತಿವರ್ಷ ಕೊಂಡು ತಂದು ಹಾಕುತ್ತಿದ್ದರು. ಆ ವರ್ಷ ಯಥಾಪ್ರಕಾರ ವರ್ಷದ ಪ್ರಾರಂಭದಲ್ಲಿ ಬೆಂಗಳೂರು ಪ್ರೆಸ್ಸಿನ ಕ್ಯಾಲೆಂಡರನ್ನು ತಂದು ಅಧ್ಯಾಪಕರ ಕೊಠಡಿಯಲ್ಲಿ ನೇತುಹಾಕಿದರು. ಆದರೆ ಮಾರನೇ ದಿನ ನಾಪತ್ತೆ. ಕ್ಯಾಲೆಂಡರ್ ಅಲ್ಲಿರಲಿಲ್ಲ. ಮತ್ತೆ ಒಂದನ್ನು ಕೊಂಡು ತಂದುಹಾಕಿದರು. ಅದೂ ನಾಪತ್ತೆ. ಅಧ್ಯಾಪಕರ ಕೊಠಡಿಗೆ ವಿದ್ಯಾರ್ಥಿಗಳು, ಅಧ್ಯಾಪಕರು, ಸಾರ್ವಜನಿಕರು, ಸಿಬ್ಬಂದಿಯವರು ಎಲ್ಲರೂ ಬಂದು ಹೋಗುತ್ತಿರುತ್ತಾರೆ. ಆಗ ನಾನು 'ಈ ಸಲ ನಾನು ಬೆಂಗಳೂರಿನಿಂದ ಬರುವಾಗ ಕ್ಯಾಲೆಂಡರ್ ತರುತ್ತೇನೆ' ಎಂದೆ. ಅದನ್ನು ಗೋಡೆಗೆ ತಗುಲಿ ಹಾಕಲು ಹೋದಾಗ, ಸ್ವಲ್ಪ ಇಲ್ಲಿ ಕೊಡಿ ಎಂದು ತೆಗೆದುಕೊಂಡರು. ಪ್ರತಿ ಹಾಳೆಯಲ್ಲಿ ದಪ್ಪ ಶಾಯಿಯಲ್ಲಿ ಇದು ಮಹದೇಶ್ವರ ಕಾಲೇಜಿನಿಂದ ಕದ್ದು ತಂದದ್ದು ಎಂದು ಬರೆದು, 'ಈಗ ಹಾಕಿ ಗೋಡೆಗೆ' ಎಂದರು. ಅಂದಿನಿಂದ ಇದು ಕಳುವಾಗಲಿಲ್ಲ. ಮಾರನೇ ದಿನ ನಾವಿಬ್ಬರೂ ಒಬ್ಬರನ್ನೊಬ್ಬರು ನೋಡಿ ನಕ್ಕೆವು. ಬಸವರಾಜಪ್ಪರ ಜಾಣ್ಮೆ ಇಂದಿಗೂ ನೆನಪಿದೆ.

❑

೧೧೩. ಶತಾಯುಷಿ ಪ್ರವಾಸಿ ಬುಕ್ಕಾಂಬುಧಿ ಕೃಷ್ಣಮೂರ್ತಿ

ಮೊದಲ ಬಾರಿಗೆ ಅನಕೃ ಪರಮಭಕ್ತ, ಅನಕೃ ಪ್ರಶಸ್ತಿ ಸ್ಥಾಪಕ, ಕನ್ನಡದ ಗರಡಿಯಾಳು ಕೆ.ಟಿ.ಚಂದ್ರಶೇಖರ್ ಅವರು ಬುಕ್ಕಾಂಬುಧಿ ಕೃಷ್ಣಮೂರ್ತಿ ಅವರನ್ನು ಅವರ ಕೃತಿಯೊಂದಕ್ಕೆ ನನ್ನಿಂದ ಮುನ್ನುಡಿ ಬರೆಸಲು ನಮ್ಮ ಮನೆಗೆ ಕರೆತಂದರು. ಆಗ ನನಗೆ ಅಚ್ಚರಿಯಾಯಿತು. ೯೦ ವರ್ಷ ದಾಟಿದ, ಕೋಲೂರದ, ಕನ್ನಡಕವಿಲ್ಲದೆ ಓದುವ, ಅಸ್ಖಲಿತ ವಾಣಿಯ, ನೆನಪಿನಾಗರವಾದ ಸ್ನೇಹಪ್ರಿಯ ವ್ಯಕ್ತಿ ನಮ್ಮ ಪಕ್ಕದ ರಸ್ತೆಯಲ್ಲಿ ೨೦೦ ಅಡಿಗಳ ದೂರದಲ್ಲಿ ಹತ್ತಾರು ವರ್ಷಗಳಿಂದ ಸ್ವಂತ ಮನೆಯಲ್ಲಿ ಇರುವವರು ಎಂದು ತಿಳಿದು ಬೆರಗಾದೆ. ಪಕ್ಕದ ಮನೆಯವರೇ ಹಲವಾರು ವರ್ಷಗಳಿಂದ ವಾಸಿಸುತ್ತಿದ್ದರೂ ಮಾತುಕತೆಯಿಲ್ಲದೆ ಅಪರಿಚಿತರಾಗಿ, ರಾಬಿನ್‌ಸನ್ ಕ್ರೋಸೋನಂತೆ ಒಂಟಿ ಬದುಕು ನಡೆಸುತ್ತಾ, ಮಾತನಾಡದೆ ಇರುವ ವಿಶಿಷ್ಟ ದುರಂತ ಬೆಂಗಳೂರು ಕನ್ನಡಿಗರದು.

ಅಂದು ಪರಿಚಯವಾದ ಇವರು ಬೆಂಗಳೂರಿಗೆ ಬಂದಾಗಲೆಲ್ಲ ಮೊದಲ ಭೇಟಿ ನನ್ನದು. ಆಮೇಲೆ ಎಂದೋ ಹಲವು ವಾರಗಳಾದ ಮೇಲೆ ಅವರ ಮಕ್ಕಳ ಭೇಟಿ. ಅವರಿಗೆ ಮನೆಯವರಿಗಿಂತ ಬಂಧು ಬಳಗ ಮಿತ್ರರ ಭೇಟಿ ಮುಖ್ಯ. ಲೋಕಮಿತ್ರರು ಅವರು.

ಅಮೆರಿಕೆಯಿಂದ ಬರುವಾಗಲೇ ಲಂಗೋಟಿಯಂಥ ಉದ್ದಾನೆ ಕಾಗದದಲ್ಲಿ ಬೆಂಗಳೂರಿನಲ್ಲಿ ನೋಡಬೇಕಾದ, ಭೇಟಿಯಾಗಬೇಕಾದ ಮಿತ್ರರ ಸಹೋದ್ಯೋಗಿಗಳ ಬಾಂಧವರ ಪಟ್ಟಿ, ವಿಳಾಸ, ಮೊಬೈಲ್ ಸಂಖ್ಯೆ ಪಟ್ಟಿ ತಂದಿರುತ್ತಾರೆ. ಅದನ್ನು ಹಿಡಿದು ಬೆಳಗಾಗಿ ಎದ್ದರೆ ತಿಂಡಿ ತಿಂದು ಭೇಟಿವಿಹಾರ. (ಬೇಟೆವಿಹಾರ ಅಲ್ಲ) ಎಷ್ಟರಮಟ್ಟಿಗೆ ಎಂದರೆ ಬೆಂಗಳೂರಿಗೆ ಬಂದು ೨-೩ ವಾರಗಳಾದರೂ ಮಗಳ, ಮಗನ ಮನೆಗೆ ಹೋಗಿರುವುದಿಲ್ಲ. ಉಳಿದವರ ಮನೆಗಳಿಗೆ ಭೇಟಿಕೊಟ್ಟು ಕುಶಲೋಪರಿ ವಿಚಾರಿಸುತ್ತಾರೆ. ಸ್ನೇಹಪರಿಧಿಯನ್ನು ರಿನ್ಯೂ ಮಾಡುತ್ತಾರೆ. ಇಂಥ ಲೋಕಮಿತ್ರರಂಥ ಇನ್ನೊಬ್ಬರನ್ನು ನಾನು ಕಂಡೇ ಇಲ್ಲ.

ಕಾಫಿಬೋರ್ಡ್‌ನಲ್ಲಿ ಕೆಲಸದಲ್ಲಿದ್ದು ನಿವೃತ್ತರಾಗಿ ಹತ್ತಾರು ವರ್ಷದಿಂದ ಅಮೆರಿಕೆಯಲ್ಲಿ ಒಂಟಿಯಾಗಿ ನೆಲೆಸಿರುವ ಇವರು ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆ ಬೆಂಗಳೂರಿಗೆ ಬಂದು ತಮ್ಮ ಜಯನಗರದ ಸ್ವಂತ ಮನೆಯಲ್ಲಿ ಒಂದೆರಡು ತಿಂಗಳಿದ್ದು ಮತ್ತೆ ಅಮೆರಿಕಾಕ್ಕೆ ತೆರಳುತ್ತಾರೆ. ಅವರಿಗೀಗ ೯೮. (ಜನವರಿ ೨೦೨೩, ಲೆಕ್ಕೆ) ಈ ಪುಸ್ತಕ ಪ್ರಕಟವಾಗುವ ವೇಳೆಗೆ ೧೦೦ ತುಂಬಿದ ಶತಾಯುಷಿ ಆಗಿದ್ದಾರೆ.

ಬೇಕಾದಷ್ಟು ಜನ ಮದುವೆ ಮುಂಜಿ ಇತ್ಯಾದಿ ಕಾರಣಕ್ಕೆ ಮಕ್ಕಳು, ಮೊಮ್ಮಕ್ಕಳನ್ನು ನೋಡಲು ಬಂದು ಹೋಗುತ್ತಾರೆ. ಇದರಲ್ಲೇನು ವಿಶೇಷ ಎನ್ನಬಹುದು ನೀವು. ಅಲ್ಲೇ ಇರುವುದು ವಿಶೇಷ.

ಇವರು ಬೆಂಗಳೂರಿಗೆ ಬರುವ ವೇಳೆಗೆ ಒಂದೆರಡು ಸಾಹಿತ್ಯ ಕೃತಿಗಳನ್ನು ರಚಿಸಿಕೊಂಡು ಹಸ್ತಪ್ರತಿಗಳನ್ನು ಅಚ್ಚಿಗೆ ತಂದಿರುತ್ತಾರೆ. ಅವನ್ನು ಅಚ್ಚಿಸಿಕೊಂಡು ಇಲ್ಲಿ ಬಂಧು-ಮಿತ್ರರಿಗೆ ಹಂಚಿ ಉಳಿದ ಪ್ರತಿಗಳನ್ನು ಅಮೆರಿಕಕ್ಕೆ ಕೊಂಡೊಯ್ಯುತ್ತಾರೆ, ಅಲ್ಲಿ ಹಂಚಲು (ಮಾರುವುದಕ್ಕಲ್ಲ). ಇದು ಅವರ ಬೆಂಗಳೂರು ಯಾತ್ರೆಯ ವ್ರತಗಳಲ್ಲಿ ಒಂದು.

ಈ ಬಾರಿ (೨೦೨೩ ನವೆಂಬರ್‌ನಲ್ಲಿ) ಬಂದಿದ್ದಾರೆ. ಹಾಸ್ಯಪ್ರಸಂಗಗಳ ಸಂಗ್ರಹವೊಂದನ್ನು ಅಚ್ಚಿಗೆ ತಂದಿದ್ದಾರೆ. ಕೆಲವು ವರ್ಷಗಳ ಹಿಂದೆ ಸಂಪಾದಿಸಿದ ಬುಕ್ಕಾಂಬುಧಿ ಪ್ರಾದೇಶಿಕ ಶಬ್ದಕೋಶದ ಕ-ಕ-ಇಂ. ಆವೃತ್ತಿಯನ್ನು ಪ್ರಕಟಿಸಲು ತಂದಿದ್ದಾರೆ. ಈ ಮೊದಲು ಅಂತರ್ಜಾಲದಲ್ಲಿ ಬುಕ್ಕಾಂಬುಧಿ ಶಬ್ದಕೋಶದ ಕ-ಕ ಆವೃತ್ತಿಯನ್ನು ಪ್ರಕಟಿಸಿದ್ದರು. ಅವರ ಕೃತಿಗಳ ಸಹಸಂಪಾದಕ, ಪರಿಷ್ಕರಣಕಾರ ನಾನೇ. ಮುನ್ನುಡಿಕಾರ, ಅಚ್ಚಿಗೆ ಸಲಹಾಕಾರನೂ ನಾನೇ.

ಈಗ ಅದು ಮುದ್ರಣವಾಗಿ ನಾವಿಕ ಸಮ್ಮೇಳನದಲ್ಲಿ ಬಿಡುಗಡೆ ಆಯಿತು.

❑

೧೧೪. ವರ್ಷದ ಕೊನೆಯ ದಿನ ಸಮೀಕ್ಷೆಯ ದಿನ

ನಾಣಿ ಬಾಲ್ಯದ ಗೆಳೆಯ. ನನಗಿಂತ ಕೆಲವು ವರ್ಷ ದೊಡ್ಡವನು. ನಮ್ಮ ತಂದೆ ಅವರ ತಂದೆ ವೃತ್ತಿಯಲ್ಲಿ ಸಮಕಾಲೀನರು, ಪರಿಚಯಸ್ಥರು. ನಾವಿದ್ದ ವಠಾರದಲ್ಲಿ ವಾಸಿಸುತ್ತಿದ್ದ ಬಾಲ್ಯಗೆಳೆಯ ಬಸವರಾಜ ಅವನ ಪರಮಮಿತ್ರ. ಅವನಿಂದ ನಾಣಿ ಪರಿಚಯ. ನಾಣಿ ತಾತಾ ವಿಜ್ಞಾನ ಮಂದಿರದಲ್ಲಿ ಲೈಬ್ರರಿಯಲ್ಲಿ ಉದ್ಯೋಗಿ ಆದಾಗಿನಿಂದ ಪರಿಚಯ, ಗಾಢ ಸ್ನೇಹ.

ನನ್ನ ಮದುವೆಗೆ ತಾಯಿತಂದೆಗಳು ಒಪ್ಪದಿದ್ದಾಗ, (ಕಾರಣ ಮನೆಯಲ್ಲಿ ಅಕ್ಕನ ಮದುವೆ ಆಗದಿರುವಾಗ, ಅಣ್ಣಂದಿರ ಮದುವೆ ಆಗದಿದ್ದಾಗ ಈಗಲೇ ನಿನ್ನ ಮದುವೆ ಸರಿಯೇ ಎಂಬುದು ಅವರೆಲ್ಲರ ವಾದ. ಹಾಗಾಗಿ ನನ್ನ ಮದುವೆಗೆ ಹಸೆಮಣೆಯಲ್ಲಿ ಕೂಡಲು ನಮ್ಮ ತಾಯಿತಂದೆಗೆ ಆಸೆ ಇದ್ದರೂ ನನ್ನ ಅಣ್ಣಂದಿರು ಅವಕಾಶ ಕೊಡಲಿಲ್ಲ. ಹಾಗಾಗಿ ಅವರು ಬರಲಾಗಲಿಲ್ಲ.) ಗೆಳೆಯರ ಸಹಕಾರದಲ್ಲಿ ನಾಣಿ ಹಾಗೂ ಅವನ ಹೆಂಡತಿಯೇ ಹಸೆಮಣೆ ಮೇಲೆ ಕುಳಿತರು.

ನಾಣಿ ತಾತಾ ವಿಜ್ಞಾನಮಂದಿರದಲ್ಲಿ ಕೆಲಸದಲ್ಲಿದ್ದಾಗ ಸಂಜೆಯಾದರೆ, ರಜಾದಿನಗಳಲ್ಲಿ ಸಿಗುತ್ತಿದ್ದ. ಅವರ ಮನೆ ಅಜಾದ್‌ನಗರದಲ್ಲಿ, ನಮ್ಮ ಮನೆ ಚಾಮರಾಜಪೇಟೆಯಲ್ಲಿ ನಮ್ಮ ಬಸವರಾಜನ ಜತೆ ಸದಾ ಭೇಟಿ. ನಾವು ಮಾತನಾಡದ ವಿಷಯವೇ ಇರಲಿಲ್ಲ. ಆತ್ಮೀಯ ಮಾತುಕತೆ, ಸಿಟಿ ಇನ್‌ಸ್ಟಿಟ್ಯೂಟ್‌ನ ಬಳಿಯ ಕ್ಯಾಂಟೀನಿನಲ್ಲಿ ಬೈಟ್ರೀ ಕಾಫಿ. ಆಗಾಗ ಲಾಲ್‌ಬಾಗ್ ಕಡೆ ಸಂಚಾರ.

ಅವನು ಪ್ರತಿವರ್ಷ ಡಿಸೆಂಬರ್ ೩೧ರಂದು ತಪ್ಪದೆ ಭೇಟಿ ಆಗುತ್ತಿದ್ದ. ಪಾರ್ಕ್ ಒಂದರಲ್ಲಿ ಕುಳಿತು ಈ ವರ್ಷ ನಾವೇನು ಮಾಡಿದೆವು, ಮುಂದಿನ ವರ್ಷ ಏನೇನು ಮಾಡಬೇಕು ಎಂಬ ಸಂಕಲ್ಪ ಮಾಡುತ್ತಿದ್ದೆವು. ಅವನು ಹೋದ ಮೇಲೆ (ಈ ಲೋಕದಿಂದ) ಈ ಪದ್ಧತಿ ನಿಂತುಹೋಯಿತು. ವಾರ್ಷಿಕ ಸಮೀಕ್ಷೆಗೆ ಯಾರೂ ಸಿಗಲಿಲ್ಲ. ದಿನಚರಿ ಬರೆಯುವುದು ಅಭ್ಯಾಸವಾಗಿ ಮುಂದುವರೆದಿದೆ. ದಿನಾ ಏನು ಮಾಡಿದೆ, ಏನು ಮಾಡಬೇಕು–ದಿನಚರಿ ಮುಂದುವರೆದಿದೆ.

ಬಾಳಿನುದ್ದಕ್ಕೂ ಸುಖದುಃಖಗಳನ್ನು ಹಂಚಿಕೊಳ್ಳುವ ಮಿತ್ರರು ಅಪರೂಪ. ನಾಣಿ ಅಂಥವರಲ್ಲೊಬ್ಬ.

❑

೧೧೫. ಅಮೆರಿಕೆಯಲ್ಲಿ ಭಗವದ್ಗೀತಾ ಪದ್ಯಾನುವಾದಕರು

ಭಗವದ್ಗೀತೆ ಲೋಕಪ್ರಿಯ ಗ್ರಂಥ. ಕನ್ನಡದಲ್ಲಿ ಮೂಲ ಕನ್ನಡ ಲಿಪಿಯಲ್ಲಿ, ಭಾವಾರ್ಥ ಸಹಿತ ಮೂಲ ಟಿಪ್ಪಣಿಗಳೊಂದಿಗೆ ಗೀತೆ, ವಿಮರ್ಶಾಗ್ರಂಥ, ವ್ಯಾಖ್ಯಾನಗ್ರಂಥ, ಪ್ರಶ್ನೋತ್ತರ ರೂಪದಲ್ಲಿ ಗೀತೆ, ಆಚಾರ್ಯತ್ರಯರ ಭಾಷ್ಯಾನುವಾದ, ಮೂಲಅನ್ವಯ ತಾತ್ಪರ್ಯ ಇತ್ಯಾದಿ ಅನೇಕ ರೂಪಗಳಲ್ಲಿ ಪ್ರಕಟವಾಗಿವೆ.

ಎಷ್ಟೇ ಆಗಲಿ, ಜನರಿಗೆ ಗೀತೆಯನ್ನು ಪದ್ಯರೂಪದಲ್ಲಿ ಸಂಗೀತ ಮಾಧ್ಯಮದಲ್ಲಿ ನೀಡಿದರೆ ಪರಿಣಾಮಕಾರಿಯಾಗಿ ಜನಕ್ಕೆ ಎಟುಕುತ್ತದೆ. ಭಗವದ್ಗೀತೆ ನಾನಾ ಬಗೆಯ ಛಂದಸ್ಸುಗಳಲ್ಲಿ ಕನ್ನಡದಲ್ಲಿ ಅನುವಾದವಾಗಿದೆ. ಷಟ್ಪದಿ, ಕಂದ, ಸಾಂಗತ್ಯ, ಲಾವಣಿ, ಚೌಪದಿ, ದ್ವಿಪದಿ, ಶ್ಲೋಕ ಇತ್ಯಾದಿ ರೂಪಗಳಲ್ಲಿ ಅನುವಾದವಾಗಿದೆ. ಅಮೆರಿಕೆಯಲ್ಲಿ ಮೂರು ಜನ ಗೀತೆಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ರಾಮಪ್ರಿಯ, ವಿಶ್ವೇಶ್ವರ ದೀಕ್ಷಿತ್ ಮತ್ತು ನ್ಯೂಯಾರ್ಕ್ ಡಾಕ್ಟರ್ ಒಬ್ಬರು. ಕೆಲಸ ಕಳೆದುಕೊಂಡ ಡಾಕ್ಟರ್ ಒಬ್ಬರು ಗೀತಾನುವಾದ ಮಾಡಿದ ಮೇಲೆ ಕೆಲಸ ಸಿಕ್ಕಿತಂತೆ. ಅಮೆರಿಕೆಯಲ್ಲಿ ನನ್ನ ಉಪನ್ಯಾಸಕ್ಕೆ ಅವರು ಬಂದಿದ್ದರು. ರಾಮಪ್ರಿಯ ವಿಜ್ಞಾನಿಗಳು, ಬೆಂಗಳೂರು ಶ್ರೀರಾಮಪುರಂನಲ್ಲಿ ಇದ್ದ ಕನ್ನಡಿಗರು. ಉನ್ನತ ವಿದ್ಯಾಭ್ಯಾಸಕ್ಕೆ ಹೋಗಿ ಅಲ್ಲಿಯೇ ನೆಲೆ ನಿಂತವರು. ಕನ್ನಡ ಬರಹಗಾರರು ಆದ ಅವರು ಸಂಸ್ಕೃತವನ್ನು ಚೆನ್ನಾಗಿ ಬಲ್ಲವರು. ಶ್ಲೋಕರೂಪದಲ್ಲೇ ಗೀತೆಯನ್ನು ಅನುವಾದಿಸಿದ್ದಾರೆ. ಸಂಸ್ಕೃತದಷ್ಟು ಹಿಡಿತ ಅವರಿಗೆ ಕನ್ನಡದ ಮೇಲೆ ಇಲ್ಲ. ಹೀಗಾಗಿ ಅವರು ಪರಿಶೀಲಿಸಲು ನನಗೆ ಕೊಟ್ಟಿದ್ದರು. ಅವರ ಗೀತಾನುವಾದವನ್ನು ಆಮೂಲಾಗ್ರವಾಗಿ ಹಲವು ವಾರಗಳ ಕಾಲ ನೋಡಿ ತಿದ್ದಿಕೊಟ್ಟೆ. ಕರ್ನಾಟಕದಲ್ಲಿ ಕೆಲವು ವರ್ಷಗಳ ನಂತರ ಗದುಗಿನ ಮುದ್ರಣಾಲಯವೊಂದರಲ್ಲಿ ಅಚ್ಚಾಯಿತು. ಅಂತಿಮ ಹಂತದಲ್ಲಿ ಮುದ್ರಣಾಲಯ ಯಾವುದೋ ಕಾನೂನಿನ ಅಡಿಯಲ್ಲಿ ಮುಚ್ಚುವ ಸ್ಥಿತಿ ಬಂದು ಗ್ರಂಥ ಬೆಳಕನ್ನೇ ಕಂಡಿಲ್ಲ. ಅದರ ಕರಡನ್ನು ನಾನೇ ತಿದ್ದಿಕೊಟ್ಟಿದ್ದೆ. ಕನ್ನಡದಲ್ಲಿ ಮೂಲ ಗೀತೆ ಇದ್ದಂತೆ ಶ್ಲೋಕರೂಪದಲ್ಲಿ ಅನುವಾದಿಸುವುದು ಅತಿ ಕಷ್ಟ. ಆದರೂ ರಾಮಪ್ರಿಯರು ಮತ್ತಿಬ್ಬರು ಶ್ಲೋಕರೂಪದಲ್ಲೇ ಗೀತಾನುವಾದವನ್ನು ಮಾಡಿದ್ದಾರೆ. ಕನ್ನಡದ ಗೀತಾನುವಾದಗಳಲ್ಲಿ (ಪದ್ಯರೂಪ) ಪುತಿನ ಅವರ ಅನುವಾದಿತ ರೂಪ ಸತ್ತ್ವಗಳಲ್ಲಿ ಮೂಲಕ್ಕೆ ತೀರ ಹತ್ತಿರ ಬರುವಂತೆ ಕನ್ನಡಿಸಿರುವವರಲ್ಲಿ ಅಗ್ರಗಣ್ಯರು. ಅನುಷ್ಟುಪ್ ಛಂದದಲ್ಲಿ ಇನ್ನೂ ಒಂದಿಬ್ಬರು ಅನುವಾದಿಸಿದ್ದಾರೆ. ಅವರ ಹೆಸರು ನೆನಪಿಗೆ ಬರುತ್ತಿಲ್ಲ. ಕನ್ನಡದಲ್ಲಿ ೨೦ಕ್ಕೂ ಹೆಚ್ಚು ಕನ್ನಡ ಗೀತಾನುವಾದಗಳು ಇವೆ. ಯಾರಾದರೂ ಪಿಎಚ್‌ಡಿ ಮಾಡಬಹುದು. 'ಕನ್ನಡ ಭಗವದ್ಗೀತಾನುವಾದಗಳು' ವಿಷಯದ ಬಗ್ಗೆ.

❑

೧೧೬. ನಿಷ್ಠಾವಂತ ಸೇವಕನ ಸೊಂಟದಲ್ಲಿ ಸಾವಿರಾರು ರೂಗಳು

ನಾನು ಪರಿಷತ್ತಿನ ಕಾರ್ಯದರ್ಶಿ ಆದಾಗ ನಾರಾಯಣಶಾಸ್ತ್ರಿಗಳೆಂಬ ವೃದ್ಧರು ಸರ್ಕಾರಿ ಸೇವೆಯಿಂದ ನಿವೃತ್ತರಾದವರು ಸಾಹಿತ್ಯಾಭಿಮಾನಿಗಳಾದ ಅವರು ಒಂದು ಕಾಲದಲ್ಲಿ ದೇವುಡು ಅವರು ಚಿರಂಜೀವಿ ಮಾರ್ಕಂಡೇಯ ಚಿತ್ರೀಕರಣದಲ್ಲಿ ತೊಡಗಿದಾಗ ಕಚೇರಿಯ ವ್ಯವಸ್ಥಾಪಕರಾಗಿದ್ದರು. ಅವರು ಒಂದು ದಿನ ಪರಿಷತ್ತಿಗೆ ಬಂದು ನನಗೆ ದಿನಾ ಸ್ವಲ್ಪ ಬಿಡುವಿದೆ. ನಮ್ಮ ಮನೆ ಜಯನಗರದಲ್ಲಿದೆ. ದಿನಾ ಪರಿಷತ್ತಿಗೆ ಬಂದು ಹೋಗಬಲ್ಲೆ. ಉಚಿತ ಸೇವೆ ಕಚೇರಿಯಲ್ಲಿ ಸಲ್ಲಿಸಲು ಆ ಮೂಲಕ ಕನ್ನಡ ಸೇವೆ ಮಾಡಲು ಅವಕಾಶ ಕೊಡ್ತೀರಾ? ಅಂತ ಕೇಳಿದರು. ನನಗೆ ಲೆಖ್ಖಪತ್ರಗಳ ಬಗ್ಗೆ ಬಲ್ಲೆ ಎಂದರು. ಅವರಿಗೆ ಕಚೇರಿಯಲ್ಲಿ ಸಿಬ್ಬಂದಿಗೆ ಸಹಾಯಕರಾಗಿರಲು ಅವಕಾಶ ನೀಡಿದೆವು. ದಿನಾ ಕೆಲವು ಗಂಟೆಗಳ ಕಾಲ ಕಚೇರಿ ಕೆಲಸದಲ್ಲಿ ಕನ್ನಡ ನುಡಿಯನ್ನು ಅಂಚೆಗೆ ಸಿದ್ದಪಡಿಸುವುದು, ದಾಖಲೆ ಪತ್ರಗಳನ್ನು ಪಟ್ಟಿ ಮಾಡಿ ಜೋಡಿಸುವುದು ಇತ್ಯಾದಿ ಕಾರ್ಯ ನಿರ್ವಹಿಸುತ್ತಿದ್ದರು. ಕನ್ನಡ ನುಡಿ ಅಂಚೆಗೆ ಹಾಕಲು ಕೊನೇ ದಿನ ಎಂದರೆ ಒಂದೆರಡು ದಿನ ಅಂಚೆಗೆ ಸಿದ್ಧಪಡಿಸಲು ಹಗಲೂ ರಾತ್ರಿ ಶ್ರಮಿಸುತ್ತಿದ್ದರು. ರಾತ್ರಿ ತಡವಾದಾಗ ಅವರ ಮಗ ಬಂದು ಸ್ಕೂಟರ್‌ನಲ್ಲಿ ಮನೆಗೆ ಕರೆದೊಯ್ಯುತ್ತಿದ್ದ. ಹಂಪ ನಾಗರಾಜಯ್ಯನವರ ನಂತರ ಜಿ. ನಾರಾಯಣ ಅವರು ಅಧ್ಯಕ್ಷರಾಗಿದ್ದ ಕಾಲದಲ್ಲೂ ತಾತ್ಕಾಲಿಕ ಒಪ್ಪೊತ್ತಿನ ಕೆಲಸದಲ್ಲಿ ಮುಂದುವರೆದರು. ಅವರ ಬಗ್ಗೆ ಜಿ. ನಾರಾಯಣರಿಗೆ ಅಪಾರ ಗೌರವ ವಿಶ್ವಾಸ ಅಭಿಮಾನ.

ದೆಹಲಿಯಲ್ಲಿ ಕನ್ನಡ ಸಾಹಿತ್ಯ ಪರಿಷತಿನ ಸಮ್ಮೇಳನ ನಡೆದಾಗ ಶಾಸ್ತ್ರೀಗಳನ್ನು ತಮ್ಮೊಂದಿಗೆ ಕರೆದೊಯ್ದಿದ್ದರು. ಅವರಿಗೆ ನಗದು ಹಣ ವ್ಯವಹಾರದ ಜವಾಬ್ದಾರಿ ವಹಿಸಿದ್ದರು. ತಮಗೆ ತಕ್ಕಣಕ್ಕೆ ಹಲವು ಸಾವಿರ ರೂಗಳನ್ನು ನಗದು ಕೊಡಬೇಕಾದ ಸಂದರ್ಭ ಬಂದಾಗ ಕೊಡಲೆಂದೇ ಲಕ್ಷದಷ್ಟು ನಗದನ್ನು ಅವರ ಕೈಗೆ ಕೊಡಿಸುತ್ತಿದ್ದರು. ಕಾರ್ಯದರ್ಶಿಗಳಿಂದ ಲಕ್ಷದಷ್ಟು ಹಣವನ್ನು ಯಾರಿಗೂ ತಿಳಿಯದಂತೆ ಜೋಪಾನ ಮಾಡಿ ಅಧ್ಯಕ್ಷರು, ಕಾರ್ಯದರ್ಶಿಗಳು ಹೇಳಿದವರಿಗೆ ನಗದನ್ನು ನೀಡುತ್ತಿದ್ದರು.

ಸಮ್ಮೇಳನದ ಜಾತ್ರೆಯಲ್ಲಿ ಎಲ್ಲಾ ಕಡೆ ಹತ್ತಾರು ಜನ ಇರುವಲ್ಲಿ ಸಾವಿರಾರು ರೂಗಳನ್ನು ಇಟ್ಟುಕೊಂಡು ಕೇಳುವವರಿಗೆ ಇತರರ ಎದುರಿನಲ್ಲಿ ಕೊಡುವುದು ಹೇಗೆ? ಕದಿಯುವವರ, ದೋಚುವವರ ಕಣ್ತಪ್ಪಿಸುವುದು ಹೇಗೆ?

ಅದಕ್ಕೆ ನಾರಾಯಣಶಾಸ್ತ್ರಿಗಳು ಒಂದುಪಾಯ ಮಾಡಿದರು. ಅವರದು ಕಚ್ಚೆಪಂಚೆ, ಶರಟು, ಕೋಟು ಅವರ ಯೂನಿಫಾರಂ ಆಗಿತ್ತು. ನಗದು ಹಣವನ್ನು ಶಲ್ಯವನ್ನು ಸುರುಳಿಸುತ್ತಿ ಅದರಲ್ಲಿಟ್ಟುಕೊಂಡು ಸೊಂಟಕ್ಕೆ ಬೆಲ್ಟ್ ಹಾಕಿಕೊಳ್ಳುವಂತೆ ನಡುವಿಗೆ ಬಿಗಿದುಕೊಂಡರು. ಅದರಲ್ಲಿ ನಗದು ಇರುತ್ತಿತ್ತು. ಅದರ ಮೇಲ್ಗಡೆ ಅವರ ಕೋಟು. ಎಲ್ಲರಂತೆ ಓಡಾಡುತ್ತಿದ್ದರು. ಹಣ ಕೊಡಬೇಕಾಗಿ ಬಂದಾಗ ಒಂದು ನಿಮಿಷ ಬಂದೆ

ಎಂದು ಎಡಗೈ ಕೊನೆ ಬೆರಳು ತೋರಿಸಿ ತಮ್ಮ ಕೊಠಡಿಗೆ ತೆರಳುತ್ತಿದ್ದರು (ಎಡಗೈ ಎಡಬೆರಳು ಮೂತ್ರ ವಿಸರ್ಜನೆಗೆ ಸಂಕೇತ) ಶೌಚಾಲಯದಲ್ಲಿ ಸೊಂಟದ ಶಲ್ಯದಿಂದ ಕೊಡಬೇಕಾದಷ್ಟು ನೋಟುಗಳನ್ನು ತೆಗೆದುಕೊಂಡು ಬ್ಯಾಗಿಗೆ ಹಾಕಿಕೊಂಡು ಡ್ರೆಸ್ ಸರಿಮಾಡಿಕೊಂಡು ಹೊರಗೆ ಬಂದು ಹಣ ಕೊಡುತ್ತಿದ್ದರು. ಹೀಗೆ ಲಕ್ಷಾಂತರ ರೂ ನಗದನ್ನು ಸಂಬಂಧಿಸಿದವರಿಗೆ ವಿಲೇವಾರಿ ಮಾಡಿದರು. ನಾನು ಅವರನ್ನು ಕೇಳಿದೆ 'ಈ ಉಪಾಯ ನಿಮಗೆ ಹೇಗೆ ಹೊಳೆಯಿತು?' ಅದಕ್ಕವರು ಉತ್ತರಿಸಿದರು. 'ಒಬ್ಬ ವ್ಯಕ್ತಿ ತನ್ನ ಧಣಿಗೆ, ಸಂಸ್ಥೆಗೆ ತನ್ನಿಂದ ಕಿಂಚಿತ್ತು ನಷ್ಟಕಷ್ಟ ಉಂಟಾಗಬಾರದೆಂದು ಪ್ರಾಮಾಣಿಕವಾಗಿ ತೀರ್ಮಾನಿಸಿದರೆ ಇಂಥ ಉಪಾಯಗಳು ಹೊಳೆಯುತ್ತವೆ' ಎಂದರು. ಪರಿಷತ್ತಿಗೆ ಸೇವೆ ಸಲ್ಲಿಸಿದ ಸಿಬ್ಬಂದಿಯಲ್ಲಿ ಇವರಂಥವರನ್ನು ನಾನೆಂದೂ ನೋಡಿಲ್ಲ.

❑

೧೧೭. ಆಪ್ತ ಮಿತ್ರ ಹೇಳಿದ ರತ್ನನ ಕಥೆಗಳು

ಜಿ.ಪಿ.ರಾಜರತ್ನಂ ವಿ.ಸೀ. ಅವರ ವಿದ್ಯಾರ್ಥಿ. ಜಿ.ಪಿ.ರಾಜರತ್ನಂ ನವಿಲುಗೊಂಡದಲ್ಲಿ ರಮಾಕಂತ(ಜಡ್ಜ್) ಇದ್ದಾಗ ಅವರ ಮನೆಗೆ ಜಿ.ಪಿ.ರಾ. ಬಂದಾಗ ಸತ್ಯಸಾಯಿ ಶಿಷ್ಯರಾದುದು ಏಕೆ ಎಂದು ಕೇಳಿದರು. ಆಗ ಜಿ.ಪಿ.ರಾ.ಗೆ ಸಕ್ಕರೆರೋಗ ಇದ್ದು ಕಾಲು ಆಪರೇಶನ್ ಆಗಬೇಕಿತ್ತು. ರಾತ್ರಿ ಸಾಯಿಬಾಬಾ ಬಳಿಗೆ (ಕರ್ನಲ್ ರಾವ್ ಬಾಬಾಗೆ ಆಪ್ತರು) ಕರೆದುಕೊಂಡು ಹೋದರು. ಅವರು ವಿಭೂತಿ ಮಂತ್ರಿಸಿ ಕೊಟ್ಟರು. ಜಿ.ಪಿ.ರಾ. ಷುಗರ್ ನಾರ್ಮಲ್‌ಗೆ ಬಂದಿತು. ಆಗ ಶಿಷ್ಯರಾದರು. ಇದು ಜಿ.ಪಿ.ರಾ.ನೇ ಹೇಳಿದ್ದು ಎಂದರು. ಜಿ.ಪಿ.ರಾಜರತ್ನಂ ಅಶ್ವತ್ಥಾಮನ್ ಪಾಠ ಮಾಡುತ್ತಿದ್ದಾಗ ಎ.ಆರ್.ಕೃ. ಕ್ಲಾಸಿಗೆ ಬಂದು ವಿದ್ಯಾರ್ಥಿಗಳ ಮಧ್ಯೆ ಕುಳಿತು ಶಿಷ್ಯ ಪಾಠ ಹೇಗೆ ಮಾಡ್ತಾನೆ ನೋಡೋಣ ಬಂದಿದ್ದೇನೆ ಎಂದರು.

ಸಾಯಿಬಾಬಾ ಮೊದಲಬಾರಿಗೆ ಜಿ.ಪಿ.ರಾ.ನ್ನು ಕಂಡಾಗ ವಚ್ಚಿಂದಾ ಪತಿವ್ರತಾ ಎಂದರಂತೆ. ಅಂದರೆ ಶರಣಸತಿ ಲಿಂಗಪತಿ ಭಾವದಲ್ಲಿ ತಮ್ಮ ಶಿಷ್ಯರು ಎಂಬರ್ಥದಲ್ಲಿ.

ಜಿ.ಪಿ. ರಾಜರತ್ನಂ ಅವರೂ ನಾನೂ ಹಲವು ಬಾರಿ ಒಂದೇ ವೇದಿಕೆಯಲ್ಲಿ ಮಾತಾಡಿದ್ದೇವೆ. ಅವರ ನೂರಾರು ಭಾಷಣ ಕೇಳಿ ಆನಂದಿಸಿದ್ದೇನೆ. ಅವರು ನಾನು ಸಾಯಿಬಾಬಾ ಬಗ್ಗೆ ಸಾಕಷ್ಟು ಭಾಷಣಗಳನ್ನು ಮಾಡಿದ್ದೇವೆ. ಒಮ್ಮೆ ಅವರು ಬರೆದ ಸಾಯಿಬಾಬಾ ಪುಸ್ತಕವೊಂದು ಬೇಕಿತ್ತು. ಅವರ ಮನೆಗೆ ಹೋಗಿದ್ದೆ. ಸಾಯಿಬಾಬ ಪುಸ್ತಕ ಕೇಳಿದೆ, ಕೊಟ್ಟರು. ಹಣ ಕೊಡಲು ಹೋದೆ. ನೀವು ಸಾಯಿಬಾಬಾ ಭಕ್ತರು ಇದಕ್ಕೆ ಹಣ ಕೊಡಬೇಡಿ ಎಂದರು. ಸರಿ ಎಂದೆ. ನಾನು ಸಾಯಿಬಾಬಾ ಭಕ್ತ ಆಗಿರಲಿಲ್ಲ. ಆದರೆ ಸಾಯಿಬಾಬಾ ಅವರ ಭಕ್ತ ಸಾಹಿತ್ಯ ತುಂಬಾ ಚೆನ್ನಾಗಿದೆ ಎಂದು ಓದಿದ್ದೆ. ಅವರ ಬಗ್ಗೆ ಭಾಷಣಗಳನ್ನು ಮಾಡುತ್ತಿದ್ದೆ.

❑

೧೧೮. ನೆನಪಿನ ಗಣಿಯ ನ್ಯಾಯಾಧೀಶ

ನಿಟ್ಟೂರರ ಭೇಟಿ ಎಂದಾಯಿತೋ ಹೇಗಾಯಿತೋ ನೆನಪಿಲ್ಲ. ಬಹುಶಃ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಎಂದು ಕಾಣುತ್ತದೆ. ಅವರ ದೀರ್ಘ ಪರಿಚಯ ಆದುದು ಪ್ರಿಸಂ ಪುಸ್ತಕ ಪ್ರಕಾಶಕರಾದ ಪ್ರಾಣೇಶ್ ಅವರು ನನ್ನನ್ನು, ಎಂ.ಎಚ್.ಕೃಷ್ಣಯ್ಯ, ಹೆಚ್.ಕೆ. ರಂಗನಾಥ್ ಅವರನ್ನು ಒಳಗೊಂಡ ಮೂವರ ಸಮಿತಿ ಮಾಡಿ ದಿನವೂ ಸಂಜೆ ಅವರ ಭೇಟಿ ಮಾಡಬೇಕು, ಪ್ರಶ್ನೆಗಳನ್ನು ಕೇಳುವುದರ ಮೂಲಕ ಅವರ ಜೀವನ ವಿವರಗಳನ್ನು ಆತ್ಮಕಥೆಯನ್ನು ಸಂಗ್ರಹಿಸಬೇಕು ಎಂದು ಗೊತ್ತು ಮಾಡಿದರು. ಅಂಥ ಮಹನೀಯರ ಸಾನ್ನಿಧ್ಯ, ಜೀವಂತ ನೆನಪಿನ ವಿಶ್ವಕೋಶದ ಪರಿಚಯ ನಿತ್ಯವೂ ಆಗುತ್ತಲ್ಲ ಎಂದು ಸಂತೋಷದಿಂದ ಒಪ್ಪಿಕೊಂಡೆವು. ಸುಮಾರು ನಾಲ್ಕು ಗಂಟೆಗೆ ಅವರ ಮನೆಗೆ ಹೋದರೆ ಸಂಜೆ ವಾಕಿಂಗ್ ಅಥವಾ ಕಾರ್ಯಕ್ರಮಗಳಿಗೆ ಹಾಜರಾಗಲು ಆರರ ಸುಮಾರಿನವರೆಗೆ ಅವರ ಸಂದರ್ಶನ ಅಲ್ಲ, ಮಾತುಕತೆ ನಡೆಯುತ್ತಿತ್ತು. ಪ್ರಾಣೇಶ್ ಅವರು ಎಲ್ಲವನ್ನೂ ಧ್ವನಿ ಮುದ್ರಣ ಮಾಡಲು ವ್ಯವಸ್ಥೆ ಮಾಡಿದ್ದರು. ಪ್ರಶ್ನೆಗಳನ್ನು ಕೇಳಲು ಸ್ಥೂಲವಾಗಿ ವಿಷಯ ಹಂಚಿಕೆಯನ್ನು ಮಾಡಿಕೊಂಡಿದ್ದೆವು. ಕಲೆ, ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳು-ಕಲಾವಿದರ ಬಗ್ಗೆ ಹೆಚ್ಕೆ ರಂಗನಾಥರು, ನಿಟ್ಟೂರರ ವೃತ್ತಿ-ಹವ್ಯಾಸ ಬದುಕಿನ ಮಜಲುಗಳ ಬಗ್ಗೆ ಕೃಷ್ಣಯ್ಯನವರು, ಡಿವಿಜಿ, ನವರತ್ನ ರಾಮರಾಯ, ಎಂ.ಆರ್.ಶ್ರೀ., ಮಿರ್ಜಾ, ತೀನಂಶ್ರೀ, ಡಿಎಲ್ಎನ್, ಬೆಂಗಳೂರಿನ ಸ್ಥಳಗಳು, ವ್ಯಕ್ತಿಗಳ ಬಗ್ಗೆ ನಾನು, ಪ್ರಶ್ನೆಗಳನ್ನು ಕೇಳುತ್ತಿದ್ದೆವು. ಅವುಗಳಿಗೆ ಉತ್ತರವಾಗಿ ತಮ್ಮ ನೆನಪುಗಳನ್ನು ಬಿಚ್ಚುತ್ತಾ ಹೋಗುತ್ತಿದ್ದರು. ಸರಳವಾಗಿ, ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು. ಸರಿಯಾಗಿ ಐದಕ್ಕೆ ತಪ್ಪದೆ ಕಾಫಿ ಬಿಸ್ಕತ್ತು ಅವರಿಗೂ ನಮಗೂ ಬರುತ್ತಿತ್ತು. ಟಾಟಾ ಸಿಲ್ಕ್ ಫಾರಂನ ಮಗಳ ಮನೆಯಲ್ಲಿ ಮಾತುಕತೆ ನಡೆಯುತ್ತಿದ್ದವು.

ನಡುನಡುವೆ ಕೆಲವು ಜನರ ಆಗಮನದಿಂದ ಆ ದಿನದ ಮಾತುಕತೆ ನಿಂತು ಹೋಗುತ್ತಿದ್ದವು. ಅವರು ಮಾತನಾಡುತ್ತಿದ್ದಾಗಲೆಲ್ಲ ಎಂ.ಆರ್.ಶ್ರೀ. ಹೆಸರು ಬಂದರೆ ಸಾಕು, ಕೈಮುಗಿದೇ ಮಾತನಾಡುತ್ತಿದ್ದರು. ಅಷ್ಟು ಗುರುಭಕ್ತಿ ಅವರಲ್ಲಿ. ಅವರಿಗೆ ಶಿವಮೊಗ್ಗದಲ್ಲಿ ಹೈಸ್ಕೂಲಿನಲ್ಲಿ ಅವರಿಗೆ ಮೇಷ್ಟ್ರು ಆಗಿದ್ದರು. ಎಂ.ಆರ್.ಶ್ರೀ. ಅವರ ನಾಮಸ್ಮರಣೆ ಆದಾಗಲೆಲ್ಲ ಅವರು ತಪ್ಪದೇ ಕೈ ಮುಗಿಯುತ್ತಿದ್ದರು, ಮಹಾನುಭಾವರು ಎನ್ನುತ್ತಿದ್ದರು.

ಒಮ್ಮೆ ನ್ಯಾಯಮೂರ್ತಿ ಹೊಂಬೇಗೌಡರ ಮಕ್ಕಳು ಬಂದಿದ್ದರು. ಅವರ ತಂದೆಯವರ ಬಗ್ಗೆ ಮಾಹಿತಿ ಕೇಳಿದರು. ಅಮೆರಿಕಾಕ್ಕೆ ಅವರು ಹೋಗುವವರಿದ್ದರು. ಆ ದಿನ ಹೊಂಬೇಗೌಡರ ಬಗ್ಗೆ ಬೇಕಾದಷ್ಟು ಸಂಗತಿಗಳನ್ನು ಹೇಳಿದರು. ಮಾತುಕತೆಗಳ ನಡುವೆ ಶೃಂಗಾರದ ಪ್ರಸಂಗಗಳ, ವ್ಯಕ್ತಿಗಳ ವೈಯಕ್ತಿಕ ಪ್ರಸಂಗದ ಪ್ರಸ್ತಾಪ ಬಂದಾಗ, ವ್ಯಕ್ತಿಯ ವೈಯಕ್ತಿಕ ಜೀವನದ ಸಂಗತಿಗಳು ಪ್ರಸ್ತಾಪವಾದಾಗ ಆ ಬಗ್ಗೆ ಸಾಕಷ್ಟು

ಅವರಿಗೆ ತಿಳಿದಿದ್ದರೂ ಅವರು ಹೇಳುತ್ತಿರಲಿಲ್ಲ. 'ಬಿಡಿ ಅವೆಲ್ಲಾ ಇದ್ದುದ್ದೇ ಕೆಲವು ದೊಡ್ಡವರಲ್ಲಿ' ಎಂದುಬಿಡುತ್ತಿದ್ದರು. ಏನನ್ನೂ ಆ ಬಗ್ಗೆ ಹೇಳುತ್ತಿರಲಿಲ್ಲ. ಆಕಸ್ಮಿಕವಾಗಿ ಅಂಥಾ ವಿಷಯಗಳನ್ನು ಹೇಳಬೇಕಾಗಿ ಬಂದ ಪ್ರಸಂಗಗಳನ್ನು ಹೇಳಿದಾಗ 'ಅವೆಲ್ಲಾ ಟೇಪ್ ಮಾಡಬೇಡಿ. ಔಟ್ ಆಫ್ ರೆಕಾರ್ಡ್ಸ್' ಎನ್ನುತ್ತಿದ್ದರು. ಅಂದರಿಕಿ ಮಂಚಿವಾಡು ಅನಂತಯ್ಯ ಎಂಬ ತೆಲುಗು ಗಾದೆಗೆ ನಿದರ್ಶನವಾಗಿದ್ದರು.

ಡಿವಿಜಿ ಅವರ ಅಂತಃಪುರ ಗೀತೆ ಮರುಮುದ್ರಣ ಮೊದಲ ಮುದ್ರಣದಷ್ಟು ಚೆನ್ನಾಗಿರಲಿಲ್ಲ. ಕಳಪೆ ಕಾಗದ ಬಳಕೆ ಆಗಿ ಚಿತ್ರಗಳು ಅಂದಗೆಟ್ಟಿದ್ದವು. ಆ ಬಗ್ಗೆ ನಾನು ಒತ್ತಾಯದಿಂದ ಪ್ರಕಾಶಕರಿಗೆ ಹೇಳಬೇಕು ಎಂದಾಗ ಅವರು ಹೇಳಲಿಲ್ಲ. ನಾನು ಹಲವಾರು ಬಾರಿ ಪ್ರಸ್ತಾಪಿಸಿದಾಗ ನೀವು ಬರೆದುಕೊಡಿ ಆ ಪತ್ರವನ್ನು ಅವರಿಗೆ ಕಳಿಸಿಕೊಡುತ್ತೇನೆ ಎಂದುಬಿಟ್ಟರು. ಯಾರ ಮನಸ್ಸನ್ನೂ ನೋಯಿಸುವುದಾಗಲೀ, ಕಠಿಣ ನುಡಿ ಹೇಳುವುದಾಗಲೀ ಅವರ ಜಾಯಮಾನದಲ್ಲಿರಲಿಲ್ಲ.

❑

೧೧೯. ಪಠ್ಯಪುಸ್ತಕಕ್ಕೆ ತಿದ್ದೋಲೆ ಕಳಿಸಿದ ಕವಿ

ನಮ್ಮಲ್ಲಿ ಕವಿಗಳ ಸಾಹಿತಿಗಳ ಕವನಸಂಕಲನ, ಗದ್ಯ, ಪದ್ಯ, ನಾಟಕ ಇತ್ಯಾದಿ ಪಠ್ಯವಾಗುತ್ತದೆ. ಸಾವಿರಾರು ಪ್ರತಿಗಳು ಅಚ್ಚಾಗುತ್ತವೆ. ಹತ್ತಾರು ಸಾವಿರ ವಿದ್ಯಾರ್ಥಿಗಳು ಓದುತ್ತಾರೆ. ನೂರಾರು ಜನ ಅಧ್ಯಾಪಕರು ಪಾಠ ಮಾಡುತ್ತಾರೆ. ಆದರೆ ಅಚ್ಚಿನ ದೋಷಗಳ ಬಗ್ಗೆ ಹಲವಾರು ಅಧ್ಯಾಪಕರು ಗಮನ ಹರಿಸಿದರೂ ಪಠ್ಯಪುಸ್ತಕದ ಲೇಖಕರಾರೂ ತಮ್ಮ ಪುಸ್ತಕ ಪಠ್ಯವಾದುದನ್ನು ಗಮನಿಸಿರುತ್ತಾರೆ ಹೊರತು ಅದರಲ್ಲಿನ ಸ್ಖಾಲಿತ್ಯಗಳ ಬಗ್ಗೆ ತಲೆ ಕೆಡಿಸಿಕೊಂಡಿರುವುದಿಲ್ಲ. ಮುದ್ರಕರು, ಕರಡು ತಿದ್ದಿದವರು ಯಾರೂ ಯಾವುದರ ಬಗ್ಗೆಯೂ ಚಿಂತಿಸುವುದಿಲ್ಲ. ಆದರೆ ವಿ.ಸೀ. ಅವರು ಇವರೆಲ್ಲರಿಗಿಂತ ಭಿನ್ನರಾದವರು, ವಿಶಿಷ್ಟರಾದವರು. ತಮ್ಮ ಯಾವುದೇ ಗ್ರಂಥವಾಗಲಿ, ಅದಕ್ಕೆ ಬಳಸುವ ಕಾಗದ, ಮುದ್ರಣವಿನ್ಯಾಸ, ಚಿತ್ರ ಕಟ್ಟು ಮೊದಲಾದುವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವರು. ಹೀಗೆಯೇ ಇರಬೇಕೆಂದು ಬಯಸುವವರು; ಅಷ್ಟೇ ಅಲ್ಲ, ತಪ್ಪಾದರೆ ತಿದ್ದುವುದು, ಸಂಬಂಧ ಪಟ್ಟವರ ಗಮನಕ್ಕೆ ತರುವುದು ಅವರ ಜಾಯಮಾನ.

ಅವರ ಹಲವಾರು ಪುಸ್ತಕಗಳು, ಕವನ ಸಂಕಲನಗಳು, ಪ್ರಬಂಧಗಳು ಪಠ್ಯವಾಗಿವೆ. ನಾನು ಬೆಂಗಳೂರು ದಯಾನಂದ ಕಾಲೇಜಿನಲ್ಲಿದ್ದಾಗ ಅವರ ಕವನಸಂಕಲನ ಪಠ್ಯವಾಯಿತು. ಅದರ ಹೆಸರು 'ಕದಂಬ – ಆಯ್ದ ಕವಿತೆಗಳ ಸಂಗ್ರಹ'. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪಠ್ಯವಾಗಿದ್ದ ಕಾಲ. ಹತ್ತಾರು ಬಾರಿ ಕರಡು ತಿದ್ದಿದ್ದರೂ ಕೆಲವು ಅಚ್ಚಿನ ದೋಷಗಳು ಉಳಿದಿದ್ದವು. ವಿ.ಸೀ. ಅವರಿಗೆ ಪುಸ್ತಕ, ವಸ್ತ್ರ, ತಿಂಡಿತೀರ್ಥ, ಮಾತುಕತೆ ಎಲ್ಲ ಶುದ್ಧವಾಗಿರಬೇಕು. ದೋಷರಹಿತವಾಗಿರಬೇಕು. ಹಾಗಾಗಿ ಪಠ್ಯ ಹೊರಬಂದ ಮೇಲೆ ಅದರಲ್ಲಿದ್ದ ಅಚ್ಚಿನ ಕೆಲವೇ ದೋಷಗಳನ್ನು ಪಟ್ಟಿ ಮಾಡಿ ಮುದ್ರಿಸಿ, ಎಲ್ಲ ಕಾಲೇಜಿನ ಅಧ್ಯಾಪಕರಿಗೆ ತಾವೇ ಕಳಿಸಿ, 'ದಯಮಾಡಿ ತಿದ್ದಿಕೊಂಡು ಪಾಠ ಮಾಡಬೇಕಾಗಿ ಬಿನ್ನಹ' ಎಂದು ತಿಳಿಸಿದ್ದರು.

ಈ ರೀತಿ ಮಾಡಿದ ಪಠ್ಯಪುಸ್ತಕಗಳ ಲೇಖಕರು ಇವರೊಬ್ಬರೇ ನಾನು ಕಂಡ ಹಾಗೆ.

❑

೧೨೦. ಕುವೆಂಪು ಎದುರಿಗೆ ಸಮಗ್ರ ಚಿತ್ರಾಂಗದಾ ಕಾವ್ಯ ಪಠಣ

ಕುವೆಂಪು ಶಿಷ್ಯರು ಅನೇಕ ನೆನಪುಗಳನ್ನು ಈಗಾಗಲೇ ಬರೆದಿದ್ದಾರೆ. ದೇಜಗೌ, ಕೋ. ಚೆನ್ನಬಸಪ್ಪ, ವೃಷಭೇಂದ್ರ ಸ್ವಾಮಿ, ಪ್ರಭುಶಂಕರ ಮೊದಲಾದವರು. ಅವರ ಇತರ ಶಿಷ್ಯರು ಹೇಳಿದ ಎಷ್ಟೋ ಸಂಗತಿಗಳು ಅಚ್ಚಾಗಿಲ್ಲ. ಆ ಪೈಕಿ ಅವರ ಶಿಷ್ಯರಾದ, ಹಲವಾರು ವರ್ಷ ನನ್ನ ಸಹೋದ್ಯೋಗಿಗಳಾದ, ಎಸ್. ಶ್ರೀನಿವಾಸನ್‌ರು ಹೇಳಿದ ನೆನಪುಗಳನ್ನು ಇಲ್ಲಿ ಹೇಳಬೇಕೆನ್ನಿಸಿದೆ. (ಇವು ಅಚ್ಚಾಗಿಲ್ಲ).

ಕುವೆಂಪು ಅವರ ಶಿಷ್ಯರಾದ ಎಸ್.ಶ್ರೀನಿವಾಸನ್ ಅವರ ತಂದೆ ಶೆಲ್ವಪಿಳ್ಳೆ ಅಯ್ಯಂಗಾರ್ ಅವರು ಮೈಸೂರಿನ **ಮಾತೃಭೂಮಿ** ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಅವರು ಪೂರ್ಣಚಂದ್ರ ತೇಜಸ್ವಿ ಅವರಿಗೆ ಪಾಠ ಹೇಳುತ್ತಿದ್ದರು. ಶ್ರೀನಿವಾಸನ್ ಅವರಿಗೆ ಕುವೆಂಪು ಅವರ ವಿದ್ಯಾರ್ಥಿ ಆಗುವ ಮೊದಲೇ ಪರಿಚಯವಿತ್ತು. ಕುವೆಂಪು ಅವರ ವಿದ್ಯಾರ್ಥಿ ಆದಾಗಲಂತು ಕುವೆಂಪು ಅವರಿಗೆ ಇವರ ಬಗ್ಗೆ ಬಹಳ ಅಭಿಮಾನವಿತ್ತು. ಶ್ರೀನಿವಾಸನ್ ಅವರು ಎಂ.ಎ. ಮುಗಿಸಿದ ಮೇಲೆ ತಾತ್ಕಾಲಿಕವಾಗಿ ಅವರಿಗೆ ಪ್ರಸಾರಾಂಗದಲ್ಲಿ ಕೆಲಸ ಕೊಡಿಸಿದ್ದರು.

ಎಸ್.ಶ್ರೀನಿವಾಸನ್ ಅವರು ನನಗೆ ಮಂಡ್ಯ, ಬೆಂಗಳೂರು ಕಾಲೇಜುಗಳಲ್ಲಿ ಸಹೋದ್ಯೋಗಿಗಳಾಗಿದ್ದವರು. ಇನ್ನೊಬ್ಬ ಸಹೋದ್ಯೋಗಿ ಜಾನಪದ ವಿದ್ವಾಂಸ ಎಂ.ಎ.ಜಯಚಂದ್ರ. ನಾವು ಮೂವರೂ ತ್ರಿಭುಜದಂತೆ ಅವಿಭಾಜ್ಯರಾಗಿದ್ದೆವು.

ಒಮ್ಮೆ ಶ್ರೀನಿವಾಸನ್ ಹೇಳಿದರು. ಅವರು ಸರ್ಕಾರಿ ಕಾಲೇಜಿಗೆ ಉದ್ಯೋಗಕ್ಕೆ ಅರ್ಜಿ ಹಾಕಿದಾಗ ಕುವೆಂಪು ಅವರು ಆಯ್ಕೆ ಸಮಿತಿಯಲ್ಲಿದ್ದರು. ಕುವೆಂಪು ಕೇಳಿದ ಪ್ರಶ್ನೆ ಶ್ರೀನಿವಾಸನ್ನರನ್ನು 'ನೀವು ಯಾವುದಾದರೂ ಹಳಗನ್ನಡ ಕೃತಿಯಿಂದ ಕೆಲವು ಸಾಲುಗಳನ್ನು ಹೇಳಬಲ್ಲಿರಾ?' ಕೂಡಲೆ ಆಗಲಿ ಎಂದು, ಕುವೆಂಪು ಅವರ ಚಿತ್ರಾಂಗದಾ ಕಾವ್ಯವನ್ನು ಒಂದಕ್ಷರ ಬಿಡದೆ ಒಂದೇ ಸಮನೆ ಹೇಳಿದರು. ಕುವೆಂಪು ನಕ್ಕು ವಿಸ್ಮಿತರಾದರು. ಶ್ರೀನಿವಾಸನ್ನರು ಆಯ್ಕೆ ಆಗಿದ್ದರು.

ಕೇಶಿರಾಜನ ಶಬ್ದಮಣಿ ದರ್ಪಣವನ್ನು, ಬಸವಪ್ಪಶಾಸ್ತ್ರಿಗಳ ಶಾಕುಂತಳವನ್ನು ಕೈಲಿ ಪಠ್ಯವಿಲ್ಲದೆ ಇಡೀ ಗ್ರಂಥವನ್ನೇ ಕಂಠಗತ ಮಾಡಿಕೊಂಡಿದ್ದ ಅವರು ಬಾಯಲ್ಲೇ ಪಠ್ಯದ ಸಾಲುಗಳನ್ನು ಹೇಳಿ ಪಾಠ ಮಾಡುತ್ತಿದ್ದರು. ಕುವೆಂಪು ಅವರ ಚಿತ್ರಾಂಗದಾ ಕಾವ್ಯವನ್ನು ಇಡಿಯಾಗಿ ಹೇಳಿದ್ದರಲ್ಲಿ ಅತಿಶಯೋಕ್ತಿಯೇನಿಲ್ಲ.

ಶ್ರೀನಿವಾಸನ್ ಹೇಳಿದ ಇನ್ನೊಂದು ಸಂಗತಿ. ೧೯೫೨–೫೩ರಲ್ಲಿ ಆನರ್ಸ್ ತರಗತಿಗಳು ಮುಗಿಯುತ್ತಾ ಬಂದಾಗ ಹಿರಿಯ ವಿದ್ಯಾರ್ಥಿಗಳು ಸೇರಿ ಕ್ಲಾಸ್ ಸೋಷಿಯಲ್ಸ್ ಸಮಾರಂಭ ಏರ್ಪಡಿಸಿದ್ದರು. ಅದರ ಅಧ್ಯಕ್ಷತೆಗೆ ಶ್ರೀನಿವಾಸನ್ ಅವರನ್ನು ಆರಿಸಿದ್ದರು. ಏಕೆಂದರೆ ಅವರನ್ನು ಸಹಪಾಠಿಗಳು ವಯಸ್ಸಿನಲ್ಲಿ ಆಕಾರದಲ್ಲಿ ಚಿಕ್ಕವರಾಗಿ ಕಾಣುತ್ತಿದ್ದರಿಂದ 'ಮಗು' ಎಂದು ಕರೆಯುತ್ತಿದ್ದರು. 'ಮಗುವಿನ ಅಧ್ಯಕ್ಷತೆಯಲ್ಲಿ ಹಿರಿಯ

ವಿದ್ಯಾರ್ಥಿಗಳ ಅಧ್ಯಾಪಕ ಸಮಾರಂಭ' ಎಂದು ಸಭೆಗೆ ಹೆಸರಿಟ್ಟಿದ್ದರು. ಆ ಸಮಾರಂಭದಲ್ಲಿ ವಿದ್ಯಾರ್ಥಿಗಳು ತಮಾಷೆ ಉಡುಗೊರೆಗಳನ್ನು ಅಧ್ಯಾಪಕರಿಗೆ ನೀಡಿದ್ದರು. ಕುವೆಂಪು ಅವರಿಗೆ ೮ ಆಣೆ ಬಿಲ್ಲೆ ಇಟ್ಟು ೧೩ ಸುರುಳಿ ಸುತ್ತಿದ ಕಾಗದದ ಕಟ್ಟನ್ನು ಕೊಟ್ಟಿದ್ದರು. ಕುವೆಂಪು ಅದನ್ನು ಬಿಡಿಸುತ್ತಾ ಏನಿದು ಮಾಯಾಜಾಲಂ ಎಂದು ವಿಸ್ಮಿತರಾದರು. ಅನಂತರ ಅಧ್ಯಕ್ಷರಾದ ಶ್ರೀನಿವಾಸನ್ 'ಈಗ ನಮ್ಮ ಗುರುಗಳೆಲ್ಲ ಮಾತಾಡುತ್ತಾರೆ' ಎಂದು ಹೇಳಿ ಕುವೆಂಪು ಅವರು ಮಹಾಕಾವ್ಯಭಾಷೆಯಲ್ಲಿ, ಡಿ.ಎಲ್.ಎನ್. ವಡ್ಡಾರಾಧನೆಯ ಹಳೆಗನ್ನಡ ಭಾಷೆಯಲ್ಲಿ, ಕ.ವೆಂ.ರಾ. ಅವರು ಗ್ರೀಕ್ ಕನ್ನಡದಲ್ಲಿ ಮಾತಾಡಬೇಕು ಎಂದು ಕೇಳಿಕೊಂಡಾಗ ಅವರೆಲ್ಲ ಹಾಗೆಯೇ ಮಾತಾಡಿದರಂತೆ. ಈವತ್ತು ಇಂಥ ಭಾಷಾಪಂಡಿತರನ್ನು ಕಾಣಬಹುದೇ?

ಕುವೆಂಪು ಅವರ ಬಗ್ಗೆ ಅವರ ಶಿಷ್ಯರು, ಮಿತ್ರರು, ಮಕ್ಕಳು, ಬಂಧುಬಳಗ, ಸಾಹಿತಿ ವಿದ್ವಾಂಸರು ಬೇಕಾದಷ್ಟು ಜನ ಪೂಜ್ಯಭಾವದಿಂದ ಬರೆದಿದ್ದಾರೆ. ಅವುಗಳ ತಂಟೆಗೆ ನಾನು ಹೋಗದೆ ನನ್ನದೇ ಆದ ಕೆಲವು ನೆನಪುಗಳನ್ನು ಮಲ್ಲಿಗೆ, ಜಾಜಿ, ಸಂಪಿಗೆ, ತಾವರೆ ಇತ್ಯಾದಿ ಹೂಗಳ ನಡುವೆ ತುಂಬೆಹೂನಂತೆ ಇಲ್ಲಿ ಹೇಳಿದ್ದೇನೆ. ಮರೆಯಲಾಗದ ವ್ಯಕ್ತಿ ಕುವೆಂಪು ಕನ್ನಡದ ಶಕ್ತಿ.

❑

೧೨೧. ಸಮ್ಮೇಳನಾಧ್ಯಕ್ಷ ನಾನೋ ನೀನೋ?

ಹಂಪನಾ ಅವರ ಕಾಲದಲ್ಲಿ ಧರ್ಮಸ್ಥಳದ ಸಮ್ಮೇಳನ ನಡೆಯಿತು. ಅಡಿಗರು ಸಮ್ಮೇಳನಾಧ್ಯಕ್ಷರಾಗಿದ್ದರು. ಆಗ ನಾನು ಗೌರವ ಕಾರ್ಯದರ್ಶಿ ಆಗಿದ್ದೆ. ಪರಿಷತ್ತಿನ ಪರವಾಗಿ ಕಾರ್ಯ ನಿರ್ವಹಿಸಲು ಧರ್ಮಸ್ಥಳಕ್ಕೆ ಸಮ್ಮೇಳನಕ್ಕೆ ಹತ್ತಾರು ದಿನ(ಸುಮಾರು ೨ ವಾರಗಳು) ಮುಂಚೆ ಹಂಪನಾ ಕಳಿಸಿದ್ದರು. ಡಿ.ಲಿಂಗಯ್ಯ ಹಂಪನಾ ಅವರ ಜತೆ ಬೆಂಗಳೂರಿನ ಕಚೇರಿಯಲ್ಲಿ ಸಮ್ಮೇಳನದ ವ್ಯವಸ್ಥೆ ಮಾಡುತ್ತಿದ್ದರು. ಹೆಗ್ಗಡೆ ಅವರ ಜತೆ ಹಗಲಿರುಳು ಕೆಲಸ ಮಾಡುವ ಭಾಗ್ಯ ದೊರೆತು ಸಂಘಟನೆ, ಸಾರ್ವಜನಿಕ ಸೇವೆ ಹೇಗೆ ಮಾಡಬೇಕು ಎಂಬುದನ್ನು, ತಾಳ್ಮೆ ಸಹನೆಯ ಪಾಠಗಳನ್ನು ಕಲಿತೆ. ಅದು ನನ್ನ ಬಾಳಿಗಾದ ದೊಡ್ಡ ಲಾಭ. ಆಗ ನಡೆದ ಕೆಲವು ಪ್ರಸಂಗಗಳು ರೋಚಕವಾಗಿವೆ.

ಸಮ್ಮೇಳನಾಧ್ಯಕ್ಷರಾದ ಅಡಿಗರ ಉಸ್ತುವಾರಿ ನನ್ನ ಪಾಲಿಗಿತ್ತು ಅವರ ತಂಗು ವ್ಯವಸ್ಥೆ, ಊಟತಿಂಡಿ, ಸಭೆಗೆ ಕರೆದೊಯ್ಯುವುದು, ರಾತ್ರಿ ಮಲಗಲು ಕೊಠಡಿಗೆ ಒಯ್ಯುವುದು, ಬೆಳಿಗ್ಗೆ ಅವರಿಗೆ ಬೇಕಾದ ಸಿದ್ಧತೆ ನೀಡುವುದು, ಅವರು ಬಯಸಿದ ವ್ಯಕ್ತಿಗಳನ್ನು ಭೇಟಿ ಮಾಡಿಸುವುದು, ಇತ್ಯಾದಿ. ಸಮ್ಮೇಳನದ ಮೊದಲ ದಿನ ರಾತ್ರಿ ಸಮ್ಮೇಳನದ ಕಾರ್ಯಕ್ರಮ ಮುಗಿದ ಮೇಲೆ ಕೊಠಡಿಗೆ ಬರುವ ಮೊದಲು ಅಡಿಗರು ಬೇರೆ ಕೊಠಡಿಯೊಂದರಲ್ಲಿ ಗೆಳೆಯರೊಂದಿಗೆ ಹರಟುತ್ತಾ ನಡುರಾತ್ರಿ ಕೊಠಡಿಗೆ ಬಂದರು. ಅವರಿಗೆ ಕಾದು ಕಾದು ಸಾಕಾಗಿ ಬಾಗಿಲನ್ನು ಚಿಲಕ ಹಾಕದೆ ಸೇರಿಸಿ ಮಲಗಿಬಿಟ್ಟೆ. ಜೋಡಿ ಮಂಚದ ಕೊಠಡಿ. ವಿಶಾಲವಾದದ್ದು. ಕೊಠಡಿಗೆ ಬಂದ ಅಡಿಗರು ರಾತ್ರಿ ನಿದ್ದೆ ಮಾಡಲಿಲ್ಲ. ಓದುತ್ತಾ ರಾತ್ರಿಯೆಲ್ಲಾ ಕುಳಿತಿದ್ದರು. ಬೆಳಿಗ್ಗೆ ಎದ್ದಾಗ ನನ್ನನ್ನು ಕೇಳಿದರು. 'ಈ ಸಮ್ಮೇಳನಕ್ಕೆ ಅಧ್ಯಕ್ಷ ನಾನೋ ನೀನೋ?' 'ಯಾಕೆ ಸಾರ್. ನೀವೇ...ಅದಕ್ಕೇಕೆ ಕೇಳುತ್ತಿದ್ದೀರಿ?' ಎಂದೆ. 'ಅಲ್ಲಯ್ಯಾ ನಾನು ಬರುವ ಮುಂಚೆ ಮಲಗಿ ಗೊರಕೆ ಹೊಡೆಯುತ್ತಾ ನಾನು ಮಲಗದಂತೆ ಮಾಡಿದೆಯಲ್ಲಾ. ಅಧ್ಯಕ್ಷ ನಾನೆದ್ದಿರಬೇಕು. ನೀನು ಮಲಗಿರಬೇಕಾ? ನೀನೇ ಅಧ್ಯಕ್ಷ ಅಲ್ಲವಾ?' ಎಂದರು. ಆ ಕಾಲದಲ್ಲಿ ನಾನು ಭಾರಿ ಗೊರಕೆ ಹೊಡೆಯುತ್ತಿದ್ದೆ. 'ಕ್ಷಮಿಸಿ ಸಾರ್. ಇನ್ನು ಮೇಲೆ ನೀವು ಮಲಗಿದ ಮೇಲೆ ಮಲಗ್ತೀನಿ. ಇಲ್ಲಾ ಬೇರೆ ರೂಂನಲ್ಲಿ ಮಲಗ್ತೇನೆ' ಎಂದೆ. 'ಎಲ್ಲಾದರೂ ಉಂಟೆ? ನೀನು ನನ್ನ ಭಂಟ ಮಿತ್ರ. ನೀನಿರಬೇಕು ನನ್ನ ಜತೆ. ನಿನ್ನ ಹಾಗೆ ನನ್ನನ್ನಾರು ವಿಚಾರಿಸಿಕೊಳ್ತಾರೆ?' ಎಂದರು ನಗುತ್ತಾ. ಅಂದಿನಿಂದ ಸಮ್ಮೇಳನ ಮುಗಿಯುವವರೆಗೆ ಅವರು ಮಲಗಿ ನಿದ್ರೆ ಹೋದ ಮೇಲೆ ನಾನು ಮಲಗುತ್ತಿದ್ದೆ.

❑

೧೨೨. ಹಾಮಾನಾಗೆ ಹೊಸ ಚಪ್ಪಲಿ ಕೊಡಿಸಿದೆ

ಧರ್ಮಸ್ಥಳದ ಸಮ್ಮೇಳನದ ಗೋಷ್ಠಿಯೊಂದಕ್ಕೆ ಹಾಮಾನಾ ಅತಿಥಿಯಾಗಿ ಬಂದಿದ್ದರು. ಭಾಷಣದ ವೇಳೆಗೆ ಕರೆದುಕೊಂಡು ಹೋಗು ಎಂದು ತಿಳಿಸಿದ್ದರು. ನೇತ್ರಾವತಿ ಭವನದಲ್ಲಿ ಇಳಿದುಕೊಂಡಿದ್ದರು. ಅವರ ಗೋಷ್ಠಿ ಪ್ರಾರಂಭದ ವೇಳೆಗೆ ನೇತ್ರಾವತಿಗೆ ಬಂದು ಕರೆದೆ. ಕೆಳಕ್ಕೆ ಇಳಿದಾಗ ಅಲ್ಲಿ ಚಪ್ಪಲಿಗಳು ಬಿಟ್ಟ ಜಾಗದಲ್ಲಿ ಅವರ ಚಪ್ಪಲಿ ಕಾಣಲಿಲ್ಲ. ಅಲ್ಲಿದ್ದ ಹತ್ತಾರು ಚಪ್ಪಲಿಗಳ ನಡುವೆ ಮಾಯವಾಗಿತ್ತು. 'ಚಪ್ಪಲಿ ಇಲ್ಲದೆ ನಾ ಬರಲಾರೆ ಮಂಟಪಕ್ಕೆ' ಎಂದುಬಿಟ್ಟರು. ಆಗ ನನಗೆ ಧರ್ಮಸ್ಥಳದ ಇಂಚಿಂಚು ಜಾಗ ಪರಿಚಯ ಆಗಿತ್ತು. ಯಾವ ಯಾವ ಅಂಗಡಿ ಮುಂಗಟ್ಟು ಎಲ್ಲೆಲ್ಲಿ ಇದೆ ತಿಳಿದಿತ್ತು. ಅಲ್ಲೇ ಬಳಿಯಿದ್ದ ಚಪ್ಪಲಿ ಅಂಗಡಿಗೆ ಕರೆದೊಯ್ದು ಒಂದು ಜೊತೆ ಚಪ್ಪಲಿ ಕೊಡಿಸಿದೆ. ಹಣ ಕೊಡಲು ಮುಂದಾದರು. ನಾನು ಕೈ ತಡೆದು, 'ನೀವು ಅತಿಥಿ. ನೀವು ಕೊಡುವ ಹಾಗಿಲ್ಲ. ಮಂಜುನಾಥನಾಣೆ. ಪರಿಷತ್ತು ನಿಮ್ಮನ್ನು ಆಹ್ವಾನಿಸಿದೆ. ನಾನೇ ಕೊಡಬೇಕು' ಎಂದು ಹೇಳಿ ಕೊಟ್ಟೆ. 'ಇದನ್ನು ಪರಿಷತ್ತಿನ ಖರ್ಚಿಗೆ ಹಾಕಬಾರದು. ಇದು ನನ್ನ ವೈಯಕ್ತಿಕ ಅಗತ್ಯದ ವಸ್ತು. ನಾನೇ ಹಣ ಕೊಡುತ್ತೇನೆ' ಎಂದರು. ನಾನು 'ಎಲ್ಲಾದರೂ ಉಂಟೇ? ಪರಿಷತ್ತಿನ ಅತಿಥಿ ವ್ಯವಸ್ಥೆಯ ಜವಾಬ್ದಾರಿ ನನಗೆ ಸೇರಿದೆ. ನಿಮ್ಮ ಚಪ್ಪಲಿ ವ್ಯವಸ್ಥೆ ನಾನು ಮಾಡಬೇಕಿತ್ತು. ಅದರ ತಪ್ಪು ನನ್ನದು. ನನ್ನ ಕೈಯಿಂದ ಹಣ ಕೊಡುತ್ತಿದ್ದೇನೆ. ಪರಿಷತ್ತಿನ ಖರ್ಚಿಗೆ ಹಾಕುತ್ತಿಲ್ಲ. ಪರಿಷತ್ತಿಗೆ ಖರ್ಚು ಹಾಕಿದರೆ ಈ ಚಪ್ಪಲಿಯಲ್ಲೇ ನಾನು ಹೊಡೆದುಕೊಂಡಂತೆ' ಎಂದೆ. ಆಗ ನಾಯಕರು ಮಾತಾಡದೇ ಹೊಸ ಚಪ್ಪಲಿ ಹಾಕಿಕೊಂಡು ಸಮ್ಮೇಳನದ ವೇದಿಕೆಗೆ ಬಂದರು.

❑

೧೨೩. ಹೆಗಡೆ ಅವರ ಔದಾರ್ಯ – ಜಾಣ್ಮೆ

ಧರ್ಮಸ್ಥಳಕ್ಕೆ ರೈಲಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಬಸ್ಸಲ್ಲಿ ಜನ ಬರುತ್ತಾರೆ. ಸಮ್ಮೇಳನದ ಕೆಲವು ಆಹ್ವಾನಿತ ಅತಿಥಿಗಳು, ಕಿರಿಯ ಸಾಹಿತಿಗಳು ಬೆಂಗಳೂರಿಂದ ಮಂಗಳೂರಿಗೆ ವಿಮಾನದಲ್ಲಿ ಬಂದು, ಅಲ್ಲಿಂದ ಟ್ಯಾಕ್ಸಿಯಲ್ಲಿ ಧರ್ಮಸ್ಥಳಕ್ಕೆ ಬಂದು ಸಾವಿರ ರೂಗಳಿಗೂ ಮಿಕ್ಕು ಬಿಲ್ಲು ಮಾಡಿ ಹಣ ಕೇಳಿದರು.

ಪರಿಷತ್ತಿನ ನಿಯಮದಂತೆ ಬಸ್ಸು ಚಾರ್ಜು ಅಥವಾ ರೈಲು ಚಾರ್ಜು ಕೊಡುವ ವ್ಯವಸ್ಥೆ ಇತ್ತು. ಊಟ, ವಸತಿ ಇತ್ಯಾದಿ ಹೆಗ್ಗಡೆ ಅವರು ಮಾಡಿದ್ದರು. ಸುತ್ತಮುತ್ತಲು ಹೋಗಿ ಬರಲು ಉಚಿತವಾದ ವಾಹನ ವ್ಯವಸ್ಥೆ ಮಾಡಿದ್ದರು. ಬಂದ ಅತಿಥಿಗಳ ಬೇಕು ಬೇಡಗಳನ್ನು ಪೂರೈಸಲು ಒಬ್ಬ ಕಾರ್ಯಕರ್ತನನ್ನೇ ಪ್ರತಿಯೊಬ್ಬ ಆಹ್ವಾನಿತರಿಗೆ ಮೀಸಲಿಟ್ಟಿದ್ದರು. ಹೆಗ್ಗಡೆ ಅವರಂತೆ ಸಾಹಿತ್ಯ ಸಮ್ಮೇಳನಕ್ಕೆ ಬಂದ ಅತಿಥಿಗಳನ್ನು ವೈಯಕ್ತಿಕವಾಗಿ ವಿಚಾರಿಸಿಕೊಂಡಂತೆ ಬೇರೆ ಸಮ್ಮೇಳನಗಳಲ್ಲಿ ನಾನು ಕಂಡಿಲ್ಲ. ಒಬ್ಬ ಅತಿಥಿ ಹಿರಿಯ ಸಾಹಿತಿ ಸಂಸಾರ ಸಮೇತ ಬಂದಿದ್ದರು. ಹೆಂಡತಿ ಮಗು ಜೊತೆಗಿದ್ದರು. ನಡುರಾತ್ರಿ ಮಗುವಿಗೆ ಹಾಲು ಬೇಕಾಯಿತು, ಔಷಧಿ ತೆಗೆದುಕೊಳ್ಳಲು ಬಿಸಿನೀರು ಮಾತ್ರೆ ಬೇಕಾಗಿತ್ತು. ಮಾತ್ರೆ ಮುಗಿದಿತ್ತು. ನೋಡಿಕೊಂಡಿರಲಿಲ್ಲ. ಬಾಗಿಲಲ್ಲೇ ಸೋಫಾದಲ್ಲಿ ಮಲಗಿದ್ದ ಕಾರ್ಯಕರ್ತ ಮಗುವಿನ ಅಳು ಕೇಳಿ ಬಾಗಿಲು ತಟ್ಟಿ ಹಾಲು, ಬಿಸಿನೀರು, ಔಷಧವನ್ನು ನಡುರಾತ್ರಿ ತಂದುಕೊಟ್ಟಿದ್ದ.

ಮುಖ್ಯ ಅತಿಥಿಗಳ ಕೊಠಡಿಯ ಬಳಿ ರಾತ್ರಿ ಅಲ್ಲಲ್ಲಿ ಕಾರ್ಯಕರ್ತರನ್ನು ಹೆಗ್ಗಡೆ ವ್ಯವಸ್ಥೆ ಮಾಡಿದ್ದರು. ಬಂದ ಅತಿಥಿಗಳ ಕಾಯಿಲೆ, ಔಷಧಿ, ಪಥ್ಯ ಇತ್ಯಾದಿ ವಿವರಗಳನ್ನು ತಿಳಿದಿದ್ದರು. ಅವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿದ್ದರು. ಚಿಕ್ಕ ಮಗು, ಅನಾರೋಗ್ಯದ ಪತ್ನಿಯ ಅತಿಥಿಯ ಕೊಠಡಿಯ ಬಾಗಿಲಲ್ಲಿ ಕಾರ್ಯಕರ್ತ ರಾತ್ರಿಯೆಲ್ಲ ಇರಲು ವ್ಯವಸ್ಥೆ ಮಾಡಿದ್ದರು.

ಹೆಗ್ಗಡೆ ಅವರು ಅನಿರೀಕ್ಷಿತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿಸ್ಸೀಮರು. ಆ ಸಂದರ್ಭದಲ್ಲಿ ಎಷ್ಟೇ ಹಣ ಖರ್ಚಾಗಲಿ ಹಿಂದು ಮುಂದು ನೋಡುವವರಲ್ಲ. ಸಮಸ್ಯಾ ಪರಿಹಾರ ಅವರಿಗೆ ಮುಖ್ಯ. ಪರಿಷತ್ತು ಸಮ್ಮೇಳನದಲ್ಲಿ ಬರುವ ಆಹ್ವಾನಿತ ಅತಿಥಿಗಳಿಗೆ ಅವರು ಯಾವ ಸ್ಥಳದಿಂದ ಧರ್ಮಸ್ಥಳಕ್ಕೆ ಬರುತ್ತಾರೆ ಎಂಬುದನ್ನು ತಿಳಿದು ಅದಕ್ಕೆ ತಕ್ಕಂತೆ ಪ್ರಯಾಣವೆಚ್ಚ, ವಾಹನವೆಚ್ಚ ಇತ್ಯಾದಿ ಸರ್ಕಾರಿ ನಿಯಮದಂತೆ ಗೊತ್ತುಮಾಡಿ ಅಷ್ಟು ಹಣವನ್ನು ಪರಿಷತ್ತಿನ ಮ್ಯಾನೇಜರ್ ಪಟ್ಟಿ ಸಮೇತ ತಂದಿದ್ದರು.

ಕಾರ್ಯಕ್ರಮದಲ್ಲಿ ಅತಿಥಿಗಳ ಭಾಷಣ ಮುಗಿದ ಕೂಡಲೇ ಅವರಿಗೆ ಸಂದಾಯ ಮಾಡಬೇಕಾದ ಹಣವನ್ನು ಕವರಿನಲ್ಲಿಟ್ಟು ಕೊಟ್ಟು ಸಹಿ ಪಡೆಯಲಾಗುತ್ತಿತ್ತು. ಅತ್ಯಂತ ಹಿರಿಯ ವೃದ್ಧ ಘನ ವಿದ್ವಾಂಸರೊಬ್ಬರು ಹತ್ತಿರದ ಊರಿಂದ ಬಸ್ಸಿನಲ್ಲಿ ಬಂದಿದ್ದರು. ಅವರ ಶಿಷ್ಯರೊಂದಿಗೆ ಬಂದಿದ್ದರು. ಶಿಷ್ಯರು ಸಾಹಿತಿಗಳು. ಹೆಗ್ಗಡೆಯವರ ಭಕ್ತರು.

ಸಮ್ಮೇಳನದ ಕಾರ್ಯಕರ್ತರು ಅವರ ಅಧ್ಯಕ್ಷತೆ ಕಾರ್ಯಕ್ರಮ ಮುಗಿದಾಗ ನಿಯಮದ ಪ್ರಕಾರ ಎಂದರೆ ಪ್ರಯಾಣದ ವೆಚ್ಚ (ಬಸ್ ಪ್ರಯಾಣದ್ದು ೮ ರೂ. ಅಥವಾ ೧೦ ರೂ. ಇರಬೇಕು, ತಿಳಿಯದು) ಅಲ್ಪ ವೆಚ್ಚ. ಒಟ್ಟಿನಲ್ಲಿ ೧೦೦ರೂ. ಒಳಗೆ ಬಿಲ್ ಮಾಡಿದ್ದನ್ನು ಕೊಟ್ಟು ಸಹಿ ಪಡೆಯಬೇಕಿತ್ತು. ಅದೇ ಗೋಷ್ಠಿಯಲ್ಲಿ ಭಾಗವಹಿಸಿದ ಯುವಸಾಹಿತಿ ಬೆಂಗಳೂರಿಂದ ಮಂಗಳೂರಿಗೆ ವಿಮಾನದಲ್ಲಿ ಬಂದು ಅನಂತರ ಮಂಗಳೂರಿಂದ ಧರ್ಮಸ್ಥಳಕ್ಕೆ ಬಂದು ೧೦೦೦ರೂ.ಗಿಂತ ಹೆಚ್ಚಿನ ಬಿಲ್ ಮಾಡಿದ್ದರು. ಇದನ್ನು ತಿಳಿದ ವಿದ್ವಾಂಸರ ಶಿಷ್ಯರು ಕೆಂಡಾಮಂಡಲವಾಗಿ ನನ್ನ ಬಳಿ ಬಂದು ಹೇಳಿದರು. 'ಕಾರ್ಯದರ್ಶಿಗಳೇ ನೀವು ಈ ಅಲ್ಪಹಣ ಕೊಟ್ಟು ನಮ್ಮ ವಿದ್ವಾಂಸರನ್ನು ಅವಮಾನಿಸಬೇಡಿ. ಆ ಹಣ ನೀವೇ ಇಟ್ಟುಕೊಳ್ಳಿ. ಅಚ್ಚಾ ವಿದ್ವಾಂಸನಿಗೆ ನೂರರೊಳಗೆ ವೆಚ್ಚ, ಬಚ್ಚಾ ಸಾಹಿತಿಗೆ ಸಾವಿರದ ಮೇಲೆ ಪ್ರಯಾಣವೆಚ್ಚ ಕೊಟ್ಟು ಅವಮಾನಿಸಬೇಡಿ' ಎಂದು ಹೇಳಿ ನಯವಾಗಿ ನಿರಾಕರಿಸಿದರು. ನಿಯಮದ ಪ್ರಕಾರ ಅವರಿಗೆ ಗೊತ್ತಾದ ಹಣ ಕೊಟ್ಟು ವೋಚರ್ ಪಡೆಯಬೇಕು. ಕಾರ್ಯದರ್ಶಿ ಆದ ನನ್ನ ಕರ್ತವ್ಯ. ಏನು ಮಾಡುವುದು? ಇದು ಅನ್ಯಾಯ ಎಂದು ತಿಳಿದರೂ ನಾನೇನೂ ಮಾಡುವ ಹಾಗಿರಲಿಲ್ಲ. ಆಗ ಹೆಗ್ಗಡೆ ಅವರ ಮುಂದೆ ಈ ಸಮಸ್ಯೆಯನ್ನು ಮುಂದಿಟ್ಟೆ. ವೋಚರಿಗೆ ಸಹಿ ಬೇಕು. ಆದರೆ ವಿದ್ವಾಂಸರಿಗೆ ಅನ್ಯಾಯವಾಗಬಾರದು. ಆಗ ಹೆಗ್ಗಡೆ, 'ಕಾರ್ಯದರ್ಶಿಗಳೇ, ನೀವು ನಿಮ್ಮ ನಿಯಮದ ಪ್ರಕಾರ ಯಾರ್‍ಯಾರಿಗೆ ಏನೇನು ಕೊಡಬೇಕೋ ಆ ಪಟ್ಟಿ ಆ ಹಣವನ್ನು ನಮ್ಮ ಕಾರ್ಯದರ್ಶಿಗಳ ಕೈಗೆ ಕೊಟ್ಟುಬಿಡಿ. ನಿಮಗೆ ಹಣ ಕೊಟ್ಟಿದ್ದಕ್ಕೆ ವೋಚರುಗಳ ಮೊತ್ತಕ್ಕೆ ಸಹಿ ಅಷ್ಟೇ ಬೇಕಲ್ಲಾ. ನಾನು ಹಾಕಿಸಿಕೊಡ್ತೇನೆ' ಎಂದು ಹೇಳಿದರು. ಆ ಪಟ್ಟಿ, ಆ ಹಣವನ್ನು ಅವರ ಕಾರ್ಯದರ್ಶಿಗಳಿಗೆ ಒಪ್ಪಿಸಲು ನಮ್ಮ ಮ್ಯಾನೇಜರಿಗೆ ಹೇಳಿದೆ. ಅವರು ಒಪ್ಪಿಸಿಬಿಟ್ಟರು.

ಹೆಗ್ಗಡೆ ಅವರು ಏನು ಮಾಡಿದರು ಎಂದರೆ, ಆ ಗೋಷ್ಠಿಯ ಕಾರ್ಯಕ್ರಮದಲ್ಲಿ ಒಬ್ಬೊಬ್ಬರ ಭಾಷಣ ಮುಗಿದಂತೆ ಒಬ್ಬ ಕಾರ್ಯಕರ್ತ ವೇದಿಕೆಯಿಂದ ಹೆಗ್ಗಡೆ ಅವರ ಬಳಿಗೆ ಕರೆದೊಯ್ಯುತ್ತಿದ್ದ. ಹೆಗ್ಗಡೆ ಅವರು ಅವರಿಗೆ ಅಭಿನಂದನೆ ಸಲ್ಲಿಸಿ ಪರಿಷತ್ತು ವೋಚರಿನಲ್ಲಿ ತೋರಿಸಿದ ಹಣಕ್ಕಿಂತ ಅಧಿಕ ಮೊತ್ತವನ್ನು ಆಯಾ ಸಾಹಿತಿಯ ಯೋಗ್ಯತೆ ಪ್ರತಿಭೆಯನ್ನು ಗಮನಿಸಿ ನೀಡುತ್ತಿದ್ದರು. ಬಾಗಿಲಲ್ಲಿ ಒಬ್ಬ ಕಾರ್ಯಕರ್ತ, 'ಸಾರ್, ಈ ವೋಚರಿಗೆ ಸಹಿ ಹಾಕಿ' ಎಂದಾಗ, ತಮಗೆ ಬಂದ ಹಣ, ವೋಚರಿನಲ್ಲಿ ಬರೆದ ಹಣ ಎರಡಕ್ಕೂ ಅಜಗಜಾಂತರವಿತ್ತು. ವೋಚರಲ್ಲಿ ೨೦೦ ರೂ. ಇದ್ದರೆ ಹೆಗ್ಗಡೆಯವರು ೧೦೦೦ ರೂ. ಕೊಟ್ಟಿದ್ದಾರೆ. ಹೀಗಾಗಿ ಮಾತಾಡದೆ ಸಹಿ ಮಾಡಿದರು. ಏಕೆ ಜಾಸ್ತಿ ಕೊಟ್ಟಿದ್ದಾರೆ ಎಂದು ಯಾವ ಸಾಹಿತಿಯೂ ಕೇಳಲಿಲ್ಲ. ಹಿರಿಯ ವಿದ್ವಾಂಸರನ್ನು ಯಥೋಚಿತವಾಗಿ ಸತ್ಕರಿಸಿ ಸನ್ಮಾನಿಸಿ ನಮ್ಮ ಲೆಕ್ಕಪತ್ರಗಳಿಗಾಗಿ ತಾವು ಈ ವೋಚರಿಗೆ ಸಹಿ ಹಾಕಬೇಕು ಎಂದು ಅವರ ಮ್ಯಾನೇಜರ್ ಮುಂದಿಟ್ಟರು. ಆಹ್ವಾನಿತರು ಅದನ್ನೋದದೆ ಸಹಿ ಹಾಕಿದರು.

❑

೧೨೪. ಸಮ್ಮೇಳನ ಮುಂದುವರೀತಾ ಇದೆ

ಅಡಿಗರಿಗೆ ಸಿಗರೇಟು ಚಟ ಇದ್ದದ್ದು ಎಲ್ಲರಿಗೂ ಗೊತ್ತು. ಸಮ್ಮೇಳನ ಮುಗಿದ ಮೇಲೆ ಅವರನ್ನು ಬೆಂಗಳೂರಿಗೆ ಕಳಿಸುವಾಗ ಅಂದಿನ ದಿನ ಕೇಂದ್ರ ಬಡ್ಜೆಟ್ಟಿನ ಹಿಂದಿನ ದಿನವಾಗಿ ಅದರ ಬೆಲೆ ಏರಿಕೆ ಸುದ್ದಿ ಹಬ್ಬಿ ಎಲ್ಲ ಅಂಗಡಿಗಳಿಂದ ಇದ್ದಕ್ಕಿದ್ದಂತೆ ಸಿಗರೇಟುಗಳು ಮಾಯವಾದವು. ಅಡಿಗರಿಗೆ ಸಿಗರೇಟು ಬೇಕಾಯಿತು. ಎಲ್ಲೂ ಸಿಗಲಿಲ್ಲ. ನಾನು ಎಷ್ಟು ತಡಕಾಡಿದರೂ ಯಾವ ಅಂಗಡಿಯಲ್ಲೂ ಸಿಗಲಿಲ್ಲ. ಮುಂದೆಲ್ಲಾದರೂ ದಾರಿಯಲ್ಲಿ ಏರ್ಪಾಡು ಮಾಡುವೆ ಎಂದು ತಿಳಿಸಿದೆ. ಡ್ರೈವರಿಗೆ 'ದಾರಿಯಲ್ಲಿ ಎಲ್ಲಾದರೂ ಸರಿ, ಎಷ್ಟು ಬೆಲೆ ಆದರೂ ಸರಿ, ಅವರಿಗೆ ಸಿಗರೇಟು ಒದಗಿಸು. ಅದರ ಹಣ ಕೊಡುವೆ' ಎಂದೆ. ಧರ್ಮಸ್ಥಳದಿಂದ ಉಜಿರೆಗೆ ಬಂದೆವು. ಅಲ್ಲಿ ಕಾಲೇಜಿನ ಮುಂದೆ ಕಾರನ್ನು ನಿಲ್ಲಿಸಬೇಕಾಯಿತು. 'ಕಾಲೇಜಿನ ಪ್ರಿನ್ಸಿಪಾಲರು ಅಡಿಗರಿಗೆ ಕೊಡಲು ತಿಳಿಸಿದ್ದಾರೆ' ಎಂದು ಕಾರ್ಯಕರ್ತನೊಬ್ಬನು ದೊಡ್ಡ ಪೆಟ್ಟಿಗೆಯೊಂದನ್ನು ಕಾರಿನ ಡಿಕ್ಕಿಯಲ್ಲಿ ಇಟ್ಟು ಹೋದನು. ಅವನು ಹೋದ ಮೇಲೆ ನಾನು ತೆಗೆದು ನೋಡಿದರೆ ನೂರಾರು ಸಿಗರೇಟು ಡಬ್ಬಿಗಳ ಪೆಟ್ಟಿಗೆ ಅದು. ಅಚ್ಚರಿ–ಸಂತೋಷದಿಂದ ಅಲ್ಲೆಲ್ಲೋ ಅಂಗಡಿಯ ಮುಂದೆ ನಿಲ್ಲಿಸಿ ಹೋಗಿ ಬಂದವನಂತೆ ಮಾಡಿ ಡಬ್ಬಿಯೊಂದನ್ನು ಕೊಟ್ಟೆ. ಅಡಿಗರಿಗೆ ಖುಷಿಯೋ ಖುಷಿ ಆಗಿ ಸಿಗರೇಟನ್ನು ಪರಮಾನಂದ ಭರಿತರಾಗಿ ಸೇದಿದರು. ದಾರಿಯುದ್ದಕ್ಕೂ ಸಿಗರೇಟು ಸೇದಾಯಣ. ಡ್ರೈವರಿಗೆ ಹೇಳಿ ಅವರ ಮನೇಲಿ ಅವರ ಕೊಠಡೀಲಿ ಈ ಪೆಟ್ಟಿಗೆ ಇಡಲು ಕಾರ್ಯದರ್ಶಿಗಳು ಹೇಳಿದ್ದಾರೆ ಎಂದು ಹೇಳಿ ಇದನ್ನಿಡು ಎಂದು ತಿಳಿಸಿದೆ.

ಬೆಂಗಳೂರಿಗೆ ಬಂದ ಮೇಲೆ ಅವರ ಮನೆಗೆ ಹೋದಾಗ 'ಧರ್ಮಸ್ಥಳದ ಸಮ್ಮೇಳನ ಮುಗೀತಾ, ಮುಂದುವರಿಯುತ್ತಾ ಇದೆಯೇ?' ಎಂದು ಕೇಳಿದೆ. 'ಸಮ್ಮೇಳನ ದೀರ್ಘಕಾಲ ನನ್ನನ್ನು ದಿನಾ ನೆನೆಸುವಂಥಾದ್ದಯ್ಯ' ಎಂದರು ನಗುತ್ತಾ. ಇದಾದ ಕೆಲವು ಕಾಲ ನಂತರ ಬೆಂಗಳೂರು ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ 'ಕಟ್ಟುವೆವು ನಾವು' ಎಂಬ ಅವರ ಗ್ರಂಥ ಪಠ್ಯ ಇಟ್ಟಾಗ ತರಗತಿಗೆ ಅಡಿಗರನ್ನು ಕರೆಸಿ ಪಠ್ಯದ ಬಗ್ಗೆ ಮಾತನಾಡಿಸಿದ್ದೆ. ಅವರ ಸಿಗರೇಟಿನ ಪದ್ಯ ಓದಿಸಿದ್ದೆ. ಆಗ ಸಮ್ಮೇಳನವನ್ನು ಜ್ಞಾಪಿಸಿದಾಗ ನಕ್ಕಿದ್ದರು.

❑

೧೨೫. ನಿದ್ದೆಗೆಟ್ಟ ಸಮ್ಮೇಳನದ ವ್ಯವಸ್ಥಾಪಕರು

ಧರ್ಮಸ್ಥಳ ಸಮ್ಮೇಳನದ ವ್ಯವಸ್ಥೆ ಕಂಡಾಗ ಹಲವಾರು ಸಮ್ಮೇಳನ ಕಂಡ ನನಗೆ ಬೇರೆಲ್ಲೂ ಕಾಣದ ಅದ್ಭುತ ವ್ಯವಸ್ಥೆ ಅವರದು ಎನಿಸಿತು. ಈಗ ದೇವಸ್ಥಾನದ ಪಕ್ಕ ಇರುವ ಸಭಾಮಂಟಪದ ಜಾಗದಲ್ಲಿ ಚಪ್ಪರ ಹಾಕಿ ಸಮ್ಮೇಳನ ನಡೆಸಲಾಗಿತ್ತು.

ಸಮ್ಮೇಳನಕ್ಕೆ ವೇದಿಕೆ ನಿರ್ಮಾಣವಾಗುತ್ತಿದ್ದಾಗ ಇಂಜಿನಿಯರ್ ಬಾಬು, 'ದೊಡ್ಡ ನೀರಿನ ಪೈಪ್ ವೇದಿಕೆಯ ಕೆಳಗೆ ಬರುತ್ತೆ. ಆಮೇಲೆ ಹಾಕಿದರೆ ವೇದಿಕೆಯನ್ನು ಒಡೆಯಬೇಕು. ವೃಥಾ ವೆಚ್ಚ. ಈಗಲೇ ಆ ಜಾಗದಲ್ಲಿ ಪೈಪು ಹಾಕಿದರೆ ಚೆನ್ನ' ಎಂದರು. ಆಗ ಹೆಗ್ಗಡೆ ಅವರು 'ಎಷ್ಟು ಗಂಟೆ ಬೇಕು ಈ ಜಾಗದಲ್ಲಿ ಹಾಕಲು?' ಎಂದರು. '೬-೮ ಗಂಟೆ ಬೇಕು' ಎಂದರು ಇಂಜಿನಿಯರ್. 'ಬೆಳಗಿನ ಜಾವಕ್ಕೆ ಮುಗಿಸಬಹುದು' ಎಂದರು. 'ಆಮೇಲೆ ಸಭಾಂಗಣದಲ್ಲಿ ಕುರ್ಚಿಗಳನ್ನು ಹಾಕಿ ವೇದಿಕೆಯನ್ನು ಸಿದ್ಧಪಡಿಸಿದರಾಯ್ತು' ಎಂದರು. ಸಮ್ಮೇಳನದ ಹಿಂದಿನ ರಾತ್ರಿಗೆ ವೇದಿಕೆ ಸಿದ್ಧವಾಯಿತು. ಇಡೀ ರಾತ್ರಿ ನಾನು, ಹೆಗ್ಗಡೆ ಮತ್ತು ಸಿಬ್ಬಂದಿ ನಿಂತಿದ್ದು, ಕೆಲಸದವರು ಪೈಪನ್ನು ಎಳೆದರು. ಬೆಳಗಿನ ಜಾವ ಆಯಿತು ಮುಗಿಯುವ ವೇಳೆಗೆ. ಇಡೀ ರಾತ್ರಿ ಹೆಗ್ಗಡೆ ಎದ್ದಿದ್ದು, ಅವರ ಜತೆಗಿದ್ದು, ಕೆಲಸ ಪೂರೈಸಲು ನೆರವಾಗಿದ್ದರು.

ಮಧ್ಯಾಹ್ನ ಕುರ್ಚಿಗಳನ್ನು ಹಾಕುವಾಗ ತಲೆ ಅಡ್ಡ ಬರಬಾರದು ಎಂದು ನೆಲವನ್ನು ಮೆಟ್ಟಿಲು ಮೆಟ್ಟಿಲಾಗಿ ಕಟ್ಟಿಸಿ ಗ್ಯಾಲರಿಯಂತೆ ಮಾಡಿ ಕುಚಿಗಳನ್ನು ಹಾಕಿಸಿದ್ದೆವು. ಹಿಂದಿನ ಸಾಲಿನಲ್ಲಿ ಕುಳಿತರೆ ಮುಂದಿನ ಸಾಲಿನ ತಲೆಗಳು ಅಡ್ಡ ಬಾರದಂತೆ ಪ್ರತಿ ಸಾಲಿನಲ್ಲಿ ಮಣ್ಣನ್ನು ಎತ್ತಿಸಿ ಮೆಟ್ಟಿಲುಗಳನ್ನಾಗಿ ನೆಲವನ್ನು ಮಾರ್ಪಡಿಸಿದ್ದೆವು. ಆಗ ಹೆಗ್ಗಡೆಯವರು ಮುಂದುಗಡೆಯ ಕುರ್ಚಿಯಲ್ಲಿ ಕೂರುವುದು, ಅವರ ಹಿಂದೆ ನಾನು ಕೂರುವುದು, ತಲೆ ಅಡ್ಡ ಬಾರದಂತೆ ನೆಲವನ್ನು ಅಗೆಸುವುದು. ಹೀಗೆ ಪ್ರತಿ ಸಾಲಲ್ಲೂ ಕೂತು ಕುರ್ಚಿಗಳಿಗೆ ವ್ಯವಸ್ಥೆ ಮಾಡಿದೆವು. ಎಲ್ಲಿ ಕೂತರೂ ತಲೆ ಅಡ್ಡ ಬಾರದಂತೆ ಕುರ್ಚಿ ಸಾಲುಗಳು ಇದ್ದವು. ಜನ ಆರಾಮವಾಗಿ ಚಪ್ಪರದಲ್ಲೆಲ್ಲ ಕುಳಿತು ಕಾರ್ಯಕ್ರಮಗಳನ್ನು ವೀಕ್ಷಿಸಿದರು. ಆನಂದ ಪಟ್ಟರು. ವೇದಿಕೆಯ ಮುಂದೆ ವಿಸ್ತಾರವಾಗಿ ವೇದಿಕೆಯಷ್ಟೇ ಅಗಲ-ವಿಸ್ತಾರ, ಆಳದ ೬ ಅಡಿಗೆ ಹೆಚ್ಚು ಹಳ್ಳ ತೋಡಿಸಿ ಬದಿಯಲ್ಲಿ ಮೆಟ್ಟಿಲುಗಳನ್ನಿಡಿಸಿ ಆಕಾಶವಾಣಿ, ಪತ್ರಕರ್ತರು, ಫೋಟೋಗ್ರಾಫರು ಎಲ್ಲರನ್ನೂ ಖೆಡ್ಡಾಕ್ಕೆ ಹಾಕಿದಂತೆ ತಳ್ಳಿದೆವು. ಎಲ್ಲಿ ಕೂತರೂ ವೇದಿಕೆಯ ಕಾರ್ಯಕ್ರಮ ಫೋಟೋಗ್ರಾಫರ್ ತಲೆಯಿಲ್ಲದೆ ಕಾಣುತ್ತಿತ್ತು. ಇಂಥ ವ್ಯವಸ್ಥೆ ಇದೊಂದೇ ಸಮ್ಮೇಳನದಲ್ಲಿ ಆದದ್ದು.

❑

೧೨೬. ಕನ್ನಡ ಭಾಷೆ ಎಷ್ಟು ಸೊಗಸಾಗಿದೆ ಬಲ್ಲಿರಾ?

ಸರ್ ಎಂ. ವಿಶ್ವೇಶ್ವರಯ್ಯನವರು ಮುದ್ದೇನಹಳ್ಳಿ ಶಾಲೆಯಲ್ಲಿ ಓದಿ ಬೆಳೆದರು. ಒಮ್ಮೆ ಅವರು ಊರಿಗೆ ಬಂದಾಗ ಅವರೋದಿದ ಶಾಲೆಯ ಅಧ್ಯಾಪಕರು ಅವರು. ವಿಶ್ವೇಶ್ವರಯ್ಯನವರಿಗೆ ಗುರುಗಳಾಗಿದ್ದರು. ನಮ್ಮ ಮಕ್ಕಳಿಗೆ ಎರಡು ಮಾತಾಡಿ ಎಂದು ಕೇಳಿಕೊಂಡರು. ಪೂರ್ವಸಿದ್ಧತೆಯಿಲ್ಲದೆ ಯಾವ ಕೆಲಸವನ್ನೂ ವಿಶ್ವೇಶ್ವರಯ್ಯನವರು ಮಾಡುತ್ತಿರಲಿಲ್ಲ. ಇಂದು ಬೇಡ, ನಾಳಿದ್ದು ಬಂದು ಮಾತಾಡುವೆ ಎಂದರು. ಮರು ಮಾರನೇ ದಿನ ಬಂದರು. ಅವರ ಹಿಂದೆ ದೊಡ್ಡ ಲಾಡು ಬುಟ್ಟಿ ಬಂತು. 'ಮಕ್ಕಳೇ ನಿಮಗೆ ಲಾಡು ಕಂಡರೆ ಇಷ್ಟವಾ?' ಎಂದರು. 'ಹೌದು ಹೌದು' ಎಂದು ಮಕ್ಕಳು ಕೂಗಿಕೊಂಡರು. ಕೂಡಲೇ ಬುಟ್ಟಿ ಲಾಡುಗಳನ್ನು ಹಂಚಿಸಿದರು. ಎಲ್ಲರೂ ಸಂತೋಷದಿಂದ ತಿನ್ನತೊಡಗಿದರು.

ಆಗ ವಿಶ್ವೇಶ್ವರಯ್ಯನವರು 'ಮಕ್ಕಳೇ ಬಾಯಲ್ಲಿ ಲಾಡು ತಿನ್ನುತ್ತಾ ಇರಿ ಕಿವಿಯಲ್ಲಿ ನನ್ನ ಭಾಷಣ ಕೇಳುತ್ತಾ ಇರಿ' ಎಂದು ಒಂದೆರಡು ಹಿತೋಕ್ತಿಗಳನ್ನು ಕನ್ನಡದ ಬಗ್ಗೆ ಹೇಳಿದ ಮಾತಿದು. 'ಮಕ್ಕಳೇ ಕನ್ನಡ ಎಷ್ಟು ಸೊಗಸಾದ ಸಿಹಿಯಾದ, ರುಚಿಯಾದ ಆಕರ್ಷಕ ಭಾಷೆ ಗೊತ್ತಾ. ನೀವು ತಿನ್ನುತ್ತಿರುವ ಲಾಡು ಇದೆಯಲ್ಲಾ ಅದರಷ್ಟು ರುಚಿಯಾದ ಭಾಷೆ ಕನ್ನಡ, ಸೊಗಸಾದ ಭಾಷೆ ಕನ್ನಡ ನೀವೆಲ್ಲಾ ಚೆನ್ನಾಗಿ ಕನ್ನಡ ಕಲಿಯಬೇಕು' ಎಂದರು.

ಮಕ್ಕಳಿಗೆ ಕನ್ನಡ ಭಾಷೆಯ ಸೊಗಸನ್ನು ಹೀಗೆ ಲಾಡು ಮೂಲಕ ತಿಳಿಸಿದವರು ಸರ್ ಎಂ. ವಿಶ್ವೇಶ್ವರಯ್ಯನವರು. ಮಕ್ಕಳ ಕೂಟದಲ್ಲಿ ಲಾಡು ಹಂಚುತ್ತಿದ್ದಾಗ ಕೂಟದ ಅಧ್ಯಕ್ಷರೂ ವಿಶ್ವೇಶ್ವರಯ್ಯ ನಿಕಟವರ್ತಿಗಳಾಗಿದ್ದ ಡಿ.ಸಿ. ಸುಬ್ಬರಾಯಪ್ಪನವರು ನನಗೆ ಹೇಳಿದ ಸಂಗತಿಯಿದು.

❑

೧೨೭. ಚಿಕ್ಕ ಮಕ್ಕಳ ಮೂರು ಚಕ್ರದ ಕೈಗಾಡಿ

ಹಾಸನದ ಕಾಲೇಜಿನಲ್ಲಿದ್ದಾಗ ರಂಗರಾಜು ಎಂಬ ಸಹೋದ್ಯೋಗಿ ಇದ್ದರು. ಅವರಿಗೊಬ್ಬ ಹೆಣ್ಣುಮಗಳು ಹುಟ್ಟಿದಳು. ಅವಳು ೧-೨ ವರ್ಷ ಆದಾಗ ನಡಿಗೆ ಕಲಿಸಲು ಮೂರು ಚಕ್ರದ ಕೈಗಾಡಿ ಬೇಕಾಯಿತು. ಹಿಂದಿನ ಕಾಲದಲ್ಲಿ ಆ ರೀತಿ ಗಾಡಿಗಳನ್ನು ಮಕ್ಕಳಿಗೆ ನಡಿಗೆ ಕಲಿಸಲು ಬಳಸುತ್ತಿದ್ದರು. ಆ ಗಾಡಿಯನ್ನು ಕೊಳ್ಳಲು ಎಲ್ಲೂ ಸಿಗಲಿಲ್ಲ. ಆ ರೀತಿ ಗಾಡಿ ಮಾಡಿಸಲು ಬಡಗಿಗಳು ಅವರಿಗೆ ಸಿಗಲಿಲ್ಲ. ಅವರು ಚಿಂತಾಕ್ರಾಂತರಾಗಿದ್ದರು. ಹೀಗಿದ್ದಾಗ ಹಾಸನದಲ್ಲಿ ಭರ್ಜರಿಯಾದ ದನಗಳ ಸಂತೆ ನಡೆಯುತ್ತದೆ. ನಮ್ಮ ನಾಡಿನ ಪ್ರಸಿದ್ಧ ದನಜಾತ್ರೆಗಳಲ್ಲಿ ಹಾಸನ ಜಾತ್ರೆಯೂ ಒಂದು. ಆ ಜಾತ್ರೆಗೆ ಹೋದಾಗ ನನ್ನ ಕಣ್ಣಿಗೆ ಜಾತ್ರೆಯಲ್ಲಿ ಕಣ್ಣಿಗೆ ಕೈಗಾಡಿ ಬಿದ್ದು ಅದನ್ನು ಕೊಂಡು ತಂದುಕೊಟ್ಟೆ. ಮಗುವಿಗೆ, ಅವರಿಗೆ ಬಹಳ ಖುಷಿಯಾಯಿತು. ಈ ಪ್ರಸಂಗ ನಡೆದ ಹತ್ತಾರು ವರ್ಷಗಳ ನಂತರ ಆ ಮಗು ಬೆಳೆದು ಯುವತಿಯಾಗಿ, ಮದುವೆಯಾಗಿ ಗೃಹಿಣಿ ಆದಳು. ಮಕ್ಕಳ ಪ್ರೇಮಿ ಆದ ಆ ಹುಡುಗಿ ಮಕ್ಕಳ ಶಾಲೆಯೊಂದನ್ನು ತೆರೆದಳು. ಅಲ್ಲಿ ನಡಿಗೆ ಕಲಿಯಲು ಪ್ರಾಂಭಿಸಿದ ಮಕ್ಕಳಿಗೆ ಈ ಮೂರು ಚಕ್ರದ ಗಾಡಿಗಳನ್ನು ತಂದಿಟ್ಟಿದ್ದಳು.

ನನ್ನನ್ನು ಆ ಶಾಲೆಯ ವಾರ್ಷಿಕೋತ್ಸವಕ್ಕೆ ಅವರ ತಂದೆ ಕರೆದಾಗ ವಿಶೇಷ ಕಾರ್ಯಕ್ರಮ ಇದೆ ಎಂದು ತಿಳಿಸಿದರು. ಹೋದೆ. ನಾನು ಗಾಡಿಯ ವಿಚಾರ, ಅವರ ಮಗಳ ಸಂಗತಿ ಮರೆತಿದ್ದೆ. ಅಲ್ಲಿ ಸಮಾರಂಭದಲ್ಲಿ ಪರಿಚಯಕಾರ್ತಿ ಹೇಳಿದಳು,'ಈ ದಿನದ ಅತಿಥಿ ವಿಶೇಷ ಅತಿಥಿ ಏಕೆಂದರೆ ಇಲ್ಲಿ ಮಕ್ಕಳು ಕೈಗಾಡಿ ತಳ್ಳುತ್ತಿದ್ದಾರಲ್ಲಾ, ಆ ಕೈಗಾಡಿಯನ್ನು ನಮ್ಮ ಶಾಲೆಯ ಅಧ್ಯಕ್ಷಿಣಿ ಚಿಕ್ಕ ಮಗುವಾದಾಗ ಅವರಿಗೆ ತಂದುಕೊಟ್ಟವರು ಇಂದಿನ ಅತಿಥಿಗಳು. ಇಂದು ಆ ಗಾಡಿಯನ್ನು ಶಾಲೆಗೆ ಅರ್ಪಿಸುತ್ತಿದ್ದಾರೆ'. ಸುಮಾರು ೩೦ ವರುಷಗಳ ಹಿಂದಿನ ಘಟನೆ ಮರುಕಳಿಸಿತ್ತು. ಆ ಕೈಗಾಡಿಯನ್ನು ಆಕೆ ಬಾಲ್ಯದ ನೆನಪಿಗಾಗಿ ಜೋಪಾನ ಮಾಡಿದ್ದಳು. 'ನಾನು ಹೇಳಿದ್ದು ವಿಶೇಷ ಕಾರ್ಯಕ್ರಮ ಅಂದಿದ್ದೇಕೆ ತಿಳಿಯಿತೇ?' ಎಂದು ನನ್ನ ಮಿತ್ರರು ನಕ್ಕರು.

❑

೧೨೮. ಈ ನಾಟಕ ನೋಡದಿದ್ದರೆ ನತದೃಷ್ಟನಾಗುತ್ತಿದ್ದೆ

೧೯೬೧ರ ಮಣಿಪಾಲದ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನದ ಮನರಂಜನಾ ಕಾರ್ಯಕ್ರಮದಲ್ಲಿ ಪ್ರಭಾತ ಪತ್ರಿಕೆಯ ಸಂಪಾದಕರೂ ಒಂದಾಣೆ ಮಾಲೆಯ ಪ್ರಕಾಶಕರೂ ಆದ ಕುಡ್ಪಿ ವಾಸುದೇವ ಶೆಣೈ ಅವರು ತಾವೇ ರಚಿಸಿದ ಸಂನ್ಯಾಸಿಗೊಂಗಡಿ ನಾಟಕವನ್ನು ಅಭಿನಯಿಸಲು ವ್ಯವಸ್ಥೆ ಮಾಡಿದರು. ಆ ನಾಟಕವನ್ನು ಆಡಿದ ಮೇಲೆ ತಂಡದವರು ತಮ್ಮ ಕಲಾನಿಕೇತನದ ಪರವಾಗಿ ಭೋಜನಕೂಟವೊಂದನ್ನು ಏರ್ಪಡಿಸಿ ಅದಕ್ಕೆ ಅನಕೃ (ಸಮ್ಮೇಳನಾಧ್ಯಕ್ಷರು) ಅವರನ್ನು ಆಹ್ವಾನಿಸಿದರು.

ಆ ಭೋಜನಕೂಟದ ಸಭೆಯಲ್ಲಿ ಅನಕೃ ಸಂನ್ಯಾಸಿಗೊಂಗಡಿ ನಾಟಕದ ಬಗ್ಗೆ ಮಾತನಾಡುತ್ತಾ ಹೇಳಿದ ಮಾತುಗಳಿವು. ಈ ಭಾಷಣ ೮.೧.೧೯೬೧ ಪ್ರಭಾತ ಪತ್ರಿಕೆಯ ೫ನೇ ಪುಟದಲ್ಲಿ 'ಅತ್ಯುಚ್ಚ ಅಂಗ ನಾಟಕ' ಎಂಬ ಲೇಖನವಾಗಿ ಪ್ರಕಟವಾಗಿದೆ. ಆ ಭಾಷಣದ ಕೆಲಭಾಗ (ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಧೀಮಂತ ಪತ್ರಕರ್ತರು ಲೇ: ಕೆ.ದಾಮೋದರ ಐತಾಳ ಪ್ರ ೨೦೦೭, ೭೪ನೇ ಕಸಾ ಸಮ್ಮೇಳನದ ಸ್ವಾಗತ ಸಮಿತಿ) ಹೀಗಿದೆ: ಮಣಿಪಾಲದ ಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶಿತವಾದ 'ಸಂನ್ಯಾಸಿ ಗೊಂಗಡಿ ನಾಟಕ' ಅದನ್ನು ನೋಡಿದವರನ್ನೆಲ್ಲಾ ಮೆಚ್ಚಿಸಿದೆ. ಕರ್ನಾಟಕದ ಬೇರೆ ಬೇರೆ ಕಡೆಗಳಿಂದ ಆಗಮಿಸಿದ ಹಿರಿಯ ಕಿರಿಯ ಸಾಹಿತಿಗಳು ಹಾಗೂ ಜನಸಾಮಾನ್ಯರೆಲ್ಲ ಆ ನಾಟಕದ ಸಾಹಿತ್ಯ ಮತ್ತು ಅಭಿನಯವನ್ನು ಮನಸಾರೆ ಮೆಚ್ಚಿದ್ದಾರೆ. ನಾಟಕ ಸನ್ಯಾಸಿಯ ಮೆರವಣಿಗೆಯಿಂದ ಆರಂಭವಾದಾಗ ತನ್ನ ಬಳಿಯೇ ಕುಳಿತಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಈ ನಾಟಕವು ಒಂದು ವಿಭಾಗದವರ (ಬ್ರಾಹ್ಮಣರ?) ಮನಮೋಹಿಸುವಂಥ ಟೀಕಾತ್ಮಕವಾದ ಕಥಾ ವಸ್ತುವಿನಿಂದ ಕೂಡಿರಬಹುದೆಂದು ಸಂದೇಹ ಪಟ್ಟು ನನ್ನೊಡನೆ ಹಾಗೆ ಪ್ರಸ್ತಾಪಿಸಿದ್ದರು. ಮುಂದೆ ನಾಟಕದ ಗತಿ ಹೇಗೆ ಸಾಗುತ್ತದೆ ಎಂಬುದನ್ನು ಗಮನಿಸಿ ನಂತರ ಅದರ ಗುಣದೋಷಗಳನ್ನು ವಿಮರ್ಶಿಸೋಣವೆಂದು ನಾನು ಸಮಾಧಾನ ಹೇಳಿದ್ದೆ. ನಾಟಕದ ಪ್ರಥಮ ಅಂಕ ಆರಂಭವಾಗಿ ಅದು ಮುಂದುವರಿಯುತ್ತಿರುವಂತೆ ನಮ್ಮ ಕೂಟದಲ್ಲಿ ಅತ್ಯಂತ ಹೆಚ್ಚಿನ ನಗೆಗಡಲು ಎಬ್ಬಿಸಿದವರು ಮಾಸ್ತಿ ಅವರೇ ಆದರು. ಮಾತ್ರವಲ್ಲ ಬಹಳ ಕುತೂಹಲದಿಂದ ಆದರ ಮುಂದೋಟವನ್ನು ನಿರೀಕ್ಷಿಸುತ್ತಾ ಕೊನೆಯ ತನಕ ಕುಳಿತು, 'ದೋಷಪೂರ್ಣವಿರಬಹುದೆಂದು ಸಂದೇಹದಿಂದ ಆರಂಭದಲ್ಲೇ ಎದ್ದು ಹೋದುದಾದರೆ ಒಂದು ಉತ್ತಮ ಕಲಾಕೃತಿಯನ್ನು ಕಾಣುವ ಸಂಯೋಗವನ್ನು ಕಳೆದುಕೊಳ್ಳುತ್ತಿದ್ದೆವು' ಎಂದು ಉದ್ಗಾರವನ್ನು ಅವರೆತ್ತಿದರು. ನಾಟಕವು ಪ್ರೇಕ್ಷಕವರ್ಗದ ಮೇಲೆ ಉತ್ತಮ ಪರಿಣಾಮ ಬೀರಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷ್ಯ ಬೇಡ ಎಂದು ಹೇಳಿದರು.

'ನೀವು ನಿಮ್ಮ ಕಲಾಸೇವೆಯನ್ನು ಕೇವಲ ನಿಮ್ಮ ಊರಾದ ಮಂಗಳೂರು ಇಲ್ಲವೇ ಜಿಲ್ಲೆಗೆ ಮೀಸಲಾಗಿಡಬಾರದು. ಸಮಗ್ರ ಕರ್ನಾಟಕವೇ ನಮ್ಮ ಜಿಲ್ಲೆಯೆಂಬ ವಿಶಾಲ ಭಾವನೆಯನ್ನು ತೊಟ್ಟುಕೊಂಡು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ

ಇಂತಹ ಪರಿಣಾಮಕಾರಿ ನಾಟಕಗಳನ್ನು ಪ್ರದರ್ಶಿಸುವುದರ ಮೂಲಕ ನಾಟಕ ಸಾಹಿತ್ಯ ಮತ್ತು ಕಲೆಗಳ ಕಡೆಗೆ ಕನ್ನಡಿಗರಿಗಿರುವ ತಾತ್ಸಾರ ಭಾವನೆಯನ್ನು ದೂರ ಮಾಡಲು ನೆರವಾಗಬೇಕು' ಎಂದು ಕುಡ್ಪಿ ಅವರಲ್ಲಿ ವಿನಂತಿಸಿದರು.

'ಸಂನ್ಯಾಸಿಗೊಂಗಡಿ ನಾಟಕ ಬರೆದ ಕುಡ್ಪಿಯವರನ್ನು ನಾನು ಸುಮಾರು ೨೦ ವರ್ಷಗಳಿಂದ ಬಲ್ಲೆ. ವ್ಯಂಗ್ಯಹಾಸ್ಯದಿಂದ ಕೂಡಿದ ಕತೆಗಳನ್ನು ಮತ್ತು ನಾಟಕಗಳನ್ನು ಬರೆಯುವುದರಲ್ಲಿ ಅವರದು ಎತ್ತಿದ ಕೈ. ಇಂತಹ ಶ್ರೇಷ್ಠ ನಾಟಕಕಾರರು ಸಾಹಿತ್ಯ ಪ್ರಪಂಚದಲ್ಲಿ ಪ್ರಕಾಶಕ್ಕೆ ಬಾರದಿರುವುದು ನಿಜಕ್ಕೂ ಶೋಚನೀಯ. ಅದಕ್ಕೆ ಕೆಲಮಟ್ಟಿಗೆ ಅವರೇ ಹೊಣೆ ಎಂದರೂ ನೀವು ನೋಯಬಾರದು. ಕಾರಣ, ಅವರ ನಾಟಕ ಸಾಹಿತ್ಯ ಕರ್ನಾಟಕದ ಆದ್ಯಂತ ಪ್ರಚಾರವಾಗುವಂತಹ ಪ್ರಯತ್ನ ಅವರಿಂದ ನಡೆಯುದಿರುವುದರಿಂದಲೇ ಅವರು ಸಾಹಿತ್ಯ ಪ್ರಪಂಚದಲ್ಲಿ ಕತ್ತಲೆಯಲ್ಲಿ ಉಳಿಯುವಂತಾಗಿದೆ. ಇನ್ನು ಮುಂದಾದರೂ ಅವರು ಎಚ್ಚೆತ್ತು ಈ ಕೊರತೆ ನೀಗುವಂತೆ ಪ್ರಯತ್ನಿಸಬೇಕು' ಎಂದು ಹೇಳಿದರು.

ಈ ಸಭೆಗೆ ನಾನೂ ಸುಬ್ಬರಾವ್ ಅನಕೃ ಜತೆಯಲ್ಲಿ ಹಾಜರಾಗಿದ್ದೆವು. ಸಂನ್ಯಾಸಿಗೊಂಗಡಿ ನಾಟಕದ ಬಗ್ಗೆ ಒಂದು ಸನ್ನಿವೇಶ ನನಗೆ ಚೆನ್ನಾಗಿ ನೆನಪಿದೆ. ನಾಟಕದ ಪ್ರಾರಂಭ ಸಂನ್ಯಾಸಿಯ ಮೆರವಣಿಗೆಯಿಂದ ಪ್ರಾರಂಭವಾಗುತ್ತದೆ. ಇದಕ್ಕೆ ಉಡುಪಿ ಮಠದಿಂದ ಪಲ್ಲಕ್ಕಿ, ವಾದ್ಯಗಳು. ಸ್ವಾಮಿಗಳು ಹೇಗೆ ಪಲ್ಲಕ್ಕಿ ಮೆರವಣಿಗೆಯಲ್ಲಿ ಹೊರಡುವರೋ ಅದೇ ರೀತಿ ಸಕಲವಾದ್ಯ ಸಾಧನ, ಪರಿವಾರದ ಸಭೆ ಮೆರವಣಿಗೆ ಉಡುಪಿ ರಸ್ತೆಯ ದಿಕ್ಕಿನಿಂದ ಸಮ್ಮೇಳನದ ಮಂಟಪಕ್ಕೆ ರಸ್ತೆಯಿಂದ ಬಂದಿತ್ತು. ಆಗಿನಉಡುಪಿ ಮಠದ ಸ್ವಾಮಿಗಳ ಹಾಗೆಯೇ ಸನ್ಯಾಸಿಗೆ ಮೇಕಪ್ ಮಾಡಿ ಪಲ್ಲಕ್ಕಿಯಲ್ಲಿ ಕೂಡಿಸಿದ್ದರು. ಅದ್ದೂರಿಯಾಗಿ ಹೊರಗಿನಿಂದ ಪಲ್ಲಕ್ಕಿ ಉತ್ಸವದಿಂದ ಬಂದ ಸನ್ಯಾಸಿಗಳು ಸಮ್ಮೇಳನದ ಮಂಟಪದ ಪ್ರವೇಶದ್ವಾರದಿಂದ ಪ್ರವೇಶಿಸಿದರು. ಜನರು ದಾರಿ ಬಿಟ್ಟು ಆ ಕಡೆ ಈ ಕಡೆ ಎದ್ದು ನಿಂತರು. ಎಲ್ಲರೂ ಉಡುಪಿ ಸ್ವಾಮಿಗಳು ನಾಟಕಕ್ಕೆ ಬಂದಿದ್ದಾರೆ ಎಂದು ತಿಳಿದರು. ಎಲ್ಲರೂ ಸ್ವಾಮಿಗಳಿಗೆ ಅಡ್ಡಬಿದ್ದರು. ನಿಧಾನವಾಗಿ ಪರಿವಾರದೊಡನೆ ನಡೆದು ಬಂದ (ನಾಟಕದ) ಸ್ವಾಮಿಗಳು ವೇದಿಕೆ ಹತ್ತಿ ತೆರೆ ಸರಿದಾಗ ರಂಗದ ಮೇಲೆ ಪೀಠದ ಮೇಲೆ ಕುಳಿತರು. ಆಗ ನಿರೂಪಕ 'ಈಗ ಸನ್ಯಾಸಿ ಗೊಂಗಡಿ ನಾಟಕ ಪ್ರಾರಂಭ. ಪೀಠದಲ್ಲಿ ಕುಳಿತಿರುವವರು ಸನ್ಯಾಸಿ ಗೊಂಗಡಿ ನಾಟಕದಲ್ಲಿ ಸ್ವಾಮಿ ಪಾತ್ರ ವಹಿಸಿರುವ ಶ್ರೀ.......... ಅವರು' ಎಂದಾಗ ಜನರೆಲ್ಲಾ ಕಕ್ಕಾಬಿಕ್ಕಿಯಾಗಿ ಅಚ್ಚರಿಯಿಂದ ನೋಡಿದರು.

ಎಷ್ಟೋ ವರ್ಷಗಳ ನಂತರ ಟೌನ್‌ಹಾಲ್‌ನಲ್ಲಿ ಕಂಬಾರರ ನಾಟಕವೊಂದರಲ್ಲಿ ಕಟ್ಟಡದ ಎಡ ಬಲ ಭಾಗದಿಂದ ಹೊರ ಬಾಗಿಲಿಂದ ಪಾತ್ರಧಾರಿ ಪ್ರವೇಶಿಸುವ ತಂತ್ರವನ್ನು ಕಂಡು ನನ್ನ ಜತೆಯಲ್ಲಿದ್ದವರು ಇದು ನೂತನ ಪ್ರಯೋಗವೆಂದಾಗ ನಾನು ಮಣಿಪಾಲ ಸಮ್ಮೇಳನದ ನಾಟಕದ ಪ್ರವೇಶ ಊರಿಂದಾಚೆಯಿಂದ ಬಂದು ಜನರನ್ನು ಬೆರಗಾಗಿಸಿದ ಸಂಗತಿ ಹೇಳಿದೆ.

ಮಣಿಪಾಲ ಸಮ್ಮೇಳನದ ಅನಕೃ, ಬೇಂದ್ರೆ ಭಾಷಣ ಸಂನ್ಯಾಸಿ ಗೊಂಗಡಿ ನಾಟಕ ವೀಕ್ಷಣೆ ನನ್ನ ಜೀವನದ ಅವಿಸ್ಮರಣೀಯ ಸಂಗತಿಗಳಾಗಿವೆ.

೧೨೯. ಸಾಹಿತಿಗಳಿಟ್ಟ ಪ್ರೀತಿಯ ಅಡ್ಡ ಹೆಸರುಗಳು

ಕೆಲವು ಕಾವ್ಯನಾಮುಗಳು ತುಂಬಾ ಆಪ್ತರು ತಮ್ಮ ಆತ್ಮೀಯರಿಗಿಟ್ಟು ಅಡ್ಡಹೆಸರುಗಳಾಗಿರುತ್ತವೆ. ಏಕವಚನದಲ್ಲಿ ಕರೆಯುವ ಹೆಸರುಗಳು, ಅಡ್ಡಹೆಸರುಗಳು, ಸಂಕ್ಷಿಪ್ತರೂಪಗಳು, ಸಂಕೇತಾಕ್ಷರಗಳು ಆಗಿರುತ್ತಿವೆ. ರಾಯಸಂ ಭೀಮಸೇನರಾವ್ ಬೀchi ಆದಂತೆ, ಕೃಷ್ಣಮೂರ್ತಿ ಕಿಟ್ಟಿ ಆದಂತೆ, ಪಾರ್ಥಸಾರಥಿ ಪಾಚು ಆದಂತೆ, ಲಕ್ಷ್ಮೀದೇವಿ ಲಚ್ಚು ಆದಂತೆ ಸಂಕ್ಷಿಪ್ತ ರೂಪಗಳಾಗಿರುತ್ತವೆ. ಇವು ಎಲ್ಲರಿಗೂ ಪರಿಚಯವೇ ಆಗಿವೆ.

ಕೆಲವೊಮ್ಮೆ ಸಂಕೇತಾಕ್ಷರಗಳಾಗಿ ಅಡ್ಡ ಹೆಸರುಗಳಿರುತ್ತವೆ. ಇವುಗಳನ್ನು ಎಲ್ಲರೂ ಬಳಸುವುದಿಲ್ಲ. ಕೆಲವರೇ ಬಳಸುತ್ತಾರೆ. ಉದಾಹರಣೆಗೆ ಪಾಟೀಲ ಪುಟ್ಟಪ್ಪನವರು ಬೀchi ಅವರು ಅವರ ಮನೆಗೆ ಹೋದಾಗ ಪುಟ್ಟಪ್ಪನವರು ಅವರ ಹೆಂಡತಿ ಸೀತಾ ಅವರಿಗೆ ಹೇಳಿದರು. 'ಸೀತಾ, ಬೆಕ್ಕು ಬಂತು, ಎರಡು ಕಪ್ಪು ಹಾಲು ತಾ' ಎಂದು! ಏಕೆಂದರೆ ಬೀchi ಅವರು ಕಾಫಿ, ಟೀ ಕುಡಿಯುತ್ತಿರಲಿಲ್ಲ ಆಗ.

ನೆನಪಾಗುವ ಇನ್ನೊಂದು ಸಂಗತಿ ಎಂದರೆ ದೇವುಡು ಅವರದು. ದೇವುಡು ಅವರು ಶಾರದಾ ಪ್ರಕಾಶನದ ಜಿ.ಬಸವರಾಜ್ ಅವರು ಪರಮಾಪ್ತರು. ಗುರು ಮಿತ್ರ ಬಾಂಧವ್ಯ, ಗುರು ಶಿಷ್ಯ ಭಾವನೆ. ಅಂತರಂಗದ ಆಪ್ತಮಿತ್ರರು. ಇಬ್ಬರೂ ಲೋಕಾಭಿರಾಮವಾಗಿ ಮಾತಾಡುತ್ತಿದ್ದರು. ದೇವುಡು ಅವರ ಬಹುಮಟ್ಟಿನ ಕೃತಿಗಳನ್ನು ಶಾರದಾ ಪ್ರಕಾಶನದಿಂದ ಬಸವರಾಜರು ಪ್ರಕಟಿಸಿದ್ದರು. ಬಸವರಾಜು ಅವರು ದೇವುಡು, ಜಿಎಸ್‌ಶಿ ಮೊದಲಾದ ಕೆಲವು ಸಾಹಿತಿಗಳಿಗೆ ಅವರ ಗ್ರಂಥಗಳು ಪ್ರಕಟವಾದಾಗ ರಾಯಧನ (ಲೇಖಕರ ಸಂಭಾವನೆ) ಕೊಡುತ್ತಿರಲಿಲ್ಲ. ಅವರ ಮನೆಯವರಿಗೆ ತಿಂಗಳಿಗೊಮ್ಮೆ ಒಂದಷ್ಟಷ್ಟನ್ನು ಕೊಡುತ್ತಿದ್ದರು. ನಮ್ಮಲ್ಲಿ ಲೇಖಕರು, ಸಾಹಿತಿಗಳಲ್ಲಿ ಅನೇಕರು ತಮ್ಮ ಸಂಸಾರ ತಾಪತ್ರಯಗಳಿಗೆ ನಿಗಾ ಕೊಡುತ್ತಿರಲಿಲ್ಲ ಎಂಬುದು ಬಸವರಾಜರಿಗೆ ತಿಳಿದಿತ್ತು. ಅದಕ್ಕೆ ಅವರು ಲೇಖಕರ ಪತ್ನಿಯರ ಕೈಗೆ ನಿಯತವಾಗಿ ಲೇಖಕರ ಗೌರವಧನವೀಯುತ್ತಿದ್ದರು. ಬಸವರಾಜು ಮನೆಗೆ ಬಂದಾಗಲೆಲ್ಲ 'ಬಸವ ಬಂದಿದ್ದಾನೆ. ಹುಲ್ಲು–ಕಲಗಚ್ಚು ಏನಾದರೂ ತಂದುಕೊಡು' ಎನ್ನುತ್ತಿದ್ದರು! ಹುಲ್ಲು ಕಲಗಚ್ಚು ಎಂದರೆ ಕಾಫಿ–ತಿಂಡಿ ಎಂದು ಅದರರ್ಥ ಆಗಿತ್ತು.'ಈಗ ತಾನೇ ಬಸವ ಮೇದು ಬಂದಿದ್ದಾನೆ. ಏನೂ ಬೇಡ' ಎನ್ನುತ್ತಿದ್ದರು. ಬಸವರಾಜ್ ನಗುತ್ತಾ 'ಮೇಯೋದಿಕ್ಕೆ ಬಸವನಿಗೆ ಕಟ್ಟುಪಾಡೇ' ಎನ್ನುತ್ತಿದ್ದರು. ದೇವುಡು ಪತ್ನಿ ಗೌರಮ್ಮನವರು ತಿಂಡಿ–ತೀರ್ಥ ತಂದು ಮುಂದಿಡುತ್ತಿದ್ದರು.

❑

೧೩೦. ಲೇಖಕಿ ಇಟ್ಟುಕೊಂಡ ಸಾರ್ಥಕ ಕಾವ್ಯನಾಮ

ಸಾಮಾನ್ಯವಾಗಿ ಲೇಖಕರಿಗೆ ನಿಜನಾಮ(ಅಂಕಿತನಾಮ), ಸಂಕ್ಷಿಪ್ತನಾಮ, ಕಾವ್ಯನಾಮ ಇರುತ್ತದೆ. ಉದಾಹರಣೆಗೆ ಅ.ನ.ಕೃಷ್ಣರಾಯರಿಗೆ ನಿಜನಾಮ ಅಥವಾ ಪೂರ್ಣನಾಮ ಅರಕಲಗೂಡು ನರಸಿಂಗರಾಯ ಕೃಷ್ಣರಾಯ. ಸಂಕ್ಷಿಪ್ತ ನಾಮ ಅ.ನ.ಕೃಷ್ಣರಾಯ, ಕಾವ್ಯನಾಮ ಅ.ನ.ಕೃ. ಅವರ ಆತ್ಮೀಯರು ಕರೆಯುತ್ತಿದ್ದ ಹೆಸರು 'ರಾಯರು'.

ಕನ್ನಡ ಸಾಹಿತಿಗಳ ನಿಜನಾಮ–ಕಾವ್ಯನಾಮಗಳ ಬಗ್ಗೆ ಟಿ.ವಿ.ವೆಂಕಟರಮಣಯ್ಯ ಪುಟ್ಟ ಪುಸ್ತಕವನ್ನೇ ಬರೆದಿದ್ದಾರೆ. ಈ ಕಾವ್ಯನಾಮಗಳ ಹಿಂದೆ ಸಾಕಷ್ಟು ಚಿಟ್ಟಿಕತೆಗಳಿವೆ. ಉದಾಹರಣೆಗೆ, **ಸರಸ್ವತಿ** ಪತ್ರಿಕೆಯನ್ನು ೨೫ ವರ್ಷ ನಡೆಸಿದ ಮಕ್ಕಳಕೂಟ ಶಾರದಾ ಸಮಾಜದ ಸ್ಥಾಪಕಿ ಆದ ಲೇಖಕಿ ಆರ್.ಕಲ್ಯಾಣಮ್ಮ ಕನ್ನಡದ ಲೇಖಕಿಯರಲ್ಲಿ ಚಿರಸ್ಮರಣೀಯ ಮಹಿಳೆ.

ಆಕೆಯ ಕಾವ್ಯನಾಮ **'ರಾಜಿ'**. ಯಾರ ಜತೆಯಲ್ಲೋ ರಾಜಿ ಮಾಡಿಕೊಂಡ ನೆನಪಿಗೆ ಅಥವಾ ಯಾವುದೋ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಕಾರಣಕ್ಕೆ ಇಟ್ಟುಕೊಂಡ ಕಾವ್ಯನಾಮ ಅಲ್ಲ. ರಾಜೇಂದ್ರ ರಾಜೀವನಾಥ ರಾಜಕುಮಾರ ರಾಜೇಶ್ವರಿ ಇತ್ಯಾದಿ ನಾಮಗಳ ಅಡ್ಡ ಹೆಸರೂ ಅಲ್ಲ. ಮತ್ತೇನು?

ಆರ್.ಕಲ್ಯಾಣಮ್ಮನವರು ಬಾಲ್ಯದಲ್ಲೇ ೮–೯ ವಯಸ್ಸಿಗೇ ಬಾಲ್ಯವಿವಾಹವಾಗಿ ಬಾಲವಿಧವೆ ಆದವರು .ಆದರೆ ಹಿರಿಯರ ಪ್ರೋತ್ಸಾಹದಿಂದ ಆ ಕಾಲಕ್ಕೆ ಕ್ರಾಂತಿಕಾರಿ ಪ್ರಯತ್ನವಾಗಿದ್ದ ವಿಧವೆಯ ವಿದ್ಯಾಭ್ಯಾಸವನ್ನು ಮುಂದುವರಿಸಿದ ಬಾಲಿಕೆ ಕಲ್ಯಾಣಮ್ಮ ೧೯೦೧ರ ವೇಳೆಗೆ ಎಲ್.ಎಸ್. ಏಳನೇ ತರಗತಿ ಪರೀಕ್ಷೆಯನ್ನು ಪಾಸು ಮಾಡಿ ವಿದ್ಯಾವತಿ ಅಗಿದ್ದರು. ಆದರೆ ಮನೆಯಲ್ಲಿ ಅವರಿಗೆ ಕಿಂಚಿತ್ತೂ ಸಾಹಿತ್ಯಾಭ್ಯಾಸಕ್ಕೆ ಪ್ರೋತ್ಸಾಹವಿರಲಿಲ್ಲ. ಪತ್ರಿಕೆಗಳನ್ನು ಓದಲು, ಅದಕ್ಕೆ ಲೇಖನಗಳನ್ನು ಬರೆಯಲು ನಿರ್ಬಂಧವಿತ್ತು ಅವರ ಅತ್ತೆಯವರಿಂದ. ಆದರೂ ಅದುಮಿಡಲಾರದ ಪ್ರತಿಭೆಯ ಫಲವಾಗಿ ಲೇಖನಗಳನ್ನು ಬರೆದು ಪತ್ರಿಕೆಗಳಿಗೆ ಮನೆಯವರಿಗೆ ಗೊತ್ತಾಗದಂತೆ ತಮ್ಮ ರಾಜಯ್ಯಂಗಾರ್ ಕೈಲಿ ಪತ್ರಿಕೆಗಳಿಗೆ ಕಳಿಸುತ್ತಿದ್ದರು. ತಮ್ಮ ಹೆಸರಿನಲ್ಲಿ ಕಳಿಸಿದರೆ ಮನೆಯವರಿಗೆ ಎಲ್ಲಿ ತಿಳಿಯುತ್ತದೋ ಎಂಬ ಭೀತಿಯಲ್ಲಿ ತಮ್ಮನ ಹೆಸರಿನ ಮೊಟಕು ರೂಪ 'ರಾಜಿ' ಹೆಸರಿನಲ್ಲಿ ಲೇಖನಗಳನ್ನು ಕಳಿಸುತ್ತಿದ್ದರು. ಅವರ ತಮ್ಮ ಅಕ್ಕನ ಬರಹಕ್ಕೆ ತುಂಬಾ ಸಹಾಯಕನಾಗಿ ಪ್ರೋತ್ಸಾಹ ನೀಡುತ್ತಿದ್ದರಿಂದ ಅವನ ಹೆಸರನ್ನೇ ಕಾವ್ಯನಾಮ ಮಾಡಿಕೊಂಡಿದ್ದರು.

❑

೧೩೧. ಬಳಸಿದ್ದು ಚಿಕ್ಕ ಬೆಲ್ಲದಚ್ಚು, ಕೊಟ್ಟಿದ್ದು ದೊಡ್ಡ ಬೆಲ್ಲದಚ್ಚು

ನನಗೆ ನಾಲ್ಕು ಜನ ಅಣ್ಣಂದಿರು, ಇಬ್ಬರು ತಮ್ಮಂದಿರು. ಅಣ್ಣಂದಿರಲ್ಲಿ ಒಬ್ಬ ಜಿಲ್ಲಾಧಿಕಾರಿಗಳ ಬಳಿ ಉದ್ಯೋಗಿಯಾಗಿದ್ದ. ಪ್ರಾಮಾಣಿಕತೆಯ ಅವತಾರ ಪುರುಷ. ಮನೆಯಲ್ಲಿ ಸಾಕಷ್ಟು ಬಡತನವಿದ್ದರೂ ಕನಸು ಮನಸಿನಲ್ಲೂ ಲಂಚದಾಸೆ ಅವನಲ್ಲಿ ಸುಳಿಯುತ್ತಿರಲಿಲ್ಲ. ಕಚೇರಿಯಲ್ಲಿ ಅಧಿಕಾರಿಯಾಗಿದ್ದರಿಂದ ಅವನ ಸಿಬ್ಬಂದಿಗಳಿಗೆ ಲಂಚಕ್ಕೆ ಕೈಯೊಡ್ಡಲು ಅವಕಾಶ ಕೊಡುತ್ತಿರಲಿಲ್ಲ. ನಿಯಮ ಪಾಲನೆಯಲ್ಲಿ ಕಟ್ಟುನಿಟ್ಟಿನ ವ್ಯಕ್ತಿ. ಎಸ್.ಎಸ್.ಎಲ್.ಸಿ. ಮಾರ್ಕ್ಸ್ ಕಾರ್ಡ್‌ಗಳ ನಕಲು ಪ್ರತಿಗಳಿಗೆ ಗೆಜೆಟೆಡ್ ಆಫೀಸರ್ ಸಹಿ ಬೇಕಾದಾಗ ವಿದ್ಯಾರ್ಥಿಗಳು ಬಂದರೆ ಮೂಲಪ್ರತಿ ತೋರಿಸಬೇಕಾಗುತ್ತಿತ್ತು. ಹಿಂದಿನ ದಿನ ಅಸಲಿ ಮೂಲಪ್ರತಿ ತೋರಿಸಿ ನಕಲು ಪ್ರತಿಗೆ ಸಹಿ ಹಾಕಿಸಿಕೊಂಡ ವಿದ್ಯಾರ್ಥಿಯು ಮತ್ತೆರಡು ಪ್ರತಿಗಳ ಸಹಿಗಾಗಿ ಮಾರನೆಯ ದಿನ ಬಂದರೆ 'ಮೂಲಪ್ರತಿ ತನ್ನಿ' ಎನ್ನುತ್ತಿದ್ದ. 'ನಿನ್ನೆ ನೀವೇ ನೋಡಿದ ಅಸಲು ಪ್ರತಿಯ, ನಿಮ್ಮ ಸಹಿ ಇರುವ ನಕಲು ಪ್ರತಿ ಇಲ್ಲಿದೆ' ಎಂದು ತೋರಿಸಿದರೂ ಸಹಿ ಮಾಡುತ್ತಿರಲಿಲ್ಲ. ಅಸಲು ಪ್ರತಿ ನೀಡಿ ನಕಲು ಪ್ರತಿಯನ್ನು ಪ್ರಮಾಣಿಸಬೇಕು ಎನ್ನುತ್ತಿದ್ದ; ಇಂಥ ಪ್ರಾಮಾಣಿಕ ಅಧಿಕಾರಿ ಆಗಿದ್ದ.

ಒಮ್ಮೆ ಜಿಲ್ಲಾಧಿಕಾರಿಯೊಡನೆ ಒತ್ತುವರಿ ಜಮೀನಿನ ಸ್ಥಳಪರೀಕ್ಷೆಗೆ ಹೋದಾಗ ಜಮೀನುದಾರನೊಬ್ಬ ದಲಿತ ರೈತನೊಬ್ಬನ ಜಮೀನನ್ನು ಅನ್ಯಾಯವಾಗಿ ಒತ್ತುವರಿ ಮಾಡಿ ವಶಪಡಿಸಿಕೊಂಡಿದ್ದನ್ನು ದಲಿತ ರೈತನಿಗೆ ಮರಳಿ ಸಿಗುವಂತೆ ಮಾಡಿದ್ದ. ಆ ದಲಿತ ರೈತನು ಜಮೀನು ಕಳೆದುಕೊಂಡು ಕಡುಬಡವನಾಗಿದ್ದ. ಯಾವುದೇ ಶಿಫಾರಸು, ಲಂಚವಿಲ್ಲದೆ ಜಮೀನನ್ನು ತನ್ನ ವಶಕ್ಕೆ ಕೊಡಿಸಿದ್ದಕ್ಕೆ ಕೃತಜ್ಞತೆ ಸಲ್ಲಿಸಲು ನಮ್ಮ ಮನೆಗೆ ಕಾಫಿಬೆಲ್ಲ ಎಂದು ಕರೆಯುತ್ತಿದ್ದ ಒಂದು ಚಿಕ್ಕ ಬೆಲ್ಲದಚ್ಚಿನ ಪಿಂಡಿಯನ್ನು (ಒಂದಂಗುಲದ ಚಚ್ಚೌಕದ ಬೆಲ್ಲದ ತುಂಡುಗಳನ್ನು ಕಾಫಿಬೆಲ್ಲ ಎಂದು ಕರೆಯುತ್ತಿದ್ದರು) ತಂದನು. ಅದರ ಬೆಲೆ ದೊಡ್ಡ ಬೆಲ್ಲದ ಅಚ್ಚಿಗಿಂತ ಕಡಿಮೆ ಇರುತ್ತಿತ್ತು. ಆಗ ರೇಷನ್ ಕಾಲ. ಎಲ್ಲರೂ ಸಕ್ಕರೆ ಬಳಸುತ್ತಿರಲಿಲ್ಲ. ಬೆಲ್ಲವನ್ನು ಬಳಸುತ್ತಿದ್ದರು.

ನಮ್ಮ ಮನೆಯಲ್ಲಿ ಕಾಫಿಗೆ ಚಿಕ್ಕ ಬೆಲ್ಲದ ಅಚ್ಚನ್ನೇ ಬಳಸುತ್ತಿದ್ದರು. ರೈತನು ನಮ್ಮಣ್ಣನ ಸಹಾಯವನ್ನು ಸ್ಮರಿಸಿ ನನಗೆ ಕೃತಜ್ಞತೆ ಸಲ್ಲಿಸಲು 'ಹೆಚ್ಚಾಗಿ ಕೊಡಲು ಶಕ್ತಿಯಿಲ್ಲ. ಈ ಬೆಲ್ಲದಚ್ಚಿನ ಪಿಂಡಿಯನ್ನು ತೆಗೆದುಕೊಳ್ಳಿ' ಎಂದು ನಮ್ಮ ಮನೆಯಲ್ಲಿ ಇಟ್ಟು ಹೋದ. ಸಂಜೆ ನಮ್ಮಣ್ಣನು ಮನೆಗೆ ಬಂದಾಗ ವಿಷಯ ತಿಳಿಸಿದರು. ಕೂಡಲೆ 'ನಿಮಗಾರು ಹೇಳಿದರು ತೆಗೆದುಕೊಳ್ಳಲು? ನಾನಿದ್ದಾಗ ಬಾ, ಈಗ ಬರಬೇಡ ಎಂದು ಹೇಳಬೇಕಾಗಿತ್ತು. ಮಾಡಬೇಕಾದ ಸರ್ಕಾರಿ ಕೆಲಸಕ್ಕೆ ಯಾವುದೇ ರೀತಿಯ ಪ್ರತಿಫಲ ಪಡೆದರೂ ಅದು ಲಂಚವೇ' ಎಂದು ರೇಗಾಡಿದ, ಅಷ್ಟು ಹೊತ್ತಿಗೆ ಒಂದೆರಡು ಚಿಕ್ಕ ಬೆಲ್ಲದಚ್ಚನ್ನು ಬಳಸಿ ಕಾಫಿ ಮಾಡಲಾಗಿತ್ತು.

ಮಾರನೆಯ ದಿನ ಆ ರೈತನನ್ನು ಕರೆಸಿ ಆ ಚಿಕ್ಕ ಬೆಲ್ಲದಚ್ಚುಗಳಿಗೆ ಬದಲಾಗಿ ಎರಡು ದೊಡ್ಡಚ್ಚಿನ ಬೆಲ್ಲವನ್ನು ಆ ಪಿಂಡಿಯಲ್ಲಿಟ್ಟು ಆ ರೈತನನ್ನು ಬೈದು, ಪಿಂಡಿಯನ್ನು ಹಿಂದಿರುಗಿಸಿದನು. ಆ ರೈತನು ಪೆಚ್ಚಾಗಿ ಅಚ್ಚರಿಯಿಂದ ಆ ಪಿಂಡಿಯನ್ನು ವಾಪಸ್ ತೆಗೆದುಕೊಂಡು ಹೋದನು. ಕಾಫಿಗೆ ಬೆಲ್ಲ ಇಲ್ಲವಾದುದರಿಂದ ನಮ್ಮ ತಂದೆ ಪಕ್ಕದಂಗಡಿಯಿಂದ ಬೆಲ್ಲ ಸಾಲ ತಂದರು.

'ಅವ ಬೆಲ್ಲವನ್ನು ಹಿಂದಿರುಗಿಸಿದೆಯಲ್ಲ ಧರ್ಮರಾಜ, ಎರಡು ಚಿಕ್ಕಚ್ಚಿನ ಬದಲಾಗಿ ಎರಡು ದೊಡ್ಡಚ್ಚುಗಳನ್ನೇಕೆ ಪಿಂಡಿಗೆ ಸೇರಿಸಿ ಕೊಟ್ಟೆ? ಚಿಕ್ಕಚ್ಚುಗಳನ್ನೇ ವಾಪಸ್ ಮಾಡಬೇಕಿತ್ತು ನ್ಯಾಯಸ್ಥನಾಗಿದ್ದರೆ' ಎಂದು ನಾನು ನಮ್ಮಣ್ಣನಿಗೆ ಹೇಳಿದೆ. ಅದಕ್ಕೆ ಅವನು, 'ಬಳಸಬಾರದ ಬೆಲ್ಲವನ್ನು ಬಳಸಿದ್ದಕ್ಕೆ ದಂಡ ಸೇರಿಸಿ ದೊಡ್ಡ ಬೆಲ್ಲದಚ್ಚುಗಳನ್ನು ಸೇರಿಸಿ ಹಿಂದಿರುಗಿಸಿದೆ' ಎಂದು ಉತ್ತರಿಸಿದ.

ಇಂಥ ಪ್ರಾಮಾಣಿಕ ಅಧಿಕಾರಿಯ ಬಗ್ಗೆ ಈಗಲೂ ನನಗೆ ಹೆಮ್ಮೆ. ಬಡತನ ಇದ್ದರೂ ಭ್ರಷ್ಟಾಚಾರದಲ್ಲಿ ತೊಡಗಬೇಕಿಲ್ಲ ಎಂಬ ಪಾಠವನ್ನು ನಮ್ಮಣ್ಣ ನಮಗೆಲ್ಲ ಕಲಿಸಿಕೊಟ್ಟಿದ್ದ.

❑

೧೩೨. ಹಾವನೂರರ ಗ್ರಂಥದಾನ ವೈಖರಿ

ನಾನು ಕಂಡ ವಿದ್ವಾಂಸರಲ್ಲಿ ವಿಶಿಷ್ಟ ವ್ಯಕ್ತಿ ಎಂದರೆ ಶ್ರೀನಿವಾಸ ಹಾವನೂರ ಅವರು. ಅವರ ಪರಿಚಯ ಆದದ್ದು ಹೊಸಗನ್ನಡ ಸಾಹಿತ್ಯದ ಅರುಣೋದಯ ಗ್ರಂಥ ಪ್ರಕಟವಾದಾಗ. ಅದರಲ್ಲಿ ಉಲ್ಲೇಖವಾಗದ ಬತ್ತೀಸ ಪುತ್ಥಳಿ ಕಥೆ, ಪರಾಶರ ಮಾಧವರಾಯ, ಚಿಂಚೋಳಿ ವೆಂಕಣ್ಣಾಚಾರ್ಯರ ಅನುವಾದ ಮುಂತಾದ ೧೯೦೦ಕ್ಕೆ ಮುಂಚೆ ಪ್ರಕಟವಾದ ಕೆಲವು ಹಳೆಯ ಗ್ರಂಥಗಳನ್ನು ಉಲ್ಲೇಖಿಸಿ ಪತ್ರ ಬರೆದೆ. ಅವರು ಕೂಡಲೇ ಉತ್ತರಿಸಿ ದಯಮಾಡಿ ಅದರ ನೆರಳಚ್ಚಿನ ಪ್ರತಿಗಳನ್ನು ಕಳಿಸಿಕೊಡಿ ಎಂದರು. ಕಳಿಸಿಕೊಟ್ಟೆ. ಆಗ ಅವರು ಮಂಗಳೂರು ವಿಶ್ವವಿದ್ಯಾಲಯದಲ್ಲಿದ್ದರು. ಅಲ್ಲಿಯ ಗ್ರಂಥಭಂಡಾರಕ್ಕೆ ಸೇರಿಸಿದರು. ಅನಂತರ ಬೆಂಗಳೂರಿಗೆ ಬಂದಾಗ ಭೇಟಿ ಮಾಡಿದೆ. ಮೊದಲ ಭೇಟಿಯಲ್ಲೇ 'ಬಿಟ್ಟು ಹೋದ ಪುಸ್ತಕಗಳ ಕೊಟ್ಟ ದಾನಿಗಳೇ ಬನ್ನಿ ಬನ್ನಿ' ಎಂದು ಸ್ವಾಗತಿಸಿದರು. ಅಂದಿನಿಂದ ಅವರ ಪರಿಚಯ ಎಷ್ಟು ನಿಕಟವಾಗುತ್ತಾ ಹೋಯಿರು ಎಂದರೆ, ಕನ್ನಡ ಸಮಗ್ರ ಹರಿದಾಸ ಸಾಹಿತ್ಯ ಪ್ರಕಟಣೆಗೆ ಯಾವ ಯಾವ ದಾಸರ ಕೃತಿಗಳನ್ನು ಕಾಲಾನುಕ್ರಮದಲ್ಲಿ ಹೇಗೆ ಪ್ರಕಟಿಸಬೇಕು ಎಂಬುದರ ನೀಲನಕ್ಷೆಯನ್ನು ಹಲವು ವಾರಗಳ ಕಾಲ ನಮ್ಮ ಮನೆಗೆ ಬಂದು ಕುಳಿತು ಸಿದ್ಧಪಡಿಸಿದರು. ಯಾರದೇ ಮನೆಗೆ ಹೋದರೂ ಅಲ್ಲಿ ಚಿಕ್ಕಮಕ್ಕಳಿದ್ದರೆ ಅವರೊಡನೆ ಚಕ್ಕಂದವಾಡುವುದು, ಆ ಮಕ್ಕಳ ಭಾವಚಿತ್ರ ಸಂಗ್ರಹಿಸುವುದು ಅವರ ಹವ್ಯಾಸ. ನಮ್ಮ ಮನೆಗೆ ಬಂದರೆ ಮೊದಲ ಮಾತು ನಮ್ಮ ಕ್ಷಮಾ ಬಗ್ಗೆ. ಅನಂತರ ನಮ್ಮ ಮಾತುಕಥೆ.

ಶ್ರೀನಿವಾಸ ಹಾವನೂರರ ಒಂದು ದಿವ್ಯ ಹವ್ಯಾಸವೆಂದರೆ ಉನ್ನತ ವ್ಯಾಸಂಗಿಗಳಿಗೆ, ವಿದ್ಯಾರ್ಥಿಗಳಿಗೆ, ವಿವಿಧ ವಿಷಯ ಆಸಕ್ತರಿಗೆ ಅವವರ ಅಧ್ಯಯನಕ್ಕೆ ಬೇಕಾದ ಗ್ರಂಥಗಳನ್ನು ಒದಗಿಸುವುದು. ಒಮ್ಮೆ ಅವರ ಪಿ.ಎಚ್.ಡಿ. ವಿದ್ಯಾರ್ಥಿನಿಗೆ ಬೇಕಾದ ಗ್ರಂಥವೊಂದಕ್ಕೆ ಮುಂಬಯಿಗೆ ಹೋಗಿ ವಿಶ್ವವಿದ್ಯಾಲಯದಿಂದ ತಂದುಕೊಟ್ಟಿದ್ದನ್ನು ನಾನು ಬಲ್ಲೆ.

ಇನ್ನೊಮ್ಮೆ ನನಗೆ ವಾಲ್ಮೀಕಿ ರಾಮಾಯಣದ ಸುಂದರಕಾಂಡದ ಮೂಲ – ಅನ್ವಯ – ತಾತ್ಪರ್ಯಸಹಿತ ಗ್ರಂಥ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ರಚಿಸಿದ್ದುದು ಬೇಕಾಗಿತ್ತು. ಬಹಳ ಹಿಂದೆ ಅಚ್ಚಾಗಿದ್ದು ಪುಸ್ತಕ ಭಂಡಾರಗಳಲ್ಲೂ ಇರಲಿಲ್ಲ. ಹಾವನೂರರ ಬಳಿ ಅದು ಇತ್ತು. ಓದಿಕೊಡುವೆ ಎಂದೆ ಅದಕ್ಕೆ ಅವರು ಅದನ್ನು ನಿಮಗೇ ಕೊಟ್ಟು ಬಿಡುವೆ ಎಂದರು. ನನಗೆ ಬಹಳ ಖುಷಿ ಆಯಿತು. ಪುಸ್ತಕ ತೋರಿಸಿ ಕೊಡುವುದಿಲ್ಲ ಎಂದವರು ಕೆಲವು ಕ್ಷಣಗಳ ನಂತರ ಇಂದಲ್ಲ ನಾಳೆ ಕೊಡುವೆ ಎಂದರು.

ನಾಳೆ ಬೆಳಿಗ್ಗೆ ೭ ಗಂಟೆಗೆ ಸರಿಯಾಗಿ ಮನೆಗೆ ಬರಬೇಕು. ನಿಮಿಷವೂ ತಡವಾಗಬಾರದು ಎಂದರು. ಆಗ ಬಿಟಿಎಂ ಲೇಔಟಿನಲ್ಲಿತ್ತು ಅವರ ಮನೆ. ನನ್ನ ಮನೆ

ಜಯನಗರದಲ್ಲಿ. ಬೆಳಿಗ್ಗೆ ಬೇಗನೆ ಎದ್ದು ೭ಕ್ಕೆ ಸರಿಯಾಗಿ ಅವರ ಮನೆಯಲ್ಲಿ ಹಾಜರಾದೆ. ತುಳಸಿದಳವಿಟ್ಟು ಅದನ್ನು ದಾನ ಮಾಡಿದರು. ಯಾಕೆ ಹೀಗೆ ಮಾಡಿದಿರಿ ಎಂದಾಗ ಗ್ರಂಥದಾನ ಸುಮ್ಮನೇ ಸಾಮಾನ್ಯ ವಿಲೇವಾರಿ ಅಲ್ಲ, ಪುಣ್ಯದಿನ, ಪುಣ್ಯ ಸಮಯದಲ್ಲಿ ಪೂಜಾ ಕಾರ್ಯದ ನಂತರ ಮಡಿಯಲ್ಲಿ ಅರ್ಪಿಸಬೇಕು. ಧರ್ಮ ಗ್ರಂಥಗಳನ್ನು ಗೀತೆ-ರಾಮಾಯಣ ಭಾಗವತಗಳನ್ನು ಎಂದರು. ನಿನ್ನೆ ನೀವು ಕೇಳೀದಾಗ ದೇವರಪೂಜೆ ಮುಗಿದಿತ್ತು. ಅದಕ್ಕೆ ಇಂದು ದೇವರಪೂಜೆ ವೇಳಗೆ ಬನ್ನಿ ಎಂದಿದ್ದು ಎಂದರು.

ಇನ್ನೊಬ್ಬರಗೆ ಉತ್ಸಾಹ ತುಂಬಿ ಅವರ ಓದುಬರಹಕ್ಕೆ ಉತ್ತೇಜನ ಕೊಡುವುದರಲ್ಲಿ ಅವರನ್ನು ಮೀರಿಸಿದವರಿಲ್ಲ. ನನಗೆ ವಿಜಯದಾಸರ ಸಮಗ್ರ ಚಿಂತನೆಗಳು ಉಗಾಭೋಗಗಳನ್ನು ಸಂಗ್ರಹಿಸಿ ಪ್ರಕಟಿಸುವಂತೆ ಮಾಡಿದವರು ಅವರೇ. ಎಸ್.ಎಲ್. ಭೈರಪ್ಪ ಅವರು ಅವರ ಪರಮ ಮಿತ್ರ. ಅವರ ೪ ಕಾದಂಬರಿಗಳನ್ನು ಸಂಗ್ರಹಿಸಿ ಕಸ್ತೂರಿಯಲ್ಲಿ ಪ್ರಕಟವಾದುದನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದರು. ಅದರ ಬಿಡುಗಡೆ ಕಾರ್ಯಕ್ರಮವನ್ನು ಭೈರಪ್ಪನವರಿಂದ ಮಾಡಿಸಿದರು. ಆ ಸಭೆಗೆ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದ್ದರು. ಏಕೆ ಗೊತ್ತೆ? ಅವರು ಹೇಳಿದ್ದು ಅವರ ಕಾದಂಬರಿಗಳ ನಿಜವಾದ ಓದುಗರಲ್ಲಿ ನೀವೊಬ್ಬರು. ಇದು ಅವರು ಪ್ರೋತ್ಸಾಹಿಸುತ್ತಿದ್ದ ರೀತಿ.

❑

೧೩೩. ಕಣ್ಣು ಮುಚ್ಚಿದ್ದರೂ ಕಾಲಮಿತಿ ಮೀರಲಿಲ್ಲ ಆ ವಿಜ್ಞಾನಿ

ಹೆಚ್.ಕೆ. ರಂಗನಾಥರು ಜಯನಗರದಲ್ಲಿ ನಮ್ಮ ಮನೆಯ ಹತ್ತಿರದಲ್ಲೇ ಇದ್ದು, ಪದೇ ಪದೇ ಭೇಟಿಯಾಗುತ್ತಿದ್ದೆವು. ಗೋಖಲೆ ಸಂಸ್ಥೆಯ ಪದ್ಮನಾಭನ್, ವಾಗ್ಗೇಯಕಾರ ವಾಸುದೇವಾಚಾರ್ಯರ ಮೊಮ್ಮಗ ಕೃಷ್ಣಮೂರ್ತಿ ಮೂವರೂ ಗಳಸ್ಯ ಕಂಠಸ್ಯ ಗೆಳೆಯರು. ನಾನು ಅವರಿಗೊಂದು ಕೊಸರು ವ್ಯಕ್ತಿ. ಎಂದರೆ ಆ ಮೂವರನ್ನೂ ನಾನು ಪದೇ ಪದೇ ಭೇಟಿ ಆಗುತ್ತಿದ್ದೆ. ಲೋಕಾಭಿರಾಮ ಹರಟುತ್ತಿದ್ದೆವು.

ಒಮ್ಮೆ ಆಕಾಶವಾಣಿಯ ಬಗ್ಗೆ ಮಾತನಾಡುತ್ತಿದ್ದಾಗ ಹೆಚ್.ಕೆ. ರಂಗನಾಥ್ ಮಾತಿನ ಮಧ್ಯೆ ಹೇಳಿದ ಪ್ರಸಂಗ ಇದು.

'ನಾನು ಆಗ ಧಾರವಾಡ ಆಕಾಶವಾಣಿಯಲ್ಲಿದ್ದೆ. ಸರ್ ಸಿ.ವಿ. ರಾಮನ್ ಅವರು ಬೆಳಗಾಂನ ಕಾಲೇಜೊಂದರಲ್ಲಿ ಹೂಗಳಲ್ಲಿ ವಿವಿಧ ಬಣ್ಣಗಳೇಕಿರುತ್ತವೆ ಎಂಬ ವಿಷಯವಾಗಿ ಸೊಗಸಾದ ಉಪನ್ಯಾಸ ನೀಡಿದರು. ಅದನ್ನು ಕೇಳಿದ ನಾನು ನಮ್ಮ ಬಾನುಲಿಗೆ ಬಂದು ಮಾತಾಡಿ. ಸಭೆಗೆ ಬರದಿದ್ದವರಿಗೆ, ನಾಡಿಗೆ ತಿಳಿಯುತ್ತದೆ. ನಿಮ್ಮ ಭಾಷಣ ಎಲ್ಲರಿಗೂ ಉಪಯುಕ್ತ ಭಾಷಣ, ಕೆಲವರಿಗೇ ಅಲ್ಲ ಎಂದಾಗ ಅವರು ಒಪ್ಪಿ ಧಾರವಾಡದ ಆಕಾಶವಾಣಿಗೆ ಬಂದರು. ಧ್ವನಿಮುದ್ರಣ ಕೊಠಡಿಗೆ ಬಂದು ಟೇಬಲ್ ಮೇಲೆ ರುಮಾಲು ತೆಗೆದಿಟ್ಟರು. ಜುಟ್ಟು ನೀವಿಕೊಂಡು ಕಣ್ಣು ಮುಚ್ಚಿದರು. ಭಾಷಣ ಪ್ರಾರಂಭಿಸಿದರು.

ನಮಗೆ ಚಿಂತೆಯಾಯಿತು. ಇವರಿಗೆ ಗೊತ್ತಾದ ವೇಳೆ ಮುಗಿಯುತ್ತಾ ಬಂದಾಗ ಕೈಸಂಜ್ಞೆಯಿಂದ ತಿಳಿಸುವುದು ಹೇಗೆ? ಕೆಂಪು ದೀಪ ಹೊತ್ತಿಸಿದರೆ ಇವರಿಗೆ ಕಾಣುವುದು ಹೇಗೆ? ಯೋಚಿಸುತ್ತಾ, ಅವರು ಎಷ್ಟು ಹೊತ್ತಿಗಾದರೂ ಭಾಷಣ ಮುಗಿಸಲಿ, ವೇಳೆ ಜಾಸ್ತಿ ಆದರೆ ಎರಡು ಭಾಗಗಳಲ್ಲಿ ಪ್ರಸಾರ ಮಾಡಿದರೆ ಆಯಿತು ಎಂದು ಧ್ವನಿಮುದ್ರಣಕ್ಕೆ ತೊಡಗಿದೆ.

ಅವರಿಗೆ ತಿಳಿಸಿದ್ದ ವೇಳೆ ಮುಗಿಯಿತು. ಒಂದು ಸೆಕೆಂಡ್ ವ್ಯತ್ಯಾಸವಿಲ್ಲದೆ ತಮಗೆ ಕೊಟ್ಟ ವೇಳೆಗೆ ಸರಿಯಾಗಿ ಭಾಷಣ ಮುಗಿಸಿ ಕಣ್ಣುಬಿಟ್ಟು ಮೇಲೆದ್ದರು. ನಾನು, ನನ್ನ ಮಿತ್ರರು ಅವಾಕ್ಕಾದೆವು. ಅವರ ಸಮಯ ಪರಿಪಾಲನೆಯನ್ನು ಕಂಡು ಬೆಕ್ಕಸಬೆರಗಾದೆವು. ಎಷ್ಟಾದರೂ ವಿಜ್ಞಾನಿ ಅಲ್ಲವೇ, ಕರಾರುವಾಕ್ ಕಾಲಜ್ಞಾನಿ ಎಂದುಕೊಂಡೆವು.'

❑

೧೩೪. ನೀವು ಬಸ್‌ಚಾರ್ಜು ಕೊಟ್ಟರೆ ಊರು ಸೇರುತ್ತೇನೆ

ಬಿ.ಎಂ.ಶ್ರೀ. ಅವರು ಇಂಗ್ಲಿಷ್ ಮೇಷ್ಟ್ರಾಗಿದ್ದರೂ ಕನ್ನಡ ಪಾಠ ಮಾಡಿದ ಹಾಗೆ ವಿ.ಸೀ. ಅವರು ಅರ್ಥಶಾಸ್ತ್ರಜ್ಞರಾದರೂ ಕನ್ನಡ ಪಾಠ ಮಾಡುವ ಮಾಸ್ತರರೂ ಆಗಿದ್ದರು. ಅವರ ಅಭ್ಯಾಸ ಹವ್ಯಾಸಿ ಕನ್ನಡ-ಅರ್ಥಶಾಸ್ತ್ರ ಎಂದೂ ಆಗಿತ್ತು. ಅವರ ಅಭ್ಯಾಸದ ರೈಲಿನ ಎರಡು ಹಳಿಗಳು ಅವಾಗಿದ್ದವು. ಚಿತ್ರ, ಸಂಗೀತ, ಪಾಶ್ಚಾತ್ಯ ಸಂಸ್ಕೃತಿ ಮೊದಲಾದ ನಾನಾ ಕ್ಷೇತ್ರಗಳಲ್ಲಿ ಆಸ್ತಿಕರಾದ ಅವರು ಅರ್ಥಶಾಸ್ತ್ರಜ್ಞರಾಗಿ ಕನ್ನಡಕ್ಕೆ ನೀಡಿದ 'ಹಣ ಪ್ರಪಂಚ' ಗ್ರಂಥ ಕನ್ನಡಕ್ಕೆ ಒಂದು ಶ್ರೇಷ್ಠ ಕೊಡುಗೆ. ಹಣಕಾಸಿನ ವಿಚಾರದಲ್ಲಿ ಅವರ ವಿಚಾರಧಾರೆ ವಿನೂತನವಾದುದು. ಅಕ್ಕಿಬೇಳೆಗೆ ಪರದಾಟವಾದರೂ ಲಂಡನ್ನಿನಿಂದ ಇಕಾನಮಿಸ್ಟ್ ಪತ್ರಿಕೆಯ ಏರ್‌ಮೈಲ್ ಆವೃತ್ತಿಯನ್ನು ತರಿಸುತ್ತಿದ್ದರು. ಅನೇಕ ವಿಶ್ವವಿದ್ಯಾನಿಲಯಗಳ ಲೈಬ್ರರಿಗಳಲ್ಲಿ ದೊರೆಯದಿದ್ದ ಲಿಸ್ನರ್, ಟೈಮ್ಸ್, ಲಿಟರರಿ ಸಪ್ಲಿಮೆಂಟ್, ನ್ಯೂ ಸ್ಟೇಟ್ಸ್‌ಮನ್ ಮೊದಲಾದ ಪತ್ರಿಕೆಗಳನ್ನು ಬಿಡದೆ ತರಿಸುತ್ತಿದ್ದರು.

ದೇಶದ ಅಭಿವೃದ್ಧಿಯ ವಿಚಾರದಲ್ಲಿ ಕೋಟಿಗಟ್ಟಲೆ ಹಣಕಾಸಿನ ವಿದ್ಯಮಾನಗಳ ಬಗ್ಗೆ ಆರ್ಥಿಕ ಸಚಿವರ ಹಾಗೆ ದೇಶದ ಆರ್ಥಿಕ ವಿಚಾರಗಳನ್ನು ಮಂಡಿಸುತ್ತಿದ್ದರು. ಒಮ್ಮೆ ಒಂದು ಸಭೆಯಲ್ಲಿ ದೇಶದ ಕೋಟಿಗಟ್ಟಲೆ ಹಣ ವೆಚ್ಚವಾಗುವ ರೀತಿ ಕುರಿತಾಗಿ ಮಾತಾಡುತ್ತಿದ್ದಾಗ ಆ ಸಭೆಯಲ್ಲಿದ್ದ ಬಿ.ಎಂ.ಶ್ರೀ. ಅವರು, 'ಹಣಕಾಸಿನ ಬಗ್ಗೆ ಕೋಟಿಗಟ್ಟಲೆ ಹಣದ ಬಗ್ಗೆ ಲೀಲಾಜಾಲವಾಗಿ ಉದ್ದುದ್ದವಾಗಿ ಅಂಕಿಸಂಖ್ಯೆಗಳಲ್ಲಿ ಮಾತಾಡಿದಿರಿ. ಅದು ಸರಿ. ಈಗ ನಿಮ್ಮ ಜೇಬಿನಲ್ಲಿ ಎಷ್ಟಿದೆ ಹಣ?' ಎಂದರಂತೆ. ಅದಕ್ಕೆ ವಿ.ಸೀ. 'ನೀವು ದಯಮಾಡಿ ಬಸ್‌ಚಾರ್ಜ್ ಕೊಟ್ಟರೆ ವಾಪಾಸ್ ಹೋಗಿ ಮರ್ಯಾದೆಯಾಗಿ ಊರು ಸೇರಿಕೊಳ್ಳುತ್ತೇನೆ' ಎಂದರಂತೆ. ವಿಚಾರ ಶ್ರೀಮಂತಿಕೆಯ ಸರಳಜೀವಿ ವಿ.ಸೀ. ಅವರು.

❑

೧೩೫. ಭಾವಚಿತ್ರಗಳನ್ನು ಕಂಡು ಭಾವಪರವಶರಾದರು

ಕುವೆಂಪು ಪರಿಚಯ ವಿದ್ಯಾರ್ಥಿ ದೆಸೆಯಿಂದಲೂ ಅನೇಕರಿಗೆ ಇರುತ್ತದೆ. ಪಠ್ಯಪುಸ್ತಕಗಳಲ್ಲಿ ಇರುವ ಕವಿತೆಗಳ ಮೂಲಕ ಅವರು ನನೆಪಿನಲ್ಲಿ ಉಳಿದಿರುತ್ತಾರೆ. ಅದರಲ್ಲೂ ಶಾಲಾಪಠ್ಯಗಳಲ್ಲಿರುವ ಪದ್ಯಗಳ ಮೂಲಕ ಅವರ ನೆನಪು ಚೆನ್ನಾಗಿ ಉಳಿದಿರುತ್ತದೆ. ಕಾಲೇಜಿನಲ್ಲಿ ಅವರ ಪುಸ್ತಕಗಳು ಬೆರಳ್ಗೆ ಕೊರಳ್, ಬಿರುಗಾಳಿ ಮೊದಲಾದ ನಾಟಕಗಳು, ಕತೆ, ಕವಿತಾ ಸಂಕಲನಗಳು ಪಠ್ಯವಾಗಿ, ಅದನ್ನು ಸೊಗಸಾಗಿ ಪಾಠ ಮಾಡಿದ್ದೇನೆ. ವಿದ್ಯಾರ್ಥಿಗಳ ನೆನಪಿನಲ್ಲಿ ಇಂದೂ ಇವೆ.

ಕಿಂದರಿಜೋಗಿ ಪದ್ಯ ಇತರ ಪದ್ಯಗಳಿಗಿಂತ ಹೆಚ್ಚು ನೆನಪಿರುವ ಮಕ್ಕಳ ಕಥನಕವನ. ಎಲ್ಲರನ್ನು ಮನಸೆಳೆವ ಕವನ ಅದು. ಅನಂತರ ಕುವೆಂಪು ಅವರ ಬದುಕು–ಬರಹದ ಬಗ್ಗೆ ವಿಮರ್ಶಾತ್ಮಕ ನೋಟ ಬೀರುವುದು ನನಗೆ ಅಧ್ಯಾಪಕನಾದಾಗ ಬಂತು. ಅವರ ನಾಟಕ–ಕವನ ಸಂಕಲನಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ಪಾಠ ಮಾಡಿದಾಗ ಹೆಚ್ಚು ಅರ್ಥವಾಯಿತು.

ಹೀಗೆ ಪಠ್ಯಗಳ ಮೂಲಕ ಪರಿಚಯ ಆದ ಕುವೆಂಪು ಅವರ ನೇರ ನೋಟ ಸಮೀಪ ನೋಟ ಸಿಕ್ಕಿದ್ದು ಹಲವು ಬಾರಿ.

ಕುವೆಂಪು ಬಿ.ಎಂ.ಶ್ರೀ. ಅವರ ಶಿಷ್ಯರಾಗಿದ್ದು ಪರಿಷತ್ತಿನ ಆಹ್ವಾನವನ್ನು ಎಂದೂ ತಿರಸ್ಕರಿಸಿಲ್ಲ. ಪರಿಷತ್ತಿನ ಕೃಷ್ಣರಾಜ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಿತು. ಆಗ ಪರಿಷತ್ತಿನ ಸಭಾಂಗಣದಲ್ಲಿ ಸುತ್ತಲೂ ಸಾಹಿತಿಗಳು, ವಿದ್ವಾಂಸರು ನಿಧನರಾದಾಗ, ಸನ್ಮಾನ ಮಾಡಿದಾಗ, ಸಮ್ಮೇಳನ ಅಧ್ಯಕ್ಷರಾದಾಗ ಬಿಡುಗಡೆ ಮಾಡಿದ ಭಾವಚಿತ್ರಗಳನ್ನು ಗೋಡೆಗೆ ಹಾಕಿದ್ದರು. ಆಗ ದತ್ತಿ ನಿಧಿಗಳ ವಿಶೇಷ ಕಾರ್ಯಕ್ರಮ, ವಿಚಾರಗೋಷ್ಠಿಗಳಲ್ಲಿ ಎಲ್ಲ ಸಾಹಿತಿಗಳೂ ಭಾಗವಹಿಸುತ್ತಿದ್ದರು. ಕುವೆಂಪು ಅವರು ಪರಿಷತ್ತಿನ ಕಾರ್ಯಕ್ರಮಕ್ಕೆ ಬಂದಾಗ ಮಾತನಾಡಲು ಎದ್ದು ನಿಂತು ಕೆಲವು ನಿಮಿಷಗಳ ಕಾಲ ಪರಿಷತ್ತಿನ ಗೋಡೆಗಳ ಮೇಲೆ ವಿರಾಜಿಸುತ್ತಿದ್ದ ಐತಿಹಾಸಿಕ ಮಹತ್ವದ ಅಪರೂಪದ ಸಾಹಿತಿಗಳ, ವಿದ್ವಾಂಸರ ಭಾವಚಿತ್ರಗಳನ್ನು ಕಣ್ತುಂಬಿಕೊಂಡರು. ಆ ಚಿತ್ರಗಳನ್ನು ತೆಗೆದು ಹಾಕಿ ಆ ಭಾವಚಿತ್ರಗಳ ಸ್ಮರಣೀಯ ಸಂದರ್ಭಗಳನ್ನು ಅನಂತರ ಬಂದ ಅಧ್ಯಕ್ಷರು ಮಾಯ ಮಾಡಿದರು. ಈಗಿರುವಂತೆ ಕಪ್ಪು ಬಿಳುಪು ತೇಜೋಹೀನ ಭಾವಚಿತ್ರಗಳು ಇರಲಿಲ್ಲ. ಕಪ್ಪು–ಬಿಳುಪು, ವರ್ಣಚಿತ್ರ, ತೈಲಚಿತ್ರ ಇತ್ಯಾದಿ ವಿವಿಧಾಕಾರಗಳ ಫೋಟೋಗಳು ಆಗ ಗೋಡೆಯ ಮೇಲಿದ್ದವು. ಅವುಗಳನ್ನೆಲ್ಲಾ ಒಂದೆರಡು ನಿಮಿಷಗಳು ಧ್ಯಾನಸ್ಥಭಾವದಲ್ಲಿ ವೀಕ್ಷಿಸಿದರು. 'ಕನ್ನಡದ ವಿಶಿಷ್ಟ ಅಮೃತಚೇತನಗಳಿರಾ' ಎಂದು ಭಾಷಣ ಪ್ರಾರಂಭಿಸಿದರು.

ಸಭಾಂಗಣದಲ್ಲಿ ಮುಂದಿನ ಸಾಲಿನಲ್ಲಿ ಕುಳಿತು ಅವರನ್ನು ಕಣ್ತುಂಬ ನೋಡುತ್ತಾ ಕೇಳಿದ ಆ ಭಾಷಣದ ನೆನಪು ಇಂದಿಗೂ ನನ್ನಲ್ಲಿ ಹಸಿರಾಗಿದೆ.

ಕುವೆಂಪು ಅವರು ಬೆಂಗಳೂರಿನಲ್ಲಿ ಪರಿಷತ್ತನ್ನು ಬಿಟ್ಟರೆ ಅವರು ಭಾಗವಹಿಸಿದ ಕಾರ್ಯಕ್ರಮ ಎಂದರೆ ನಾನು ನೋಡಿದ್ದು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಎಂ.ವಿ.ಸೀ. ಅವರ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ. ಎಂ.ವಿ.ಸೀ. ಅವರ ಪಟ್ಟಶಿಷ್ಯರಲ್ಲಿ ಒಬ್ಬರು. ಅವರಿಗಾಗಿಯೇ ಆ ಸಭೆಗೆ ಬಂದಿದ್ದರು.

ಆ ಎರಡೂ ಸಂದರ್ಭ ಭಾವನಾಲೋಕದಲ್ಲಿ ವಿಹರಿಸಿ ಮಾತನಾಡಿದ ಕವಿ ಎಂದರೆ ಕುವೆಂಪು. ಸಭೆಗಳಲ್ಲಿ ತನ್ಮಯರಾಗಿ ಮಾತನಾಡುವ ಕವಿಗಳು ನಮ್ಮಲ್ಲಿ ಅಪೂರ್ವ.

❑

೧೩೬. ಅಪರಿಚಿತರಿಗೆ ಬಾಗಿಲಲ್ಲೇ ಸಂದರ್ಶನ

ಮತ್ತೊಂದು ಖಾಸಗಿ ಸಂದರ್ಭವೆಂದರೆ ನಾನು ಕನ್ನಡ ಎಂ.ಎ. ಮಾಡಲು ಬಿ.ಎ. ಆದ ನಂತರ ಮೈಸೂರು ವಿ.ವಿ.ಕ್ಕೆ ಅರ್ಜಿ ಹಾಕಿದಾಗ. ಆಗ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಾರಂಭವಾಗಿರಲಿಲ್ಲ. 'ನೀವು ಬಿ.ಎ.ನಲ್ಲಿ ಐಚ್ಛಿಕ ಕನ್ನಡ ವ್ಯಾಸಂಗ ಮಾಡಿಲ್ಲ. ನಿಮಗೆ ಕನ್ನಡ ಎಂ.ಎ.ಗೆ ಅವಕಾಶವಿಲ್ಲ' ಎಂದಾಗ ನಾನು ಎ.ಆರ್.ಕೃ., ಕುವೆಂಪು, ದೇ.ಜ.ಗೌ., ಡಿ.ಎಲ್.ಎನ್., ತೀ.ನಂಶ್ರೀ. ಹೀಗೆ ಕಂಡ ಕಂಡವರನ್ನೆಲ್ಲ ಕಂಡು 'ಕನ್ನಡವನ್ನು ಅಭ್ಯಾಸ ಮಾಡಲು ಎಲ್ಲ ರಂಗಗಳಲ್ಲಿ, ಎಲ್ಲ ವಿಷಯಗಳಲ್ಲಿ, ಎಲ್ಲ ಹಂತಗಳಲ್ಲಿ ಅವಕಾಶ ಇರಬೇಕು. ಅದಕ್ಕೆ ಅವಕಾಶ ಕೊಡದ ನೀವೆಂಥ ಕನ್ನಡ ಆಡಳಿತಗಾರರು, ಕನ್ನಡ ವಿದ್ವಾಂಸರು' ಎಂದೆಲ್ಲಾ ವಾದ ಮಾಡಿದೆ. ಕುವೆಂಪು ಅವರೊಡನೆ ಅವರ ಒಂಟಿಕೊಪ್ಪಲಿನ ಮನೆಯ ಬೀದಿಗೇಟಿನಲ್ಲಿ ನಿಂತೇ ಅವರೊಡನೆ ವಾದ ಮಾಡಿದಾಗ 'ಸಂಸ್ಥೆಯ ನಿಯಮ, ನಾನೇನು ಮಾಡುವಂತಿಲ್ಲ' ಎಂದರು. 'ನಿಯಮ ನಮಗಾಗಿಯೇ. ನಿಮ್ಮಂಥವರೇ ನಿಯಮ ನಿರ್ಮಿಸುವವರು ದೇವರಲ್ಲ, ನೀವೇ. ಆದ್ದರಿಂದ ನಿಯಮ ಬದಲಾಯಿಸಿ ಅವಕಾಶ ಕೊಡಿ' ಎಂದೆ. 'ಅದೆಲ್ಲಾ ಈಗಾಗದು' ಎಂದು ಹೇಳಿ ಒಳಗೆ ಹೋದರು.

ಹೀಗೆ ಅಪರಿಚಿತರು ಬಂದಾಗ ಕುವೆಂಪು ಬಾಗಿಲಲ್ಲೇ ಮಾತಾಡಿಸಿ ಕಳಿಸುತ್ತಿದ್ದರು. ಪುಸ್ತಕ ವ್ಯಾಪಾರಿಗಳು ಅವರ ಪುಸ್ತಕಗಳನ್ನು ಕೊಳ್ಳಲು ಬಂದರೆ ಒಳಗೆ ಕರೆಯುತ್ತಿರಲಿಲ್ಲ. ಬಾಗಿಲಲ್ಲೇ ಕೊಟ್ಟು ಕಳಿಸುತ್ತಿದ್ದರು. ಏಕೆ ಹೀಗೆ ಮಾಡುತ್ತಿದ್ದರು ಎಂಬುದು ನನಗೆ ವಿಸ್ಮಯ ಸಂಗತಿ ಆಗಿದೆ.

❑

೧೩೭. ನಿಮ್ಮ ಸಂಬಳದಲ್ಲಿ ಎಷ್ಟು ಸಲ ಕಾಫಿ ಕುಡಿಯಲು ಸಾಧ್ಯ?

ಒಮ್ಮೆ ನಾಡಿಗೇರ್ ಅವರ ಟೇಬಲ್ಲಿಗೇ ಒಂದು ಫೋನ್ ಕೊಟ್ಟರಂತೆ ಮಾಲೀಕರು. ಇವರಿಗೆ ಖುಷಿಯೋ ಖುಷಿ. ಎಲ್ಲರಿಗೂ ಹೇಳಿಕೊಂಡು ಬಂದರು. 'ನನಗೇ ಪ್ರತ್ಯೇಕ ಫೋನಿದೆ. ನೀವೆಲ್ಲಾ ಇನ್ನು ಮೇಲೆ ಈ ಫೋನಿನ ನಂಬರಿಗೆ ಫೋನ್ ಮಾಡಿ' ಎಂದು ಮಿತ್ರರಿಗೆಲ್ಲ ಫೋನ್ ಮಾಡಿದರು. ಆಗ ಹಲವರು ಪತ್ರಿಕಾ ಕಾರ್ಯಾಲಯದಲ್ಲಿ ನಾಡಿಗೇರ್‌ರನ್ನು ಕಾಣಲು ಒಬ್ಬರಾದ ಮೇಲೆ ಒಬ್ಬರು ಬಂದರು. ಬಂದವರ ಜತೆಯಲ್ಲೆಲ್ಲ ಕಾಫಿಗೆ ಹೊರಡುತ್ತಿದ್ದರು. ಒಮ್ಮೆ ಕಾರ್ಯಾಲಯದಲ್ಲಿ ನಾಲ್ಕಾರು ಜನ ಮಿತ್ರರು ಬಂದು ನಾಲ್ಕಾರು ಬಾರಿ ಕಾಫಿಗೆ ಹೋಗಿ ಬಂದರು. ಆಗ ಮಾಲೀಕರಾದ ಗುಪ್ತ ಅವರು ಅಲ್ಲೆ ಕುಳಿತಿದ್ದವರು 'ಏನ್ರೀ ನಾಡಿಗೇರ್ ದಿನಕ್ಕೆ ಎಷ್ಟು ಸಲ ಕಾಫಿಗೆ ಹೋಗ್ತೀರಿ? ಕೆಲಸ ಆಗೋದು ಹೇಗೆ?' ಎಂದರು. ತಕ್ಷಣವೇ ನಾಡಿಗೇರ್, 'ಸಾರ್, ನೀವು ಕೊಡೋ ಸಂಬಳಕ್ಕೆ ಎಷ್ಟು ಸಲ ಕಾಫಿಗೆ ಹೋಗೋಕೆ ಸಾಧ್ಯ ಹೇಳಿ ಸಾರ್' ಎಂದಾಗ ಮಾಲೀಕರು ನಕ್ಕು ಸುಮ್ಮನಾದರು. (ಆಗ ಪತ್ರಕರ್ತರಿಗೆ ತುಂಬಾ ಕಮ್ಮಿ ಸಂಬಳ ಬರುತ್ತಿತ್ತು.)

❑

೧೩೮. ಮಹಾಬಲೇಶ್ವರ ಭಟ್ಟರ ಮರೆಯಲಾಗದ ಆತಿಥ್ಯ

ಕೆಲವು ಸಾಹಿತಿಗಳೊಂದಿಗೆ ಹತ್ತಾರು ವರ್ಷ ನಿಕಟ ಸಂಪರ್ಕವಿದ್ದು ಅವರ ಬಗ್ಗೆ ಸಾಕಷ್ಟು ನೆನಪುಗಳು, ಸಂಗತಿಗಳು ಬರೆಯಲು ಸಾಧ್ಯವಿರುತ್ತದೆ. ಆದರೆ ಕೆಲವು ಸಾಹಿತಿಗಳ ಭೇಟಿ ಒಂದೆರಡು ಸಲ ಆಗಿ ಆ ಸಂದರ್ಭಗಳು ಒಂದೆರಡೇ ಆದರೂ, ಅವರ ನಿಕಟ ಪರಿಚಯವಿಲ್ಲದಿದ್ದರೂ, ಆ ಒಂದೆರಡೇ ನೆನಪುಗಳು ಚಿರಸ್ಮರಣೀಯವಾಗಿರುತ್ತವೆ.

ಮತ್ತೆ ಕೆಲವರು ಹತ್ತಾರು ವರ್ಷ ಆಪ್ತರಾಗಿದ್ದರೂ ಗಣ್ಯರಾಗಿದ್ದರೂ ಅವರು ಉಳಿದವರ ದೃಷ್ಟಿಯಲ್ಲಿ ದೊಡ್ಡವರು, ಆದರ್ಶ ಪುರುಷರು ಎನಿಸಿದ್ದರೂ, ನಮ್ಮ ಪಾಲಿಗೆ ಅವರ ಬಗ್ಗೆ ಬರೆಯುವಂಥ ಸಂಗತಿಗಳೇ ಇರುವುದಿಲ್ಲ. ಹಾಗಾಗಿ ಕೆಲವೊಮ್ಮೆ ಅಭಿನಂದನಾ ಗ್ರಂಥಗಳಿಗೆ ಲೇಖನ ಬರೆಯಲು, ಪ್ರಶಸ್ತಿ ಸಮಾರಂಭಗಳಲ್ಲಿ ಅವರ ಬಗ್ಗೆ ಮಾತಾಡಲು ಆದರ್ಶ ಸಂಗತಿಗಳಾಗಲಿ, ಸ್ಫೂರ್ತಿ ನೀಡಿದ ಸಂಗತಿಗಳಾಗಲೀ ಇರುವುದಿಲ್ಲ.

ಲೋಕಪ್ರಖ್ಯಾತರಾದರೂ ಎಲ್ಲರೂ ಹೊಗಳುತ್ತಿದ್ದರೂ, ಅವರ ಕೆಲವು ಸದ್ಗುಣಗಳು, ಪ್ರತಿಭೆಯ ಅಂಶಗಳು, ಸಾಧನೆಗಳು ನಮಗೂ ಮೆಚ್ಚುಗೆ ಆದರೂ, ಅವರ ಬಗ್ಗೆ ನಮಗಾದ ಕೆಟ್ಟ ಅನುಭವಗಳ ಕಾರಣ ಅಥವಾ ಅವರ ಅಂತರಂಗ ಮಿತ್ರರಿಂದ ಕೇಳಿದ ಅನ್ಯಾಯಗಳ ಕಾರಣದಿಂದ ಅವರ ಬಗ್ಗೆ ನಮಗೆ ತಿರಸ್ಕಾರ ಭಾವವಿದ್ದು, ಏನನ್ನೂ ಬರೆಯಲಾಗುವುದಿಲ್ಲ. ನಮ್ಮ ಅವರ ಕೆಟ್ಟ ಅನುಭವಗಳು ವಾಸ್ತವವಾಗಿದ್ದರೂ, ಸತ್ಯಸಂಗತಿಗಳಾದರೂ ಜನ ನಂಬುವುದಿಲ್ಲ. ನಾವು ವೈಯಕ್ತಿಕ ದ್ವೇಷದಿಂದ ಅವರ ಬಗ್ಗೆ ಕೆಂಡ ಕಾರುತ್ತಿದ್ದೇವೆ, ವಕ್ರದೃಷ್ಟಿಯ ಜನ ಎಂದು ನಮ್ಮನ್ನೇ ದೂಷಿಸುತ್ತಾರೆ. ನಮ್ಮ ಮೇಲೆ ವಾಗ್ದಾಳಿ ಮಾಡಲು, ಮಾನನಷ್ಟ ಮೊಕದ್ದಮೆ ಹೂಡಲು, ಬೆದರಿಸಲು ಜನ ಹಿಂಜರಿಯುವುದಿಲ್ಲ. ತಮ್ಮ ಸುತ್ತಮುತ್ತಲ ಗಣ್ಯವ್ಯಕ್ತಿಗಳ ವ್ಯಕ್ತಿ ಚಿತ್ರಗಳನ್ನು ಸೊಗಸಾಗಿ ಮೂಡಿಸಿದ ಟಿ.ವಿ.ವೆಂ. ಅವರು ಒಮ್ಮೆ ಹೇಳಿದ ಮಾತು: ದೊಡ್ಡವರ ಬಗ್ಗೆ ಕೆಲವು ವಿಷಯಗಳು ಗೊತ್ತಿದ್ದರೂ, ಸ್ವಾನುಭವ ಆದರೂ, ಬರೆಯಲಾಗುವುದಿಲ್ಲ.

ನನಗೂ ಅಂಥ ಅನುಭವಗಳಾಗಿವೆ. ನಿಜವಿದ್ದರೂ ದೊಡ್ಡವ್ಯಕ್ತಿಗಳ ಸಣ್ಣ ವ್ಯಕ್ತಿತ್ವ ಸಂಗತಿ ಬಿಟ್ಟು ಸಣ್ಣವ್ಯಕ್ತಿಗಳ ಸಾಮಾನ್ಯ ಸಾಹಿತಿಗಳ ದೊಡ್ಡ ಆದರ್ಶದ ಸ್ಫೂರ್ತಿಯು ನನ್ನ ಮೇಲೆ ಪ್ರಭಾವ ಬೀರಿದೆ. ಕೆಲವೇ ಸಂಗತಿಗಳನ್ನು ನೆನಪಿಗೆ ಬಂದಷ್ಟು ಇಲ್ಲಿ ಚಿತ್ರಿಸಿದ್ದೇನೆ. **ಟಿ.ಮಹಾಬಲೇಶ್ವರಭಟ್ಟ** ಸಾಗರದ ಪ್ರಸಿದ್ಧ ಸಾಹಿತಿಗಳು ಮತ್ತು ಅಡಿಕೆ ವ್ಯಾಪಾರಿಗಳು. 'ಮಹಾಬಲ' ಎಂಬ ಅಭಿನಂದನಾ ಗ್ರಂಥ ಅವರ ಬಗ್ಗೆ ಬಂದಿದೆ. ಸಾಗರದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು. ಹಾಗಿದ್ದರೂ ಶ್ರೀಮಂತರು, ಸಹೃದಯರು. ಸಾರ್ವಜನಿಕ ಸೇವಾತತ್ಪರರು, ಸಾಹಿತಿಗಳು ಅವರಾಗಿದ್ದರು. ಅವರು ನನ್ನನ್ನು ಸಾಗರಕ್ಕೆ ಸಾಹಿತ್ಯ ಕಾರ್ಯಕ್ರಮಗಳಿಗೆ ಉಪನ್ಯಾಸಕ್ಕೆ ಹಲವಾರು ಬಾರಿಕರೆದಿದ್ದರು. ನನ್ನ

ಉಪನ್ಯಾಸಗಳನ್ನು ಅವರು ಮೆಚ್ಚಿದ್ದರು. ಹಾಗೆ ಉಪನ್ಯಾಸಕ್ಕೆ ಕರೆದ ಒಂದು ಸಂದರ್ಭದ ಸಂಗತಿ ಹೀಗಿದೆ.

ಬಹಳ ವರ್ಷಗಳ ಮೇಲೆ ನೆನಪಿನಿಂದ ಬರೆಯುತ್ತಿರುವುದರಿಂದ ದಿನಾಂಕ ಕಾರ್ಯಕ್ರಮ ವಿವರ ಇತ್ಯಾದಿ ಸಂಗತಿಗಳನ್ನು ನಿಖರವಾಗಿ ತಿಳಿಸಲು ಸಾಧ್ಯವಾಗುತ್ತಿಲ್ಲ. (ನೆನಪು ಕುಗ್ಗುತ್ತಿರುವ ೮೮ನೇ ವರ್ಷದಲ್ಲಿ ಈ ಆತ್ಮಕಥೆಯ ತುಣುಕುಗಳನ್ನು ಬರೆಯುತ್ತಿರುವೆ ಎಂಬುದನ್ನು ಗಮನಿಸಬೇಕಾದ ಸಂಗತಿ.) ಒಂದು ಮಳೆಗಾಲದಲ್ಲಿ ವಿ.ಸೀ. ಜನ್ಮಶತಮಾನೋತ್ಸವ ಕಾರ್ಯಕ್ರಮ ಎಂದು ಕಾಣುತ್ತದೆ., ನನ್ನನ್ನು ವಿಶೇಷ ಉಪನ್ಯಾಸಕ್ಕೆ ವಿ.ಸೀ. ಬಗ್ಗೆ ಮಾತಾಡಲು ಆಹ್ವಾನಿಸಿದರು. ವಿ.ಸೀ. ಅವರ ಪರಿಚಯ ಹತ್ತಾರು ವರ್ಷಗಳಿಂದ ನನಗಿತ್ತು. ಅವರ ಮಗ ಸತ್ಯನಾರಾಯಣ ನನ್ನ ಬಾಲ್ಯಸ್ನೇಹಿತನಾದ್ದರಿಂದ ಸಾಕಷ್ಟು ಸಂಗತಿಗಳು ನನಗೆ ತಿಳಿದಿದ್ದವು ಎಂಬುದು ಅವರಿಗೆ ತಿಳಿದಿತ್ತು.

ಕಾರ್ಯಕ್ರಮದ ಹಿಂದಿನ ದಿನ ರಾತ್ರಿ ವಿ.ಆರ್.ಎಲ್.ನಲ್ಲಿ ಸಾಗರದ ಕಡೆ ಹೋಗುವ ಬಸ್ ಹಿಡಿದು ಬೆಳಗಿನ ಝಾವದ ವೇಳೆಗೆ ಸಾಗರದ ಒಂದು ಮೂಲೆಯಲ್ಲಿ ಬಸ್ಸಿನಿಂದ ಇಳಿದೆ. ಆಗ ವಿಪರೀತ ಚಳಿ, ಮಳೆ ಇತ್ತು. ಮಳೆಯಲ್ಲೇ ಬಸ್ಸಿನಿಂದ ಇಳಿದೆ. ಆ ಮಳೆಯಲ್ಲಿ ಕತ್ತಲಲ್ಲಿ ಆಟೋರಿಕ್ಷಾ ನಿಲ್ಲಿಸಿಕೊಂಡು, ಬಲಗೈಯಲ್ಲಿ ಬ್ಯಾಟರಿ, ಎಡಗೈಲಿ ಛತ್ರಿ ಹಿಡಿದುಕೊಂಡು 'ಅಶ್ವತ್ಥನಾರಾಯಣ್ ಯಾರು?' ಎಂದು ಜೋರಾಗಿ ಕೂಗಿದರು. ಏಕೆಂದರೆ ಬಸ್ಸಿಂದ ಹತ್ತಾರು ಜನ ಇಳಿಯುತ್ತಿದ್ದರು. ನಾನೇ ಎಂದು ಅವರ ಬಳಿ ಬಂದೆ. 'ಬನ್ನಿ ಬನ್ನಿ, ನಾನೇ ಮಹಾಬಲೇಶ್ವರ ಭಟ್ಟ' ಎಂದು ರಿಕ್ಷಾ ಹತ್ತಿಸಿಕೊಂಡು ಅಡಕೆ ಬೆಳೆಗಾರರ ಸಂಘದ ಐ.ಬಿ. ಬಳಿ ಇಳಿಸಿ ಒಳಗೆ ಕೊಠಡಿಗೆ ಕರೆತಂದರು. ಅಲ್ಲಿದ್ದ ಆಳನ್ನು ಕರೆದು 'ಇವರಿಗೆ ಸ್ನಾನಕ್ಕೆ, ಊಟಕ್ಕೆ ಎಲ್ಲಾ ಏರ್ಪಾಟು ಮಾಡಿ' ಎಂದರು. ನನಗೆ 'ಸಾರ್, ಏನೂ ತಪ್ಪು ತಿಳಿಯಬೇಡಿ. ನನ್ನ ತಮ್ಮನ ಮಗಳ ಮದುವೆ ಇದೆ. ಹಸೆಮಣೆ ಮೇಲೆ ನಾನೇ ಕೂಡಬೇಕಾಗಿದೆ. ಇನ್ನು ಸ್ವಲ್ಪ ಹೊತ್ತಿಗೆ ಲಗ್ನ ಇದೆ. ಲಗ್ನ ಮುಗಿಸಿಕೊಂಡು ಮಧ್ಯಾಹ್ನ ಬರುತ್ತೇನೆ. ಅಲ್ಲಿವರೆಗೆ ಉಳಿದ ವ್ಯವಸ್ಥೆ ಇವನು ಮಾಡಿಕೊಡುತ್ತಾನೆ' ಎಂದು ಹೇಳಿದರು. 'ಪರವಾಗಿಲ್ಲ ನೀವು ಹೋಗಿ ಬನ್ನಿ, ಲಗ್ನ ಮುಗಿಸಿ. ನಾನಿಲ್ಲಿ ಇರುತ್ತೇನೆ ಓದಿಕೊಂಡು. ತೊಂದರೆ ಏನಿಲ್ಲ' ಎಂದೆ.

ಮಧ್ಯಾಹ್ನ ಬಂದು ವಿಚಾರಿಸಿಕೊಂಡು 'ಸಂಜೆ ೬ಕ್ಕೆ ಕಾರ್ಯಕ್ರಮದ ವೇಳೆಗೆ ಬಂದು ನಿಮ್ಮನ್ನು ಕರೆದೊಯ್ಯುತ್ತೇನೆ. ಕಾರ್ಯಕ್ರಮಕ್ಕೆ ವ್ಯವಸ್ಥೆ ಮಾಡಬೇಕಾಗಿದೆ' ಎಂದು ಹೇಳಿ, 'ತೊಂದರೆ ಏನೂ ಆಗಿಲ್ಲ ತಾನೇ?' ಎಂದು ವಿಚಾರಿಸಿಕೊಂಡು ಹೋದರು.

ಸಂಜೆ ಕಾರಿನಲ್ಲಿ ಬಂದರು. ಸಭಾಂಗಣಕ್ಕೆ ಕರೆದೊಯ್ದರು. ಅಂದು ಬೆಳಗ್ಗಿನಿಂದಲೇ ಒಂದೇ ಸಮನೆ ಜಡಿಮಳೆ ಹೊಯ್ಯುತ್ತಾ ಇತ್ತು. ಕಾರ್ಯಕ್ರಮದ ವೇಳೆಯಲ್ಲೂ ನಿಂತಿರಲಿಲ್ಲ. ಮಳೆಯಲ್ಲೇ ಸಭಾಂಗಣದೊಳಗೆ ಕಾರ್ಯಕ್ರಮ ನಡೆಯಿತು. ಆ ಮಳೆಯಲ್ಲೂ ಕೊಡೆ ಹಿಡಿದುಕೊಂಡು ಸಾಕಷ್ಟು ಜನ ಕಾರ್ಯಕ್ರಮಕ್ಕೆ ಬಂದಿದ್ದರು.

ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಊಟ ಆದ ಮೇಲೆ ಸುಮಾರು ರಾತ್ರಿ ೧೦ ಇರಬೇಕು, ಬೆಂಗಳೂರಿಗೆ ನನ್ನನ್ನು ಕಳಿಸಲು ಬಸ್‌ಸ್ಟ್ಯಾಂಡಿಗೆ ಕರೆತಂದರು.

ಬಸ್‌ಸ್ಟ್ಯಾಂಡಿನಲ್ಲಿ ಜಾಸ್ತಿ ಜನ ಇರಲಿಲ. ಮಳೆ ಸುರಿಯುತ್ತಲೇ ಇತ್ತು. ಬಸ್ ಬಂತು. ಬಸ್ಸು ತುಂಬಿ ತುಳುಕಿ ಗರ್ಭಿಣಿಯಂತೆ ತೂಗಾಡುತ್ತಾ ಬಂದಿತು. ಅಂದು ಬಸ್ಸು ಹೊರಡುವ ಊರಿನಲ್ಲಿ ಜಾತ್ರೆಯಂತೆ. ಬಸ್ಸಿನಲ್ಲಿ ಜನ ತುಂಬಿ ತುಳುಕಿದ್ದರು. ಸಾಮಾನ್ಯವಾಗಿ ಉಳಿದ ದಿನಗಳಲ್ಲಿ ಬಸ್ಸು ಅರ್ಧ ಖಾಲಿ ಇರುತ್ತದೆಯಂತೆ. ಇವರ ಊರಿಗೆ(ಸಾಗರಕ್ಕೆ) ಬರುವ ವೇಳೆಗೆ. ಇಂದು ಕಾಲಿಡಲು ಜಾಗವಿಲ್ಲದಂತೆ ಜನ ಬಸ್ಸಿನಲ್ಲಿ ಇದ್ದರು. ಇಳಿದವರು ಒಬ್ಬಿಬ್ಬರು. ಭಟ್ಟರು ಒಳಕ್ಕೆ ಹೋಗಿ ನೋಡುತ್ತಾರೆ ಸೀಟಿರಲಿ, ನಿಂತಿರಲೂ ಜಾಗ ಇಲ್ಲ. ಅಷ್ಟು ಕಿಷ್ಕಿಂಧೆ ಆಗಿತ್ತು. ಅದರ ನಡುವೆ ಬಸ್ಸಿನ ಹಿಂದಿನ ಕೊನೆಯ ಸೀಟಿನಲ್ಲಿ ಜಾಗ ಮಾಡಿ ನನ್ನನ್ನು ಆ ನೂಕುನುಗ್ಗಲಿನಲ್ಲಿ ಎಳೆದುಕೊಂಡು ಹೋಗಿ ಕೂರಿಸಿದರು. ಕೂತಿದ್ದವನೊಬ್ಬ ಎದ್ದು ನಿಂತನು. 'ಕ್ಷಮಿಸಿ ತೊಂದರೆಗೆ. ಊರು ಸೇರಿದ ಮೇಲೆ ಫೋನು ಮಾಡಿ' ಎಂದರು.

ನಾನು ಅವರಿಗೆ ಮಾರನೇ ದಿನ ನನಗೆ ಕಾರ್ಯಕ್ರಮ ಇರುವುದರಿಂದ ಅಂದೇ ರಾತ್ರಿ ಬಸ್ಸಿಗೆ ಕಳಿಸಬೇಕು ಎಂದು ತಿಳಿಸಿದ್ದೆ. ಒಪ್ಪಿದ್ದರು. ಕೊನೇ ಬಸ್ಸಿಗೆ ಕಳಿಸಬೇಕು ಎಂದು ತಿಳಿಸಿದ್ದೆ. ಒಪ್ಪಿದ್ದರು. ಕೊನೇ ಸೀಟಿನಲ್ಲಿ ಕುಳಿತೇ ನಾನು ಹಳ್ಳದಿಣ್ಣೆಗಳಲ್ಲಿ ಬಸ್ ಹೈಜಂಪ್ ಲಾಂಗ್‌ಜಂಪ್ ಮಾಡುತ್ತಿದ್ದವರ ಜತೆಗೆ ನಾನೂ ಹೈಜಂಪ್ ಲಾಂಗ್‌ಜಂಪ್ ಮಾಡುತ್ತಾ ಬೆಂಗಳೂರನ್ನು ಸೇರಿದೆ.

ಮಾರನೇ ದಿನ ಫೋನು ಮಾಡಿದಾಗ 'ಮೊದಲೇ ಸೀಟು ಬುಕ್ ಮಾಡಿದ್ದರೆ ಚೆನ್ನಿತ್ತು. ನನ್ನ ಬದುಕಿನಲ್ಲೇ ವ್ಯಾಯಾಮ ಮಾಡಿದವನಲ್ಲ. ಅಷ್ಟೂ ವರ್ಷದ ವ್ಯಾಯಾಮ ಬಸ್ಸಿನಲ್ಲಾಯಿತು' ಎಂದಾಗ, 'ಕ್ಷಮಿಸಿ, ಬಸ್ಸು ಹೊರಡುವ ಊರಿನಲ್ಲಿ ಜಾತ್ರೆ ಇದ್ದದ್ದು ತಿಳಿಯಲಿಲ್ಲ. ಸಾಮಾನ್ಯವಾಗಿ ನಮ್ಮ ಊರಿಗೆ ಬಸ್ ಬಂದರೆ ಖಾಲಿ ಸೀಟುಗಳು ಸದಾ ಇರುತ್ತಿದ್ದವು. ಅದೇ ಮೊದಲನೇ ಸಾರಿ ಬಸ್ ತುಂಬಿ ತುಳುಕಿದ್ದನ್ನು ನೋಡಿದ್ದು. ಕ್ಷಮೆಯಿರಲಿ. ಬಸ್ಸಿನಲ್ಲೂ ಎಲ್ಲೂ ಜಾಗವಿಲ್ಲದೆ ಯಾರೂ ಇಳಿಯಲು ಸೀಟು ಕೊಡಲು ಸಿದ್ಧರಿಲ್ಲದಿದ್ದಾಗ ಕೊನೆಯಲ್ಲಿ ಕುಳಿತ ನಮ್ಮೂರಿನ ಪರಿಚಿತನೊಬ್ಬ ಬೆಂಗಳೂರಿಗೆ ಮಾವನ ಮನೆಗೆ ಹಬ್ಬಕ್ಕೆ ಹೋಗುತ್ತಿದ್ದವನನ್ನು ಎಬ್ಬಿಸಿ ಬೆಳಿಗ್ಗೆ ಕಾರಿನಲ್ಲಿ ಬೆಂಗಳೂರಿಗೆ ಕಳಿಸುವೆ ಎಂದು ಹೇಳಿ ಅವನ ಟಿಕೆಟ್ಟಿನ ಜಾಗದಲ್ಲಿ ನಿಮ್ಮನ್ನು ಕೂಡಿಸಿದೆ. ಏನೇ ಆಗಲಿ, ರಾತ್ರಿಯೇ ಹೋಗಬೇಕೆಂದು ನೀವು ತಿಳಿಸಿದ್ದೀರಿ. ಇಲ್ಲದಿದ್ದಲ್ಲಿ ಮಾರನೇ ದಿನ ಸಾವಕಾಶವಾಗಿ ಕಳಿಸುತ್ತಿದ್ದೆ. ನಿಮಗೆ ತೊಂದರೆ ಆಗಿದ್ದಕ್ಕೆ ಕ್ಷಮಿಸಿ. ನಿಮ್ಮ ಮೈ ಕೈ ನೋವಿಗೆ ನಮ್ಮೂರಿನಲ್ಲಿ ಒಳ್ಳೆಯ ತೈಲ ಸಿಗುತ್ತೆ, ಕಳಿಸಿಕೊಡುತ್ತೇನೆ' ಎಂದರು. 'ಬೇಡಿ ಪರವಾಗಿಲ್ಲ. ಇದೆಲ್ಲಾ ನನಗೆ ಮಾಮೂಲಿ. ಮಳೆಯಲ್ಲೂ, ಮದುವೆ ಮನೆ ಕೆಲಸದ ನಡುವೆಯೂ ಪ್ರೀತಿ ವಿಶ್ವಾಸಗಳಿಂದ ನೀವು ವಿಚಾರಿಸಿಕೊಂಡು ಅತಿಥಿಸತ್ಕಾರ ಮಾಡಿದ್ದನ್ನು ನಾನು ಮರೆಯಲಾರೆ' ಎಂದೆ. ಆ ಒಂದು ಪ್ರಸಂಗ, ಅತಿಥಿಗಳನ್ನು ಪರವೂರಿನಿಂದ ಆಹ್ವಾನಿಸಿದಾಗ ಎಷ್ಟೇ ಕಷ್ಟ ಆಗಲಿ, ಅನಿರೀಕ್ಷಿತ ಸಂದರ್ಭಗಳಿರಲಿ ಅತಿಥಿಗಳಿಗೆ ತೊಂದರೆ ಆಗದಂತೆ ಹೇಗೆ ವಿಚಾರಿಸಿಕೊಳ್ಳಬೇಕು ಎಂಬುದಕ್ಕೆ ಮಹಾಬಲೇಶ್ವರ ಭಟ್ಟರು ಆದರ್ಶ ಸಂಘಟಕರಾಗಿ ಇಂದೂ ನನ್ನ ಕಣ್ಣ ಮುಂದೆ ಸುಳಿಯುತ್ತಾರೆ. ಉಳಿದ ಊರುಗಳಿಗೆ ಭಾಷಣಗಳಿಗೆ ಹೋದಾಗ ತೊಂದರೆಗಳಾದಾಗ ಅವರ ನೆನಪು ಮರುಕಳಿಸುತ್ತದೆ.

೧೩೬. ಸಮಯಪಾಲನಾ ಶಿಸ್ತು ಕಲಿಸಿದ ಯಂತ್ರಶಿಲ್ಪಿ

ನಾನು ೧೯೫೫ರಲ್ಲಿ ಎಸ್.ಎಸ್.ಎಲ್.ಸಿ. ಪಾಸಾದೆನು. ಆಗ ಕನ್ನಡ ಓದಲು ಪಿಯುಸಿ ಸೇರಬೇಕೆಂದಿದ್ದೆನು. ಆದರೆ ಮನೆಯ ಆರ್ಥಿಕ ಪರಿಸ್ಥಿತಿಯ ತೊಂದರೆಯಿಂದ ಸೇರಲಾಗಲಿಲ್ಲ. ಇಂಜಿನಿಯರಿಂಗ್ ಡಿಪ್ಲೊಮಾ ಮಾಡಿದರೆ ಬೇಗ ಕೆಲಸ ಸಿಗುತ್ತದೆ ಎಂಬ ಭಾವನೆಯಿಂದ ಮನೆಯವರು ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್(ಎಸ್.ಜೆ.ಪಿ.)ಗೆ ಸೇರಿಸಲು ನಿರ್ಧರಿಸಿದರು. ಆಗ ಅಲ್ಲಿಯ ಸೀಟು ಕೊಡಿಸಲು ಈಗಿನಷ್ಟು ಅಡ್ಮಿಷನ್‌ಗೆ ಡಿಮ್ಯಾಂಡ್ ಇರಲಿಲ್ಲ, ಆದರೂ ಸುಲಭದಲ್ಲಿ ಸೀಟು ಸಿಗುತ್ತಿರಲಿಲ್ಲ. ೧೯೫೫ರಲ್ಲಿ ಇದ್ದ ಸನ್ನಿವೇಶ.

ಆ ಸಮಯದಲ್ಲಿ ನಮ್ಮ ತಂದೆಯ ಅಣ್ಣನ(ದೊಡ್ಡಪ್ಪ ಹೆಬ್ಬಗೋಡಿಯ ಶಾನುಭೋಗರು) ಮಗ ಶಿವರಾಮಯ್ಯ ಎಂಬುವರು ಚಾಮರಾಜಪೇಟೆಯ ಮಾದರಿ ಪಾಠಶಾಲೆ ಮಾಡೆಲ್ ಸ್ಕೂಲ್ (ಆರ್.ಕಲ್ಯಾಣಮ್ಮನವರು ಸ್ಥಾಪಿಸಿದ್ದು)ನಲ್ಲಿ ಅಧ್ಯಾಪಕರಾಗಿದ್ದರು. ರಾಮೇಶ್ವರ ದೇವಸ್ಥಾನದಲ್ಲಿ ಷೇಷ್ಕಾರ್ (ಮ್ಯಾನೇಜರ್) ಆಗಿದ್ದರು.

ಆಗ ಚಾಮರಾಜಪೇಟೆಯ ರಾಮೇಶ್ವರ ದೇವಸ್ಥಾನ ಪ್ರಸಿದ್ಧಿ ಹೊಂದಿತ್ತು. ಅಲ್ಲಿಯ ಸಭಾಂಗಣದಲ್ಲಿ ಬೆಳಿಗ್ಗೆ ಶಾಲೆ ನಡೆಯುತ್ತಿತ್ತು. ಸಂಜೆ ಹರಿಕಥೆ–ಸಂಗೀತ ಕಚೇರಿಗಳು ನಡೆಯುತ್ತಿದ್ದವು. ಅಲ್ಲಿ ಘನವಿದ್ವಾಂಸರು ಹರಿಕಥೆ ಮಾಡುತ್ತಿದ್ದರು. ಸರ್.ಎಂ.ವಿಶ್ವೇಶ್ವರಯ್ಯನವರೊಂದಿಗೆ ಡಿವಿಜಿ ಹರಿಕಥೆ ಕೇಳಿದ ಪ್ರಸಂಗ ಡಿವಿಜಿ ಅವರ ಜ್ಞಾಪಕ ಚಿತ್ರಶಾಲೆಯಲ್ಲಿ ನಿರೂಪಿತವಾಗಿದೆ. ಹೆಬ್ಬಣಿ ಕೃಷ್ಣಶಾಸ್ತ್ರಿಗಳು ಎಂಬ ಪ್ರಸಿದ್ಧ ತೆಲುಗು ಕನ್ನಡ ವಿದ್ವಾಂಸರು ಕನ್ನಡದಲ್ಲಿ ಹರಿಕಥೆಗಳನ್ನು ಅಲ್ಲಿ ವಿದ್ವತ್ಪೂರ್ಣವಾಗಿ ಮಾಡುತ್ತಿದ್ದರು. ದೊಡ್ಡ ಸಂಗೀತ ವಿದ್ವಾಂಸರೂ, ಸಂಸ್ಕೃತ ವಿದ್ವಾಂಸರೂ, ಕನ್ನಡ ಪಂಡಿತರೂ ಆದ ಅವರ ಹರಿಕಥೆ ಕೇಳಲು ಡಿವಿಜಿ, ಕರ್ಪೂರ ಶ್ರೀನಿವಾಸರಾವ್, ಅಪ್ಪಾಜಿಯರಾಯರು, ಚೌಬೀನೇ ಸುಬ್ಬರಾಯರು ಇನ್ನೂ ಅನೇಕ ಆ ಕಾಲದ ಚಾಮರಾಜಪೇಟೆ ಗಣ್ಯರು ಬರುತ್ತಿದ್ದರು. ದೇವಸ್ಥಾನದ ಹತ್ತಿರದಲ್ಲೇ ನಾಲ್ಕನೇ ರಸ್ತೆಯ ರೆಡ್ಡಿ ಹಾಸ್ಟೆಲಿನ ಪಕ್ಕ (ಈಗ ಬಾಸ್ಕೋ ಮನೆ. ಅನಾಥ ವಿದ್ಯಾರ್ಥಿಗಳ ನಿಲಯ ಆಗಿದೆ) ಪಕ್ಕದ ರಂಗಮ್ಮನ ವಠಾರದಲ್ಲಿತ್ತು. ಆ ವಠಾರದಲ್ಲೇ ಪ್ರಸಿದ್ಧ ಸಾಹಿತಿ ನಿರಂಜನರು ಮುಂದುಗಡೆ ಮಹಡಿಯ ಮೇಲಿದ್ದ ಮರದ ಕೊಠಡಿಯಲ್ಲಿದ್ದರು. ನಿರಂಜನರ ಕಾದಂಬರಿಯ **ರಂಗಮ್ಮನ ವಠಾರದ** ಮುಂಭಾಗದಲ್ಲಿ ವಠಾರದ ಚಿತ್ರ ಇದೆ.

ರಾಮೇಶ್ವರ ದೇವಸ್ಥಾನದ ಕಾರ್ಯಗಳ ಜತೆಗೆ ಹರಿಕಥೆಗಳಿಗೆ ವ್ಯವಸ್ಥೆ ಇದ್ದು, ಶಿವರಾಮಯ್ಯ ಅದನ್ನು ಮಾಡುತ್ತಿದ್ದರು. ಅವರ ಹೆಂಡತಿ ಕಮಲಮ್ಮ ಅವಿದ್ಯಾವಂತೆ. ಆಕೆಗೆ ನಾನು ಕನ್ನಡ ಕಲಿಸುತ್ತಿದ್ದೆ. ಅವರ ಮನೆಗೆ ನಮ್ಮ ತಂದೆ ತಾಯಿ, ಅವರ ಚಿಕ್ಕಪ್ಪ ಚಿಕ್ಕಮ್ಮ, ಜತೆಗೆ ತಂದೆ ತಂಗಿ (ಸೋದರತ್ತೆ) ಗುಂಡಮ್ಮ ಶಿವರಾಮಯ್ಯನವರ ಜತೆ ಇದ್ದರು. ಹಾಗಾಗಿ ದಿನಾ ಸಂಜೆ ರಾಮೇಶ್ವರಂ ದೇವಸ್ಥಾನಕ್ಕೆ ಹರಿಕಥೆಗಳಿಗೆ ಬಂದು

ಹೋಗುವ ಮುನ್ನ ಗುಂಡಮ್ಮನ ಮನೆಗೆ ನಮ್ಮ ತಾಯಿ ತಂದೆ ಬರುತ್ತಿದ್ದರು. ಹೀಗಾಗಿ ನಮ್ಮ ತಂದೆಯ ಬಗ್ಗೆ ಶಿವರಾಮಯ್ಯನವರಿಗೆ ಗೌರವ, ಅಭಿಮಾನ, ಪ್ರೀತಿ–ವಿಶ್ವಾಸ ಇತ್ತು.

ನಮ್ಮ ತಂದೆ ನನಗೆ ಎಸ್.ಜೆ.ಪಿ.ಯಲ್ಲಿ ಸೀಟು ಬೇಕಾಗಿದೆ ಎಂದಾಗ, 'ಅಯ್ಯೋ ಅದಕ್ಕೇಕೆ ಯೋಚಿಸುತ್ತೀರಿ? ಅಲ್ಲಿಯ ಪ್ರಿನ್ಸಿಪಾಲ್ ಹೆಚ್.ಸಿ.ಕೆ. ಭಟ್ಟರು ನನಗೆ ಚೆನ್ನಾಗಿ ಗೊತ್ತು, ನಾನು ಕೊಡಿಸ್ತೇನೆ ಎಂದು ನನ್ನನ್ನು ಎಸ್.ಜೆ.ಪಿ.ಗೆ ಕರೆದುಕೊಂಡು ಹೋದರು. 'ಏನು ಶಿವರಾಮಯ್ಯ ಅಪರೂಪಕ್ಕೆ ನಮ್ಮ ಸ್ಕೂಲಿಗೆ ಬಂದಿದ್ದೀರಿ. ದೇವಸ್ಥಾನ ಹೇಗೆ ನಡೀತಿದೆ?' ಎಂದೆಲ್ಲಾ ಉಭಯಕುಶಲೋಪರಿ ಮಾತುಗಳಾದ ಮೇಲೆ 'ಏನು ಬಂದಿದ್ದು?' ಎಂದು ಕೇಳಿದರು.

ಶಿವರಾಮಯ್ಯ, 'ಇವನು ನಮ್ಮ ಚಿಕ್ಕಪ್ಪನ ಮಗ. ಇವನಿಗೆ ಸೀಟು ಬೇಕಾಗಿತ್ತು' ಎಂದಾಗ, 'ಅಷ್ಟೇನಾ... ಫಾರಂ, ದುಡ್ಡು ತಂದಿದ್ದೀಯಾ? ಎಂದು ಕೇಳಿ, 'ಸರಿ ಹೋಗು, ಫೀಸು ಕಟ್ಟು' ಎನ್ನುತ್ತಾ ಅರ್ಜಿಯ ಮೇಲೆ ಅಡ್ಮಿಟ್ ಎಂದು ಬರೆದುಕೊಟ್ಟರು. ಅದನ್ನು ಮ್ಯಾನೇಜರ್ ರಾಮರಾವ್ ಅವರ ಬಳಿಗೆ ಹೋಗಿ ಕೊಟ್ಟೆ. ರಾಮರಾವ್ ಅವರು ವಿವೇಕಾನಂದ ಯೋಗ ಸೆಂಟರ್ ಅಂತಾರಾಷ್ಟ್ರೀಯ ಕೇಂದ್ರದ ಅಧ್ಯಕ್ಷರಾದ ನಾಗೇಂದ್ರ ಅವರ ತಂದೆ. ನಾಗೇಂದ್ರ ನಮ್ಮ ಮನೆಯ ಬಳಿ ಇದ್ದು ನನ್ನ ಗೋಲಿಯಾಟದ ಗೆಳೆಯ ಆಗಿದ್ದ. 'ಏನಯ್ಯಾ ಬಂದೆ?' ಎಂದಾಗ, ಅಡ್ಮಿಷನ್ನಿಗೆ ಎಂದು ಹೇಳಿದೆ. ನಕ್ಕು, 'ಕೊಡಿಲ್ಲಿ ಅಪ್ಲಿಕೇಷನ್, ಫೀಸು' ಎಂದು ತೆಗೆದುಕೊಂಡರು. ಎಸ್.ಜೆ.ಪಿ.ಗೆ ನಾನು ಸೇರಿದಾಗಲೇ ಸಿನಿಮಾ ನಟ (ನಾರಾಯಣಸ್ವಾಮಿ) ಶ್ರೀನಾಥ್ ಸಿನಿಮಾಟೋಗ್ರಾಫಿಗೆ ಸೇರಿ ಪರಿಚಯವಾದ.

ಎಸ್.ಜೆ.ಪಿ.ಯಲ್ಲಿ ಮೂರು ಪ್ರಸಂಗಗಳು ನನ್ನ ಜೀವನದಲ್ಲಿ ಪ್ರಭಾವ ಬೀರಿವೆ. ಮೊದಲನೆಯದು ಸರ್.ಎಂ.ವಿಶ್ವೇಶ್ವರಯ್ಯನವರನ್ನು ಆ ೩ ವರ್ಷಗಳಲ್ಲಿ ಹಲವು ಬಾರಿ ನೋಡಿದ್ದು. ಸರ್.ಎಂ.ವಿಶ್ವೇಶ್ವರಯ್ಯನವರ ಕೈಕೆಳಗೆ ಹಲವಾರು ವರ್ಷ ನೇರವಾಗಿ ಕೆಲಸ ಮಾಡಿ ಪ್ರಿನ್ಸಿಪಾಲರಾದ ಕಪನೀಪತಿಭಟ್ಟರು ಇಬ್ಬರೂ ಚಿರಪರಿಚಿತರಾಗಿದ್ದರೂ ವೃತ್ತಿಯಾಚೆ ಪ್ರವೃತ್ತಿಯಲ್ಲೂ ಹತ್ತಿರದವರಾಗಿದ್ದರು. ಎಸ್.ಜೆ.ಪಿ.ಯಲ್ಲಿ ಯಾವ ಸಂದರ್ಭದಲ್ಲಿ ಭಟ್ಟರು ಕರೆದರೂ ಕೂಡಲೇ ಸರ್.ಎಂ.ವಿ. ಬರುತ್ತಿದ್ದರು. ಒಂದು ಫೋನ್ ಕರೆಗೆ ಬರುತ್ತಿದ್ದರು. ಅವರು ಬರುವುದನ್ನು ನೋಟೀಸ್ ಬೋರ್ಡಿನಲ್ಲಿ ಹಾಕುತ್ತಿದ್ದರು. ೨.೨೭ ನಿಮಿಷಕ್ಕೆ ಬರುತ್ತಾರೆ; ೩.೧೭ ನಿಮಿಷಕ್ಕೆ ತೆರಳುತ್ತಾರೆ; ೧೧.೫೭ಕ್ಕೆ ಬರುವರು; ೧೨.೧೮ಕ್ಕೆ ತೆರಳುತ್ತಾರೆ ಇತ್ಯಾದಿ. ಇದೇನಿದು ೨೭, ೫೭, ೧೮ ನಿಮಿಷಗಳನ್ನು ಹಾಕಿದ್ದಾರೆ, ಅಷ್ಟು ಕರಾರುವಾಕ್ಕಾಗಿ ಬಂದು ಹೋಗುವರೇ? ಇದು ಸ್ಟಂಟ್. ಅವರು ಟೈಂ ವಿಷಯದಲ್ಲಿ ಬಹಳ ಸ್ಟ್ರಿಕ್ಟ್ ಅಂತ ಎಲ್ಲರೂ ಹೇಳ್ತಾರೆ. ಅದಕ್ಕಾಗಿ ಪ್ರಕಟಿಸುತ್ತಾರೆ ಎಂದು ನಾವು ಕೆಲವರು ಮಾತಾಡಿಕೊಂಡೆವು. ಇದನ್ನು ಪರೀಕ್ಷಿಸಬೇಕೆಂದು ಒಮ್ಮೆ ನಿರ್ಧರಿಸಿದೆವು.

ನೋಟೀಸ್ ಬೋರ್ಡ್‌ನಲ್ಲಿ ೨.೧೭ ಬರುವ ವೇಳೆಯನ್ನು ಹಾಕಿದ್ದರು. ನಮ್ಮಲ್ಲಿ ಗಡಿಯಾರ ಇರಲಿಲ್ಲ. ಅಲ್ಲಿದ್ದ ಕಲ್ಲುಗೋಪುರದ ಗಡಿಯಾರದಲ್ಲಿ ನೋಡಿದೆವು. ಸರಿಯಾಗಿ

೨.೧೭ಕ್ಕೆ ಇಳಿದರು. ಹೋಗುವ ವೇಳೆ ಗಮನಿಸಿದಾಗ ೨.೫೩ ಎಂದದ್ದು ಸರಿಯಾಗಿತ್ತು. ಹೀಗೆ ಅವರು ಒಂದೆರಡು ಸಲ ಬಂದಾಗ ವೇಳೆಯನ್ನು ಗಮನಿಸಿದ ನಾವು ಅವರನ್ನು ಪ್ರಶ್ನಿಸಲು ನಿರ್ಧರಿಸಿದೆವು. ನಮ್ಮ ಇನ್‌ಸ್ಟ್ರುಮೆಂಟ್ ಮೆಕ್ಯಾನಿಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸೀತಾಪತಿ ಎಂಬ ಇನ್‌ಸ್ಟ್ರಕ್ಟರ್ ಇದ್ದರು. ಅವರು ಸಿನಿಮಾ ರಂಗದಲ್ಲಿ ಪ್ರಸಿದ್ಧ ಸಂಗೀತ ನಿರ್ದೇಶಕರಾಗಿದ್ದ ಜಿ.ಕೆ.ವೆಂಕಟೇಶ್ ಅವರ ಅಣ್ಣ. ವೆಂಕಟೇಶ್ ಅವರನ್ನು ನಮ್ಮ ಮೇಷ್ಟ್ರು ಸೀತಾಪತಿ ಅವರ ಮನೆಯಲ್ಲಿ ಒಂದೆರಡು ಬಾರಿ ಭೇಟಿ ಆದಾಗ ಅವರ ಅಣ್ಣ ಎಂದು ತಿಳಿಯಿತು. ನಾನು ಎಸ್.ಜೆ.ಪಿ.ಯಲ್ಲಿ ವಿದ್ಯಾರ್ಥಿಯಾಗಿದ್ದರೂ ನನ್ನ ಕನ್ನಡಾಸಕ್ತಿ ತಿಳಿದು ಸೀತಾಪತಿ ಅವರು ಅವರ ಮಗನಿಗೆ ಕನ್ನಡ ಪಾಠ ಹೇಳಲು ಗೊತ್ತು ಮಾಡಿದ್ದರು. ಫೀಸು ಬೇಡವೆಂದರೂ ಬಿಟ್ಟಿ ಪಾಠ ಹೇಳಿಸಬಾರದು ಎಂದು ಹೇಳಿ ೫ರೂ. ಕೊಡುತ್ತಿದ್ದರು. ಸರ್.ಎಂ.ವಿ. ಬಂದಾಗ ಎಲೆಕ್ಟ್ರಿಕ್ ವಿಭಾಗಕ್ಕೆ ನಾವು ನಾಲ್ಕಾರು ಜನ ಅಲ್ಲಿದ್ದೆವು. ಜೋಶೋಜಿರಾವ್ ಎಂಬ ಹಿರಿಯ ವಿಭಾಗ ಮುಖ್ಯಸ್ಥರು ಹುಡುಗರಿಂದ ಯಾವುದೋ ಎಲೆಕ್ಟ್ರಿಕ್ ಇಂಜಿನ್ನನ್ನು ಮಾಡಿಸಿದ್ದರು. ಅದನ್ನು ನೋಡಲು ವಿಶ್ವೇಶ್ವರಯ್ಯನವರನ್ನು ಭಟ್ಟರು(ಪ್ರಿನ್ಸಿಪಾಲರು) ಕರೆಸಿದ್ದರು. ಯಥಾ ಪ್ರಕಾರ ಚಿಲ್ಲರೆ ಸಮಯಕ್ಕೆ ೩.೧೯ ನಿಮಿಷಕ್ಕೆ ಸರಿಯಾಗಿ ಸರ್.ಎಂ.ವಿ. ಬಂದರು. ಆ ಇಂಜಿನ್ನನ್ನು ತರಿಸಿ ಅವರ ಮುಂದಿಟ್ಟು ನಮ್ಮ ವಿದ್ಯಾರ್ಥಿಗಳು ಮಾಡಿದ್ದು ಎಂದು ಜೋಶೋಜಿರಾವ್ ವಿವರಿಸಿದರು. ಆಗ ಸರ್.ಎಂ.ವಿ. ತಮ್ಮ ಊರುಗೋಲಿನಿಂದ ಆ ಇಂಜಿನ್ ಸ್ಟಾರ್ಟ್ ಆದಾಗ ಆದ ಶಬ್ದ ಕೇಳಿದವರು ಇಂಜಿನ್‌ನ ಎಡಭಾಗದ ಬೋಲ್ಟ್‌ನೆಟ್‌ನ್ನು ತಮ್ಮ ಕೋಲಿನಿಂದ ಕುಟ್ಟಿ ನೋಡಿ 'ಸ್ವಲ್ಪ ಲೂಸಾಗಿದೆ ನೆಟ್‌ಬೋಲ್ಟ್' ಎಂದರು. ಆಗ ಎಂ.ವಿ. ಅವರಿಗೆ ಸುಮಾರು ೯೬ ವರ್ಷ ಆಗಿತ್ತು! (ಜನನ ೧೮೬೦) ನಾವು ಈ ಮುದುಕನಿಗೆ ನೆಟ್‌ಲೂಸ್ ಅಂತ ಕಾಣುತ್ತೆ ಅಂತ ಮನಸ್ಸಿನಲ್ಲೇ ಅಂದುಕೊಂಡೆವು. ಕೂಡಲೇ ಜೋಶೋಜಿರಾವ್ ಅಸಿಸ್ಟೆಂಟ್‌ಗೆ ಹೇಳಿ ಸ್ಪ್ಯಾನರ್ ತರಿಸಿ ಟೈಟ್ ಮಾಡಿಸಿದರು. ಅವರು ಹೇಳಿದಂತೆ ಎರಡು ಸುತ್ತು ನೆಟ್ಟು ಲೂಸಾಗಿತ್ತು. ನಾವು ಬೆರಗಾದೆವು, ಬೆಪ್ಪಾದೆವು. ಅವರ ಕಿವಿ ಚುರುಕುತನ ಕಂಡು. ಆ ಸಂದರ್ಭದಲ್ಲಿ ಏನಾದರೂ ಪ್ರಶ್ನೆಗಳಿವೆಯೇ ಎಂದಾಗ ನಾವು ನಾಲ್ವರು, 'ನೀವು ಇಷ್ಟು ಕರಾರುವಾಕ್ಕಾಗಿ ಕಾಲವನ್ನು ಹೇಗೆ ನಿಭಾಯಿಸುತ್ತೀರಿ? ನಾವು ಟೈಮಿಗೆ ಸರಿಯಾಗಿ ಬರಬೇಕು, ಇರಬೇಕು ಅಂದ್ಕೋಳ್ತೀವಿ ಸಾಧ್ಯವಾಗೋದೇ ಇಲ್ಲ. ಮನೇಲಿ ಸರಿಯಾದ ಟೈಮಿಗೆ ಊಟ ಹಾಕೋಲ್ಲ; ದಾರೀಲಿ ಸೈಕಲ್ ಪಂಚರ್ ಆಗುತ್ತೆ, ಬಸ್ ಸಿಕ್ಕೋಲ್ಲ; ಇನ್ನು ನಮ್ಮಲ್ಲಿ ವಾಚಿಲ್ಲ ಟೈಂ ನೋಡಿಕೊಳ್ಳಲು...' ಎಂದೆವು. 'ಮನಸ್ಸು ಮಾಡಿದರೆ ಟೈಂ ಕೀಪಪ್ ಮಾಡಲು ಸಾಧ್ಯ. ಟೈಮಿಗೆ ಸರಿಯಾಗಿ ಬರಲಾಗದಿದ್ದರೆ ಮುಂಚಿತವಾಗಿ ಬನ್ನಿ, ಲೇಟಾಗೋಲ್ಲ' ಎಂದರು. ನಾವು ಹೌದಲ್ಲಾ ಎಂದುಕೊಂಡು, ಸಂತೆಗೆ ಮುಂಚೆ ಗಂಟು ಕಳ್ಳರು ಸೇರಿದರು ಎಂಬಂತೆ ಜವಾನ ಬಾಗಿಲು ತೆಗೆಯೋ ಮುಂಚೆಯೇ ಕ್ಲಾಸಿಗೆ ಬರಲು ಶುರು ಮಾಡಿದೆವು. ಅಂದಿನಿಂದ ಯಾವ ಕ್ಲಾಸಿಗೂ ನಾವು ನಾಲ್ವರು ಲೇಟಾಗಲಿಲ್ಲ. ವರುಷದ ಕೊನೆಯಲ್ಲಿ ವಾರ್ಷಿಕ ಸಮಾರಂಭಕ್ಕೆ ಬಂದಾಗ, 'ಸಾರ್ ಅಂದು ನೀವು ಹೇಳಿದ್ದರಲ್ಲ ಯಾತಕ್ಕೂ ಲೇಟಾಗಬಾರದು ಟೈಂಗೆ ಸರಿಯಾಗಿ ಬರೋಕಾಗದಿದ್ರೆ ಮುಂಚೆ ಬನ್ನಿ

ಅಂತ. ವರ್ಷವೆಲ್ಲಾ ಮುಂಚಿತವಾಗಿ ಕ್ಲಾಸಿಗೆ ಬಂದಿದ್ದೇವೆ' ಎಂದೆ. 'ತುಂಬಾ ಸಂತೋಷ. ವರ್ಷವೆಲ್ಲಾ ಅಲ್ಲ, ಜೀವನವೆಲ್ಲಾ ಯಾವುದರಲ್ಲೂ ಲೇಟಾಗಬೇಡಿ' ಎಂದರು. ಅಂದಿನಿಂದ ನಮಗೆ ಮುಂಚಿತವಾಗಿ ಬರುವುದು ಅಭ್ಯಾಸವಾಗಿಬಿಟ್ಟಿತು. ಪರಿಣಾಮ ಸುಮಾರು ೫೦ ವರ್ಷಗಳ ಕಾಲ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸಿರುವ ನಾನು ಎಂದೂ ಯಾವ ಸಮಾರಂಭಕ್ಕೂ ತಡವಾಗಿ ಹೋಗಿಲ್ಲ. ಬೇರೆ ಊರಿನ ಕಾರ್ಯಕ್ರಮಗಳಿಗೆ ಹಿಂದಿನ ದಿನವೇ ಹೋಗುತ್ತಿದ್ದೆ. ಒಂದು ಕಾರ್ಯಕ್ರಮಕ್ಕೆ ಒಪ್ಪಿಕೊಂಡ ವೇಳೆ ಅದೇ ದಿನ ಇನ್ನೊಂದು ಕಾರ್ಯಕ್ರಮಕ್ಕೆ ಒಪ್ಪಿಕೊಳ್ಳುತ್ತಿರಲಿಲ್ಲ. ವಿಶ್ವೇಶ್ವರಯ್ಯನವರ ಆಶೀರ್ವಾದ, ಬುದ್ಧಿವಾದ ನಮ್ಮ ಬದುಕಿಗೆ ಶಿಸ್ತು ತಂದುಕೊಟ್ಟಿತಲ್ಲದೆ ಸಾರ್ವಜನಿಕ ಜೀವನದಲ್ಲಿ ಸಮಯ ಪಾಲನಾ ಶಿಸ್ತು ನಮಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿದೆ.

❑

೧೪೦. ಇವರಪ್ಪನ ಕಾಲದಿಂದ ಇವರನ್ನು ಬಲ್ಲೆ

ಅನಕೃ ಅವರು ನಿಧನರಾದಾಗ ನಾನು ಹಾಸನದಲ್ಲಿ ಸರ್ಕಾರಿ ಕಾಲೇಜಿನ ಅಧ್ಯಾಪಕನಾಗಿದ್ದೆ. ಅವರ ನಿಧನದ ಸುದ್ದಿ ತಿಳಿದ ಕೂಡಲೆ ಜನಮಿತ್ರದ (ಸ್ಥಳೀಯ ಜನಪ್ರಿಯ ದಿನಪತ್ರಿಕೆ) ಸಂಪಾದಕರಾದ ಕೃ.ನ.ಮೂರ್ತಿ ಅವರು, ನ್ಯಾಷನಲ್ ಪ್ರೆಸ್ ಗುಂಡೂರಾವ್ ಅವರು ಸೇರಿ ಕೂಡಲೇ ಗೊರೂರು ಅವರ ಅಧ್ಯಕ್ಷತೆಯಲ್ಲಿ ಮುನಿಸಿಪಲ್ ಹೈಸ್ಕೂಲಿನಲ್ಲಿ ಅನಕೃ ಸಂತಾಪ ಸೂಚಕ ಸಭೆ ಏರ್ಪಡಿಸಿದರು. ಗೊರೂರು ಅವರು ಸಾಮಾನ್ಯವಾಗಿ ವಾರದಲ್ಲಿ ೪–೫ ದಿನ ಹಾಸನದಲ್ಲೇ ಬೆಳಗಿನಿಂದ ಸಂಜೆಯವರೆಗೂ ಇರುತ್ತಿದ್ದರು. ಅವರ ಅಧ್ಯಕ್ಷತೆಯಲ್ಲಿ ಸಭೆ ಏರ್ಪಾಟಾಯಿತು. ಸಭೆಯಲ್ಲಿ ಉಪನ್ಯಾಸಕಾರನಾದ ನಾನು ಮಾತನಾಡುತ್ತಾ ಅನಕೃ ಅವರೊಡನೆ ಕನ್ನಡ ಚಳುವಳಿಯಲ್ಲಿ ಭಾಗವಹಿಸಿದ ನೆನಪುಗಳನ್ನು ಮೆಲುಕು ಹಾಕುತ್ತಾ ಸಾಹಿತ್ಯ ಪರಿಷತ್ತಿನಲ್ಲಿ ಆಗಿನ ಅಧ್ಯಕ್ಷರೊಂದಿಗೆ ಅನಕೃ ಅವರಿಗಿದ್ದ ಬಾಂಧವ್ಯ, ಪರಿಷತ್ತಿನ ಚುನಾವಣೆಯಲ್ಲಿ ಅನಕೃ ಭಾಗವಹಿಸಿದ ರೀತಿ ಇತ್ಯಾದಿ ಮಾತನಾಡಿದೆ. 'ಅವರು ನನ್ನ ಸ್ಫೂರ್ತಿ ಚೈತನ್ಯಮೂರ್ತಿ ಆಗಿದ್ದರು. ಅನಕೃ ಮತ್ತು ನನ್ನ ಸ್ನೇಹ ೨೦ ವರುಷಗಳಿಗಿಂತ ಮೀರಿದ್ದು' ಎಂದೆ.

ಗೊರೂರು ಅವರು ಅಧ್ಯಕ್ಷ ಭಾಷಣ ಮಾಡುತ್ತಾ ಅನಕೃ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಾ ಹೇಳಿದ ಮಾತುಗಳಿವು:–'ಜಿ.ಅಶ್ವತ್ಥನಾರಾಯಣ ಅವರು ಅನಕೃ ಅವರು ನನಗೆ ೨೦ ವರ್ಷಗಳಿಂದ ಗೊತ್ತು ಎಂದರು. ನಾನು ಅನಕೃ ಅವರನ್ನು ಇವರಪ್ಪನ ಕಾಲದಿಂದ ಬಲ್ಲೆ' ಎಂದರು. ಸಂತಾಪಸೂಚಕ ಸಭೆ ಆದರೂ ಜನ ನಕ್ಕರು. ಗೊರೂರು ಅವರು ಇನ್ನೊಂದು ಮಾತು ಹೇಳಿದರು. 'ಅನಕೃ ಅವರು ನನಗಿಂತ ಕಿರಿಯರಾದರೂ ನಾನಾಗಲಿ ನಮ್ಮ ಕಾಲದವರಾಗಲಿ ಅವರಷ್ಟು ಕನ್ನಡದ ಕೆಲಸ ಮಾಡಲಿಲ್ಲ. ಅವರು ಕೇವಲ ಕನ್ನಡ ಪುಸ್ತಕಗಳನ್ನಷ್ಟೇ ಬರೆಯಲಿಲ್ಲ. ಓದುಗರ ಕನ್ನಡಾಭಿಮಾನ ಬೆಳೆಸುವುದರ ಜೊತೆಗೆ ಜನರನ್ನು ಕನ್ನಡದತ್ತ ತಿರುಗಿಸಿದರು. ಅವರ ಕೆಲವು ಕೃತಿಗಳು ನನ್ನಂಥವರಿಗೆ ಹಿಡಿಸಲಿಲ್ಲ ಎಂಬುದು ನಿಜ. ಆದರೆ ಅದರಲ್ಲಿದ್ದ ಕನ್ನಡದ ಕೆಚ್ಚುಗಾರಿಕೆ, ಭಾಷಣ ಬರಹಗಳಲ್ಲಿದ್ದ ಹೆಚ್ಚುಗಾರಿಕೆ ಬರಹದಲ್ಲಾಗಲಿ, ಬದುಕಿನಲ್ಲಾಗಲಿ ನಮ್ಮಲ್ಲಿ ಯಾರಿಗೂ ಇರಲಿಲ್ಲ' ಎಂದರು.

❑

೧೪೧. ಕಾಲು ಮುರಿದ ಜಿಂಕೆಗಾಗಿ ಕೊರಗಿದ ಮಗಳು

೧೮ ಡಿಸೆಂಬರ್ ೨೦೨೨. ನಮ್ಮ ಮಗಳು ಕ್ಷಮಾ ಅಮೆರಿಕೆಯಲ್ಲಿದ್ದಾಳೆ. ವಿಜ್ಞಾನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ. ಅವಳು ಮೊದಲಿನಿಂದಲೂ ಪ್ರಾಣಿ ಪಕ್ಷಿಗಳನ್ನು ಕಂಡರೆ ಪ್ರಾಣ ಬಿಡುವಳು. ಕಾಲೇಜಿನಲ್ಲಿ ಓದುತ್ತಿದ್ದಾಗ ಮನೆಯಿಂದ ಊಟ ಕಳಿಸಿಕೊಟ್ಟರೆ ಕಾಲೇಜಿನ ಕಾಪೌಂಡಲ್ಲಿ ಇದ್ದ ನಾಯಿಮರಿಗಳಿಗೆ ಹಾಕಿ ಬರುತ್ತಿದ್ದಳು. ತಾನು ತಿನ್ನುತ್ತಿರಲಿಲ್ಲ. ಚಿಕ್ಕ ಮರಿಗಳಿಗೆ ಹಾಲನ್ನು ಮನೆಯಿಂದ ತಂದು ಹಾಕುತ್ತಿದ್ದಳು. ಪ್ರಾಣಿದಯಾ ಸಂಘಕ್ಕೆ ಅಧ್ಯಕ್ಷಿಣಿ ಆಗಲು ಲಾಯಕ್ ಎನ್ನುತ್ತಿದ್ದೆ.

ಈಗ ಅಮೆರಿಕೆಯಲ್ಲೂ ಇಬ್ಬರು ಮಕ್ಕಳಿದ್ದರೂ ಎರಡು ನಾಯಿಗಳನ್ನು, ಗಿಣಿಯನ್ನು ಸಾಕಿಕೊಂಡು ಅವುಗಳನ್ನು ಮಕ್ಕಳಂತೆಯೇ ನೋಡಿಕೊಳ್ಳುತ್ತಾಳೆ. ಅವುಗಳಿಗೂ ಅವಳಿಂದ ರಾಜಭೋಗ. ಚಳಿ ಅಂತ ಬಟ್ಟೆ ತೊಡಿಸುತ್ತಾಳೆ. ಮಲಗಲು ಮೆತ್ತನೆ ಹಾಸಿಗೆ. ಆದರೂ ರಾತ್ರಿ ಹೊತ್ತು ಅವು ಇವಳ ಹಾಸಿಗೆಯಲ್ಲೇ ತೂರಿಕೊಳ್ಳುತ್ತವೆ.

ಈಚೆಗೆ ದಿನಾ ಕಾರಿನಲ್ಲಿ ಆಫೀಸಿಗೆ ಹೋಗುವ ಗುಡ್ಡಗಾಡಿನ ದಾರಿ ರಸ್ತೆ ದಾಟುವಾಗ ತಿರುವಿನಲ್ಲಿ ಒಂದು ಜಿಂಕೆ ರಸ್ತೆ ದಾಟುವಾಗ ಕಾರೊಂದು ಢಿಕ್ಕಿ ಹೊಡೆದು ಕಾಲು ಮುರಿದು ನರಳುತ್ತಿತ್ತು. ತಿರುವಿನಲ್ಲಿ ಕ್ಷಮಾ ಅದನ್ನು ಕಂಡಳು. ಕೂಡಲೇ ಕಾರಿಂದ ಇಳಿದು ಅದರ ಬಳಿ ಹೋಗಿ ನೋಡಿದಾಗ ಕಾಲು ಕತ್ತರಿಸಿಹೋಗಿ ನೇತಾಡುತ್ತಿತ್ತು. ರಕ್ತ ಸುರಿಯುತ್ತಿತ್ತು. ನೋವಿನಿಂದ ಜಿಂಕೆ ನರಳುತ್ತಿತ್ತು. ಅಸಹಾಯಕಳಾಗಿ ನಿಂತಳು ಕ್ಷಮಾ. ಬಳಿ ಹೋಗಿ ಚಿಕಿತ್ಸೆ ಮಾಡಲು ಹೇಗೆ ಸಾಧ್ಯ? ಕೂಡಲೇ ಪ್ರಾಣಿ ರಕ್ಷಣಾ ಸಮಿತಿಗೆ ಫೋನ್ ಮಾಡಿದಳು. 'ನಮ್ಮ ಕಾರ್ಯಕರ್ತನನ್ನು ಕಳಿಸುತ್ತೇವೆ' ಎಂದು ಹೇಳಿದರು. ಅರ್ಧ ಗಂಟೆ ಕಳೆದರೂ ಯಾರೂ ಬರಲಿಲ್ಲ. ಆಫೀಸಿಗೆ ಹೋಗಲು ತಡವಾಯ್ತು, ಹೊರಡಲೇ ಬೇಕಾಯಿತು. ಆ ಜಿಂಕೆಯ ಅಸಹಾಯಕ ಸ್ಥಿತಿ ಕಂಡು ಅಳುತ್ತಾ ದೇವರಧ್ಯಾನ ಮಾಡುತ್ತಾ, ನೆನಪಾದ ಸ್ತೋತ್ರಗಳನ್ನು ಹೇಳಿಕೊಳ್ಳುತ್ತಾ ಆ ಜಿಂಕೆಗೆ ನೋವು ನಿವಾರಣೆ ಆಗಲಿ, ಕಾಲು ಬರಲಿ ಎಂದು ದೇವರನ್ನು ಪ್ರಾರ್ಥಿಸುತ್ತಿದ್ದೆ ಎಂದಳು ಫೋನಿನಲ್ಲಿ. ದೂರದ ಅಮೆರಿಕಾದ ವರ್ಜೀನಿಯಾದಿಂದ ಫೋನ್ ಬಂದಾಗ ನನ್ನ ಕರುಳು ಚುರುಕ್ ಎಂದಿತು. ಮಗಳು ಕ್ಷಮಾಳಲ್ಲಿ ಇದ್ದ ಪ್ರಾಣಿದಯಾ ಮನೋಭಾವ ಕಂಡು ಹೆಮ್ಮೆಯಾಯಿತು.

ಮನೆಯಲ್ಲಿ ಸಾಕುಮಗಳಂತೆ ಸಾಕಿದ್ದ ನಾಯಿ ಪೆಪ್ಪರ್ ಕ್ಯಾನ್ಸರ್ ಬಂದಾಗ ದಯಾಮರಣಕ್ಕೆ ಒಪ್ಪಿಸಿದಳು. ಅದಕ್ಕಾದ ಹಿಂಸೆ ನೋಡಲಾರದೆ ಮನೆಯವರೆಲ್ಲ ಬಹಳ ದಿನ ಶೋಕತಪ್ತರಾಗಿದ್ದರು. ಸುಮಾರು ೧೨ ವರ್ಷ ಅವರೊಂದಿಗೆ ಪೆಪ್ಪರ್ ಇತ್ತು.

❑

೧೪೨ ಅರವತ್ತಾದ ಮೇಲೆ ಹಿಡ್ಕೊಂಡರೂ ಅಷ್ಟೆ, ಬಿಟ್ಕೊಂಡರೂ ಅಷ್ಟೆ

ಗೊರೂರು ಅವರು ಅಮೆರಿಕಾ ಪ್ರವಾಸದಲ್ಲಿದ್ದಾಗ ಅವರ ಹೆಂಡತಿ ಜಾರೇಣಿ (ಎಸ್ಕಲೇಟರ್) ಹತ್ತಬೇಕಾದರೆ 'ನನ್ನ ಕೈಲಿ ಆಗದಪ್ಪ' ಎಂದರು. ಆಗ ಗೊರೂರರು 'ಏನೂ ಆಗದು, ಸುಮ್ಮನೆ ಹತ್ತು' ಎಂದರು. 'ಆಗೋಲ್ಲಪ್ಪ' ಎಂದರೂ ಬಲವಂತ ಮಾಡಿ ಹತ್ತಿಸಿದರು. ಹತ್ತಿ ನಿಲ್ಲುವಾಗ ತೂಕ ತಪ್ಪಿದ ಆಕೆ ಹಿಂದಕ್ಕೆ ವಾಲಿದರು. ಹಿಂದೆ ನಿಂತ ಒಬ್ಬ ವಿದೇಶೀಯ ಬೀಳುತ್ತಾರಲ್ಲ ಎಂದು ಆಕೆಯನ್ನು ಹಿಡಿದು ನಿಲ್ಲಿಸಿದ. 'ಅಯ್ಯಯ್ಯೋ... ಯಾರೋ ಪರಪುರುಷನೊಬ್ಬ ನನ್ನನ್ನು ಮುಟ್ಟಿಹಿಡಿದುಕೊಂಡು ಬಿಟ್ಟನಲ್ಲಾ' ಎಂದು ತಮಿಳಿನಲ್ಲಿ ಚೀತ್ಕರಿಸಿದ ಆಕೆಯನ್ನು ಕುರಿತು ಗೊರೂರರು 'ಸುಮ್ನೆ ಯಾಕೆ ಹೊಡ್ಕೋತೀಯ. ಸುಮ್ನಿರು ಅರವತ್ತು ಆದ ಮೇಲೆ ಹಿಡ್ಕೊಂಡರೂ ಅಷ್ಟೇ. ಬಿಟ್ಕೊಂಡರೂ ಅಷ್ಟೇ. ಏನೂ ಆಗೋಲ್ಲ' ಎಂದರಂತೆ! ಹೀಗೆ ಅವರದು ಸಹಜ ಹಾಸ್ಯ.

ಪುತಿನ ಗೊರೂರರು ಬಾಲ್ಯಮಿತ್ರರು. ಗೊರೂರರು ಒಮ್ಮೆ ಗೋಕುಲಾಷ್ಟಮಿ ಹಬ್ಬದ ವೇಳೆ ಪುತಿನ ಮನೆಗೆ ಬಂದಾಗ ಯಥಾಪ್ರಕಾರ ತಿಂಡಿ ಕೊಟ್ಟರು. ಆಗ ಗೊರೂರು ಪುತಿನಾಗೆ 'ಈಚೆಗೇನು ಕವಿತೆ ಬರೆದಿರುವೆ, ದೊಡ್ಡ ಕವಿತೆಯೇನಾದರೂ ಬರೆದಿದ್ದೀಯಾ' ಅಂತ ಕೇಳಿದರು. 'ಯಾಕಪ್ಪಾ ಎಂದು ಇಲ್ಲದೆ ಇವತ್ತು ಕವಿತೇನ ಕೇಳುತ್ತಿದ್ದೀಯಾ, ಅದರಲ್ಲೂ ದೊಡ್ಡ ಕವಿತೇನಾ?' ಅಂದರು.

ಅದಕ್ಕೆ ನಗುತ್ತಾ ಗೊರೂರು ಹೇಳಿದರು 'ಏನೂ ಇಲ್ಲ. ಈವತ್ತು ಕೊಟ್ಟ ತಿಂಡಿ ಸ್ವಲ್ಪ ಎಣ್ಣೆ ಹೆಚ್ಚಾಗಿತ್ತು. ಅದಕ್ಕೆ ಕೈ ಒರೆಸಿಕೊಳ್ಳಲು ದೊಡ್ಡ ಕವಿತೆಯನ್ನು ಕೇಳಿದೆ' ಎಂದರು. ಈಚೆಗೆ ದೊಡ್ಡ ಕವಿತೆ ಇರಲಿ ಚಿಕ್ಕ ಕವಿತೆಯನ್ನೂ ಬರೆದಿಲ್ಲ. ಕೈ ಒರೆಸಿಕೊಳ್ಳಲು ಟವೆಲ್ ಕೊಡಲೇ ಎಂದರು ಪುತಿನ. ಹೀಗೆ ಆಪ್ತಮಿತ್ರರು ಸರಸದ ಮಾತುಕಥೆಗಳಲ್ಲಿ ತೊಡಗುತ್ತಿದ್ದರು. ಇದು ಗೊರೂರರು ಹೇಳಿದ ಸಂಗತಿ.

❑

೧೪೩. ನಾನು ಹೇಳ್ತಿರೋದು ಗಂಡು ಜೈಲು

ಗೊರೂರು ಅವರ ಜೀವನದ ಹಾಸ್ಯ ಪ್ರಸಂಗಗಳು ಸಾಕಷ್ಟು ಜಗಜ್ಜನಿತವಾಗಿವೆ. ಅವರು ತಮ್ಮ ಕೃತಿಗಳ ಹಿನ್ನೆಲೆಯನ್ನು ಸ್ವಾರಸ್ಯವಾಗಿ ನನ್ನ ಬಳಿ ಹೇಳುತ್ತಿದ್ದರು. ಒಮ್ಮೆ ಬೆಂಗಳೂರು ವಿಜ್ಞಾನ ಕಾಲೇಜಿನಲ್ಲಿ ಅವರ 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಪಾಠ ಮಾಡುತ್ತಿದ್ದಾಗ ಕಾಲೇಜಿನ ಮುಂದೆ (ನೃಪತುಂಗ ರಸ್ತೆಯಲ್ಲಿ) ಬಸ್ಸಿಗಾಗಿ ಕಾಯುತ್ತಿದ್ದ ಅವರನ್ನು ಕಿಟಕಿಯಿಂದ ನೋಡಿದೆ. ಕೂಡಲೆ ನಾನು ಹುಡುಗರಿಗೆ 'ಈ ಪುಸ್ತಕದ ಲೇಖಕರು ಇಲ್ಲೇ ರಸ್ತೆಯಲ್ಲಿದ್ದಾರೆ. ಕರೆಸಲೇ?' ಎಂದೆ. ಎಲ್ಲರೂ 'ಕರೆಸಿ ಸಾರ್' ಎಂದರು. ನಾನು ಅವರಲ್ಲಿಗೆ ಹೋಗಿ 'ಸಾರ್ ಬನ್ನಿ. ನಮ್ಮ ಹುಡುಗರು ನಿಮ್ಮ ಮಾತು ಕೇಳಬೇಕೆಂದು ಆಸೆ ಪಡುತ್ತಿದ್ದಾರೆ. ಈಗ ನಿಮ್ಮ ಪುಸ್ತಕವನ್ನೇ ಪಾಠ ಮಾಡುತ್ತಿದ್ದೇನೆ' ಎಂದೆ. ಆಗ ಮಧ್ಯಾಹ್ನ ಸುಮಾರು ಮೂರು ಗಂಟೆ. 'ಸರಿ' ಎಂದು ಬಂದರು. ಜುಟ್ಟು ನೀವಿಕೊಂಡು ನಗುನಗುತ್ತಾ 'ಏನ್ರಯ್ಯ ಜೈಲು ನೋಡಿದ್ದೀರಾ?' ಎಂದರು. ಎಲ್ಲರೂ ಓಹೋಹೋ ಎಂದು ಕೂಗಿದರು. ಸೆಂಟ್ರಲ್ ಜೈಲು ಕಾಲೇಜಿಗೆ ಹತ್ತಿರ ಇತ್ತು. ಅದರ ಎದುರುಗಡೆ ಮಹಾರಾಣಿ ಕಾಲೇಜು, ನಮ್ಮ ಹುಡುಗರ ವಿಹಾರ ಸ್ಥಳ. ಜೈಲು ಪರಿಚಯವಿಲ್ಲದೆ ಇರುತ್ತದೆಯೇ? 'ಓಹೋ' ಎಂದಾಗ ಅವರು 'ನಾನು ಹೇಳ್ತಿರೋದು ಗಂಡು ಜೈಲು. ಎದುರಿಗಿರುವ ಹೆಣ್ಣು ಜೈಲಲ್ಲ' ಎಂದರು. ಹೀಗೆ ಹುಡುಗರನ್ನು ನಗಿಸುತ್ತ ಸುಮಾರು ಒಂದೂವರೆ ಗಂಟೆ ನಿರರ್ಗಳವಾಗಿ ಮಾತನಾಡಿದರು. ಹುಡುಗರೆಲ್ಲ ಬೆರಗಾದರು. ಜವಾನ ಬಂದು 'ಸಾರ್ ಬಾಗಿಲು ಹಾಕಬೇಕು' ಎಂದಾಗಲೇ ಎಲ್ಲರಿಗೂ ವೇಳೆ ಆದದ್ದು ಗೊತ್ತಾಯಿತು. (ಆಗ ಆ ಕಾವೇರಿ ಕನ್ನಡಕೂಟದ ಸುರೇಶ್ ರಾಮಚಂದ್ರ ಅಲ್ಲಿ ವಿದ್ಯಾರ್ಥಿ ಆಗಿದ್ದರು)

ಹಾಸನದ ಶ್ರವಣಬೆಳಗೊಳದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಿಂದ ಹಿಂದಿರುಗುವಾಗ ಚನ್ನರಾಯಪಟ್ಟಣದ ಬಳಿ ಜನಿವಾರ ಎಂಬ ಸ್ಥಳದಲ್ಲಿ ಬಸ್ ಕಂಡಕ್ಟರ್ 'ಜನಿವಾರದವರು ಇಳೀರಿ' ಎಂದಾಗ ಅದೇ ಊರಿನ ಗೌಡರೊಬ್ಬರು ಇಳಿದರು. ಆಗ ಗೊರೂರು ಅವರು 'ನೀವ್ಯಾಕೆ ಇಳೀತಿದ್ದೀರಿ ಗೌಡರೇ?' ಅಂತ ಹೇಳಿ ನಮ್ಮನ್ನೆಲ್ಲ ನಗಿಸಿದ್ದರು. ಹೀಗೆ ಗೊರೂರು ಜತೆ ಗಂಟೆಗಟ್ಟಲೆ ನಗುನಗುತ್ತಾ ಕಾಲ ಕಳೆದ ಭಾಗ್ಯ ನನ್ನದು.

❑

೧೪೪. ರಾಶಿ–ವೀಸೀ ಸರಸಸಲ್ಲಾಪ

'ನಗೆಡಾಕ್ಟರ್ ಸಾಹಿತಿ' ಎಂದೇ ಪ್ರಸಿದ್ಧರಾಗಿರುವ ಕೊರವಂಜಿಯ ರಾಶಿ ಅವರು ಸಾಹಿತ್ಯವಲಯದಲ್ಲಿ ಎಲ್ಲರಿಗೂ ಪರಿಚಿತರು. ಅನೇಕ ಕಾಯಿಲೆಗಳನ್ನು ನಗಿಸಿ ವಾಸಿ ಮಾಡಿದರೆಂದು ಪ್ರತೀತಿ. ಬೀಚಿ, ನಾಡಿಗೇರ್ ಅವರಿಗೆ ಹೋಲಿಸಿದರೆ ರಾಶಿ ಅವರದು ಸ್ವಲ್ಪ ಗಂಭೀರ ಹಾಸ್ಯ ಎನ್ನಬಹುದು. ಆದರೆ ಇವರದು 'ಜೀವಂತ ಹಾಸ್ಯ'. ಸಹಜವಾದ ಮಾತಿನಲ್ಲಿ ನಗೆ ಚಿಮ್ಮಿಸುವ ಕಲೆ ಅವರದು. ಜಿ.ಪಿ.ರಾಜರತ್ನಂ ಅವರ ಮೂಲಕ ಅವರು ನನಗೆ ಪರಿಚಿತರಾಗಿದ್ದರು. ಮೊದಲ ಬಾರಿಗೆ ಅವರ ಮೆಜೆಸ್ಟಿಕ್ ಷಾಪಿಗೆ (ಅವರ ಆಸ್ಪತ್ರೆ ಆ ಟಾಕೀಸ್ ಬಳಿ ಇತ್ತು) ಹೋದಾಗ ರಾಶಿ ಜಿ.ಪಿ. ಅವರನ್ನು ಕುರಿತು 'ಯಾರಿವರು? ನಿಮ್ಮ ಗಿರಾಕಿಯೋ ನಮ್ಮ ಗಿರಾಕಿಯೋ?' ಎಂದರು. (ಏನಾದರೂ ಕಾಯಿಲೆಗಾಗಿ ಬಂದಿದ್ದಾರೋ ಅಥವಾ ನಿಮ್ಮ ಸ್ನೇಹಿತರೋ ಎಂಬ ಅರ್ಥದಲ್ಲಿ) 'ಇದುವರೆಗೆ ನನ್ನ ಗಿರಾಕಿ; ಇನ್ನು ಮೇಲೆ ನಮ್ಮಿಬ್ಬರ ಗಿರಾಕಿ' ಅಂದರು ಜಿ.ಪಿ.ರಾ. 'ಒಳ್ಳೆ ಗಿರಾಕಿ ತಾನೇ?' ಎಂದು ಕೇಳಿದರು ರಾಶಿ!

ಒಮ್ಮೆ ರಾಶಿ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪುಸ್ತಕದ ಬಿಡುಗಡೆಗಾಗಿ ವಿಸೀ ಅವರನ್ನೂ ಕರೆಸಿದ್ದೆವು. ಪರಿಷತ್ತಿನ ಹೊಸ ಕಟ್ಟಡದ ಮಹಡಿಯ ಮೇಲೆ (ಈಗ ಪುಸ್ತಕ ಭಂಡಾರವಿರುವ ಕಡೆ) ಪುಸ್ತಕದ ಬಿಡುಗಡೆ ಕಾರ್ಯಕ್ರಮ ಇತ್ತು. ವಿಸೀ ಅಧ್ಯಕ್ಷರು, ರಾಶಿ ಉದ್ಘಾಟಕರು. ಆ ವೇಳೆಗೆ ಇಬ್ಬರಿಗೂ ವಯಸ್ಸಾಗಿತ್ತು. ವಿಸೀ ಅವರಿಗೆ ಸ್ವಲ್ಪ ಅನಾರೋಗ್ಯವೂ ಇತ್ತು. ಅವರಿಬ್ಬರಿಗೂ ಮೆಟ್ಟಿಲು ಹತ್ತುವ ಸ್ಥಿತಿ ಇರಲಿಲ್ಲ. ವಿಸೀ ಅವರು 'ಏನ್ರಪ್ಪಾ, ನಾವು ಮೇಲಕ್ಕೆ ಹೋಗಬೇಕಾ? ನಮಗಿನ್ನೂ ಆ ಕಾಲ ಬಂದಿಲ್ಲವಲ್ಲಾ' ಎಂದರು. ನಾನು 'ಮಹಡಿಯ ಮೇಲೆ ಕಾರ್ಯಕ್ರಮ' ಎಂದೆ. ವಿಸೀ ಹಾಗೆಂದಾಗ ರಾಶಿ ಅವರು 'ನನಗೂ ಮೇಲಕ್ಕೆ ಹೋಗೋ ಆಸೆ. ಆದರೆ ಅಲ್ಲಿಗೆ ನಮ್ಮನ್ನು ಯಾಕೋ ಏನೋ ಯಾವುದಕ್ಕೂ ಯಾರೂ ಕರೆಯುತ್ತಿಲ್ಲ' ಅಂದರು. ನಾನು, 'ಅರ್ಥವಾಯ್ತು ಬಿಡಿ ಸಾರ್' ಎಂದೆ. ನಂತರ ಕಾರ್ಯಕ್ರಮವನ್ನು ಕಟ್ಟಡದ ನೆಲ ಮಹಡಿಯಲ್ಲಿ ನಡೆಸಿದೆವು

ರಾಶಿ ಅವರು ಮನೆಯಲ್ಲೂ ಸಹಜವಾಗಿ ಹಾಸ್ಯವಾಗಿ ಮಾತಾಡುತ್ತಿದ್ದರು. ನಮ್ಮಲ್ಲಿ ಇಂದೂ ಅನೇಕ ಹಾಸ್ಯ ಸಾಹಿತಿಗಳು ಅಂತ ಕರೆಸಿಕೊಳ್ಳುತ್ತಿರುವವರು ಭಾಷಣಕ್ಕೆ, ಪತ್ರಿಕೆ ಬರಹಕ್ಕೆ ಅಷ್ಟೇ ಹಾಸ್ಯ ಮೀಸಲು ಮಾಡಿದ್ದಾರೆ. ಒಮ್ಮೆ ಅವರ ಮನೆಗೆ ಹೋದಾಗ ಮನೆಯಲ್ಲಿ ರಾಶಿಯವರಾಕೆ ಅಕ್ಕಿ ಆರಿಸುತ್ತಾ ಅಂಗಳದಲ್ಲಿ ಕುಳಿತಿದ್ದರು. ರಾಶಿ ಬಿಸಿಲು ಕಾಯಿಸುತ್ತಾ ಹೊರಗೆ ನಿಂತಿದ್ದರು. ಆಗ ಅವರಾಕೆ 'ಬನ್ನಿ ಅಂದ್ರೆ ನನ್ ನೆರಳಿಗೆ' (ನಾನಿರುವ ಕಡೆ ನೆರಳು ಇರುವಲ್ಲಿ ಎಂಬರ್ಥದಲ್ಲಿ) ಎಂದರು. ಅದಕ್ಕೆ ರಾಶಿ ಹೇಳಿದರು. 'ನಾನಿರೋದೇ ನಿನ್ನ ನೆರಳಲ್ಲಿ, ಇನ್ನೆಲ್ಲಿಗೆ ಬರಲೇ?'

❑

೧೪೫. ಇವರಿಗೆ ಶಂಖ, ನನಗೆ ಪದ್ಮ

ನಾ ಕಸ್ತೂರಿ ಅಂತೂ 'ಹಾಸ್ಯ ಸಾಮ್ರಾಟ್' ಎಂದರೆ ತಪ್ಪಿಲ್ಲ. ಅವರೊಂದು ನಗೆಚಿಲುಮೆ. ಸದಾ ನಗೆಜಲ ಉಕ್ಕಿಸುವ ಕಾರಂಜಿ. ಅವರೊಡನೆ ನಕ್ಕವರೇ ಭಾಗ್ಯವಂತರು. ಒಮ್ಮೆ ಆನೇಕಲ್ಲಿನಲ್ಲಿ ಸಾಯಿಬಾಬಾ ಭಕ್ತರು ಏರ್ಪಡಿಸಿದ ಸಭೆಗೆ ಅವರು ಬಂದಿದ್ದರು. ಅವರೊಡನೆ ಉಪನ್ಯಾಸಕಾರನಾಗಿ ನಾನೂ ಹೋಗಿದ್ದೆ. ಅವರದು ಅಧ್ಯಕ್ಷತೆ. ಅಲ್ಲಿ ಸ್ವಲ್ಪ ವೀರಾವೇಶದಿಂದ ಮಾತನಾಡಿದ್ದೆ. ಸಾಯಿಭಕ್ತರಾದ ಅವರು ದೈಹಿಕವಾಗಿ ಸಾಕಷ್ಟು ನಿತ್ರಾಣರಾಗಿದ್ದರು. ಆದರೂ ಅವರ ಮಾತುಗಾರಿಕೆಗಳಲ್ಲಿ ಅವರಿನ್ನೂ ನವಯುವಕರಾಗಿದ್ದರು. ಅವರು ಅಧ್ಯಕ್ಷ ಭಾಷಣ ಮಾಡುತ್ತಾ 'ಭಗವಂತ ಮಂದಸ್ಮಿತ ಪ್ರಿಯ. ನೀವೆಲ್ಲಾ ಸಿಲ್ಕ್ ಸ್ಮಿತಾ ಪ್ರಿಯರು. ಏನಾದರೂ ಅವನು ದೇವ ಮಾನವ, ನಾವೆಲ್ಲಾ ದೇಹ ಮಾನವರು...' ಹೀಗೆ ಮಾತನಾಡುತ್ತಾ 'ನಮ್ಮ ಮಿತ್ರರು ಭಯಂಕರ ಭಾಷಣ ಮಾಡಿದ್ದಾರೆ. ನಮ್ಮ ಸ್ವಾಮಿ (ಅವರರ್ಥದಲ್ಲಿ ಸಾಯಿಬಾಬಾ) ಎಲ್ಲರಿಗೂ ಅನುಗ್ರಹಿಸುತ್ತಾನೆ. ಆ ರಾಮಚಂದ್ರನಾದ ಈ ರಾಮಚಂದ್ರ ಈ ಲೋಕದಲ್ಲಿ ಅವತರಿಸಿದಾಗ ಅವನಲ್ಲಿದ್ದ ಶಂಖವನ್ನು ಇವರಿಗೆ ಕೊಟ್ಟು (ಗಟ್ಟಿಯಾಗಿ ನಾನು ಮಾತನಾಡಿದ್ದೆ) ನನಗೆ ಚಕ್ರವನ್ನು ಕೊಟ್ಟಿದ್ದಾನೆ. ಅದೇನಿದ್ದರೂ ಸುದರ್ಶನ ಅಷ್ಟೆ. ಸೊಗಸಾಗಿ ಕಾಣುತ್ತದೆ. ಆದರೆ ದನಿ ಮಾಡದು. ನಿಮಗೆ ಗದೆಯನ್ನು ಕೊಟ್ಟಿದ್ದಾನೆ. ನಿಮ್ಮ ಗದಾಪ್ರಹಾರಕ್ಕೆ ಮುಂಚೆ ನನ್ನ ಭಾಷಣ ಮುಗಿಸುತ್ತೇನೆ' ಎಂದು ತಮ್ಮದೇ ಆದ ನಗೆಶೈಲಿಯಲ್ಲಿ ಹೇಳಿ ಎಲ್ಲರನ್ನೂ ರಂಜಿಸಿದರು.

❑

೧೪೬. ಬೆಂಗಳೂರು ವಿಶ್ವವಿದ್ಯಾನಿಲಯದ ಅಂಕುರಾರ್ಪಣೆ ಪೂಜೆ

ನಾನು ಸೆಂಟ್ರಲ್ ಕಾಲೇಜು ಸಮಾಜಶಾಸ್ತ್ರದ ವಿದ್ಯಾರ್ಥಿಯಾಗಿದ್ದಾಗ ಮೊದಲನೇ ವರ್ಷ ಮೈವಿವಿ ವಿದ್ಯಾರ್ಥಿ, ಎರಡನೇ ವರ್ಷಕ್ಕೆ ಬಂದಾಗ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಾರಂಭವಾಯಿತು. ಆಮೇಲೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಓದುವಾಗ ಅಲ್ಲಿ ಮೂರು ವಿಶ್ವವಿದ್ಯಾಲಯಗಳೂ ಕ್ರೀಡಾಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದಾಗ ಅವುಗಳಲ್ಲಿ ಯಾವುದೇ ವಿವಿ ಗೆದ್ದರೂ ನನ್ನ ವಿಶ್ವವಿದ್ಯಾಲಯವೇ ಗೆದ್ದಿತು ಎನ್ನುತ್ತಿದ್ದೆ. ಮೂರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ನಾನಾಗಿದ್ದೆ ಅಲ್ಲವೇ?!

ಸಮಾಜಶಾಸ್ತ್ರದ ಎರಡನೇ ವರ್ಷದ ವಿದ್ಯಾರ್ಥಿ ಆಗಿದ್ದಾಗ ಒಂದು ದಿನ ಬೆಳಿಗ್ಗೆ ಎಂಟು ಗಂಟೆ ಸುಮಾರಿನಲ್ಲಿ (ಸರಿಯಾಗಿ ನೆನಪಿಲ್ಲ) ಸೆಂಟ್ರಲ್ ಕಾಲೇಜಿನ ಗಡಿಯಾರದ ಕಟ್ಟಡದ ಎದುರು ಪೋಸ್ಟ್ ಬಾಕ್ಸ್ ಮರಕ್ಕೆ ಕಟ್ಟಿದ ಕಡೆ ಕಲ್ಲು ಬೆಂಚಿನ ಬಳಿ ಬೆಂಗಳೂರು ವಿಶ್ವವಿದ್ಯಾನಿಲಯದ ಅಂಕುರಾರ್ಪಣ ಪೂಜೆ ನಡೆಯಿತು. ಕೇವಲ ಕೆಲವೇ ಜನ ಅಧ್ಯಾಪಕರು, ಹಲವೇ ವಿದ್ಯಾರ್ಥಿಗಳು, ಪ್ರಿನ್ಸಿಪಾಲರು, ಒಂದಿಬ್ಬರು ಸಿಬ್ಬಂದಿವರ್ಗದವರು, ಪೂಜಾರಿ ಇದ್ದರು. ನಮ್ಮ ಸಮಾಜಶಾಸ್ತ್ರದ ತರಗತಿಗಳು ಬೆಳಿಗ್ಗೆ ನಡೆಯುತ್ತಿದ್ದುದರಿಂದ ನಾವೆಲ್ಲ ಹಾಜರಿದ್ದೆವು. ನನಗೆ ನೆನಪಿದ್ದಂತೆ ಗೊರೂರು ರಾಮಸ್ವಾಮಿ ಅಯ್ಯಂಗಾರರ ಮಗ ಸೀತಾರಾಂ ಆಗ ನಮಗೆ ಅಧ್ಯಾಪಕರಾಗಿದ್ದರು. ಮುದ್ದಲಿಂಗಣ್ಣ ಚೆನ್ನಬಸಪ್ಪ ಶಿವಪ್ಪ ಮೊದಲಾದ ನಮ್ಮ ವಿಭಾಗದ ಅಧ್ಯಾಪಕರು, ಇತರ ಕೆಲವರು ಹಾಜರಿದ್ದರು. ಪೂಜೆಯಲ್ಲಿ ಆರತಿಯೆತ್ತಿದವರು ಒಬ್ಬ ಹಿಂದೂ, ಒಬ್ಬ ಮುಸ್ಲಿಂ ವಿದ್ಯಾರ್ಥಿನಿಯರು. ಎಲ್ಲರೂ ಆರತಿಯನ್ನು ಕಣ್ಣಿಗೊತ್ತಿಕೊಂಡರು. ಷಡಕ್ಷರ ಸ್ವಾಮಿ ಅವರು ಪ್ರಿನ್ಸಿಪಾಲರಾಗಿದ್ದು ಕಾರ್ಯಕ್ರಮದ ವ್ಯವಸ್ಥೆ ಮಾಡಿದ್ದರು.

❑

೧೪೭. ಪ್ರಿನ್ಸಿಪಾಲರನ್ನು ಶಿಫಾರಸು ಪತ್ರದೊಂದಿಗೆ ಸೀಟು ಕೇಳಿದಾಗ

ನಾವು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಆನರ್ಸ್ ತರಗತಿಗಳ ಪ್ರವೇಶಕ್ಕೆ ಭಾರಿ ಡಿಮ್ಯಾಂಡ್ ಇತ್ತು. ಎಲ್ಲ ಕೋರ್ಸ್‌ಗಳಿಗೆ ಬೇಡಿಕೆ ಇತ್ತು. ಮಂತ್ರಿಗಳಿಂದ, ಗಣ್ಯರಿಂದ ಶಿಫಾರಸು ಪತ್ರ ತರುತ್ತಿದ್ದರು. ಕೆಲವರು ಪ್ರಿನ್ಸಿಪಾಲರ ಅತ್ಯಂತ ಆಪ್ತರಿಂದ ಫೋನ್ ಮಾಡಿಸಿ ತಮ್ಮ ತಮ್ಮ ಮಕ್ಕಳ ಸೀಟಿಗಾಗಿ ಬರುತ್ತಿದ್ದರು. ಪ್ರಿನ್ಸಿಪಾಲರಿಗೆ ಬಹಳ ಕಷ್ಟವಾಯಿತು. ಮಂತ್ರಿಗಳ ಶಿಫಾರಸು ಪತ್ರಗಳನ್ನು, ಆಪ್ತರ ಫೋನುಗಳನ್ನು ಕಡೆಗಾಣಿಸುವುದು ದುಸ್ತರವಾಯಿತು. ಬಂದ ಪೋಷಕರಿಗೆ 'ಸೀಟು ಕೊಡಲಾಗುವುದಿಲ್ಲ, ನಿಮ್ಮ ಮಕ್ಕಳಿಗೆ ಅರ್ಜಿ ಹಾಕಿರುವ ಉಳಿದ ವಿದ್ಯಾರ್ಥಿಗಳಿಗಿಂತ ಕಡಿಮೆ ಅಂಕ ಬಂದಿದೆ, ಮೆರಿಟ್ ಒಂದೇ ಮಾನದಂಡ' ಎಂದು ನಿಷ್ಠುರವಾಗಿ ಹೇಳಬೇಕಾಗಿ ಬಂತು. ಅರ್ಜಿದಾರ ಮಕ್ಕಳ ಪರವಾಗಿ ಬಂದವರಲ್ಲಿ ಅನೇಕರು ವೃದ್ಧರಾಗಿದ್ದರು, ಬಂಧುಗಳಾಗಿದ್ದರು, ಗಣ್ಯರಾಗಿದ್ದರು, ಬಾಲ್ಯಮಿತ್ರರಾಗಿದ್ದರು, ಕುಟುಂಬದವರಿಂದ ಬಲವಾಗಿ ಒತ್ತಡ ಬಂದಿತ್ತು. ಹೀಗೆ ನಾನಾ ರೀತಿ ಜನರಿದ್ದರು. ನೇರ ಉತ್ತರ ನೀಡುವುದು, ಸೀಟಿಲ್ಲ ಎನ್ನುವುದಕ್ಕೆ ಬಲು ಕಷ್ಟವಾಯಿತು. ಆಗ ಅವರು ಮಾಡಿದ ತಂತ್ರವೇನು ಗೊತ್ತೇ?

ಸೀಟಿಗಾಗಿ ಬಂದ ಅರ್ಜಿಗಳನ್ನೆಲ್ಲ ಆಯಾ ವಿಷಯಾನುಸಾರ ಅವರವರ ಅಂಕಪಟ್ಟಿಗಳನ್ನು ಶೇಕಡಾವಾರು ಅಂಕಗಳಿಗೆ ಅನುಸಾರವಾಗಿ ಜೋಡಿಸಿದರು ದೊಡ್ಡದೊಂದು ಟೇಬಲ್ಲಿನ ಮೇಲೆ. ಬಂದವರಿಗೆ 'ನೋಡಿ, ನಿಮ್ಮ ಹುಡುಗ ತೆಗೆದುಕೊಳ್ಳುವ ವಿಷಯದಲ್ಲಿ ಇಷ್ಟು ಅರ್ಜಿಗಳಿವೆ ಇದರಲ್ಲಿ ನಿಮ್ಮ ಹುಡುಗನದು ಇಲ್ಲಿದೆ. ಅಂಕಗಳಿಗನುಸಾರವಾಗಿ ಅವನದು ೨೨೦ನೇ ಅರ್ಜಿ. ಉಳಿದವರನ್ನೆಲ್ಲ ಬಿಟ್ಟು ನಿಮ್ಮ ಹುಡುಗನಿಗೆ ನಾನು ಸೀಟು ಕೊಡುತ್ತೇನೆ. ಉಳಿದ ಹುಡುಗರ ತಾಯಿ ತಂದೆಯರನ್ನು ಕರೆಸುತ್ತೇನೆ, ಅವರು ಒಪ್ಪಿದರೆ ನನ್ನ ಅಭ್ಯಂತರವಿಲ್ಲ. ನನ್ನ ಮಗನಿಗಿಂತ ಕಡಿಮೆ ಅಂಕ ತೆಗೆದುಕೊಂಡ ಇವನಿಗೆ ಸೀಟು ಕೊಡಿ ನಮ್ಮ ಮಗನಿಗೆ ಬೇಡ ಎನ್ನಬೇಕು ಅವರು. ಆಗಬಹುದೇ?' ಎಂದು ಕೇಳುತ್ತಿದ್ದರು. ಜೋಡಿಸಿದ ಅರ್ಜಿಗಳನ್ನು ತೋರಿಸುತ್ತಿದ್ದರು. ಬಂದವರು ಮಾತಾಡದೆ ತೆರಳುತ್ತಿದ್ದರು.

❑

೧೪೮. ವಿದ್ಯಾರ್ಥಿಗಳ ಆಯ್ಕೆಗೆ ರಾಜರತ್ನಂ ಅವರ ಮಾನದಂಡ ಯಾವುದು?

ನಾನು ಸಮಾಜಶಾಸ್ತ್ರದ ವಿದ್ಯಾರ್ಥಿಯಾಗಿದ್ದಾಗ ರಾಜರತ್ನಂ ಅಂತರಕಾಲೇಜ್ ಕನ್ನಡ ಚರ್ಚಾಸ್ಪರ್ಧೆಗಳಿಗೆ ಕಾಲೇಜಿನ ಪರ ಕಳಿಸಲು ಆಯ್ಕೆ ಸ್ಪರ್ಧೆ ನಡೆಸುತ್ತಿದ್ದರು. ಅದರಲ್ಲಿ ನಾನೂ ಆಯ್ಕೆ ಆಗಿದ್ದೆ. ಹಲವಾರು ಬಾರಿ ಇತರ ಕಾಲೇಜುಗಳ ಅಂತರಕಾಲೇಜು ಕನ್ನಡಸ್ಪರ್ಧೆಗಳಿಗೆ ಭಾಗವಹಿಸಿದ್ದಾಗ ಕನ್ನಡ ವಿಭಾಗದ ವಿದ್ಯಾರ್ಥಿಗಳು ಪ್ರಿನ್ಸಿಪಾಲರ ಬಳಿ ದೂರಿತ್ತರು. 'ರಾಜರತ್ನಂ ಅವರು ಇತರ ಕನ್ನಡೇತರ ವಿಭಾಗದ ವಿದ್ಯಾರ್ಥಿಗಳನ್ನು ಕನ್ನಡ ಚರ್ಚಾಸ್ಪರ್ಧೆಗಳಿಗೆ ಕಳಿಸುತ್ತಾರೆ. ಕನ್ನಡ ಚರ್ಚಾಸ್ಪರ್ಧೆಗಳಿಗೆ ಕನ್ನಡ ವಿಭಾಗದ ವಿದ್ಯಾರ್ಥಿಗಳನ್ನು ಕಳಿಸೋಲ್ಲ. ಇದು ಅನ್ಯಾಯ' ಎಂದು ದೂರಿದರು.

ಪ್ರಿನ್ಸಿಪಾಲರು ರಾಜರತ್ನಂ ಅವರನ್ನು ಈ ಬಗ್ಗೆ ಕೇಳಿದರು. 'ವಿದ್ಯಾರ್ಥಿಗಳು ಹೀಗೆ ಹೇಳುತ್ತಾರೆ, ಏನಂತೀರಿ?' ಎಂದರು. ಆಗ ರಾಜರತ್ನಂ 'ಕನ್ನಡ ಚರ್ಚಾಸ್ಪರ್ಧೆಗೆ ಯಾವ ವಿಭಾಗದ ವಿದ್ಯಾರ್ಥಿ ಎಂಬುದು ಮುಖ್ಯವಲ್ಲ. ಕನ್ನಡದಲ್ಲಿ ಮಾತನಾಡಲು ಅವನಿಗೆ ಉಳಿದ ವಿದ್ಯಾರ್ಥಿಗಳಿಗಿಂತ ವಿಷಯಸಂಗ್ರಹ, ನಿರೂಪಣಾ ವೈಖರಿ, ಭಾಷೆಯ ಹಿಡಿತ, ಶೈಲಿ ಎಷ್ಟರ ಮಟ್ಟಿಗೆ ಇದೆ ಎಂಬುದು ಮುಖ್ಯ. ಇಂಥ ವಿಭಾಗದ ವಿದ್ಯಾರ್ಥಿ ಅಂತ ಆಯ್ಕೆ ಮಾಡಿ ಕಳಿಸಿದರೆ ಕಾಲೇಜಿಗೆ ಬಹುಮಾನ ಸಿಗುತ್ತದೆಯೇ? ಈಗ ಆಯ್ಕೆಯಾಗಿ ಹೋದ ವಿದ್ಯಾರ್ಥಿಗಳು ಕನ್ನಡೇತರ ವಿಭಾಗದವರಾದರೂ ಕಾಲೇಜಿಗೆ ಬಹುಮಾನ ತಂದಿದ್ದಾರೆ' ಎಂದರು. ಪ್ರಿನ್ಸಿಪಾಲರು 'ನಿಜ, ನೀವು ಹೇಳುವುದು ಸರಿ. ವಿದ್ಯಾರ್ಥಿಗಳ ಯೋಗ್ಯತೆಯಷ್ಟೇ ಮುಖ್ಯ ಮಾನದಂಡ. ನಾನು ವಿದ್ಯಾರ್ಥಿಗಳಿಗೆ ಹೇಳುತ್ತೇನೆ' ಎಂದರು. ಪ್ರಿನ್ಸಿಪಾಲರು ದೂರಿತ್ತ ವಿದ್ಯಾರ್ಥಿಗಳಿಗೆ ಏನೆಂದು ಉತ್ತರಿಸಿದರು ಎಂಬುದನ್ನು ನಾನಿಲ್ಲಿ ಹೇಳಬೇಕಾಗಿಲ್ಲ.

❑

೧೪೯. ಶೌಚಾಲಯ ಸಮಸ್ಯೆ ಪರಿಹಾರ

ನಾನು ಸೆಂಟ್ರಲ್ ಕಾಲೇಜಿನಲ್ಲಿ ಸಮಾಜಶಾಸ್ತ್ರದ ವಿದ್ಯಾರ್ಥಿ ಆಗಿದ್ದೆ. ಆಗ ಪ್ರಿನ್ಸಿಪಾಲರಾಗಿದ್ದವರು ಷಡಕ್ಷರಸ್ವಾಮಿ. ಅವರು ಉಳಿದ ಪ್ರಿನ್ಸಿಪಾಲರಂತಲ್ಲ ಎಂಬುದು ಹಲವಾರು ಸಂದರ್ಭಗಳಲ್ಲಿ ನಮಗೆ, ವಿದ್ಯಾರ್ಥಿಗಳಿಗೆ ಅನುಭವಕ್ಕೆ ಬಂದು ಅವರನ್ನು ಪ್ರೀತಿಯಿಂದ, ಅಷ್ಟೇ ಗೌರವದಿಂದಕಾಣುತ್ತಿದ್ದೆವು. ಒಂದೆರಡು ಸಂಗತಿಗಳು ಈಗ ಸುಮಾರು ೫೦ ವರ್ಷಗಳನಂತರ ನೆನಪಾಗುತ್ತಿವೆ.

ನಾವು ವಿದ್ಯಾರ್ಥಿಗಳಾಗಿದ್ದಾಗ ಗಣಿತಭವನದ ಒಂದು ಭಾಗದಲ್ಲಿ ಹೊರಗಡೆಗೆ ಶೌಚಾಲಯವೊಂದಿತ್ತು. ಅದು ವಿದ್ಯಾರ್ಥಿಗಳಿಗಾಗಿ ಇತ್ತು. ಅದು ಕೆಟ್ಟು ಉಪಯೋಗಿಸಲಾಗದೆ ಹಲವು ದಿನಗಳಾದರೂ ರಿಪೇರಿ ಆಗಿರಲಿಲ್ಲ. ಅದನ್ನು ಹೆಚ್ಚಾಗಿ ಬಳಸುತ್ತಿದ್ದವರು ಗಣಿತಭವನದ ಕಟ್ಟಡದಲ್ಲಿ ನಡೆಯುತ್ತಿದ್ದ ಸಮಾಜಶಾಸ್ತ್ರದ ವಿದ್ಯಾರ್ಥಿಗಳು. ನಾವೆಲ್ಲಾ ಪ್ರಿನ್ಸಿಪಾಲರ ಬಳಿ ತೊಂದರೆಯನ್ನು ಹೇಳಿಕೊಂಡಾಗ ಆದಷ್ಟು ಬೇಗನೆ ರಿಪೇರಿ ಮಾಡಿಸುತ್ತೇನೆ ಎಂದಾಗ ಒಬ್ಬ ವಿದ್ಯಾರ್ಥಿ 'ಅಲ್ಲಿವರೆಗೆ ಮೂತ್ರವಿಸರ್ಜನೆಯನ್ನು ತಡೆಹಿಡಿದುಕೊಳ್ಳಲು ಸಾಧ್ಯವೇ?' ಎಂದ. ಅದನ್ನು ಕೇಳಿ ಎಲ್ಲರಿಗೂ ನಗು ಬಂತು. ಆಗ ಪ್ರಿನ್ಸಿಪಾಲರು, 'ನೀವು ಒಂದು ಕೆಲಸ ಮಾಡಿ. ನನ್ನ ಕೋಣೆಯ ಶೌಚಾಲಯವನ್ನೇ ಧಾರಾಳವಾಗಿ ಬಳಸಿಕೊಳ್ಳಿ' ಎಂದರು. ಶೌಚಾಲಯ ರಿಪೇರಿ ಆಗುವವರೆಗೆ ಯಾವಾಗ ಎಂದರೆ ಆವಾಗ ಸಮಾಜಶಾಸ್ತ್ರದ ವಿದ್ಯಾರ್ಥಿಗಳು ಪ್ರಿನ್ಸಿಪಾಲರ ಕೊಠಡಿಗೆ ಧಾಳಿಯಿಡುತ್ತಿದ್ದೆವು. ಪ್ರಿನ್ಸಿಪಾಲರ ಕೊಠಡಿಗೆ ಸದಾ ನಾವು ಮಾತ್ರ ಹೋಗಬಹುದು ಎಂದಾಯಿತು. ಉಳಿದವರಿಗೆ ಎಡಬಿಡದೆ ಸಮಾಜಶಾಸ್ತ್ರದ ವಿದ್ಯಾರ್ಥಿಗಳು ನೇರವಾಗಿ ಪದೇ ಪದೇ ಪ್ರಿನ್ಸಿಪಾಲರ ಕೋಣೆಗೆ ನುಗ್ಗಿ ಬರುತ್ತಾರೆ ಏಕೆ ಎಂದು ತಿಳಿಯುತ್ತಿರಲಿಲ್ಲ. ಇದು ಪ್ರಿನ್ಸಿಪಾಲರೊಡನೆ ಮಾತನಾಡುತ್ತಿದ್ದ ಅಧ್ಯಾಪಕರಿಗೆಲ್ಲ ಅಚ್ಚರಿ ತಂದಿತ್ತು. ಬೇರೆ ಯಾರಿಗೂ ಈ ವಿಷಯ ಹೇಳಬೇಡಿ ಎಂದರು. ಶೌಚಾಲಯ ರಿಪೇರಿ ಆಗುವವರೆಗೆ ಪ್ರಿನ್ಸಿಪಾಲರು ಸೂಚಿಸಿದ ತಾತ್ಕಾಲಿಕ ಪರಿಹಾರ ಮಾರ್ಗವಿದು.

❑


೧೫೦. ಆಪ್ತ ಮಿತ್ರರ ಗಾಢಸ್ನೇಹ ಹೇಗಿರುತ್ತೆ?

ಸೆಂಟ್ರಲ್ ಕಾಲೇಜಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಾರಂಭವಾದ ದಿನಗಳಲ್ಲಿ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಕನ್ನಡ ಆನರ್ಸ್ ತರಗತಿಯಲ್ಲಿದ್ದರು. ಇತರ ವಿಭಾಗಗಳಲ್ಲೂ ಕನ್ನಡದಲ್ಲೂ ಇದ್ದಂತೆ ಪ್ರತಿಭಾವಂತರಾದ ವಿದ್ಯಾರ್ಥಿಗಳಿದ್ದರು. ಎಲ್ಲರೂ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ, ಅರ್ಥಾತ್ ಜಿ.ಪಿ.ರಾಜರತ್ನಂ ಅವರ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಕಟ್ಟಾಳುಗಳು. ಸುಮತೀಂದ್ರ ನಾಡಿಗ್, ಎಲ್.ಜಿ.ಸುಮಿತ್ರ, ನಿಸಾರ್ ಅಹಮದ್, ಶ್ರೀನಿವಾಸರಾಜು, ರಾಘವೇಂದ್ರರಾವ್, ಶೂದ್ರ ಶ್ರೀನಿವಾಸ್, ಎ.ಪಿ.ಆರ್. ವಿಜಯಾ ಎನ್., ಬರಗೂರು ರಾಮಚಂದ್ರಪ್ಪ, ದಲಿತಕವಿ ಸಿದ್ಧಲಿಂಗಯ್ಯ ಹೀಗೆ ಹತ್ತಾರು ಮಂದಿ ಆ ಕನ್ನಡ ಪಡೆಯ ವಿದ್ಯಾರ್ಥಿಗಳು. ಆಗ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಆನರ್ಸ್ ತರಗತಿಗಳು ನಡೆಯುತ್ತಿದ್ದವು. ಆಮೇಲೆ ಜ್ಞಾನಭಾರತಿಗೆ ಸಾಗಿತು. ರಾಘವೇಂದ್ರರಾವ್, ಶ್ರೀನಿವಾಸರಾವ್ ಇಬ್ಬರೂ ಜಿ.ಪಿ.ರಾಜರತ್ನಂ ಅವರ ಪರಮಭಕ್ತರು. ಇವರಿಬ್ಬರೂ 'ಅಂಕಣ' ಎಂಬ ಸಾಹಿತ್ಯ ಪತ್ರಿಕೆ ನಡೆಸಿದವರು. ಆ ವೇಳೆಗೆ ನಾನು ಕನ್ನಡ ಅಧ್ಯಾಪಕನಾಗಿ ಸೈನ್ಸ್ ಕಾಲೇಜಿನಲ್ಲಿದ್ದೆ. ಅದಕ್ಕೆ ಚಂದಾದಾರನಾಗುತ್ತೇನೆ ಎಂದಾಗ ಸಂತೋಷಪಟ್ಟರು, ನೀವು ಮೇಷ್ಟ್ರು. ನಾವು ವಿದ್ಯಾರ್ಥಿಗಳು ಚಂದಾದಾರರಾಗುತ್ತೀರಾ ಎಂದು. 'ಸಾಹಿತ್ಯ ಪ್ರತಿಭೆಯಲ್ಲಿ ನೀವೇ ಅಧ್ಯಾಪಕರು, ನಾನೇ ವಿದ್ಯಾರ್ಥಿ. ಅದಕ್ಕೇ ಚಂದಾದಾರನಾಗುತ್ತಿದ್ದೇನೆ' ಎಂದೆ.

ಒಮ್ಮೆ ಜಯನಗರದಲ್ಲಿ ನಮ್ಮ ಮನೆಯ ಬಳಿಯಿರುವ ಬಿ.ಇ.ಎಸ್. ಕಾಲೇಜಿನ ರಸ್ತೆಯಲ್ಲಿ ಸ್ಕೂಟರ್‌ನಲ್ಲಿ ಶ್ರೀನಿವಾಸರಾಜು ಅವರು ತಮ್ಮ ಪತ್ನಿಯೊಂದಿಗೆ ಕುಟುಂಬದ ಕಾರ್ಯಕ್ರಮವೊಂದಕ್ಕೆ ಬರುತ್ತಿದ್ದರು. ಎದುರಿಗೆ ರಾಘವೇಂದ್ರರಾವ್ ಸಿಕ್ಕಿದರು. ಕೂಡಲೇ ಸ್ಕೂಟರ್ ನಿಲ್ಲಿಸಿ, 'ನೀನು ಬಸ್ಸಲ್ಲಿ ... ಅಲ್ಲಿಗೆ ಹೋಗು. ನಾನು ಆಮೇಲೆ ಬರ್ತೀನಿ' ಎಂದು ಅವರ ಪತ್ನಿಯನ್ನು ಕೆಳಗಿಳಿಸಿ ರಾಘವೇಂದ್ರರಾವ್ ಅವರನ್ನು ಕೂಡಿಸಿಕೊಂಡು ಅಂಕಣ ಪತ್ರಿಕೆಯ ಕೆಲಸಕ್ಕೆ ಮುಂದೆ ಹೋದರು. ಹೀಗಿತ್ತು ಅವರಿಬ್ಬರ ಸ್ನೇಹ.

❑

ಲೇಖಕರ ಪರಿಚಯ



ಪ್ರೊ. ಜಿ. ಅಶ್ವತ್ಥನಾರಾಯಣ

ನಿವೃತ್ತ ಕನ್ನಡ ಪ್ರಾಧ್ಯಾಪಕರು

ಹೆಸರು : ಜಿ.ಅಶ್ವತ್ಥನಾರಾಯಣ

ತಾಯಿ-ತಂದೆ : ಹೆಚ್.ಗುಂಡಪ್ಪ-ಜಿ.ಜಾನಕಮ್ಮ

ಜನ್ಮದಿನ : ೧೨-೫-೧೯೩೮

ಜನ್ಮಸ್ಥಳ : ಬೆಂಗಳೂರು

ಮನೆ ವಿಳಾಸ : ನಂ.೯೫, ೩೮ನೇ 'ಬಿ' ಕ್ರಾಸ್, ೧೬ನೇ ಮುಖ್ಯರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-೫೬೦ ೦೪೧. ದೂರವಾಣಿ-೦೮೦-೨೬೬೩೭೭೮೩

ಶಿಕ್ಷಣ : ಎಂ.ಎ. ಕನ್ನಡ (ಎಂ.ಎ. ಸಮಾಜಶಾಸ್ತ್ರ, ಶಾಸನಶಾಸ್ತ್ರ ಡಿಪ್ಲೊಮಾ, ಮೆಕ್ಯಾನಿಕಲ್ ಇಂಜನಿಯರಿಂಗ್ ಡಿಪ್ಲೊಮಾ)

ಉದ್ಯೋಗ : ಸರ್ಕಾರಿ ಕಾಲೇಜುಶಿಕ್ಷಣ ಇಲಾಖೆಯ ವಿವಿಧ ಡಿಗ್ರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ ಹಾಗೂ ಪ್ರಾಧ್ಯಾಪಕನಾಗಿ ಕನ್ನಡಬೋಧನಾ ಸೇವೆ. ೧೯೯೬ರಲ್ಲಿ ನಿವೃತ್ತಿ.

ಸಂಸ್ಥೆಗಳಲ್ಲಿ ಸೇವೆ :

೧. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಂಶ್ರೀ ಮುಗಳಿ ಅವರ ಅವಧಿಯಲ್ಲಿ ಡಿಗ್ರಿ ಪಠ್ಯಗಳ ಭಾಷಾತಜ್ಞರಾಗಿ ಪರಿಶೀಲಕ.

೨. ಪಿಯುಸಿ ಪಠ್ಯ ಪುಸ್ತಕ ಮಂಡಳಿ, ಕನ್ನಡ ಸಾಹಿತ್ಯಪರಿಷತ್ತಿನ ಪಠ್ಯಪುಸ್ತಕ ಸಮಿತಿ, ಮಹಾವೀರಸಂಸ್ಥೆ ಮುಂತಾದ ಸಮಿತಿಗಳ ಪಠ್ಯರಚನಾ ಸಮಿತಿ ಸದಸ್ಯ ಮತ್ತು ಪಠ್ಯಗಳ ರಚನೆ.

೩. ಕನ್ನಡ ಸಂಸ್ಕೃತಿ ಇಲಾಖೆಯ ಸಮಗ್ರ ದಾಸಸಾಹಿತ್ಯದ ೫೦ ಸಂಪುಟಗಳ ಪರಿಶೀಲನೆ ಮತ್ತು ಮುದ್ರಣ ಕಾರ್ಯದ ಸಂಚಾಲಕ ಸಮಿತಿ ಸದಸ್ಯ.

೪. ಗಮಕಕಲಾ ಪರಿಷತ್ತಿನ ಪಠ್ಯಯೋಜನೆ ಮತ್ತು ತರಗತಿಗಳ ವ್ಯವಸ್ಥಾಪಕ ಮತ್ತು ಸಂಘಟಕ.

೫. ಕನ್ನಡ ಸಂಸ್ಕೃತಿ ಇಲಾಖೆಯ ಆಡಳಿತ ಕನ್ನಡಶಿಬಿರಗಳ ನಿರ್ದೇಶಕ.

೬. ಐ.ಎ.ಎಸ್., ಕೆ.ಎ.ಎಸ್. ತರಗತಿಗಳಿಗೆ ಕನ್ನಡ ಮಾರ್ಗದರ್ಶಕ.

೭. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ. ದೇವುಡು ಪ್ರತಿಷ್ಠಾನ, ಕರ್ನಾಟಕ ಗಾನಕಲಾ ಪರಿಷತ್ತು. ಗಮಕಕಲಾ ಪರಿಷತ್ತಿನ ಸ್ಥಾಪಕ ಸದಸ್ಯ.

೮. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ೬ ಜನರಿಗೆ ಎಂ.ಫಿಲ್ ಪದವಿ ಶಿಕ್ಷಣಕ್ಕೆ ಮಾರ್ಗದರ್ಶನ.

೯. ನಾಡಿನಾದ್ಯಂತ ಉಪನ್ಯಾಸಗಳು. ಅ.ನ.ಕೃ–ರಾಮಮೂರ್ತಿ ಪ್ರಾರಂಭಿಸಿದ ಕನ್ನಡ ಚಳುವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬ.

೧೦. **ಪ್ರಶಸ್ತಿಗಳು :**

೧. ಕುವೆಂಪು ಶ್ರೀ ಪ್ರಶಸ್ತಿ (೨೦೦೪)

೨. ಗುರು ಗೋವಿಂದ ವಿಠಲ ದಾಸ ಸಾಹಿತ್ಯ ಪ್ರಶಸ್ತಿ (೨೦೦೭)

೩. ಕನ್ನಡ ಶ್ರೀ ಪ್ರಶಸ್ತಿ (೨೦೦೮)

೪. ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ (೨೦೧೧)

೫. ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ (೨೦೧೨)

೬. ಸುಮಾ ವಸಂತ ಸಾಹಿತ್ಯ ಪ್ರಶಸ್ತಿ (೨೦೧೨)

೭. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೨೦೧೩)

೮. ಟಿ.ವಿ. ವೆಂಕಟಾಚಲ ಶಾಸ್ತ್ರೀ ವಿದ್ವತ್ ಪ್ರಶಸ್ತಿ ೨೦೦೩ ಕನ್ನಡ ಸಾಹಿತ್ಯ ಪರಿಷತ್ತು

೯. ವಿನಯ ಪ್ರಶಸ್ತಿ, ವಿನಯ ಫೌಂಡೇಷನ್ (೨೦೧೭)

೧೦. ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಬಿ.ಬಿ.ಎಂ.ಪಿ. (೨೦೨೫)

೧೧. ಪರಿಮಳ ಪ್ರಶಸ್ತಿ – ಪರಿಮಳ ಬಳಗ (೨೦೨೫)

ಸನ್ಮಾನ: ನಾಡಿನ ನಾನಾ ಸಂಸ್ಥೆಗಳು ಸಾಹಿತ್ಯಸೇವೆಗಾಗಿ ಗೌರವಿಸಿವೆ.

ಗ್ರಂಥಗಳ ರಚನೆ ಮತ್ತು ಗ್ರಂಥ ಸಂಪಾದನೆ :

ಜೈನ ಸಾಹಿತ್ಯ : ರತ್ನಕರಂಡಕ ಶ್ರಾವಕಾಚಾರ, ರತ್ನಾಕರನ ಮೂರು ಶತಕಗಳು, ಉತ್ತಮ ಕ್ಷಮಾ, ಜಾಗರೂಕರಾಗಿ ಜಾಣರಾಗಿ.

ಗ್ರಂಥ ಸಂಪಾದನೆ : ಅನುಭವಾಮೃತ ಟೀಕೆ, ಕುಮಾರವ್ಯಾಸನ ಭೀಷ್ಮ ಪರ್ವ, ಸೋಮೇಶ್ವರ ಶತಕದ ಟೀಕೆ, ಕಬ್ಬಿಗರ ಕಾವ ಟೀಕೆ, ವಿದ್ಯಾರ್ಥಿಗಳಿಗಾಗಿ ಡಿ.ವಿ.ಜಿ. ಕಗ್ಗದ ಪದ್ಯಗಳು, ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥಚಂದ್ರಿಕೆ, ವಿ.ಸೀ. ಸಮಗ್ರ ಜೀವನಚರಿತ್ರೆ ಅನುವಾದ ಸಂಪುಟ (೨ ಭಾಗಗಳು), ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣಗಳು, ಸೌಂದರ್ಯ ಲಹರೀದೀಪಿಕೆ

ದಾಸ ಸಾಹಿತ್ಯ : ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು, ಪ್ರಸನ್ನ ಶ್ರೀನಿವಾಸ ದಾಸರ ಸಮಗ್ರ ಕೃತಿಗಳು, ಕೆಲ್ಲಂಗೆರೆ ತಿಮ್ಮಪ್ಪದಾಸರ ಕೀರ್ತನೆಗಳು, ಚಿದಂಬರಯ್ಯನವರ ಭಕ್ತಿ ಗೀತೆಗಳು, ಹರಿದಾಸರ ಸಮಾಜಮುಖಿ ಕೀರ್ತನೆಗಳು ಭಾಗ–೪, ದಾಸ ಸಾಹಿತ್ಯ ಸೌರಭ, ಹರಿದಾಸರು ಹಾಡಿದ ಶ್ರೀರಾಮ ಕೀರ್ತನೆಗಳು.

ವಚನಸಾಹಿತ್ಯ : ದೇವರದಾಸಿಮಯ್ಯನ ವಚನಗಳು, ಫ.ಗು.ಹಳಕಟ್ಟಿ

ಸಮಗ್ರ ಗ್ರಂಥ ಉಪನ್ಯಾಸ ಮಾಲಿಕೆ : ಆದಿ ಪುರಾಣ, ಪಂಪಭಾರತ, ರಾಮಾಯಣ ದರ್ಶನ, ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತ, ಸೋಮೇಶ್ವರ ಶತಕ ಇತ್ಯಾದಿ (ಸತತ ೧೦ ವರ್ಷಗಳ ಕಾಲ),

ಭಾಷೆ–ಕಲಿಕೆ : ಸುಲಭ ಕನ್ನಡ ಲಿಪಿಕಲಿಕೆ, ಎಲ್ಲರಿಗೂ ಬೇಕಾದ ಗಾದೆಗಳು, ವ್ಯಾವಹಾರಿಕ ಕನ್ನಡ (ಕ.ಸಾಪ.ಪತ್ರ)

ಶಬ್ದಕೋಶ : ಭಗವದ್ಗೀತಾ ಶಬ್ದಕೋಶ, ಬುಕ್ಕಾಂಬುಧಿ ಪ್ರಾದೇಶಿಕ ಶಬ್ದಕೋಶ.

ಸ್ವತಂತ್ರ ಗ್ರಂಥ ರಚನೆ : ಪರಿಷತ್ತು–೧೦೦, ಕನ್ನಡ ಸಾಹಿತ್ಯ ಮತ್ತು ಕರಡು ತಿದ್ದುವಿಕೆ, ಕನ್ನಡ ಸಾಹಿತ್ಯ ದಿಗ್ಗಜರು, ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು, ಬಿ.ಎಂ.ಶ್ರೀ. ಪರಿಚಯ, ದೇವುಡು ನರಸಿಂಹ ಶಾಸ್ತ್ರೀ, ಫ.ಗು.ಹಳಕಟ್ಟಿ, ಹು.ಮ.ರಾಮಾರಾಧ್ಯ, ಉತ್ತಮಕ್ಷಮಾ, ವ್ಯಾವಹಾರಿಕ

ಕನ್ನಡ, ಹೊಸಕೆರೆ ಚಿದಂಬರಯ್ಯನವರು, ಇತ್ಯಾದಿ. ನನಗೆ ಸವಿನೆನಪು–ನಿಮಗೆ ರಸಪ್ರಸಂಗಗಳು, ಗಿಡ ಮರ ಬಳ್ಳಿಗಳ ನೀತಿ ಕಥೆಗಳು.

ಸಹ ಸಂಪಾದಕತ್ವ : ಆರ್.ವಿ.ಕಾಲೇಜಿನಿಂದ ಪ್ರಕಾಶಿತವಾದ ಸಿಂಚನ ಗ್ರಂಥಮಾಲೆಯಡಿ ಪಾಂಡುಗ್ರಂಥಮಾಲೆಯ ೩೨ ಗ್ರಂಥಗಳು, ರಾಸದರ್ಶನ, ನಿಟ್ಟೂರು ಶ್ರೀನಿವಾಸರಾಯರ ಆತ್ಮಕಥೆ, ಇತ್ಯಾದಿ.



ಅ.ನ.ಕೃ., ಬೀಚಿ, ನಾಡಿಗೇರ್, ತ.ರಾ.ಸು., ದೇವುಡು, ವಿ.ಸೀ, ಹಾ.ಮಾ.ನಾಯಕ್, ಮಾಸ್ತಿ ಮೊದಲಾದವರ ಜೊತೆ ಅನಾಜಿ ಅವರಿಗಿದ್ದ ಒಡನಾಟ ಆಶ್ಚರ್ಯದಾಯಕ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಾಲಯದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಪ್ರೊ. ಅನಾಜಿಯವರು ತಮ್ಮ ಬದುಕಲ್ಲಿ ಸರಳತೆಯನ್ನು, ಶಿಸ್ತನ್ನು ಮೂಡಿಸಿಕೊಳ್ಳಲು ಯಾರೆಲ್ಲ ಕಾರಣರಾದರು ಎಂಬುದನ್ನು ಇಲ್ಲಿರುವ ಪ್ರಸಂಗಗಳು ತಿಳಿಸುತ್ತವೆ.

ಸಿದ್ಧವನಹಳ್ಳಿ ಕೃಷ್ಣಶರ್ಮರ 'ಕುಲದೀಪಕರು', ವಿ.ಸೀ. ಅವರ 'ಮಹನೀಯರು', ರಾವ್‌ಬಹದ್ದೂರ್ ಅವರ 'ಮರೆಯದ ನೆನಹುಗಳು', ಗೊರೂರರ 'ನಮ್ಮ ಊರಿನ ರಸಿಕರು', ಟಿ.ವಿ.ಯವರ 'ಉದಾರಚರಿತರು, ಉದಾತ್ತ ಪ್ರಸಂಗಗಳು' ಮೊದಲಾದ ಕೃತಿಗಳನ್ನು ಓದಿ ಮೆಚ್ಚಿ ಖುಷಿ ಪಟ್ಟಿದ್ದ ನನಗೆ ಅನಾಜಿ ಅವರ ಈ ಕೃತಿ ಅತ್ಯಂತ ಭಿನ್ನವಾಗಿ ತೋರಿತು. ಇದಕ್ಕೆ ಕಾರಣ ಇದು ಅವರ ಆತ್ಮ ಕಥನದ ಒಂದು ಭಾಗ. ನಿರೂಪಣೆಯಂತೂ ಮನವನ್ನು ತಟ್ಟುತ್ತದೆ. ಓದುತ್ತಾ ಹೋದಂತೆ ನಮಗೆ ಗೊತ್ತಿಲ್ಲದಂತೆಯೇ ನಾವು ಬದಲಾವಣೆ ಆಗುವ ಅಪಾಯವಿದೆ.

ಅ.ನ.ಕೃ., ಮಾಸ್ತಿ, ಕಾರಂತ, ಗೋಕಾಕ, ಪು.ತಿ.ನ., ದೇವುಡು ಮೊದಲಾದ ಶ್ರೇಷ್ಠ ಸಾಹಿತ್ಯ ದಿಗ್ಗಜರುಗಳ ಸಂಪರ್ಕ ಇವರಿಗೆ ನಿರಂತರವಾಗಿ ಇತ್ತು. ಅವರಿಂದ ತಮ್ಮ ಬದುಕಿನಲ್ಲಿ ಯಾವ ರೀತಿಯ ಪ್ರಭಾವ ಆಯಿತು, ಶಿಸ್ತನ್ನು ಹೇಗೆ ಮೂಡಿಸಿತು ಎಂಬುದನ್ನು ಪ್ರಸಂಗಗಳ ಮುಖಾಂತರ ವರ್ಣಿಸಿದ್ದಾರೆ. ಇದು ನೀತಿ ಕತೆಗಳಂತೆ ನಮ್ಮ ಮೇಲೂ ಗಾಢವಾದ ಪ್ರಭಾವವನ್ನು ಬೀರುತ್ತದೆ. ಅನುಭವ ಕಥನ ಹೇಗೆ ಇರಬೇಕು ಎಂಬುದಕ್ಕೆ ಈ ಕೃತಿ ಒಂದು ಉದಾಹರಣೆ ಎಂಬುದರಲ್ಲಿ ಸಂಶಯವಿಲ್ಲ.

ಎಂ.ಎಸ್. ನರಸಿಂಹಮೂರ್ತಿ

ಮುನ್ನುಡಿಯಿಂದ

ತೇಜು ಪಬ್ಲಿಕೇಷನ್ಸ್

ISBN : 978-81-984054-2-5

9788198405425

₹ 260